# ಗದ್ಯ ಕುಸುಮ ಮಂಜರಿ

ವಿದ್ವಾನ್ ಜಿ. ಎಸ್. ಆದಿಶೇಷಯ್ಯ

ಪ್ರಕಾಶಕರು:
**ಸುದರ್ಶನಂ ಅಂಡ್ ಕಂಪೆನಿ**
ಅವೆನ್ಯೂ ರೋಡ್, ಬೆಂಗಳೂರು–೨

ಬೆಲೆ: ರೂ. ೧.೦೦

೨.೨. ಗಿಶ್ರ.

~~P. Srinivasan.~~

II B new

this book is for High School ~~II~~ 1st year. B Section.
Kannada. Medium





ವೀರಮಾತೆ ಜೀಜಾಬಾಯಿ

[೬೩ ನೇ ಪುಟವನ್ನು ನೋಡಿ

# ಗದ್ಯ ಕುಸುಮ ಮಂಜರಿ



ವಿದ್ವಾನ್ ಜಿ. ಎಸ್. ಆದಿಶೇಷಯ್ಯ
(ತರ್ಕ ವಿದ್ವಾನ್, ಕನ್ನಡ ವಿದ್ವಾನ್, ಕನ್ನಡ ಪಂಡಿತ್)



ಪ್ರಕಾಶಕರು:
**ಸುದರ್ಶನಂ ಅಂಡ್ ಕಂಪೆನಿ**
ಅವೆನ್ಯೂ ರೋಡ್, ಬೆಂಗಳೂರು ೨

ಪ್ರಥಮ ಮುದ್ರಣ. ಫೆಬ್ರವರಿ ೧೯೫೮
ದ್ವಿತೀಯ ಮುದ್ರಣ: ಮೇ ೧೯೫೯

ಬೆಲೆ: ರೂ. ೧-೦೦





ಬೆಂಗಳೂರು ಪ್ರೆಸ್
ಮೈಸೂರು ರೋಡು, ಬೆಂಗಳೂರು ಸಿಟಿ
೧೯೫೯

# ಮುನ್ನುಡಿ

'ಗದ್ಯ ಕುಸುಮ ಮಂಜರಿ' ಹೊಸಗನ್ನಡ ಗದ್ಯಸಾಹಿತ್ಯದಿಂದ ಆರಿಸಿದ ಹಲವು ವಿಷಯಗಳ ಸಂಗ್ರಹ. ಭಾರತೀಯ ಸಂಸ್ಕೃತಿಯ ಆಧಾರ ಸ್ತಂಭಗಳಾದ ರಾಮಾಯಣ, ಮಹಾಭಾರತಗಳಿಂದ 'ಹನುಮಂತ' ಮತ್ತು 'ಮಧ್ಯಮ ವ್ಯಾಯೋಗ' ಗಳನ್ನು ಆರಿಸಿದೆ. ಮಧ್ಯಮ ವ್ಯಾಯೋಗವು ಸಂಸ್ಕೃತ ಸಾಹಿತ್ಯದಲ್ಲಿ ಹೆಸರಾಂತ ಕವಿ ಭಾಸನ ಏಕಾಂಕ ನಾಟಕದ ಕಥೆ. ಇದು ಕವಿಯ ಚಾತುರ್ಯವನ್ನು ತೋರಿಸುವುದಲ್ಲದೆ, ಓದುಗರಿಗೆ ನೇರವಾಗಿ ಭಾಸಕವಿಯ ಗ್ರಂಥಗಳನ್ನೇ ಓದುವ ಆಸೆಯನ್ನು ಹುಟ್ಟಿಸುತ್ತದೆ. ಸಾಹಸ ಕಾರ್ಯದ ಸಾಹಿತ್ಯವನ್ನು (Adventure) ಪ್ರತಿನಿಧಿಸಲು 'ಕಿರಾತರೊಡನೆ ಯುದ್ಧ' ಎಂಬ ಭಾಗವನ್ನು ಹವಳದ್ವೀಪದಿಂದ ಆರಿಸಿದೆ. ಭಾರತ ದೇಶದ ಚರಿತ್ರೆ ವೀರರಿಂದ, ಧರ್ಮಿಗಳಿಂದ ತುಂಬಿದೆ. ಅದರಲ್ಲಿಯೂ ಸ್ತ್ರೀಯರು ಮುಖ್ಯ ಪಾತ್ರ ವಹಿಸಿದ್ದಾರೆ. ಅವರಲ್ಲಿ ತಾಯಿಯ ಪಾತ್ರ ವನ್ನು ಯಶಸ್ವಿಯಾಗಿ ನಡೆಸಿದ ಜೀಜಾಬಾಯಿ ಪ್ರಖ್ಯಾತಳು. ಆಕೆಯ ಚರಿತ್ರೆಯನ್ನು ಸೇರಿಸಿರುವುದು ಆದರ್ಶ ಮಾತೆಯರ ಸವಿನೆನಪಿಗಾಗಿ. ಹಳೆಗನ್ನಡ ಸಾಹಿತ್ಯ ಬಲು ಸೊಗಸಾಗಿದೆ. ಅದರ ಕಡೆಗೆ ವಾಚಕರ ಮನಸ್ಸನ್ನು ಸೆಳೆಯುವ ಸಲುವಾಗಿ "ರಾಜಶೇಖರ ವಿಲಾಸದ" ಕಥೆ ಯನ್ನು ಸೇರಿಸಿದೆ. ಈ ಕಥೆಯು ಶೈವಸಂಪ್ರದಾಯದ್ದಾದರೂ ಭಗವ ದ್ಭಕ್ತಿಯ ಕಡೆಗೆ ನಮ್ಮ ಮನಸ್ಸನ್ನು ಆಕರ್ಷಿಸಲು ಸಹಾಯಕವಾಗುತ್ತದೆ. ಕೊನೆಯದಾಗಿ, ಭೂದಾನ ಚಳುವಳಿಯನ್ನು ಕುರಿತು ಒಂದು ಪಾಠವಿದೆ. ಈಗ ಸಮಾಜದಲ್ಲಿ ಕಾಣುವ ಉಚ್ಚ-ನೀಚ ಭಾವ, ಬಡವ, ಬಲ್ಲಿದ ಮುಂತಾದ ಏರುಪೇರುಗಳನ್ನು ಕಿತ್ತೊಗೆದು ಸರ್ವಸಮತೆಯನ್ನು ಸಾಧಿಸ ಬೇಕಾದುದು ಆವಶ್ಯಕವಾಗಿದೆ. 'ಸರ್ವೋದಯ' ಚಳುವಳಿಯು ಇಂದಿನ ಮುಖ್ಯ ಚಳುವಳಿ. ಮಹಾ ಕ್ರಾಂತಿಯನ್ನು, ಶಾಂತಿಯಿಂದ, ರಕ್ತಪಾತ ವಿಲ್ಲದೆ, ಈ ಚಳುವಳಿಯು ಸಾಧಿಸುತ್ತಿದೆ. ಈ ಚಳುವಳಿಯ ಸೂಕ್ಷ್ಮ ಪರಿಚಯಕ್ಕಾಗಿ ಆ ಪಾಠವನ್ನು ಸೇರಿಸಿದೆ. ಹೈಸ್ಕೂಲು ದರ್ಜೆಯ ವಿದ್ಯಾರ್ಥಿಗಳಿಗೆ ಇದರಿಂದ ಕನ್ನಡ ಸಾಹಿತ್ಯದ ಹಲವು ಮುಖಗಳ ಪರಿಚಯವಾಗುವುದೆಂದು ಭಾವಿಸಿದ್ದೇನೆ.

ಈ ಪುಸ್ತಕವನ್ನು ಪ್ರಕಟಿಸಿದ ಶ್ರೀ ಓ. ಸುದರ್ಶನಂ ಅವರಿಗೂ, ತಮ್ಮ ಕೃತಿಗಳಿಂದ ನಿರ್ದಿಷ್ಟ ಭಾಗಗಳನ್ನು ಆರಿಸಿಕೊಳ್ಳಲು ಅನುಮತಿ ಕೊಟ್ಟ ಗ್ರಂಥಕರ್ತರಿಗೂ ನಾನು ತುಂಬ ಕೃತಜ್ಞನಾಗಿದ್ದೇನೆ. ಸ್ವಲ್ಪ ಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ ಚೇತನಾ ಪ್ರಿಂಟರ್ಸ್ ಅವರಿಗೂ ನನ್ನ ವಂದನೆಗಳು.

ಬೆಂಗಳೂರು,<br>
೧೨-೨-೧೯೫೯.

**ಜಿ. ಎಸ್. ಆದಿಶೇಷಯ್ಯ,**<br>
ಗ್ರಂಥಕರ್ತ.

## ದ್ವಿತೀಯ ಮುದ್ರಣ

ಈ ಪುಸ್ತಕವನ್ನು ೧೯೫೯–೬೦ ನೆಯ ವರ್ಷದ ಹೈಸ್ಕೂಲು ಮೊದಲನೆಯ ತರಗತಿಯ ಪಠ್ಯಗ್ರಂಥವಾಗಿ ಗೊತ್ತುಮಾಡಿದ ವಿದ್ಯಾ ಇಲಾಖೆಯ ಪಠ್ಯಪುಸ್ತಕ ಸಮಿತಿಗೆ ನನ್ನ ಕೃತಜ್ಞತಾಪೂರ್ವಕವಾದ ವಂದನೆಯನ್ನು ಈ ಮೂಲಕ ಅರ್ಪಿಸುತ್ತೇನೆ. ಎರಡನೆಯ ಮುದ್ರಣವನ್ನು ಅಚ್ಚುಕಟ್ಟಾಗಿ ಮಾಡಿದ ಬೆಂಗಳೂರು ಪ್ರೆಸ್ ಮುದ್ರಣಾಲಯದ ಕಾರ್ಯಕರ್ತರಿಗೆ ನನ್ನ ವಂದನೆ.

ಬೆಂಗಳೂರು,<br>
೩೧-೫-೧೯೫೯.

**ಜಿ. ಎಸ್. ಆದಿಶೇಷಯ್ಯ.**

# ವಿಷಯಾನುಕ್ರಮಣಿಕೆ

# ೧. ಹನುಮಂತ

**ಡಿ. ಕೃಷ್ಣಯ್ಯಂಗಾರ್,** ಎಂ.ಎ.

ಶ್ರೀಮಾನ್ ಡಿ. ಕೃಷ್ಣಯ್ಯಂಗಾರ್, ಎಂ.ಎ., ಅವರು ಕನ್ನಡದಲ್ಲಿ ಸುಪ್ರಸಿದ್ಧ ಗ್ರಂಥಕರ್ತರು. ಇವರು ಈಗ ಮೈಸೂರು ಸರ್ಕಾರದಲ್ಲಿ ಸಬ್-ರಿಜಿಸ್ಟ್ರಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಡರೈತನ ವಿಷಯದಲ್ಲಿ ಇವರಿಗೆ ತುಂಬಾ ಆಸಕ್ತಿ, ಸಹಾನುಭೂತಿ. ಭಾರತ ದೇಶದಲ್ಲಿ, ಅದರಲ್ಲೂ ಮೈಸೂರು ದೇಶದಲ್ಲಿ, ಬಡ ರೈತನಿಗಿರುವ ಕುಂದು ಕೊರತೆಗಳನ್ನೂ, ಕಷ್ಟನಷ್ಟಗಳನ್ನೂ ಚೆನ್ನಾಗಿ ಬಲ್ಲ ಇವರು ಆ ಸಮಸ್ಯೆಗಳಿಗೆ ತಕ್ಕ ಪರಿಹಾರವನ್ನು ಸೂಚಿಸುವಂತೆ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. 'ರೈತನ ಪ್ರಪಂಚ', 'ರೈತನ ಏಳಿಗೆ', 'ರೈತನ ಬಾಳು', 'ರೈತನ ಸಮಾಜ', 'ಗ್ರಾಮಪಂಚಾಯಿತಿಗಳು', 'ರಾಜರ್ಷಿ', 'ಆದರ್ಶ ಸತಿ', 'ಆದರ್ಶ ಮಹಾಪುರುಷ', 'ಪುರುಷೋತ್ತಮ' ಮುಂತಾದವು ಇವರ ಪ್ರಸಿದ್ಧ ಗ್ರಂಥಗಳು.

ರಾಮಾಯಣ, ಮಹಾಭಾರತಗಳು ಭಾರತೀಯ ಸಂಸ್ಕೃತಿಯ ಅಡಿಪಾಯಗಳು. ಭಾರತೀಯರ ಜೀವನದಲ್ಲಿ ಈ ಇತಿಹಾಸಗಳ ಪ್ರಭಾವ ಹೆಚ್ಚಾಗಿದೆ. ರಾಮ, ಕೃಷ್ಣ, ಹನುಮ, ಭೀಷ್ಮ, ಧರ್ಮರಾಜ ಮೊದಲಾದವರಿಂದ ಧರ್ಮದ ರಹಸ್ಯವು ತುಂಬಾ ಪ್ರಚಾರವಾಗಿದೆ. ಇಂಥ ಮಹಾನುಭಾವರ ಚರಿತ್ರೆಯಿಂದ ಅನೇಕ ಸದ್ಗುಣಗಳು ನಮಗೂ ಬರುತ್ತವೆ. ಇಂಥ ಅವತಾರ ಪುರುಷರ ಚರಿತ್ರೆಯನ್ನು ಓದಿದರೆ ಪುಣ್ಯವು ಬರುವುದು ಮಾತ್ರವಲ್ಲ, ನಮ್ಮಲ್ಲಿಯೂ ಶುದ್ಧ ಜ್ಞಾನ ಹುಟ್ಟುತ್ತದೆ. ಅವರಂತೆ ನಾವೂ ಶ್ರೇಷ್ಠಮಾನವರಾಗಿ ಬಾಳಬೇಕು ಎಂಬ ನೀತಿ ತಿಳಿಯುತ್ತದೆ.

ಪ್ರಕೃತ, 'ಹನುಮಂತ' ಎಂಬ ಈ ಪಾಠವನ್ನು ಶ್ರೀ ಕೃಷ್ಣಯ್ಯಂಗಾರ್ಯರ 'ಚಿರಂಜೀವಿಗಳು' ಎಂಬ ಗ್ರಂಥದಿಂದ ಆರಿಸಿಕೊಂಡಿದೆ. ಹನುಮಂತ ಆದರ್ಶ ರಾಮದೂತ, ಶ್ರೇಷ್ಠ ಭಕ್ತ. ಆದರ್ಶ ರಾಯಭಾರಿ ಎನ್ನಬಹುದು ಹನುಮನನ್ನು. ಮನುಷ್ಯನು ಉದ್ಯೋಗ, ಹಣ, ಸ್ವಾರ್ಥಗಳಿಗೆ ಬೆಲೆ ಕೊಟ್ಟರೆ ನಾಶವಾಗುವನು; ಧರ್ಮದ ದೃಷ್ಟಿಯಿಂದ ಬಾಳಿದರೆ ಮಾತ್ರ ಅವನ ಕೀರ್ತಿ ಶಾಶ್ವತವಾಗಿ ನಿಲ್ಲುವುದು — ಎಂಬ ನೀತಿ ಹನುಮಂತನಿಂದ ತಿಳಿಯುವುದು. ಸ್ವಾಮಿಭಕ್ತಿ, ಕರ್ತವ್ಯನಿಷ್ಠೆ, ಉತ್ತಮ ಬ್ರಹ್ಮಚರ್ಯ, ದೃಢಮನಸ್ಸು, ವಾಕ್ಚಾತುರ್ಯ, ಸಮಯ ಸ್ಫೂರ್ತಿ, ಅದ್ಭುತ ಪರಾಕ್ರಮ, ಯುಕ್ತಾಯುಕ್ತ ಕಾರ್ಯವಿವೇಕ — ಇತ್ಯಾದಿ ಸದ್ಗುಣಗಳಿಗೆ ತವರಾದ ಹನುಮಂತನು ಚಿರಂಜೀವಿಗಳಲ್ಲಿ ಒಬ್ಬ. ಅವನ ಕೀರ್ತಿ ಅವನಿಗಿಂತಲೂ ಶಾಶ್ವತವಾದುದು.

ಹನುಮಂತ ಆದರ್ಶ ಕನ್ನಡಿಗ. ಕಿಷ್ಕಿಂಧೆ ಕನ್ನಡನಾಡಿನ ಭಾಗ. ಕನ್ನಡಿಗರ ಸಾಮರ್ಥ್ಯಕ್ಕೆ ಹನುಮ ಮೇಲ್ಪಂಕ್ತಿ. ಅಂಥ ಮಹಾಪುರುಷನ ಚರಿತ್ರೆಯು ತಿಳಿಯಬೇಕಾದುದು. ಈ ಕಥೆಯಲ್ಲಿ ಹನುಮನ ಸದ್ಗುಣಗಳು ಸ್ಪಷ್ಟವಾಗಿ ಕಾಣುತ್ತವೆ.

ಸುಮೇರುಪರ್ವತ ಪ್ರದೇಶದಲ್ಲಿ ಕೇಸರಿ ಎಂಬ ರಾಜನಿದ್ದನು. ಅವನ ಹೆಂಡತಿ ಅಂಜನಾದೇವಿ. ವಾಯುದೇವನ ವರಬಲದಿಂದ ಅವಳಿಗೊಂದು ಮಗುವಾಯಿತು. ಹುಟ್ಟುವಾಗಲೇ ಮಗುವಿಗೆ ಹೆಚ್ಚು ಬಲ ಬಂದಿತ್ತು. ಮಗುವನ್ನು ಮನೆಯಲ್ಲಿ ಬಿಟ್ಟು ತಾಯಿ ಉದ್ಯಾನಕ್ಕೆ ಹೋಗಿದ್ದಳು. ಆಗ ಸೂರ್ಯೋದಯ ಸಮಯ. ಮಗುವಿಗೆ ಹಸಿವಾಯಿತು. ಹೊರಕ್ಕೆ ಬಂದು ನೋಡಲು ಕೆಂಪಾಗಿ ಉಂಡೆಯಾಗಿ ಹೊಳೆಯುತ್ತಿದ್ದ ಬಾಲಸೂರ್ಯನು ಕಾಣಿಸಿದನು. ಅದನ್ನು ನೋಡಿ ಮಗುವು ಅದು ಒಂದು ಬಗೆಯ ಹಣ್ಣಾಗಿರಬೇಕೆಂದು ಊಹಿಸಿ ಅದನ್ನು ಹಿಡಿಯಲು ಆಕಾಶಕ್ಕೆ ಹಾರಿತು. ಅಂತಹ ಶಕ್ತಿಯು ವಾಯುದೇವನ ವರಬಲದಿಂದ ಮಗುವಿಗೆ ಬಂದಿತ್ತು.

ಮಗುವು ಆಕಾಶಕ್ಕೆ ಹಾಗೆ ಹಾರಿದಾಗ, ಸೂರ್ಯಕಿರಣಗಳು ಸುಡದಂತೆ ವಾಯುದೇವನು ತಣ್ಣಗೆ ಬೀಸಿದನು. ಅರಿಯದ ಮಗುವೆಂದು ಸೂರ್ಯನೂ ಕರುಣೆ ತೋರಿಸಿದನು; ತನ್ನ ಕಿರಣಗಳ ಶಾಖವನ್ನು ಬೀರಲಿಲ್ಲ. ಹನುಮಂತನು ಹೀಗೆ ಹಾರಿದ ದಿವಸ ಸೂರ್ಯಗ್ರಹಣ. ಅದೇ ಸಮಯಕ್ಕೆ ರಾಹುವು ಸೂರ್ಯನನ್ನು ಹಿಡಿಯಲು ಬಂದಿದ್ದನು. ಹನುಮಂತನು ಬಂದಿದ್ದು ರಾಹುವಿಗೆ ಕೋಪವನ್ನುಂಟುಮಾಡಿತು. ಇನ್ನಾರೋ ಬಂದಿದ್ದಾರೆ. ತಾನು ಸೂರ್ಯನನ್ನು ಹಿಡಿಯಲಾಗಲಿಲ್ಲವೆಂದು ರಾಹುವು ದೇವೇಂದ್ರನಲ್ಲಿ ದೂರು ಹೇಳಿದನು. ಇಂದ್ರನಿಗೆ ಆಶ್ಚರ್ಯವಾಯಿತು. ಐರಾವತವನ್ನೇರಿ, ವಜ್ರಾಯುಧವನ್ನು ಹಿಡಿದು ರಾಹುವಿನೊಡನೆ, ಸೂರ್ಯನ ಬಳಿಗೆ ದೇವೇಂದ್ರನು ಬಂದನು. ಗುಂಡಾಗಿದ್ದ ರಾಹುವನ್ನು ನೋಡಿ ಅದೂ ಒಂದು ಬಗೆಯ ಹಣ್ಣೇ ಇರಬೇಕೆಂದು ಹನುಮಂತನು ಸೂರ್ಯನನ್ನು ಬಿಟ್ಟು ರಾಹುವನ್ನು ಹಿಡಿಯಲು ಹೋದನು. ಅವನು ಭಯದಿಂದ ದೇವೇಂದ್ರನ ಮರೆಹೊಕ್ಕನು. ಇಂದ್ರನ ಐರಾವತವನ್ನು ಕಂಡು ಆಶ್ಚರ್ಯದಿಂದ ಅದನ್ನು ಹಿಡಿಯಲು ಹನುಮಂತನು ಮುಂದೆ ಬಂದನು. ಮಗುವಿನ

ವೇಗವೂ, ರೂಪೂ ಭಯಂಕರವಾಗಿತ್ತು. ಇಂದ್ರನು ಹಿಂದಕ್ಕೆ ಹೋಗುವಂತೆ ಮಗುವಿಗೆ ಎಷ್ಟು ಹೇಳಿದರೂ ಅದು ಕೇಳದೆ ಮುಂದಕ್ಕೆ ಬಂದು ಆನೆಯನ್ನು ಹಿಡಿಯಲು ಯತ್ನಿಸಿತು. ಇಂದ್ರನು ಕೋಪದಿಂದ ಆ ಮಗುವಿಗೆ ವಜ್ರಾಯುಧದಿಂದ ಒಂದೇಟು ಕೊಟ್ಟನು. ಆ ಪೆಟ್ಟಿನ ನೋವನ್ನು ತಾಳಲಾರದೆ ಮಗುವು ಒಂದು ಪರ್ವತದ ತುದಿಯ ಬಂಡೆಯಮೇಲೆ ಬಿದ್ದು ಬಿಟ್ಟಿತು. ಇದರಿಂದ ಆ ಮಗುವಿನ ಎಡಪಕ್ಕದ ದವಡೆಗೆ ಬಲವಾದ ಪೆಟ್ಟು ಬಿದ್ದು ಚಪ್ಪಟೆ ಆಯಿತು. ಜೀವ ಹೋಗುವ ಸ್ಥಿತಿಗೆ ಬಂದಿತು.

ಇದನ್ನು ಕಂಡು ವಾಯುವಿಗೆ ಅಪಾರ ಕೋಪ ಬಂದಿತು. ಹಾಗೆ ಬಿದ್ದ ಮಗುವನ್ನು ವಾಯುವು ಎತ್ತಿಕೊಂಡು ಹತ್ತಿರವಿದ್ದ ಗುಹೆಯನ್ನು ಸೇರಿಬಿಟ್ಟನು. ಜಗತ್ತಿನಲ್ಲಿ ಗಾಳಿಯ ಸಂಚಾರವಿಲ್ಲದಂತಾಯಿತು. ಗಾಳಿ ಇಲ್ಲದೆ ಪ್ರಾಣಿಗಳು ಬದುಕುವುದೆಂತು? ವಾಯುವಿನ ಕೋಪದಿಂದ, ಜಗತ್ತಿನ ಪ್ರಾಣಿಕೋಟಿಗೆ ನರಕಯಾತನೆ ಬಂದಿತು. ದೇವ, ದಾನವ ಮಾನವರಾದಿಯಾಗಿ, ಎಲ್ಲರೂ ಕಷ್ಟ ಸಹಿಸಲಾರದೆ ಬ್ರಹ್ಮನಲ್ಲಿ ಮೊರೆ ಇಟ್ಟರು. ಸೃಷ್ಟಿಮಾಡಿದ ಬ್ರಹ್ಮನು ಕಾಪಾಡದಿದ್ದರೆ ಎಲ್ಲವೂ ನಾಶ ವಾಗುವುದೆಂದು ಅವರು ಬೇಡಿದರು.

ವಾಯುವಿನ ಕೋಪಕ್ಕೆ ಕಾರಣ ಬ್ರಹ್ಮನಿಗೆ ತಿಳಿಯದಿರಲಿಲ್ಲ. ತನಗೆ ಶರೀರವಿಲ್ಲದಿದ್ದರೂ, ಎಲ್ಲ ಶರೀರಗಳನ್ನೂ ವಾಯುವು ರಕ್ಷಿಸುತ್ತಿದ್ದನು. ಅವನೇ ಎಲ್ಲರ ಪ್ರಾಣ. ಪ್ರಾಣದೇವರೇ ಅವನು. ಅವನೇ ಎಲ್ಲ ಜೀವಿಗಳ ಸುಖ ಸ್ವರೂಪ. ಅವನಿಲ್ಲದಿದ್ದರೆ, ಯಾವ ಪ್ರಾಣಿಗೆ ತಾನೆ ನೆಮ್ಮದಿ ಇದ್ದೀತು? ವಾಯುದೇವನನ್ನು ಪ್ರಸನ್ನನನ್ನಾಗಿ ಮಾಡಿಕೊಳ್ಳಬೇಕೆಂದು ಬ್ರಹ್ಮದೇವನು ಅವರನ್ನೆಲ್ಲ ಕರೆದುಕೊಂಡು ಗುಹೆಯ ಬಳಿ ಬಂದನು; ಸುವರ್ಣದಂತೆ ಹೊಳೆಯುತ್ತಿದ್ದ ಮಗುವನ್ನು ಮುಂದೆ ಇಟ್ಟುಕೊಂಡು, ಪುತ್ರಶೋಕದಿಂದ ಕೊರಗುತ್ತಿದ್ದ ವಾಯುವನ್ನು ಕಂಡನು. ಬ್ರಹ್ಮನನ್ನೂ ಇತರ ದೇವತೆಗಳನ್ನೂ ನೋಡಿದ ಕೂಡಲೆ ವಾಯುದೇವನು ಮಗುವನ್ನೆತ್ತಿ ಬ್ರಹ್ಮನ ಪಾದದ ಮುಂದಿಟ್ಟು "ಓ, ಬ್ರಹ್ಮದೇವಾ! ನೀನು ತ್ರಿಲೋಕಾಧಿಪತಿಯು, ತ್ರಿಗುಣಾತ್ಮಕನು, ಸೃಷ್ಟಿಕರ್ತನು. ಇಗೋ ನಿನಗೆ ನಮಸ್ಕಾರ ಮಾಡುವೆನು" ಎಂದನು. ಬ್ರಹ್ಮನು ಮಗುವಿನ ಮೈಯನ್ನು ಒಂದಾವರ್ತಿ

ತನ್ನ ಕೈಯಿಂದ ನೇವರಿಸಲು ಮಗುವಿಗೆ ಪ್ರಾಣ ಕೂಡಿಕೊಂಡಿತು. ಬಾಡಿದ ಸಸಿಗೆ ನೀರೆರೆದಂತಾಯಿತು. ಮಗುವು ಬದುಕಿದುದನ್ನು ಕಂಡು ವಾಯುದೇವನಿಗೆ ಸಂತೋಷವಾಯಿತು. ಜಗತ್ತಿನಲ್ಲಿ ಗಾಳಿ ಬೀಸುವುದಕ್ಕೆ ಪ್ರಾರಂಭವಾಯಿತು. ಆಗ ಎಲ್ಲ ಪ್ರಾಣಿಗಳಿಗೂ ಉಲ್ಲಾಸವಾಯಿತು.

ಅಲ್ಲಿಗೆ ಬಂದಿದ್ದ ಇಂದ್ರ, ಅಗ್ನಿ, ವರುಣ, ಕುಬೇರರನ್ನೂ, ಅಷ್ಟದಿಕ್ಪಾಲಕರನ್ನೂ ಬ್ರಹ್ಮನು ಕರೆದು, ಮುಂದೆ ವಾಯುಪುತ್ರನಿಂದ ಅದ್ಭುತಕಾರ್ಯ ನಡೆಯಬೇಕಾಗಿದೆ ಎಂದೂ, ಲೋಕ ಕಲ್ಯಾಣವಾಗಬೇಕಾಗಿದೆ ಎಂದೂ ತಿಳಿಸಿ ಮಗುವನ್ನು ಹರಸುವಂತೆ ಹೇಳಿದನು. ಮೊದಲು ದೇವೇಂದ್ರನು ಮುಂದೆ ಬಂದು, 'ನನ್ನ ವಜ್ರಾಯುಧದ ಪೆಟ್ಟಿಗೆ ಮಗುವು ಸಿಲುಕಿದುದರಿಂದ, ಇವನ ಇಡೀ ದೇಹವು ವಜ್ರಾಯುಧದಂತೆ ಗಟ್ಟಿಯಾಗಿ, ಇವನಿಗೆ ಮರಣವುಂಟಾಗದಿರಲಿ, ಹನುಮಂತನೆಂಬ ಹೆಸರಿನಿಂದ ಇವನ ಕೀರ್ತಿ ಜಗತ್ತಿಗೆಲ್ಲ ಹರಡಲಿ' ಎಂದು ವರ ಕೊಟ್ಟನು. ಸೂರ್ಯದೇವನು 'ನನ್ನ ತೇಜಸ್ಸಿನ ನೂರನೆಯ ಒಂದು ಪಾಲು ಇವನಿಗುಂಟಾಗಲಿ. ಪ್ರಾಪ್ತವಯಸ್ಸು ಇವನಿಗೆ ಬರುವುದರೊಳಗೆ ಸಮಸ್ತ ಶಾಸ್ತ್ರಗಳ ಅರಿವು ಇವನಿಗುಂಟಾಗಲಿ. ಇವನು ಉತ್ತಮೋತ್ತಮ ವಾಗ್ಮಿಯಾಗಲಿ' ಎಂದು ಹರಸಿದನು. ವರುಣನು ಲಕ್ಷಾಂತರ ವರುಷಗಳಾದರೂ, ಇವನಿಗೆ ಜಲ ಅಥವಾ ಪಾಶದಿಂದ ಮರಣವುಂಟಾಗದಿರಲಿ— ಎಂದನು.

ಅನಂತರ ಯಮನು 'ಇವನಿಗೆ ಯಾವ ರೋಗಭಯವುಂಟಾಗದಿರಲಿ. ಶಸ್ತ್ರಾಸ್ತ್ರಗಳು ಇವನಿಗೆ ಯಾವ ಕೇಡುಕನ್ನೂ ಉಂಟುಮಾಡದಿರಲಿ' ಎಂದು ವರಕೊಟ್ಟನು. ಕುಬೇರ, ಶಂಕರರೂ ಕೂಡ ಈ ಮಗುವು ಸ್ಥಿರಜೀವಿಯಾಗಿರಲಿ ಎಂದು ಹರಸಿದರು. ದೇವಶಿಲ್ಪಿಯಾದ ವಿಶ್ವಕರ್ಮನು, 'ನಾನು ದೇವತೆಗಳಿಗೆ ಮಾಡಿಕೊಟ್ಟಿರುವ ಆಯುಧಗಳೊಂದರಿಂದಲೂ ಇವನಿಗೆ ಮರಣವುಂಟಾಗದಿರಲಿ' ಎಂದು ವರ ಕೊಟ್ಟನು. ಹೀಗೆ ರುದ್ರಾದಿ ದೇವತೆಗಳಿಂದ ವರ ಪಡೆದ ಮಗುವನ್ನು ವಾಯುವು ಅಂಜನಾದೇವಿಗೆ ಒಪ್ಪಿಸಿದನು. ಮಗುವು ಅರಣ್ಯದಲ್ಲಿ ತಾಯಿತಂದೆಗಳ ಆಶ್ರಯದಲ್ಲಿ ಬೆಳೆಯುತ್ತಿತ್ತು.

ಹೀಗಿರುವಾಗ ಆಂಜನೇಯನು ಹುಡುಗಾಟಿಕೆಗಾಗಿ, ಆಶ್ರಮವಾಸಿಗಳಿಗೆ ಉಪದ್ರವಕೊಡಲಾರಂಭಿಸಿದನು : ಹೋಮಾಗ್ನಿಯನ್ನು ಆರಿಸುವುದು.

ಹೋಮದ ತುಪ್ಪವನ್ನು ಚೆಲ್ಲುವುದು, ಹರವಿದ ನಾರುಮಡಿಯನ್ನು ಹರಿಯು ವುದು, ಮಡಕೆಗಳನ್ನು ಒಡೆಯುವುದು ಮುಂತಾದ ಇವನ ಕಪಿಸಹಜ ಚೇಷ್ಟೆ ಗಳನ್ನು ನೋಡಿ ಅಂಜನಾದೇವಿಯು ಆಗಾಗ ಕೋಪಿಸಿಕೊಳ್ಳುತ್ತಿದ್ದಳು.

ಹೀಗಿರುವಾಗ ಒಂದು ದಿವಸ, ಭೃಗು, ಆಂಗಿರಸ ಋಷಿಗಳಿಗೆ ಆಂಜನೇಯನ ಚೇಷ್ಟೆಗಳನ್ನು ಸಹಿಸಲಸಾಧ್ಯವಾಯಿತು. 'ದೇಹದ ಕೊಬ್ಬಿನಿಂದ ಇವನು ಹೀಗೆ ಮಾಡುತ್ತಿರುವನು. ಇವನ ಶಕ್ತಿ ಇಷ್ಟೇ ಎಂದು ಇವನಿಗೆ ಇನ್ನೊಬ್ಬರು ಹೇಳುವವರೆಗೆ ಆ ಶಕ್ತಿ ಇವನಿಗೆ ತಿಳಿಯದೇ ಹೋಗಲಿ' ಎಂದು ಶಾಪಕೊಟ್ಟರು. ಅಂದಿನಿಂದ ಆಂಜನೇಯನು ಇತರರಿಗೆ ಹಿಂಸೆ ಕೊಡುವುದನ್ನು ಬಿಟ್ಟುಬಿಟ್ಟನು.

ಅದೇ ಕಾಡಿನಲ್ಲಿ ಋಕ್ಷರಜಸ್ಸೆಂಬ ವಾನರ ರಾಜನೊಬ್ಬನಿದ್ದನು. ಅವನಿಗೆ ವಾಲಿ, ಸುಗ್ರೀವರೆಂಬ ಇಬ್ಬರು ಮಕ್ಕಳಿದ್ದರು. ಇವರಿಬ್ಬರೂ ವೀರರು, ಅಪಾರ ಶಕ್ತಿಯುಳ್ಳವರು. ಋಕ್ಷರಜಸ್ಸು ಕಾಲವಾದ ಮೇಲೆ ವಾಲಿಗೆ ರಾಜ್ಯಾಭಿಷೇಕವಾಯಿತು. ಸುಗ್ರೀವನು ಯುವರಾಜನಾದನು. ಆಂಜನೇಯನು ಸುಗ್ರೀವನ ಸ್ನೇಹಿತನಾದನು. ಅಗ್ನಿ, ವಾಯುಗಳ ಮೈತ್ರಿಯಂತೆ ಇವರಿಬ್ಬರ ಸ್ನೇಹ ಗಾಢವಾಗಿ ಬೆಳೆದಿತ್ತು.

ಆಂಜನೇಯನಿಗೆ ಪ್ರಾಪ್ತ ವಯಸ್ಸು ಬಂದ ಕೂಡಲೆ ದೇವತೆಗಳ ವರಬಲದಿಂದ ಎಲ್ಲ ಸದ್ಗುಣಗಳೂ ತಾವಾಗಿಯೇ ತಲೆದೋರಿದುವು. ಗಾಂಭೀರ್ಯ, ಚಾತುರ್ಯ, ವೀರ್ಯ, ಮಾಧುರ್ಯಾದಿಗಳಲ್ಲಿಯೂ, ನ್ಯಾಯಾನ್ಯಾಯಗಳ ವಿಮರ್ಶೆಯಲ್ಲಿಯೂ ಅವನನ್ನು ಮೀರಿಸುವವರು ಇನ್ನಾರೂ ಇಲ್ಲದಂತಾಯಿತು. ಆಂಜನೇಯನು ಸೂರ್ಯನಿಂದ ವ್ಯಾಕರಣ ಶಾಸ್ತ್ರದ ಉಪದೇಶ ಪಡೆದನು. ಸೂತ್ರ, ವೃತ್ತಿ, ಪದ, ಪದಾರ್ಥ ವಿವರಣೆ— ಇವುಗಳಲ್ಲಿ ಮಹತ್ತಾದ ಪಾಂಡಿತ್ಯ ಪಡೆದನು; ನವವ್ಯಾಕರಣ ಪಂಡಿತನೆನ್ನಿಸಿಕೊಂಡನು. ಸಮಸ್ತ ವಿದ್ಯೆಗಳಲ್ಲಿಯೂ ದೇವಗುರುವಾದ ಬೃಹಸ್ಪತಿಯನ್ನೂ ಮೀರಿಸುವಷ್ಟು ಜ್ಞಾನವಂತನಾದನು. ಹೀಗೆ ವಿದ್ಯೆಯಲ್ಲಿ, ಜ್ಞಾನದಲ್ಲಿ, ಪಾಂಡಿತ್ಯದಲ್ಲಿ, ವೀರ್ಯದಲ್ಲಿ, ಶೌರ್ಯದಲ್ಲಿ, ಧೈರ್ಯದಲ್ಲಿ, ವೇಗದಲ್ಲಿ, ಭಕ್ತಿಯಲ್ಲಿ, ವಾಕ್ಪಟುತ್ವದಲ್ಲಿ— ಆಂಜನೇಯನಿಗಿಂತ ಉತ್ತಮ ರಾದವರು ಜಗತ್ತಿನಲ್ಲಿ ಇನ್ನಾರೂ ಇಲ್ಲದಂತಾಯಿತು.

ಒಂದು ದಿನ ಋಷ್ಯಮೂಕಪರ್ವತದಲ್ಲಿ ಆಂಜನೇಯ, ಸುಗ್ರೀವರು ಕುಳಿತಿರುವಾಗ, ರಾಮಲಕ್ಷ್ಮಣರಿಬ್ಬರೂ ಬರುತ್ತಿರುವುದನ್ನು ಕಾಣುವರು. ಸುಗ್ರೀವನಿಗೂ, ಅವನ ಅಣ್ಣನಾದ ವಾಲಿಗೂ ವೈರವುಂಟಾಗಿ ವಾಲಿಯಿಂದ ಓಡಿಸಲ್ಪಟ್ಟವನಾಗಿ ಸುಗ್ರೀವನು ಅಲ್ಲಿಗೆ ಬಂದಿರುವನು. ರಾಮಲಕ್ಷ್ಮಣರನ್ನು ದೂರದಲ್ಲಿ ಕಂಡು, ವಾಲಿಯಿಂದ ಕಳುಹಿಸಲ್ಪಟ್ಟ ಗೂಢಚಾರರಿರಬಹುದೋ ಏನೋ ಎಂಬ ಶಂಕೆಯುಂಟಾಗುವುದು ಅವನಿಗೆ. ಆಂಜನೇಯನು ಅದನ್ನು ನಂಬಲಿಲ್ಲ. ಅವರು ಯಾರೆಂಬುದನ್ನು ತಿಳಿಯಲು ಅವರ ಹತ್ತಿರ ಬರುವನು. ಅತಿ ಮೃದುವಾದ ಮತ್ತು ಇಂಪಾದ ಮಾತುಗಳಿಂದ, ವಿನಯವಾಗಿ ಹೀಗೆ ಹೇಳುವನು: 'ಸ್ವಾಮಿ, ತಾವು ಯಾರು? ತಮ್ಮ ದೇಹ ಸೌಂದರ್ಯ, ಅಂಗಾಂಗಗಳೆಲ್ಲ ದೇವಕುಮಾರರನ್ನು ಹೋಲುತ್ತಿರುವುವು. ಅಪೂರ್ವ ಶೋಭೆಯನ್ನುಂಟುಮಾಡುತ್ತಿರುವುದು ತಮ್ಮ ನೋಟ. ಇಂದ್ರಾಯುಧಕ್ಕೆ ಸಮಾನವಾದ ಬಿಲ್ಲು ಬಾಣಗಳನ್ನು ತಾವು ಧರಿಸಿರುವಿರಿ. ನಿಮ್ಮ ರೂಪು ಲಾವಣ್ಯಗಳು ಪರಸ್ಪರ ಹೋಲುತ್ತಿವೆ. ದೇವಲೋಕವನ್ನು ಬಿಟ್ಟುಬಂದಿರುವ ದೇವಕುಮಾರರೋ ನೀವು? ಅಥವಾ ಚಂದ್ರಸೂರ್ಯರಾಗಿ ಭೂಮಿಗೆ ಬಂದಿಳಿದಿದ್ದೀರೋ? ನಾರುಮಡಿಯನ್ನುಟ್ಟು ತಾಪಸಿಗಳ ವೇಷದಲ್ಲಿ ನೀವಿರಲು ಕಾರಣವೇನು? ವೀರಾಗ್ರಣಿಗಳೇ! ನಾನು ಸುಗ್ರೀವನ ಕಡೆಯವನು. ಅವನು ಕಪಿಗಳ ರಾಜ. ಅವನು ನನ್ನನ್ನು ತಮ್ಮ ಬಳಿಗೆ ಕಳುಹಿಸಿರುವನು. ನನ್ನ ಹೆಸರು ಹನುಮಂತ. ನಾನು ಅವನ ಮಂತ್ರಿ. ಇಷ್ಟ ಬಂದ ಕಡೆಗೆ ಹೋಗಬಲ್ಲೆ. ಯಾವ ರೂಪ ಬೇಕಾದರೂ ಧರಿಸಬಲ್ಲೆ. ತಾಪಸವೇಷದಲ್ಲಿರುವ ನಿಮ್ಮನ್ನು ಕಂಡು, ನಾನೂ ಸನ್ಯಾಸಿಯ ವೇಷದಲ್ಲಿ ನಿಮ್ಮ ಸಂಗತಿ ತಿಳಿಯಲು ಬಂದಿದ್ದೇನೆ' ಎಂದನು.

ಹನುಮಂತನ ಮಾತುಗಳನ್ನು ಕೇಳಿ ಶ್ರೀರಾಮನಿಗೆ ಅಪಾರ ಸಂತೋಷವಾಯಿತು. ತಮ್ಮನಾದ ಲಕ್ಷ್ಮಣನಿಗೆ, ಹನುಮಂತನ ಮೇಲ್ಮೆಯನ್ನು ವಿವರಿಸುತ್ತ 'ಹನುಮಂತನು ಸುಗ್ರೀವನ ಮಂತ್ರಿಯಂತೆ. ಬಹಳ ನಿಪುಣನಂತೆ ತೋರುವುದು. ಇವನ ಮಾತುಗಳೇ ಇದಕ್ಕೆ ನಿದರ್ಶನವಾಗಿವೆ. ಇವನು ಋಗ್ವೇದದಲ್ಲಿ ಶಿಕ್ಷಿತನಾಗಿ, ಯಜುರ್ವೇದವನ್ನು ಅಧ್ಯಯನಮಾಡಿ, ಸಾಮವೇದವನ್ನು ಗಾನಮಾಡಿದಂತಿದೆ. ಹಾಗಿಲ್ಲದಿದ್ದರೆ, ಹೀಗೆ ಮಾತನಾಡ

ಲಾರ. ಇವನ ಮೃದುವಾದ, ಶುದ್ಧವಾದ ವಾಕ್ಯಗಳೇ ಇವನು ವ್ಯಾಕರಣ ಶಾಸ್ತ್ರವನ್ನೂ ವೇದವೇದಾಂಗಗಳನ್ನೂ ತಿಳಿದಿರುವುದಕ್ಕೆ ಗುರುತು. ಇವನು ಮಾತನಾಡುವಾಗ ಇವನ ಮುಖದಲ್ಲಿ, ಕಣ್ಣುಗಳಲ್ಲಿ, ಹಣೆಯಲ್ಲಿ, ಯಾವುದೇ ಅವಯವದಲ್ಲಿ ಯಾವ ವಿಕಾರಚೇಷ್ಟೆಯೂ ಇಲ್ಲ. ಇವನ ಧ್ವನಿ ವ್ಯಾಕರಣ ಸಂಸ್ಕಾರದಿಂದ ಶಬ್ದಶುದ್ಧಿ ಹೊಂದಿದೆ. ನಮ್ಮನ್ನು ಹೊಗಳುವ ವಿಧಾನದಲ್ಲಿಯೇ, ನಮ್ಮ ಕುಲಗೋತ್ರಗಳನ್ನೆಲ್ಲಾ ಕೇಳಿರುವನು. ಇವನೊಬ್ಬ ಸಮರ್ಥ ಪುರುಷನಂತಿದೆ. ಯಾವ ರಾಜನ ಹತ್ತಿರ ಇವನಿರುವನೋ ಅವನ ಎಲ್ಲ ಕಾರ್ಯಸಿದ್ಧಿಯೂ ಆಗುವುದು' ಎಂದನು.

ಅನಂತರ ಹನುಮಂತನು ಶ್ರೀರಾಮನಿಗೂ, ಸುಗ್ರೀವನಿಗೂ ಸಖ್ಯ ಮಾಡಿಸುವನು. ಈ ಸ್ನೇಹದ ಗುರುತಿಗಾಗಿ ಶ್ರೀರಾಮನು ವಾಲಿಯನ್ನು ಕೊಂದು ಸುಗ್ರೀವನಿಗೆ ಕಪಿರಾಜ್ಯದ ಪಟ್ಟಾಭಿಷೇಕ ಮಾಡುವನು. ಇದಕ್ಕೆ ಪ್ರತಿಯಾಗಿ ಸುಗ್ರೀವನು, ಸೀತೆಯು ಎಲ್ಲಿರುವಳೆಂಬುದನ್ನು ಪತ್ತೆಹಚ್ಚುವುದಕ್ಕಾಗಿ ಹನುಮಂತನನ್ನೂ, ಇತರ ವಾನರವೀರರನ್ನೂ ಕಳುಹಿಸುವನು. ಹೀಗೆ ಕಳುಹಿಸುವಾಗ ಆಂಜನೇಯನನ್ನು ಕುರಿತು ಹೇಳುವನು: "ಎಲೈ! ವಾನರವೀರನೇ! ನೀನು ಅದ್ಭುತ ಶಕ್ತಿಯುಳ್ಳವನು. ಶತ್ರುಗಳಿರುವ ಭೂಲೋಕ, ದುರ್ಗಮವಾದ ಆಕಾಶ, ಪ್ರಬಲದೇವತೆಗಳಿರುವ ಸ್ವರ್ಗ, ಗಂಧರ್ವಲೋಕ, ನಾಗಲೋಕ, ದೈತ್ಯಲೋಕ–ಇವುಗಳಲ್ಲೆಲ್ಲಾ ಸಂಚರಿಸುವ ಶಕ್ತಿಯುಳ್ಳವನು ನೀನು. ಗಮನದಲ್ಲಿ, ವೇಗದಲ್ಲಿ ನೀನು ವಾಯುದೇವನಿಗೆ ಸಮ. ಸಮಸ್ತಲೋಕಗಳನ್ನೂ ನೀನು ತಿಳಿದಿರುವೆ. ನಿನಗೆ ತಿಳಿಯದ ನ್ಯಾಯನೀತಿಗಳಿಲ್ಲ. ಬಲದಲ್ಲಿ, ಬುದ್ಧಿಯಲ್ಲಿ, ಸಾಮರ್ಥ್ಯದಲ್ಲಿ ನಿನಗೆ ಸಮನಾರೂ ಇಲ್ಲ. ಶ್ರೀರಾಮನ ಕಾರ್ಯವನ್ನು ಯಶಸ್ವಿಯಾಗಿ ನಡೆಸುವುದಕ್ಕೆ ನಿನಗಿಂತ ಉತ್ತಮರಾದವರು ಇನ್ನೊಬ್ಬರಿಲ್ಲ. ನೀನು ಯಶಸ್ವಿಯಾಗಿ ಬಾ."

ಶ್ರೀರಾಮನೂ ಸಂತೋಷದಿಂದ ಹನುಮಂತನನ್ನು ಕರೆದು, ತನ್ನ ನಾಮಾಂಕಿತದ ಉಂಗುರವನ್ನು ಅವನ ಕೈಯಲ್ಲಿಡುವನು. 'ಇದನ್ನು ನೋಡಿದ ಕೂಡಲೆ ಸೀತೆಗಿರುವ ಎಲ್ಲ ಭಯವೂ, ಸಂದೇಹವೂ ಮಾಯವಾಗುವುದು. ಅವಳ ಹೆದರಿಕೆಯನ್ನು ನೀಗುವುದಕ್ಕೆ ಇದನ್ನು ಕೊಡು. ನಿನ್ನ ಕಾರ್ಯ ಜಯಪ್ರದವಾಗುವುದು' ಎಂದು ಹೇಳಿಕಳುಹಿಸಿದನು.

ಆಂಜನೇಯನು ಉಂಗುರವನ್ನು ವಿನಯದಿಂದ ತೆಗೆದುಕೊಂಡು, ಶ್ರೀರಾಮನಿಗೆ ನಮಸ್ಕಾರಮಾಡಿ ಹೊರಡುವನು. ಅನಂತರ ತನ್ನ ಸಂಗಡಿಗರೊಡನೆ, ಕಾಡು, ಗುಹೆ, ದುರ್ಗ ಮುಂತಾದ ಕಡೆಗಳಲ್ಲಿ ಸೀತೆಯನ್ನು ಹುಡುಕುವನು. ಹನುಮಂತನೊಡನೆ, ಗಜ, ಗವಾಕ್ಷ, ಗಂಧಮಾದನ, ಗವಯ, ನಳ, ಜಾಂಬವಂತ, ಅಂಗದಾದಿ ವೀರರೂ ಇದ್ದರು. ಅವರೆಲ್ಲ ದಂಡಕಾರಣ್ಯದಲ್ಲಿ ಹುಡುಕುತ್ತಾ ಬರುತ್ತಿರುವಾಗ ಒಂದು ಬಿಲದ್ವಾರ ಕಾಣಿಸಿತು. ಆಗ ಎಲ್ಲರಿಗೂ ಸಹಿಸಲಾರದಷ್ಟು ಹಸಿವು ನೀರಡಿಕೆ. ಆ ಬಿಲವನ್ನು ಹೊಕ್ಕು ಹುಡುಕಬೇಕೆಂಬ ಆಸೆಯಾಯಿತು. ಆದರೆ ಮನಸ್ಸಿನಲ್ಲಿ ಭಯ. ಒಬ್ಬರನ್ನೊಬ್ಬರು ಭದ್ರವಾಗಿ ಹಿಡಿದುಕೊಂಡು, ಭಯಂಕರವಾದ ಕತ್ತಲೆಯಿಂದ ಕೂಡಿದ ಬಿಲವನ್ನು ಪ್ರವೇಶಮಾಡಿದರು. ನಡುಗುತ್ತ ಬಹು ದೂರ ಹೋದಮೇಲೆ, ಬೆಳಕು ಕಾಣಿಸಿತು. ಅಲ್ಲಿಂದ ಮುಂದೆ ಹೋದರೆ, ಜಾಜ್ವಲ್ಯಮಾನವಾಗಿ ಹೊಳೆಯುತ್ತಿರುವ ತಾಳೆ, ಹೊನ್ನೆ, ಸಂಪಗೆ, ಸುರಹೊನ್ನೆ ಮರಗಳು ಕಾಣಿಸುವುವು. ಒಂದೊಂದು ಮರವೂ, ಚಿನ್ನದ ಚಿಗುರು, ಚಿನ್ನದ ಗೊಂಚಲು, ಚಿನ್ನದ ಲತೆಗಳಿಂದ ಕೂಡಿದ್ದವು. ಅಲ್ಲಿನ ಕಮಲಗಳೂ ಸುವರ್ಣಮಯವಾಗಿದ್ದವು. ಅಲ್ಲಿನ ಮಹಡಿ ಮನೆಗಳೆಲ್ಲಾ ಚಿನ್ನ, ಬೆಳ್ಳಿ, ಮುತ್ತಿನ ಮಣಿಗಳಿಂದ ಅಲಂಕರಿಸಲ್ಪಟ್ಟಿದ್ದುವು. ಅಪೂರ್ವ ಭೋಗ್ಯ ವಸ್ತುಗಳೆಲ್ಲ ಅಲ್ಲಿದ್ದುವು.

ಇವೆಲ್ಲವನ್ನೂ ಆ ಕಪಿಗಳು ಆಶ್ಚರ್ಯದಿಂದ ನೋಡುತ್ತಿರುವಾಗ ನಾರುಮಡಿಯನ್ನುಟ್ಟು, ಹೊಳೆಯುತ್ತಿರುವ ಕಣ್ಣುಗಳುಳ್ಳ ಒಬ್ಬ ಹೆಂಗಸನ್ನು ಅವರು ಕಂಡರು. ವಾನರರಿಗೆ ಹೆಚ್ಚು ಭಯವುಂಟಾಗಿ ಎಲ್ಲರೂ ಸದ್ದುಮಾಡದೆ ನಿಂತುಬಿಟ್ಟರು. ಹನುಮಂತನು ಧೈರ್ಯಮಾಡಿ ಮುಂದೆ ಬಂದು, 'ಈ ಪ್ರದೇಶ ಯಾರದು? ಇಂತಹ ಅಪೂರ್ವ ಪದಾರ್ಥಗಳು ಇಲ್ಲಿಗೆ ಹೇಗೆ ಬಂದುವು? ನಿರ್ಮಲವಾದ ಈ ನೀರಿನಲ್ಲಿ ಚಿನ್ನದ ಕಮಲಗಳಿರಲು ಕಾರಣವೇನು? ಇಲ್ಲಿನ ನೀರೂ, ಪ್ರಾಣಿಗಳೂ, ವೃಕ್ಷಗಳೂ, ಎಲ್ಲ ವಸ್ತುಗಳೂ, ಸುವರ್ಣಮಯವಾಗಿರುವುದಕ್ಕೆ ಕಾರಣವೇನು' ಎಂದು ಕೇಳಿದನು.

ಆಗ ಆ ಸ್ತ್ರೀಯು ಹನುಮಂತನನ್ನು ಕುರಿತು, 'ಎಲೈ! ವಾನರೋತ್ತಮನೆ! ಮಯನೆಂಬ ದಾನವನೊಬ್ಬನಿದ್ದಾನೆ, ಅವನು ಮಾಯಾವಿ.

ಅವನೇ ಹಿಂದೆ ರಾಕ್ಷಸ ಶಿಲ್ಪಿಯಾಗಿದ್ದನು. ಅವನು ಇಲ್ಲಿ ಈ ತೋಟವನ್ನು ನಿರ್ಮಿಸಿದನು. ಇಲ್ಲಿಯೇ ಸಾವಿರವರ್ಷ ತಪಸ್ಸುಮಾಡಿ ಶಿಲ್ಪ ಶಾಸ್ತ್ರವನ್ನು ಬ್ರಹ್ಮನ ವರದಿಂದ ಸ್ವಾಧೀನಪಡಿಸಿಕೊಂಡನು. ತನಗೆ ಏನೇನು ಬೇಕೋ ಅವೆಲ್ಲವನ್ನೂ, ಕ್ಷಣಮಾತ್ರದಲ್ಲಿ ಪಡೆಯುವಷ್ಟು ಶಕ್ತಿ ಹೊಂದಿದನು. ಆದರೆ ದಾನವನಾಗಿ, ಹೇಮೆಯೆಂಬ ಅಪ್ಸರಸೆಯನ್ನು ಮದುವೆಮಾಡಿ ಕೊಂಡದ್ದರಿಂದ ದೇವೇಂದ್ರನಿಗೆ ಕೋಪ ಬಂದಿತು. ಅವನನ್ನು ವಜ್ರಾ ಯುಧದಿಂದ ಹೊಡೆದು ಕೊಂದನು. ಆದರೆ ಈ ತೋಟವನ್ನು ಮಾತ್ರ ಹೇಮೆಗೆ ಕೊಟ್ಟನು. ಅವಳ ಅಪ್ಪಣೆಯಂತೆ ನಾನು ಇದನ್ನು ನೋಡಿ ಕೊಳ್ಳುತ್ತಿದ್ದೇನೆ. ನನ್ನ ಹೆಸರು ಸ್ವಯಂಪ್ರಭೆ. ನೃತ್ಯಗೀತೆಗಳಲ್ಲಿ ನಿಪುಣೆ ಯಾದ ಹೇಮೆಯು ನನ್ನ ಸಖಿ. ನನಗೆ ಯಾರಿಂದಲೂ ತಿರಸ್ಕಾರವಾಗ ದಂತೆ ವರವುಂಟು. ನೀವುಗಳೆಲ್ಲ ಈ ಫಲಮೂಲಗಳನ್ನು ತಿಂದು, ತಿಳಿ ನೀರು ಕುಡಿದು ಆಯಾಸ ಪರಿಹರಿಸಿಕೊಳ್ಳಿ. ಆಮೇಲೆ ನಿಮ್ಮ ವೃತ್ತಾಂತ ವನ್ನು ತಿಳಿಸಿ' ಎಂದು ವಿನಯದಿಂದ ಹೇಳಿದಳು.

ಅನಂತರ ಹನುಮಂತನು ಎಲ್ಲವನ್ನೂ ನಿಷ್ಕಪಟ ರೀತಿಯಲ್ಲಿ ತಿಳಿಸು ವನು: "ಅಯೋಧ್ಯೆಯ ಅರಸುಕುಮಾರ ಶ್ರೀರಾಮನು ತನ್ನ ತಮ್ಮ ಲಕ್ಷ್ಮಣನೊಡನೆಯೂ, ಪತ್ನಿಯಾದ ಸೀತಾದೇವಿಯೊಡನೆಯೂ, ದಂಡ ಕಾರಣ್ಯಕ್ಕೆ ಬಂದಿದ್ದನು. ಅವರು ಜನಸ್ಥಾನದಲ್ಲಿದ್ದಾಗ, ರಾವಣನೆಂಬ ರಾಕ್ಷಸನು ಕಪಟಸಂನ್ಯಾಸಿಯ ವೇಷದಲ್ಲಿ ಆಶ್ರಮಕ್ಕೆ ಬಂದು, ರಾಜ ಕುಮಾರರಿಲ್ಲದಿದ್ದಾಗ ಸೀತಾದೇವಿಯನ್ನು ಬಲಾತ್ಕಾರವಾಗಿ ಕದ್ದು ಕೊಂಡು ಹೋಗಿರುವನು. ಆಕೆಯನ್ನು ಹುಡುಕುತ್ತಾ ಆ ರಾಜ ಕುಮಾರರು ಕಾಡಿನಲ್ಲಿ ಬರುತ್ತಿದ್ದಾಗ ವಾನರರಾಜ ಸುಗ್ರೀವನಿಗೂ ಅವರಿಗೂ ಸ್ನೇಹವಾಯಿತು. ಸುಗ್ರೀವನು ವಾನರರನ್ನು ಕರೆದು, ಸೀತಾ ದೇವಿಯನ್ನು ಹುಡುಕಿ ಕಂಡುಹಿಡಿಯಲು ನಾಲ್ಕು ದಿಕ್ಕುಗಳಿಗೂ ಕಳುಹಿಸಿ ರುವನು. ದಕ್ಷಿಣದ ಕಡೆ ನಾವು ಬರುತ್ತಿದ್ದಾಗ ಈ ಬಿಲವು ಕಂಡಿತು. ಬಾಯಾರಿಕೆಯಿಂದ ಬಳಲಿ ಬೆಂಡಾಗಿದ್ದ ನಾವು ಇಲ್ಲಿ ನೀರು ಸಿಕ್ಕಬಹು ದೆಂಬ ಆಸೆಯಿಂದ ಬಂದೆವು. ಎಲೌ! ತಪಸ್ವಿನಿಯೇ! ಅತಿಥಿ ಧರ್ಮ ವನ್ನು ನೀನು ಚೆನ್ನಾಗಿ ಬಲ್ಲೆ. ಹಸಿವಿನಿಂದ ಸಾಯುತ್ತಿದ್ದ ನಮಗೆ

ಆಹಾರಕೊಟ್ಟು ಪ್ರಾಣದಾನ ಮಾಡಿದೆ. ಎಲೌ! ಧರ್ಮಚಾರಿಣಿ! ಈಗ ನಾವು ನಿನ್ನ ಮರೆಹೊಕ್ಕಿದ್ದೇವೆ. ಸೀತಾದೇವಿಯನ್ನು ಕಂಡುಹಿಡಿಯು ವುದಕ್ಕೆ ನಮಗೆ ವಿಧಿಸಿದ್ದ ಅವಧಿ ಮುಗಿದುಹೋಯಿತು. ನಮ್ಮನ್ನು ಈ ಬಿಲದಿಂದ ಹೊರಕ್ಕೆ ಬಿಟ್ಟು ಕಾಪಾಡು."

ಯಾರು ಆ ಬಿಲವನ್ನು ಪ್ರವೇಶಮಾಡುವರೊ ಅಂತಹವರು ಜೀವ ಸಹಿತ ಹಿಂತಿರುಗಿ ಹೋಗುವಂತಿರಲಿಲ್ಲ. ಆದರೆ ಸ್ವಯಂಪ್ರಭೆಯು ಆ ವಾನರರು ಒಳ್ಳೆಯವರು, ಸ್ವಾಮಿಭಕ್ತರಾಗಿ ಧರ್ಮದಿಂದ ನಡೆಯು ತಕ್ಕವರಾದ್ದರಿಂದ, ತನ್ನ ಪುಣ್ಯದಿಂದ ಅವರನ್ನೆಲ್ಲಾ ಹೊರಕ್ಕೆ ಬಿಡು ವುದಾಗಿ ಹೇಳಿದಳು. ವಾನರರಿಗೆಲ್ಲ ಕಣ್ಣು ಮುಚ್ಚಿಕೊಳ್ಳುವಂತೆ ತಿಳಿಸಿ, ಅವರು ಹಾಗೆಯೇ ಮಾಡಲು ಎಲ್ಲರನ್ನೂ ಹೊರಕ್ಕೆ ತಂದು ಬಿಟ್ಟಳು. ಆಗ ವಾನರರೆಲ್ಲ ಮುಂದೇನು ಮಾಡಬೇಕೆಂಬುದನ್ನು ಯೋಚಿಸುತ್ತ ನಿರಾಶರಾಗಿ ಕುಳಿತಿದ್ದರು. ವಾನರರಾಡುತ್ತಿದ್ದ ಮಾತುಗಳನ್ನು ಹತ್ತಿರದ ಬಂಡೆಯ ಪೊಟರೆಯಲ್ಲಿ ಕುಳಿತಿದ್ದ ಸಂಪಾತಿ ಎಂಬ ಗೃಧ್ರರಾಜನು ಕೇಳಿದನು. ಹನುಮಂತನಿಂದ ತನ್ನ ತಮ್ಮ ಜಟಾಯುವಿನ ಮರಣ ವೃತ್ತಾಂತವನ್ನು ತಿಳಿದು ವ್ಯಸನಪಟ್ಟನು. ಸಂಪಾತಿಗೆ ಗರುಡನಂತೆ ದಿವ್ಯದೃಷ್ಟಿಯೂ ದೈವದತ್ತವಾದ ಅದ್ಭುತ ಶಕ್ತಿಯೂ ಇದ್ದಿತು. ಈ ಶಕ್ತಿಯಿಂದ ಸೀತಾ ದೇವಿ ಇರುವ ಸ್ಥಳವನ್ನು ಹನುಮಂತನಿಗೆ ತಿಳಿಸಿದನು. ಲಂಕಾಪಟ್ಟಣದ ರಾಜನಾದ ರಾವಣನ ಉದ್ಯಾನವಾದ ಅಶೋಕವನದಲ್ಲಿ ಸೀತೆಯು ಬಂಧಿತ ಳಾಗಿರುವಳೆಂದು ಹೇಳಿದನು. ವಾನರರೆಲ್ಲ ಅತ್ಯಂತ ಹರ್ಷಪಟ್ಟು ಸಮುದ್ರತೀರಕ್ಕೆ ಬಂದರು.

ಲಂಕಾಪಟ್ಟಣವನ್ನು ಮುಟ್ಟಬೇಕಾದರೆ, ನೂರು ಯೋಜನ ದೂರದ ಸಮುದ್ರವನ್ನು ಹಾರಬೇಕು. ಯಾರುತಾನೆ ಅಷ್ಟು ದೂರ ಹಾರ ಬಲ್ಲರು? ವಾನರರು ತಮ್ಮ ಬಲಾಬಲಗಳನ್ನು ಕುರಿತು ಮಾತನಾಡಿ ಕೊಂಡರು. ಅವರೆಲ್ಲ ಒಟ್ಟಿಗೆ ಸೇರಿ ಹನುಮಂತನೇ ಈ ಕಾರ್ಯಕ್ಕೆ ಯೋಗ್ಯನೆಂದು ಅವನನ್ನು ಹೊಗಳಲು ಪ್ರಾರಂಭಿಸಿದರು. ಅವರಲ್ಲಿ ಹಿರಿಯನಾದ ಜಾಂಬವಂತನು "ಎಲೈ ಅಂಜನಾಸುತನೇ! ನೀನು ಸಮಸ್ತ ಕಪಿಗಳಲ್ಲಿ ಸರ್ವೋತ್ತಮನು. ಸಮಸ್ತ ಶಾಸ್ತ್ರಗಳನ್ನೂ ತಿಳಿದವನು.

ಬಲದಲ್ಲಿ ಸುಗ್ರೀವನಿಗೂ, ರಾಮಲಕ್ಷ್ಮಣರಿಗೂ ಸಮ. ಗರುತ್ಮಂತನ ರೆಕ್ಕೆಗಳಿಗಿರುವಷ್ಟು ಬಲವು ನಿನ್ನ ಬಾಹುಗಳಿಗಿವೆ. ನಿನಗಿರುವಷ್ಟು ಬುದ್ಧಿಯೂ, ಧೈರ್ಯವೂ, ಜಗತ್ತಿನಲ್ಲಿ ಇನ್ನಾರಿಗೂ ಇಲ್ಲ. ಸಮಸ್ತ ಶಕ್ತಿಗಳಿಂದ ಸಂಪೂರ್ಣನಾದವನು ಈಗ ನೀನೊಬ್ಬನೇ! ಹಾರುವುದರಲ್ಲಿ ನಿನಗೆ ಸಮಾನನಾರೂ ಇಲ್ಲ. ಈ ವಾನರರೆಲ್ಲ, ನಿನ್ನ ವೀರ್ಯವನ್ನೂ ಸಾಮರ್ಥ್ಯವನ್ನೂ ನೋಡಬೇಕೆಂದು ತುಂಬಾ ಆತುರಗೊಂಡಿದ್ದಾರೆ. ಎಲೈ! ವಾನರಸಿಂಹನೇ! ಏಳು. ನಿನ್ನ ಪರಾಕ್ರಮವನ್ನು ತೋರಿಸು; ಸಮುದ್ರವನ್ನು ದಾಟು." ಎಂದು ಹೊಗಳಿದನು.

ಹೀಗೆ ಪ್ರತಿಯೊಬ್ಬ ವಾನರ ವೀರನೂ, ಹನುಮಂತನನ್ನು ಸ್ತೋತ್ರ ಮಾಡುತ್ತಿರುವಾಗ ಅವನ ದೇಹವೂ, ಶಕ್ತಿಯೂ, ಮೇಲೆ ಮೇಲೆ ಉಬ್ಬಿ ಬರುತ್ತಿತ್ತು. ಅವನ ದಿವ್ಯ ತೇಜಸ್ಸು ಹೆಚ್ಚುತ್ತಿತ್ತು. ಅವನ ಆಕಾರವು ಬೆಳೆಯುತ್ತಿತ್ತು. ಸಂತೋಷದಿಂದ ಉಬ್ಬಿದವನಾಗಿ ಆ ವಾನರ ವೀರರಿಗೆ ಹೀಗೆ ಹೇಳುವನು: "ಎಲೈ ಪೂಜ್ಯರೇ! ಅಗ್ನಿಗೆ ಸಮಾನನಾದ ವಾಯು ದೇವನು ಅಪಾರ ಶಕ್ತಿಯುಳ್ಳವನು. ನೆಲವನ್ನು ಮುಟ್ಟದೆ ಆಕಾಶದಲ್ಲಿಯೇ ಸಂಚರಿಸತಕ್ಕವನು. ಅಂತಹ ಶೀಘ್ರಗತಿಯ ವಾಯುದೇವನ ಮಗನು ನಾನು. ಈಗ ಸಮುದ್ರವನ್ನು ಹಾರುವೆನು. ಸಮುದ್ರದಲ್ಲಿ ಸಮಸ್ತ ಪ್ರಾಣಿಗಳೂ ಹೆದರಿಕೆಯಿಂದ ತತ್ತರಿಸುವಂತೆ ಅಲ್ಲೋಲ ಕಲ್ಲೋಲ ಮಾಡುವೆನು. ನನ್ನ ವೇಗದಿಂದ ಸಮುದ್ರವು ಶೋಷಿಸಿ ಹೋಗುವುದೋ ಅಥವಾ ಭೂಮಿಯು ಭೇದಿಸುವುದೋ ನೋಡುತ್ತಿರಿ. ಪರ್ವತಗಳೇನಾದರೂ ಚೂರಾಗುವುದೋ ನೋಡಿ. ಎಲೈ ವೀರರೇ, ಆಕಾಶದಲ್ಲಿ ನಾನು ಹಾರುವುದನ್ನು ನೀವು ನೋಡುವಿರಿ. ತ್ರಿವಿಕ್ರಮಾವತಾರ ಮಾಡಿದ ಮಹಾ ವಿಷ್ಣುವಿನ ರೂಪದಂತೆ ನನ್ನ ರೂಪಾಗುವುದು. ವಜ್ರಹಸ್ತನಾದ ಇಂದ್ರನನ್ನಾಗಲೀ ಬ್ರಹ್ಮನನ್ನಾಗಲೀ ಹೆದರಿಸುವಂತಹ ಶಕ್ತಿಯು ನನಗೆ ಈಗ ಬರುವುದು. ಆ ಲಂಕಾನಗರಿಯನ್ನೇ ಕಿತ್ತು ತಂದು ನಿಮ್ಮ ಮುಂದೆ ಇಡಬೇಕೆಂಬ ಮನಸ್ಸು ನನಗೆ ಹುಟ್ಟಿರುವುದು."

ಹೀಗೆ ಹೇಳಿ, ಕೂಡಲೇ ಹನುಮಂತನು ಸಮುದ್ರದ ಮೇಲಕ್ಕೆ ಹಾರಿದನು. ಹಾರಿಹೋಗುತ್ತಿರುವಾಗ ನಾಗಮಾತೆಯಾದ ಸುರಸೆಯನ್ನು

ಜಯಿಸಿದನು. ಸಿಂಹಿಕೆಯೆಂಬ ರಾಕ್ಷಸಿಯನ್ನು ಕೊಂದನು. ವಾಯು ವೇಗದಿಂದ ಹೋಗುತ್ತ ತ್ರಿಕೂಟ ಶಿಖರದಲ್ಲಿರುವ ಲಂಕಾಪಟ್ಟಣವನ್ನು ಕಂಡನು. ಅದರ ಸುತ್ತ ಇದ್ದ ಸರಳ ವೃಕ್ಷಗಳನ್ನೂ, ಖರ್ಜೂರಾದಿ ಗಿಡಗಳನ್ನೂ, ಹೂವುಗಳಿಂದ ಕೂಡಿದ ತರುಲತೆಗಳನ್ನೂ ನೋಡಿದನು. ತಾವರೆ, ನೈದಿಲೆ ಮುಂತಾದ ನೀರು ಹೂವುಗಳಿಂದ ತುಂಬಿದ ಸರೋವರ ಗಳೂ, ಜಲಾಶಯಗಳೂ, ಕ್ರೀಡಾಸ್ಥಾನಗಳೂ, ಮನೋಹರ ಉದ್ಯಾನ ಗಳೂ ಅವನಿಗೆ ಕಾಣಿಸಿದವು. ಆ ಸುಂದರ ಪಟ್ಟಣದ ಸುತ್ತ ಚಿನ್ನದ ಕೋಟೆ, ರಾಜಬೀದಿಗಳು, ಎರಡುಪಕ್ಕಗಳಲ್ಲೂ ಎತ್ತರವಾದ ಮಹಡಿಮನೆ ಗಳು. ಈ ಮನೆಗಳಿಗೆ ಚಿನ್ನದ ಬಾಗಿಲು ನವರತ್ನಗಳಿಂದ ಕೂಡಿದ ಚಿತ್ರರೇಖೆಗಳು. ಇವೆಲ್ಲವನ್ನೂ ಹನುಮಂತನು ನೋಡಿದನು. ಹೀಗೆ ವಿಶ್ವಕರ್ಮ ನಿರ್ಮಿತವಾದ, ಲೋಕಮೋಹಕವಾದ ಲಂಕಾಪಟ್ಟಣವನ್ನು ನೋಡಿ ಸೀತಾದೇವಿಯನ್ನು ಹುಡುಕುವ ಉಪಾಯ ಯೋಚಿಸುತ್ತಾ ಲಂಕೆಯ ಉತ್ತರ ದಿಕ್ಕಿನ ಹೆಬ್ಬಾಗಿಲ ಹತ್ತಿರ ಬಂದನು. ಸಾಮಾನ್ಯ ಕಪಿಯ ರೂಪವನ್ನು ಧರಿಸಿ ಸೂರ್ಯಾಸ್ತಮಯ ಸಮಯವನ್ನು ನಿರೀಕ್ಷಿ ಸುತ್ತಾ ಪುರಪ್ರವೇಶಕ್ಕೆ ಸಿದ್ಧನಾಗುತ್ತಿದ್ದನು. ಬೆಳುದಿಂಗಳು ಹಾಲುಚೆಲ್ಲಿದಂತೆ, ಶಂಖ ಹರಡಿದಂತೆ, ಅಚ್ಚ ಬಿಳುಪು ಹಂಸಗಳು ಕೊಳದಲ್ಲಿ ಈಜಾಡುವಂತೆ ಕಾಣಲು ಪ್ರಾರಂಭವಾಯಿತು.

ಲಂಕಾಪಟ್ಟಣದ ಸೊಬಗನ್ನು ಹನುಮಂತನು ನೋಡುತ್ತಾ ಆಶ್ಚರ್ಯ ಪಡುತ್ತಿದ್ದನು. ಇದೇನು ಕುಬೇರ ನಗರಿಯಾದ ಅಲಕಾವತಿಯೋ? ಪಾತಾಳಲೋಕದ ಭೋಗವತಿಯೋ? ಅಥವಾ ಇಂದ್ರನ ಅಮರಾವತಿ ಪಟ್ಟಣವೋ ಎನ್ನುವಂತಿತ್ತು. ಚಿನ್ನದ ಬಾಗಿಲುಗಳೇನು? ವೈಢೂರ್ಯದ ಜಗುಲಿಗಳೇನು? ವಜ್ರ, ನೀಲ, ಸ್ಫಟಿಕ— ಮುಂತಾದ ನವರತ್ನಗಳಿಂದ ಕೆತ್ತಿದ ನೆಲಗಟ್ಟುಗಳೇನು? ಚೊಕ್ಕ ಬೆಳ್ಳಿಯ ಚಿತ್ರಗೆಲಸಗಳೇನು? ಉತ್ತಮ ಸೋಪಾನಗಳೇನು? ಹೀಗೆ ಸರ್ವೋತ್ತಮವಾಗಿ, ಸರ್ವ ಶೋಭಾಯಮಾನವಾಗಿ, ಸರ್ವಸೌಭಾಗ್ಯ ಯುಕ್ತವಾಗಿ ಕಾಣುತ್ತಿರುವ ಲಂಕಾಪಟ್ಟಣವನ್ನು ಪ್ರವೇಶಿಸಬೇಕೆಂದು ಹನುಮಂತನು ಆತುರದಿಂದ ಹೆಬ್ಬಾಗಿಲ ಬಳಿಗೆ ಬಂದನು. ಆ ವೇಳೆಗೆ ಸರಿಯಾಗಿ ರಾವಣ ಶಿಕ್ಷಿತಳಾದ

ಲಂಕಿಣಿಯು ಅವನ ಮುಂದೆ ಬಂದು ನಿಂತು ಆರ್ಭಟಿಸಿ ಅವನನ್ನು ತಡೆದಳು. ಬುದ್ಧಿ ಮತ್ತು ಪರಾಕ್ರಮದಲ್ಲಿ ಮೇಲೆನಿಸಿದ ಹನುಮಂತನು ಸ್ವಲ್ಪವೂ ಭಯಪಡದೆ ಅವಳ ಮುಂದೆ ಬೆಟ್ಟದಂತೆ ನಿಂತನು.

ವಿಕಾರ ರೂಪಿಣಿಯಾದ ರಾಕ್ಷಸಿಯನ್ನು ಕಂಡು ಹನುಮಂತನು ಮೃದುವಾಕ್ಯಗಳಿಂದ ತಾನು ಸುಂದರ ಲಂಕಾಪಟ್ಟಣವನ್ನೂ, ಅದರ ಉಪ್ಪರಿಗೆ, ಕೋಟೆ, ಸರೋವರ, ಪುರದ್ವಾರ—ಎಲ್ಲವನ್ನೂ ನೋಡಿ ಹಿಂತಿರುಗಿ ಬರುವುದಾಗಿ ಹೇಳಿದನು. ಇದನ್ನು ಕೇಳಿ ರಾಕ್ಷಸಿಯು ಕೋಪಗೊಂಡು ಅವನನ್ನು ಹೆದರಿಸಿ ಕಳುಹಿಸುವ ಸಲುವಾಗಿ ಮುಂದೆ ಬಂದು ಕೂಗುತ್ತಾ ಬಲವಾಗಿ ಅವನನ್ನು ಹೊಡೆದಳು. ಹನುಮಂತನಿಗೆ ಕೋಪ ಬಂದರೂ, ಅದನ್ನು ತೋರಿಸದೆ ತನ್ನ ಮುಷ್ಟಿಯಿಂದ ಅವಳ ತಲೆಯ ಮೇಲೆ ಒಂದೇಟು ಕೊಟ್ಟನು. ಅದನ್ನು ತಡೆಯಲಾರದೆ ಅವಳು ನೆಲದ ಮೇಲೆ ಬಿದ್ದಳು. ಸ್ವಲ್ಪ ಹೊತ್ತಿನಲ್ಲಿ ಚೇತರಿಸಿಕೊಂಡು ಮೆಲ್ಲಗೆ ಮೇಲಕ್ಕೆದ್ದಳು. ಹಿಂದೆ ಬ್ರಹ್ಮನು ತನಗೆ ಹೇಳಿದ್ದ ಮಾತುಗಳು ಅವಳ ನೆನಪಿಗೆ ಬಂದವು. ಲಂಕಾಪಟ್ಟಣದ ಸಮಸ್ತ ರಾಕ್ಷಸರ ಕೊನೆಗಾಲ ಸಮೀಪಿಸಿತೆಂದು ತಿಳಿದಳು. ಅವಳು ನಗರವನ್ನು ನೋಡಿ ಬರುವಂತೆ ಹನುಮಂತನಿಗೆ ಹೇಳಿ ಕಳುಹಿಸಿಕೊಟ್ಟಳು.

ಕೂಡಲೇ ಹನುಮಂತನು ಹೆಬ್ಬಾಗಿಲಿಂದ ಪ್ರವೇಶಮಾಡದೆ, ಗೋಡೆಯನ್ನು ಹಾರಿ ಒಳಗಿಳಿದು ಸುಗ್ರೀವನಿಗೆ ಶ್ರೇಯಸ್ಸನ್ನೂ. ರಾವಣನಿಗೆ ಕೇಡನ್ನೂ, ಬಯಸುತ್ತಾ, ಶತ್ರುವನ್ನು ಮೆಟ್ಟುವಂತೆ, ತನ್ನ ಎಡಗಾಲನ್ನು ಲಂಕೆಯ ನೆಲದಲ್ಲಿ ಊರಿದನು. ಪುರವನ್ನು ಹೀಗೆ ಹೊಕ್ಕು ಅರಮನೆಯ ಒಂದೊಂದು ಪ್ರಾಕಾರವನ್ನೂ ಹುಡುಕಿದನು. ಆಮೇಲೆ, ಉದ್ಯಾನ, ಉಪ್ಪರಿಗೆ, ಸರೋವರ, ಎಲ್ಲೆಲ್ಲಿಯೂ ನೋಡಿದನು. ಎಲ್ಲಿಯೂ ಸೀತೆಯನ್ನು ಕಾಣದೆ ಹತಾಶನಾಗಿ ಯೋಚಿಸುತ್ತಿದ್ದನು. ಸೀತಾದೇವಿಯು ತನ್ನ ದಾರಿಗೆ ಬರಲಿಲ್ಲವೆಂದು ರಾವಣನು ಭಕ್ಷಿಸಿರಬಹುದೇ? ಆಕಾಶದಲ್ಲಿ ಹಾರಿಹೋಗುತ್ತಿರುವಾಗ, ಅವಳು ಕೆಳಗೆ ಬಿದ್ದು ಪ್ರಾಣಬಿಟ್ಟಿರಬಹುದೆ? ಒಂದು ಪಕ್ಷ ಹೀಗೇನಾದರೂ ಆಗಿದ್ದರೆ ಮುಂದೇನು ಗತಿ? ಹೇಗಾದರೂ ರಾವಣನ ಮೇಲೆ ತಾನು ಹಗೆತನವನ್ನು ತೀರಿಸಬೇಡವೆ? ಅವನನ್ನು ತಾನು ಕೊಲ್ಲ

ಲಾಗದೆ? ಅವನನ್ನು ಹಿಡಿದು ರಾಮನಿಗೆ ಒಪ್ಪಿಸಲಾರೆನೆ? ಸೀತೆಯನ್ನು ಕಂಡುಹಿಡಿಯದೆ ರಾಮನಿಗೆ ತಾನು ಮುಖ ತೋರಿಸುವುದೆಂತು? ಸುಗ್ರೀವನ ಕೋಪಕ್ಕೆ ತುತ್ತಾಗುವುದು ಹೇಗೆ? ಹೀಗೆಲ್ಲಾ ಯೋಚಿಸುತ್ತಾ, ಅಶೋಕವನವನ್ನು ಮೆಲ್ಲನೆ ಪ್ರವೇಶಮಾಡಿದನು.

ಹೀಗೆ ಅಶೋಕವನವನ್ನು ಪ್ರವೇಶ ಮಾಡುವಾಗ, ರಾಮಲಕ್ಷ್ಮಣರಿಗೂ, ಸೀತಾದೇವಿಗೂ, ವಾಯುದೇವನಿಗೂ, ಸೂರ್ಯಚಂದ್ರರಿಗೂ, ಮರುದ್ಗಣಗಳಿಗೂ, ನಮಸ್ಕಾರ ಮಾಡಿ, ಶ್ರೀಮಹಾವಿಷ್ಣುವು ತನಗೆ ಕಾರ್ಯಸಿದ್ಧಿ ಕೊಡಲೆಂದು ಪ್ರಾರ್ಥಿಸುತ್ತಾ ಮುಂದೆ ಹೋದನು. ಅಲ್ಲಿ ಅಸುಗೆ, ಸಂಪಿಗೆ, ಉದ್ದಾಲಿಕ, ಮಾವು, ಹಲಸು, ಮುಂತಾದ ಮರಗಳು ಹೂವುಗಳಿಂದ ತುಂಬಿರುವುದನ್ನು ಕಂಡನು. ಚಿತ್ರ ವಿಚಿತ್ರ ಗಿಡಗಳೂ, ಲತೆಗಳೂ, ಬೆಳಗಿನ ಸೂರ್ಯನಂತೆ ಪ್ರಕಾಶಿಸುತ್ತಿದ್ದವು. ಅನೇಕ ಮೃಗ ಪಕ್ಷಿಗಳು ಉಲ್ಲಾಸದಿಂದ ಮರದಿಂದ ಮರಕ್ಕೆ ಹಾರುತ್ತಿದ್ದವು. ನವಿಲುಗಳು ಕೇಕೆ ಹಾಕುತ್ತಿದ್ದವು. ಅಲ್ಲಿಯೇ ಹತ್ತಿರವಿದ್ದ ಎಳೆಯ ಚಿಗುರು, ಅಂದವಾದ ಎಲೆ, ಸುವಾಸನೆಯ ಹೂವುಗಳಿಂದ ಕೂಡಿದ ಶಿಂಶುಪಾ ವೃಕ್ಷವೊಂದನ್ನು ಹತ್ತಿ, ಒಂದು ಕೊಂಬೆಯ ಮೇಲೆ ಕುಳಿತು ಸುತ್ತಲೂ ನೋಡಿದನು. ಸೀತೆಯನ್ನು ಕಂಡುಹಿಡಿಯುವುದಕ್ಕೆ ಅದೇ ತಕ್ಕಸ್ಥಳವೆಂದು ಅವನಿಗೆ ತೋರಿತು. ಅಲ್ಲಿಯೇ ಕುಳಿತು ಸುತ್ತಲೂ ದೃಷ್ಟಿಸಿ ನೋಡಿದನು.

ಸ್ವಲ್ಪದೂರದಲ್ಲಿ ಚೈತ್ಯಾಲಯದಂತೆ ಎತ್ತರವಾದ ಒಂದು ಪ್ರಾಸಾದವನ್ನು ಕಂಡನು. ಅದರ ಮುಂದೆ ಹವಳದ ಸೋಪಾನಗಳು, ಚಿನ್ನದ ಜಗುಲಿ ಇದ್ದವು. ಜಗುಲಿಯ ಮೇಲೆ ಸರ್ವಾಂಗ ಸುಂದರಿಯಾದ ಸ್ತ್ರೀಯೊಬ್ಬಳಿದ್ದಳು. ಆಕೆ ಮಲಿನವಾಗಿದ್ದಳು. ಸುತ್ತಲೂ ವಿಕಾರ ರೂಪದ ರಾಕ್ಷಸಸ್ತ್ರೀಯರಿದ್ದರು. ಮಧ್ಯದಲ್ಲಿದ್ದ ಸ್ತ್ರೀಯು ದುಃಖದಿಂದ ಬೆಂದು ಬೆಂಡಾಗಿ ಪದೇ ಪದೇ ನಿಟ್ಟುಸಿರು ಬಿಡುತ್ತಿದ್ದಳು. ಕಣ್ಣೀರು ಸುರಿಸುತ್ತಾ ದುಃಖಾಕ್ರಾಂತಳಾಗುತ್ತಿದ್ದಳು. ಅವಳ ಸ್ಥಿತಿಯು ಕಷ್ಟತಮವಾಗಿತ್ತು. ಕ್ಷೀಣಿಸಿದ ಸಂಪತ್ತಿನಂತೆ, ನಂಬಿಕೆಯಿಲ್ಲದ ಶ್ರದ್ಧೆಯಂತೆ, ಕದಲಿದ ಬುದ್ಧಿಯಂತೆ, ಕಂದಿದ ಕೀರ್ತಿಯಂತೆ, ಭಗ್ನವಾದ ಆಶೆಯಂತೆ, ವಿಘ್ನಹೊಂದಿದ ಕಾರ್ಯಸಿದ್ಧಿಯಂತೆ ಕಾಣುತ್ತಿದ್ದಳು. ಅವಳ ಕೋಮಲ ದೇಹವೆಲ್ಲ

ಕೊಳೆಯಿಂದ ಕೂಡಿತ್ತು. ಪತಿಯ ವಿರಹದಿಂದ ರೂಪ ಕೆಟ್ಟ ಸೀತಾದೇವಿಯನ್ನು ಹನುಮಂತನು ನೋಡಿದನು. ಆದರೂ ಅವಳೇಯೋ ಅಲ್ಲವೋ ಎಂಬ ಅನುಮಾನ ಅವನಿಗುಂಟಾಯಿತು. ಶ್ರೀರಾಮನು ಹೇಳಿದ ಗುರುತುಗಳನ್ನು ಜ್ಞಾಪಿಸಿಕೊಂಡನು. ಋಷ್ಯಮೂಕ ಪರ್ವತದ ಮೇಲೆ ಎಸೆದ ಪಟ್ಟೆಮಡಿಯ ಬಣ್ಣವನ್ನು ಅವಳು ಉಟ್ಟ ಸೀರೆಯೊಡನೆ ಹೋಲಿಸಿದನು. ಕೊನೆಗೆ ಅವಳೇ ಸೀತಾದೇವಿ ಎಂದು ನಿಶ್ಚಯಮಾಡಿದನು.

ಜಗತ್ತಿನಲ್ಲಿ ಹನುಮಂತ, ಭೀಷ್ಮ— ಇವರಿಬ್ಬರು ವಿನಹ ಉಳಿದ ಸಮಸ್ತರೂ ಕಾಮವಶರು. ಹನುಮಂತ ವೀರಬ್ರಹ್ಮಚಾರಿ, ಸ್ತ್ರೀಮೋಹವೇನೆಂಬುದನ್ನು ಕನಸಿನಲ್ಲಿಯೂ ಕಾಣದ ಮಹಾ ವಿರಕ್ತ ಇವನು. ಸೀತಾಪಹರಣಕ್ಕಾಗಿ ಶೋಕಗೊಂಡ ಶ್ರೀರಾಮನನ್ನು ಹನುಮಂತ ನೋಡಿದಾಗ ಅವನಿಗೆ ಹೀಗೆನ್ನಿಸಿತ್ತು: ವಸಿಷ್ಠಋಷಿಯ ಶಿಷ್ಯನಾದ ಶ್ರೀರಾಮನು ಹೀಗೆ ಒಬ್ಬ ಹೆಂಗಸಿಗಾಗಿ ಇಷ್ಟು ಕೊರಗಬೇಕೆ? ಎಂದು ಹೀಗಳೆದು ನಗುತ್ತಾ ಮಾತಾಡಿಕೊಂಡಿದ್ದನು. ವಿರಹ ವೇದನೆ ಏನೆಂಬುದನ್ನು ಕಲಾಮಾತ್ರದಷ್ಟು ಕೂಡ ಕಂಡರಿಯದ ಹನುಮಂತನು ಸೀತೆಯನ್ನು ಅಶೋಕವನದಲ್ಲಿ ಕಂಡ ಕ್ಷಣವೇ 'ಶ್ರೀರಾಮ ಇವಳನ್ನಗಲಿ ಹೇಗೆತಾನೆ ಜೀವದಿಂದಿರುವನೋ' ಎಂದು ಆಶ್ಚರ್ಯಪಟ್ಟನು. ಹೀಗೆ ಅನ್ಯೋನ್ಯ ದಂಪತಿಗಳಲ್ಲಿ, ಸೀತಾರಾಮರು ಮಾತ್ರ ಒಂದು ಆಶೋತ್ತರದಿಂದ ಅಗಲಿರಬಲ್ಲರೇ ವಿನಹ ಇನ್ನಾರಿಂದಲೂ ಸಾಧ್ಯವಿರಲಿಲ್ಲ. ರಾಮನು ಬಹಳ ದುಷ್ಕರ ಕಾರ್ಯ ಮಾಡಿರುವನು. ಸೀತೆಯಂತಹ ರತ್ನವನ್ನಗಲಿರುವುದು ರಾಮನೊಬ್ಬನಿಗೆ ವಿನಹ ಇನ್ನಾರಿಂದಲೂ ಸಾಧ್ಯವಿಲ್ಲ. ಸೀತೆಯ ಕೈಹಿಡಿದ ರಾಮನ ಭಾಗ್ಯವೇ ಭಾಗ್ಯ. ಹೀಗೆಲ್ಲ ಯೋಚಿಸುತ್ತ, ಸೀತಾರಾಮರನ್ನು ಮನಸ್ಸಿನಲ್ಲಿಯೇ ಕೊಂಡಾಡುತ್ತ ಸೀತೆಯ ದುರವಸ್ಥೆಯನ್ನು ನೋಡಿ ಮರುಗಿದನು.

ಸೀತೆಯು ಪರಮಪೂಜ್ಯಳಲ್ಲವೇ? ಅವಳಿಗೇ ಇಂತಹ ಕೆಟ್ಟ ದೆಶೆ ಬಂದ ಮೇಲೆ ಕಾಲಗತಿಯನ್ನು ಬಲ್ಲವರಾರು? ರಾಮನು ಏನುಮಾಡುವನೆಂಬುದನ್ನು ಸೀತೆಯರಿಯಳೆ? ಲಕ್ಷ್ಮಣನ ಪ್ರಯತ್ನವನ್ನು ಅರಿಯುವ ಶಕ್ತಿ ಅವಳಿಗಿಲ್ಲವೇ? ಆದುದರಿಂದಲೇ ಇಂತಹ ಕಷ್ಟದೆಸೆಯಲ್ಲಿ ಕೂಡ

ಅವಳ ಮನಸ್ಸು ಕದಲದೆ ತಾಳ್ಮೆಯಿಂದಿರುವಳೋ ಏನೋ? ಸ್ವಭಾವದಲ್ಲಿ, ವಯಸ್ಸಿನಲ್ಲಿ, ನಡತೆಯಲ್ಲಿ, ಕುಲೋನ್ನತಿಯಲ್ಲಿ, ಶುಭಲಕ್ಷಣದಲ್ಲಿ, ಸೌಂದರ್ಯದಲ್ಲಿ, ಸೌಶೀಲ್ಯಾದಿ ಗುಣಗಳಲ್ಲಿ, ಸೀತಾದೇವಿಯು ಶ್ರೀರಾಮನಿಗೆ ತಕ್ಕ ಹೆಂಡತಿ. ರಾಮನು ಸೀತೆಗೆ ತಕ್ಕ ಪತಿ. ಬಂಗಾರದ ಮೈಬಣ್ಣವುಳ್ಳ, ಲೋಕನಾಯಿಕೆಯಾದ ಲಕ್ಷ್ಮಿಯನ್ನು ಹೋಲುತ್ತಿರುವ ಸೀತಾದೇವಿಯನ್ನು ನೋಡಿ ಹಿಗ್ಗಿ, ರಾಮಕಾರ್ಯ ಸಫಲವಾಯಿತೆಂದು ಹನುಮಂತನು ಸಂತೋಷಪಟ್ಟನು.

ಶಿಂಶುಪಾವೃಕ್ಷದ ಮೇಲೆ ಕುಳಿತ ಹಾಗೆಯೇ, ಸೀತಾದೇವಿಗೆ ಕೇಳುವಂತೆ ಹನುಮಂತನು ಶ್ರೀರಾಮನ ಸದ್ಗುಣಗಳನ್ನು ವರ್ಣಿಸುತ್ತಿದ್ದನು. ಸೀತೆಯು ತಲೆಯೆತ್ತಿ ನೋಡಿದಳು. ಒಂದು ದೊಡ್ಡ ಕಪಿಯನ್ನು ಕಂಡಳು. ಅದರ ನಡುವಿನಲ್ಲಿ ಬಿಳಿಯ ಪಟ್ಟೆಮಡಿ, ಮಿಂಚಿನಂತೆ ಹೊಳೆಯುವ ಮೈ, ಸುರಿಗೆ ಹೂವಿನಂತೆ ಥಳಥಳಿಸುತ್ತಿರುವ ದೇಹಕಾಂತಿ. ಚಿನ್ನದಂತೆ ಹೊಳೆಯುವ ಕಣ್ಣುಗಳು. ವಿನಯವಾಗಿ ಒಳ್ಳೆಯ ಮಾತುಗಳನ್ನಾಡುತ್ತಿದ್ದ ಕಪಿಯನ್ನು ನೋಡಿ ಸೀತಾದೇವಿಗೆ ಆಶ್ಚರ್ಯವಾಯಿತು. ಕಪಿಯ ರೂಪದಲ್ಲಿ ರಾಕ್ಷಸನೇನಾದರೂ ಬಂದಿರಬಹುದೋ ಎಂಬ ಭಯದಿಂದ ಹಾಗೆಯೇ ಮೂರ್ಛೆಹೊಂದಿದಳು. ಸ್ವಲ್ಪಹೊತ್ತಿನಲ್ಲಿ ಎಚ್ಚರವಾದಾಗ ಎಲ್ಲವೂ ಸ್ವಪ್ನದಂತೆ ಕಂಡಿತು. ಕಪಿಯು ಹೇಳಿದುದೆಲ್ಲ ನಿಜವಾಗಲೆಂದು ಹಾರೈಸಿದಳು. ದೇವೇಂದ್ರನಿಗೂ, ಬ್ರಹ್ಮದೇವನಿಗೂ, ಅಗ್ನಿಗೂ ಹಾಗೆಯೇ ನಮಸ್ಕಾರ ಮಾಡಿದಳು. ಸ್ವಲ್ಪ ಹೊತ್ತಿನಲ್ಲಿ ಸುತ್ತಮುತ್ತಲಿದ್ದ ರಾಕ್ಷಸಸ್ತ್ರೀಯರು ಸ್ವಲ್ಪ ದೂರ ಸರಿದು ಮಲಗಿದರು. ಆಗ ಆಂಜನೇಯನು ಮರದಿಂದ ಕೆಳಗಿಳಿದು ಸೀತಾದೇವಿಯ ಮುಂದೆ ಕೈಮುಗಿದು ನಿಂತು. ಶ್ರೀರಾಮನನ್ನು ಹೊಗಳುವುದರ ಮೂಲಕ ಎಲ್ಲ ವೃತ್ತಾಂತವನ್ನೂ ಸೀತಾದೇವಿಯಿಂದ ತಿಳಿದುಕೊಂಡನು. ಅನಂತರ ಸೀತಾದೇವಿಗೆ ಈ ರೀತಿ ಹೇಳುವನು: "ಅಮ್ಮಾ! ನಾನು ಶ್ರೀರಾಮದೂತನು. ನಿನ್ನ ಪತಿ ಶ್ರೀರಾಮನು ಕ್ಷೇಮದಿಂದಿರುವನು. ತನ್ನ ಕ್ಷೇಮವನ್ನು ನಿನಗೆ ತಿಳಿಸುವಂತೆ ಅಪ್ಪಣೆ ಮಾಡಿರುವನು. ಆ ನಿನ್ನ ಪರಮ ಪೂಜ್ಯ ಪತಿಗೆ ಪ್ರೀತಿಯ ತಮ್ಮನಾದ ಲಕ್ಷ್ಮಣನು ಕೂಡ ತನ್ನ ನಮಸ್ಕಾರವನ್ನು ನಿನಗೆ ತಿಳಿಸ

ಬೇಕೆಂದು ಹೇಳಿರುವನು." ಹೀಗೆಂದು ಹನುಮಂತನು ಸ್ವಲ್ಪ ಮುಂದೆ ಬರಲು, ಸೀತಾದೇವಿಯು ರಾವಣನೇನಾದರೂ ಕಪಿ ರೂಪದಲ್ಲಿ ಬಂದಿರುವನೋ ಎಂಬ ಅನುಮಾನದಿಂದ ಭಯಪಟ್ಟು ಹಾಗೆಯೇ ನೆಲದ ಮೇಲೆ ಕುಳಿತುಬಿಟ್ಟಳು. ಹನುಮಂತನು ಬಹು ವಿನಯವಾಗಿ, ನಯವಾದ ಮಾತುಗಳಿಂದ, ತಾನು ಶ್ರೀರಾಮಲಕ್ಷ್ಮಣರನ್ನು ನೋಡಿದ ಸ್ಥಳ, ಸುಗ್ರೀವನ ಸ್ನೇಹ, ವಾಲಿಯ ವಧೆ, ಸೀತೆಯನ್ನು ಹುಡುಕುವುದಕ್ಕೆ ಕಪಿ ವೀರರನ್ನು ಕಳುಹಿಸಿದ್ದು—ಮುಂತಾದ ವಿಷಯವನ್ನು ವಿಸ್ತಾರವಾಗಿ ಸೀತೆಗೆ ಹೇಳಿದನು. ಅನಂತರ ಶ್ರೀರಾಮನ ಸದ್ಗುಣವನ್ನು ಹೀಗೆ ವರ್ಣಿಸಿದನು: ಕಮಲದಂತೆ ಕಣ್ಣುಳ್ಳವನು ಶ್ರೀರಾಮನು. ಸಮಸ್ತ ಪ್ರಾಣಿಗಳನ್ನೂ ಆಕರ್ಷಿಸತಕ್ಕ ಸೌಂದರ್ಯ ಉಳ್ಳವನು. ಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸುಳ್ಳವನು. ಕ್ಷಮೆಯಲ್ಲಿ ಭೂಮಿಗೆ ಸಮ. ಬುದ್ಧಿಯಲ್ಲಿ ಬೃಹಸ್ಪತಿಯನ್ನು ಮೀರಿಸಿದವನು. ಗುರುವಿನಲ್ಲಿ ಅತಿ ವಿನಯವುಳ್ಳವನು. ವೇದವಿತ್ತುಗಳಿಗೆ ಪೂಜಾರ್ಹನು. ಧನುರ್ವೇದಗಳಲ್ಲಿ ಪಂಡಿತನು. ವಿಸ್ತಾರವಾದ ಹೆಗಲುಳ್ಳವನು. ಉದ್ದವಾದ ತೋಳುಗಳುಳ್ಳವನು. ಚಕ್ರವರ್ತಿ ಲಕ್ಷಣಗಳುಳ್ಳವನು. ಅವನ ತೋಳು, ತೊಡೆ, ಮೊಳಕಾಲು, ಕೆನ್ನೆ ಇವು ನಾಲ್ಕೂ ಸಮನಾಗಿರುವುವು. ಅಂತಹ ಸುಂದರ ಶ್ರೀರಾಮನನ್ನು ತಾನು ಋಷ್ಯಮೂಕ ಪರ್ವತದಲ್ಲಿ ಕಂಡುದಾಗಿ ಹೇಳಿ, ಅವನು ವಾನರರಿಗಿತ್ತ ಅಪ್ಪಣೆ, ಸಂಪಾತಿಯ ದರ್ಶನ, ಲಂಕಾ ಪ್ರವೇಶ ಎಲ್ಲವನ್ನೂ ವಿಶದವಾಗಿ ಸೀತಾದೇವಿಗೆ ತಿಳಿಸಿದನು. ಆಗ ಅವನು ರಾವಣನಿಂದ ಕಳುಹಿಸಲ್ಪಟ್ಟವನಲ್ಲವೆಂದು ಸೀತಾದೇವಿಗೆ ಧೈರ್ಯವಾಯಿತು.

ಸೀತಾದೇವಿಗೆ ಇನ್ನೂ ಹೆಚ್ಚಿನ ನಂಬಿಕೆ ಹುಟ್ಟಿಸುವುದಕ್ಕಾಗಿ ಶ್ರೀರಾಮಾಂಕಿತದ ಉಂಗುರವನ್ನು ಅವಳ ಕೈಯಲ್ಲಿ ಕೊಟ್ಟು, ಇನ್ನು ಅವಳ ದುಃಖಕಾಲ ಕೊನೆಗಾಣುವುದೆಂದು ಧೈರ್ಯ ಹೇಳಿದನು. ಶ್ರೀರಾಮನನ್ನು ನೋಡಿದಷ್ಟು ಸಂತೋಷವಾಯಿತು ಸೀತಾದೇವಿಗೆ. ಆಂಜನೇಯನನ್ನು ಮನ್ನಿಸುತ್ತ ಅವನನ್ನು ಹೊಗಳಿದಳು. 'ಎಲೈ! ವಾನರೋತ್ತಮನೇ! ನಿನ್ನಂತಹ ಪರಾಕ್ರಮಿಯು ಯಾರೂ ಇಲ್ಲ. ನೀನು ಮಹಾ ಪ್ರಾಜ್ಞನು, ಸಮರ್ಥನು, ನೂರು ಯೋಜನದಗಲದ ಸಮುದ್ರವನ್ನು ದಾಟುವುದಕ್ಕೆ

ನಿನ್ನಿಂದ ಸಾಧ್ಯವಾಯಿತೇ ವಿನಹ ಇನ್ನಾರಿಂದಲೂ ಆಗುತ್ತಿರಲಿಲ್ಲ. ರಾವಣನ ವಿಷಯದಲ್ಲಿ ನಿನಗೆ ಸ್ವಲ್ಪವೂ ಭಯವಿಲ್ಲದಿರುವುದನ್ನು ನೋಡಿದರೆ ನೀನು ಸಾಮಾನ್ಯನಲ್ಲ. ಶ್ರೀರಾಮನ ಮಾತಿನ ಮೇಲೆ ನೀನು ಬಂದಿರುವೆಯಾದ್ದರಿಂದ ಅವನು ನಿನ್ನ ಸಾಮರ್ಥ್ಯವನ್ನೂ, ಧೈರ್ಯವನ್ನೂ ತಿಳಿದೇ ಈ ಕಾರ್ಯದಲ್ಲಿ ನಿನ್ನನ್ನು ನೇಮಿಸಿದನು. ಎಲೈ! ಕಪಿಶ್ರೇಷ್ಠನೇ! ಶ್ರೀರಾಮನು ಕೃಶನಾಗಿಲ್ಲ ತಾನೆ? ಪರಂತಪನಾದ ರಾಮನು ಸಾಮದಾನ ಉಪಾಯಗಳನ್ನು ನಡೆಸುತ್ತಿರುವನಷ್ಟೆ? ಇಷ್ಟದೇವತಾ ಪ್ರಾರ್ಥನೆ ಮಾಡುತ್ತಿರುವನೆ? ಯಾವಾಗಲೂ ಸುಖವನ್ನನುಭವಿಸುವುದಕ್ಕೆ ಅರ್ಹನು ಅವನು. ಅವನಿಗೆ ದುಃಖ ಒದಗಿತು. ಈ ಮಹಾ ವಿಪತ್ತಿನಿಂದ ಅವನು ನನ್ನನ್ನು ಪಾರುಮಾಡುವನೇ? ಇಲ್ಲಿಗೆ ಬಂದು ರಾಕ್ಷಸ ಸಮೂಹವನ್ನು ನಾಶಮಾಡುವನೇ? ಅಂಜನಾತನಯನೇ! ಶ್ರೀರಾಮನಿಗೆ ನಾನು ಪರತಂತ್ರಳು. ಈ ದೇಹ ಅವನಿಗೆ ಸೇರಿದ್ದು. ಇದನ್ನು ಬಿಡುವುದಕ್ಕೆ ಕೂಡ ನನಗೆ ಸ್ವಾತಂತ್ರ್ಯವಿಲ್ಲ. ಅವನು ಬರುವವರೆಗೂ, ಈ ದೇಹವನ್ನು ನಾನು ಧರಿಸಿರಲೇಬೇಕು' ಎಂದು ಮಧುರವಾಗಿ ಹೇಳಿದಳು.

ಆಮೇಲೆ ಹನುಮಂತನು ಅವಳಿಗೆ ಧೈರ್ಯ ಹೇಳಿದನು. ಶ್ರೀರಾಮನಿಗೆ ವಿಷಯ ತಿಳಿದಿದ್ದರೆ, ಅಷ್ಟರೊಳಗೆ ಅವನು ಅಲ್ಲಿಗೆ ಬರುತ್ತಿದ್ದನು. ಯಾವ ಉತ್ತಮ ವಸ್ತುವನ್ನು ನೋಡಿದರೂ, ಸೀತಾದೇವಿಯನ್ನೇ ಸ್ಮರಿಸಿಕೊಂಡು ವಿಲಪಿಸುವನು. ಆದುದರಿಂದ ಜಾಗ್ರತೆಯಾಗಿ ಲಂಕಾಪಟ್ಟಣಕ್ಕೆ ಬಂದು ರಾಕ್ಷಸ ಸಮೂಹವನ್ನು ನಾಶಮಾಡುವನೆಂದು ಹೇಳಿದನು.

ಅನಂತರ ಸೀತಾದೇವಿಯು ತನ್ನ ಸೆರಗಿನಲ್ಲಿ ಕಟ್ಟಿದ್ದ ಚೂಡಾಮಣಿಯನ್ನು ಹನುಮಂತನಿಗೆ ಕೊಟ್ಟು ಶ್ರೀರಾಮನಿಗೆ ಗುರುತಾಗಿ ಕೊಡುವಂತೆ ತಿಳಿಸಿದಳು. ಅದನ್ನು ಹನುಮಂತನು ವಿನಯಪೂರ್ವಕವಾಗಿ ತೆಗೆದುಕೊಂಡು, ನಮಸ್ಕರಿಸಿ, ಅವಳ ಅಪ್ಪಣೆಯನ್ನು ಪಡೆದು ಅಶೋಕವನವನ್ನು ಭಂಗಪಡಿಸಲು ಪ್ರಾರಂಭಿಸಿದನು. ಸಾಧ್ಯವಾದರೆ ರಾವಣನಿಗೆ ತನ್ನ ಶಕ್ತಿಯನ್ನು ತೋರಿಸಬೇಕೆಂಬುದು ಅವನ ಅಪೇಕ್ಷೆಯಾಗಿತ್ತು.

ರಾವಣನಿಗೆ ಅತ್ಯಂತ ಪ್ರಿಯವಾಗಿದ್ದ ಅಶೋಕವನಕ್ಕೆ ನುಗ್ಗಿ ಹನುಮಂತನು ಮರಗಳನ್ನು ಮುರಿದನು. ಗಿಡಗಳನ್ನೂ, ಹೂವಿನ ಬಳ್ಳಿ

ಗಳನ್ನೂ ಕಿತ್ತುಹಾಕಿದನು. ಜಲಾಶಯುಗಳನ್ನು ಒಡೆದು ಪುಡಿಮಾಡಿದನು. ಲತಾಗೃಹಗಳನ್ನೂ ಕೆಡವಿಬಿಟ್ಟನು. ತನ್ನ ಆಕಾರವನ್ನು ಮಹತ್ತಾಗಿ ಬೆಳೆಸಿ ವನವನ್ನು ಭಂಗಪಡಿಸುತ್ತಿರುವಾಗ ರಾಕ್ಷಸ ಸ್ತ್ರೀಯರು ಭಯಪಟ್ಟು ಓಡಿದರು; ಕಪಿಯು ಮಾಡಿದ ಚೇಷ್ಟೆಗಳನ್ನು ರಾವಣನಿಗೆ ತಿಳಿಸಿದರು. ರಾವಣನ ಅಪ್ಪಣೆಯಂತೆ ಅನೇಕ ರಾಕ್ಷಸರು ಆ ಕಪಿಯನ್ನು ಹಿಡಿಯು ವುದಕ್ಕೆ ಬಂದರು. ಹನುಮಂತನು ಮರದ ಕೊಂಬೆಯನ್ನು ಮುರಿದು ಅವರನ್ನೆಲ್ಲಾ ಅದರಿಂದ ಬಡಿದು ಓಡಿಸಿಬಿಟ್ಟನು. ಆದರೂ ಅವರು ಮರೆಯಲ್ಲಿ ನಿಂತು ಹನುಮಂತನನ್ನು ಹೊಡೆಯುವುದಕ್ಕೆ ಯತ್ನಿಸುತ್ತಿದ್ದರು. ಇದನ್ನು ಕಂಡು, ಹನುಮಂತನು ಕೋಪಗೊಂಡು, ಉದ್ಯಾನದ ದೊಡ್ಡ ಬಾಗಿಲನ್ನು ಕಿತ್ತು, ಚಕ್ರಗತಿಯಿಂದ ಅದನ್ನು ತಿರುಗಿಸಿ ರಾಕ್ಷಸರನ್ನು ಹೊಡೆದೋಡಿಸಿಬಿಟ್ಟನು.

ಆಮೇಲೆ ಅಶೋಕವನದಲ್ಲಿ ದೊಡ್ಡ ಪ್ರಾಸಾದವನ್ನೇರಿದನು. ಅಲ್ಲಿ ಕಾವಲಿದ್ದ ಕೆಲವು ರಾಕ್ಷಸರೆಲ್ಲಾ ಹನುಮಂತನ ಶಕ್ತಿಯನ್ನೂ, ಆಕಾರ ವನ್ನೂ ನೋಡಿ ಹೆದರಿ ಮೂರ್ಛೆಹೋದರು. ಇನ್ನು ಕೆಲವರು ರಾಕ್ಷಸರು ಕತ್ತಿ, ಈಟಿ, ಗಂಡುಗೊಡಲಿಗಳನ್ನು ಹನುಮಂತನ ಮೇಲೆ ಎಸೆಯುತ್ತ ಅವನನ್ನು ಮುತ್ತಿದರು. ಹನುಮಂತನು ಆ ಪ್ರಾಸಾದದ ಕಂಬವನ್ನೇ ಕಿತ್ತು ಗಿರ್ರನೆ ತಿರುಗಿಸಿ ರಾಕ್ಷಸರ ಮೇಲೆ ಬಿಟ್ಟನು. ಅನಂತರ ಪ್ರಹಸ್ತ, ಜಂಬುಮಾಲಿ, ವಿರೂಪಾಕ್ಷ, ಅಕ್ಷಯಕುಮಾರಾದಿ ರಾಕ್ಷಸವೀರರು ಒಬ್ಬೊಬ್ಬರಾಗಿ ಹನುಮಂತನನ್ನು ಎದುರಿಸಿ ಸೋತು ಓಡಿದರು. ಹನುಮಂತನ ಘೋರ ಯುದ್ಧವನ್ನು ನೋಡಿ ಸೂರ್ಯನು ತಣ್ಣಗಾದನು. ವಾಯುವು ನಿಶ್ಚಲನಾದನು. ಸಮುದ್ರವು ಕಲಕಿಹೋಯಿತು. ಈ ಯುದ್ಧ ದಲ್ಲಿ ಅಕ್ಷಯಕುಮಾರನ ರಥವು ಪುಡಿಪುಡಿಯಾಯಿತು. ಅವನ ಕಾಲು ಹಿಡಿದು ಹನುಮಂತನು ಅವನನ್ನು ಗಿರಗಿರನೆ ತಿರುಗಿಸಿ, ನೆಲಕ್ಕೆ ಬಡಿದು ಕುಕ್ಕಿಬಿಟ್ಟನು. ಮೂಳೆಗಳೆಲ್ಲಾ ಮುರಿದುಹೋಗಿ ಅವನು ಸತ್ತು ಬಿದ್ದನು.

ರಾವಣನಿಗೆ ಆಗ ಸ್ವಲ್ಪ ಭಯವಾಯಿತು. ಇಂದ್ರಜಿತ್ತನ್ನು ಕರೆದು, ಆ ಕಪಿಗೆ ತಕ್ಕ ಪ್ರತೀಕಾರ ಮಾಡಿಬರುವಂತೆ ಹೇಳಿದನು. ಇಂದ್ರಜಿತ್ತು

ಮಹಾವೀರ; ಎಲ್ಲ ಅಸ್ತ್ರಗಳನ್ನೂ ಬಲ್ಲವನು; ಧನುರ್ಧಾರಿಗಳಲ್ಲಿ ಶ್ರೇಷ್ಠನು. ಇಂತಹ ಶೂರನು ಯುದ್ಧಕ್ಕೆ ಬರುವುದನ್ನು ಕಂಡು ಹನುಮಂತನಿಗೆ ಸಂತೋಷವಾಯಿತು. ಇಬ್ಬರಿಗೂ ದೊಡ್ಡ ಯುದ್ಧವಾಯಿತು. ಇಬ್ಬರೂ ಮಹಾರಥರು, ಬಲಾಢ್ಯರು, ಪ್ರಚಂಡವೇಗವುಳ್ಳವರು. ಇಂದ್ರಜಿತ್ತು ಬಿಟ್ಟ ಬಾಣಗಳನ್ನೆಲ್ಲಾ ಹನುಮಂತನು ವಿಫಲಗೊಳಿಸಿದನು. ಇದನ್ನು ನೋಡಿ ಅವನಿಗೆ ಚಿಂತೆಯಾಯಿತು. ಕೊನೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಬಿಟ್ಟನು. ಬ್ರಹ್ಮನ ವರಬಲದಿಂದ ಹನುಮಂತನು ಬಂಧಿಸಲ್ಪಟ್ಟವನಂತಾದನು. ಅಷ್ಟರೊಳಗೆ ರಾಕ್ಷಸರು ಓಡಿಬಂದು ಹಗ್ಗ ಹುರಿಗಳಿಂದ ಅವನನ್ನು ಕಟ್ಟಿದರು. ಬ್ರಹ್ಮಾಸ್ತ್ರದ ಕಟ್ಟು ಬಿಟ್ಟುಹೋಯಿತು. ಆಮೇಲೆ ರಾಕ್ಷಸರು ಅವನನ್ನು ರಾವಣನ ಆಸ್ಥಾನಕ್ಕೆ ಕರೆದುಕೊಂಡು ಹೋದರು. ಅವನಿಗೂ ಅದೇ ಬೇಕಿತ್ತು. ರಾವಣನನ್ನು ನೋಡಬೇಕೆಂದು ಕುತೂಹಲ ಅವನಿಗೆ. ರಾಕ್ಷಸರಾಜನೆದುರಿಗೆ ಅವನನ್ನು ನಿಲ್ಲಿಸಿದಾಗ ಸಿಂಹಾಸನಾರೂಢನಾಗಿದ್ದ ರಾವಣನನ್ನು ಕಂಡು ಹನುಮಂತನಿಗೆ ಆಶ್ಚರ್ಯವಾಯಿತು.

ಈ ರಾಕ್ಷಸವೀರನ ಬಲ, ಧೈರ್ಯ, ತೇಜಸ್ಸನ್ನು ಕಂಡು ಹನುಮಂತನು ಆಶ್ಚರ್ಯಪಟ್ಟನು. ಸಮಸ್ತ ರಾಜಲಕ್ಷಣಗಳಿಂದ ಕೂಡಿರುವನಲ್ಲಾ? ಮಹತ್ತಾದ ಇದೊಂದು ಅಧರ್ಮಕ್ಕೆ ಇವನು ಪ್ರವೇಶಮಾಡದಿದ್ದ ಭಾಗದಲ್ಲಿ ಸಮಸ್ತ ದೇವತೆಗಳಿಗೂ ಪ್ರಭುವಾಗುವಷ್ಟು ಯೋಗ್ಯತೆ ಪಡೆಯುತ್ತಿದ್ದನಲ್ಲವೆ? ಸಮಸ್ತ ಲೋಕವೂ ಇವನ ವಶವಾಗುತ್ತಿತ್ತಲ್ಲವೇ? ಎಂತಹ ಅಕಾರ್ಯ ಮಾಡಿಬಿಟ್ಟನು ಇವನು— ಎಂದು ಯೋಚಿಸಿದನು.

ಎದುರಿಗೆ ನಿಂತಿರುವ ಹನುಮಂತನನ್ನು ನೋಡಿ ರಾವಣನಿಗೆ ಕೋಪ ಬಂದಿತು. ಕೂಡಲೇ ಚಿಂತೆಯೂ ಹುಟ್ಟಿತು. ಹಿಂದೆ ತನ್ನನ್ನು ಶಪಿಸಿದ ನಂದಿಯೇ ಈ ರೂಪದಲ್ಲಿ ಬಂದಿರುವನೋ? ತನಗೆ ವೈರಿಯಾದ ಇಂದ್ರನೇನಾದರೂ ಈ ಕಪಿಯನ್ನು ಕಳುಹಿಸಿರುವನೋ? ಕುಬೇರ, ಯಮ, ವರುಣ, ವಿಷ್ಣು–ಇವರೇನಾದರೂ ಇವನನ್ನು ಕಳುಹಿಸಿರುವರೋ? ಇವನು ಸಾಮಾನ್ಯ ಕಪಿಯಂತೆ ಕಾಣುವುದಿಲ್ಲ ಎಂದು ಯೋಚಿಸಿ, ಆ ಕಪಿಯ ನಿಜ ಸ್ಥಿತಿಯನ್ನು ವಿಚಾರಿಸುವಂತೆ ತನ್ನ ಮಂತ್ರಿಗೆ ರಾವಣನು ಅಪ್ಪಣೆ ಇತ್ತನು. ಅವನ ಪ್ರಶ್ನೆಗಳಿಗೆ ಹನುಮಂತನು ಈ ರೀತಿ ಉತ್ತರ ಕೊಟ್ಟನು:

"ಎಲೈ ರಾಕ್ಷಸರಾಜನೇ! ನಾನು ಯಾರ ದೂತನಾಗಿಯೂ ಬಂದಿಲ್ಲ. ವಿಷ್ಣುವು ನನ್ನನ್ನು ಕಳುಹಿಸಲಿಲ್ಲ. ಕುಬೇರನಿಗೂ ನನಗೂ ಸ್ನೇಹವಿಲ್ಲ. ನಾನೊಬ್ಬ ವಾನರ, ನಿಜ. ನಿನ್ನನ್ನು ನೋಡಬೇಕೆಂಬ ಕುತೂಹಲದಿಂದ ನಿನ್ನ ತೋಟವನ್ನು ಹಾಳುಮಾಡಿದೆ. ಯಾವ ಅಸ್ತ್ರವೂ ನನ್ನನ್ನು ಕಟ್ಟಲಾರದು. ನಿನ್ನಂತೆ ನಾನೂ ಬ್ರಹ್ಮನಿಂದ ವರ ಪಡೆದಿದ್ದೇನೆ. ನಿನಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದೇ ನಾನು ಇಲ್ಲಿಗೆ ಬಂದುದು. ರಾಕ್ಷಸೇಂದ್ರಾ! ನನ್ನೊಡೆಯ ಸುಗ್ರೀವ ರಾಜನು ನನ್ನನ್ನು ಇಲ್ಲಿಗೆ ಕಳುಹಿಸಿದನು. ಸಮರ್ಥನಾದ ಶ್ರೀರಾಮನು ತನ್ನ ತಂದೆಯ ಮಾತನ್ನು ಪಾಲಿಸುವುದಕ್ಕಾಗಿ ಪತ್ನಿಯಾದ ಸೀತೆ, ತಮ್ಮನಾದ ಲಕ್ಷ್ಮಣನೊಡನೆ ವನವಾಸಕ್ಕೆ ಬಂದನು. ಜನಸ್ಥಾನವೆಂಬ ಅರಣ್ಯಸ್ಥಲದಲ್ಲಿ ಸೀತೆಯನ್ನು ಕಳೆದುಕೊಂಡನು. ಅವಳನ್ನು ಹುಡುಕುತ್ತಾ, ಋಷ್ಯಮೂಕಪರ್ವತಕ್ಕೆ ಬಂದನು. ಅಲ್ಲಿ ಅವನಿಗೂ ಸುಗ್ರೀವನಿಗೂ ಸ್ನೇಹವಾಯಿತು. ರಾಮನು ಸುಗ್ರೀವನ ಅಣ್ಣನಾದ ವಾಲಿಯನ್ನು ಕೊಂದು, ಸುಗ್ರೀವನಿಗೆ ವಾನರ ರಾಜ್ಯದ ಪಟ್ಟ ಕಟ್ಟಿದನು. ಆಮೇಲೆ ವಾನರರನ್ನೆಲ್ಲಾ ಕರೆದು ಸೀತೆಯನ್ನು ಹುಡುಕುವುದಕ್ಕೆ ಕಳುಹಿಸಿದನು. ಅಂತಹ ವಾನರ ವೀರರಲ್ಲಿ ನಾನೊಬ್ಬ. ನನ್ನ ಹೆಸರು ಹನುಮಂತ. ಎಲೈ! ರಾವಣರಾಜಾ! ನೀನು ತಪಸ್ಸು ಮಾಡಿದವನು, ಶೂರ, ಧೈರ್ಯಶಾಲಿ, ಬುದ್ಧಿವಂತನು, ವೇದಾಧ್ಯಯನಸಂಪನ್ನ. ಹೀಗಿದ್ದರೂ ಈ ಅಕಾರ್ಯ ಮಾಡಬಹುದೇ? ಸೀತೆಯನ್ನು ಕದ್ದು ತರಬಹುದೇ? ಈ ದುಷ್ಕೃತ್ಯಫಲವನ್ನು ಪರಿಹರಿಸಲು ನಿನ್ನಿಂದ ಸಾಧ್ಯವೇ? ಖಂಡಿತ ಸಾಧ್ಯವಿಲ್ಲ. ಧರ್ಮದ ಮುಂದೆ ಅಧರ್ಮ ನಿಜವಾಗಿ ನಿಲ್ಲುವುದಿಲ್ಲ.

"ಓ! ರಾಕ್ಷಸೇಂದ್ರಾ! ಶ್ರೀರಾಮನು ಸಾಮಾನ್ಯನಲ್ಲ. ಅವನ ಬಾಣದ ಮುಂದೆ ಜಗತ್ತಿನಲ್ಲಿ ಯಾರೂ ನಿಲ್ಲಲಾರರು. ಅದರಲ್ಲೂ ನೀನು ಹೇಯಕಾರ್ಯ ಮಾಡಿರುವೆ. ನೀನು ಹೇಗೆತಾನೆ ಅವನೆದುರು ನಿಲ್ಲಬಲ್ಲೆ? ನನ್ನ ರಾಜನಾದ ಸುಗ್ರೀವನು ಈ ಮಾತುಗಳನ್ನು ನಿನಗೆ ಹೇಳುವಂತೆ ತಿಳಿಸಿರುವನು. ಸೀತಾದೇವಿಯನ್ನು ಶ್ರೀರಾಮನಿಗೊಪ್ಪಿಸು. ಆಕೆಯನ್ನು ನೀನು ಖಂಡಿತ ದಕ್ಕಿಸಿಕೊಳ್ಳಲಾರೆ. ಶರಣು ಬಂದ ನಿನ್ನನ್ನು ಶ್ರೀರಾಮನು ನಿಜವಾಗಿ ಮನ್ನಿಸುವನು. ದೇವಾಸುರಾದಿಗಳಿಂದ ಮರಣವುಂಟಾಗದಿರಲಿ

ಎಂದು ನೀನು ಬ್ರಹ್ಮನಿಂದ ವರ ಪಡೆದೆಯೇ ವಿನಹ, ಮಾನವರಿಂದಾಗಲಿ, ವಾನರರಿಂದಾಗಲಿ ಸಾವುಂಟಾಗದಂತೆ ನೀನು ವರ ಪಡೆಯಲಿಲ್ಲ. ನಮ್ಮ ರಾಜನಾದ ಸುಗ್ರೀವನು ಅಸುರನಲ್ಲ, ಗಂಧರ್ವನೂ ಅಲ್ಲ, ಯಕ್ಷಕಿನ್ನರ ನಾಗನೂ ಅಲ್ಲ. ಸುಗ್ರೀವನ ಕೈಯಿಂದ ನೀನು ಸಾಯದೆ ಹೇಗೆ ತಾನೆ ಉಳಿಯುವೆ?

"ಎಲೈ! ರಾಕ್ಷಸರಾಜಾ! ಈ ಉಪದೇಶಗಳೆಲ್ಲಾ ಏಕೆಂದು ಕೇಳುವೆಯಾ? ಹೇಳುವೆನು ಕೇಳು. ಧರ್ಮದ ಮುಂದೆ ಅಧರ್ಮ ಎಂದಾದರೂ ನಿಂತೀತೇ? ಧರ್ಮವು ಅಧರ್ಮವನ್ನು ನಾಶಮಾಡುವುದು. ನೀನು ಮಾಡಿದ ಧರ್ಮವೆಲ್ಲಾ, ಗಳಿಸಿದ ಪುಣ್ಯವೆಲ್ಲಾ ಈ ಒಂದು ಅಧರ್ಮ ದಿಂದ ಅಳಿಸಿಹೋಗುವುದು. ಧರ್ಮಾಧರ್ಮ ವಿಷಯ ಹಾಗಿರಲಿ. ಶ್ರೀರಾಮನು ಸಾಮಾನ್ಯ ಮನುಷ್ಯನೆಂದು ನೀನು ತಿಳಿದಿರುವ ಪಕ್ಷದಲ್ಲಿ ನೀನು ನಿಜವಾಗಿ ಮೋಸಹೋಗಿರುವೆ. ಜನಸ್ಥಾನದಲ್ಲಿ ತಾನೊಬ್ಬನೇ ನಿಂತು ಸಾವಿರಾರು ರಾಕ್ಷಸರನ್ನು ಕೊಲ್ಲಲಿಲ್ಲವೇ? ಬಲಶಾಲಿಯಾದ ವಾಲಿಯನ್ನು ಒಂದೇ ಬಾಣದಿಂದ ವಧಿಸಲಿಲ್ಲವೇ? ನಾನೊಬ್ಬನೇ ಈಗ ನಿನ್ನನ್ನೂ, ನಿನ್ನ ಪರಿವಾರವನ್ನೂ ಕೊಂದು, ಲಂಕೆಯನ್ನು ನಾಶಮಾಡಿ, ಸೀತೆಯನ್ನು ರಾಮನಿಗೊಪ್ಪಿಸಬಲ್ಲೆ. ಆದರೆ ಹಾಗೆ ಮಾಡಲು ನನಗೆ ಶ್ರೀರಾಮನ ಅಪ್ಪಣೆಯಿಲ್ಲ. ಸೀತಾದೇವಿಯು ಸಾಮಾನ್ಯಳಲ್ಲ. ಲಂಕೆ ಯನ್ನು ದಹಿಸಲು ಬಂದಿರುವ ಕಾಳರಾತ್ರಿ ಅವಳೇ ಎಂದು ತಿಳಿ. ಅವಳ ಕೋಪದಿಂದ ಈಗಾಗಲೇ ಅರ್ಧ ಲಂಕೆ ಸುಟ್ಟುಹೋಗಿದೆ. ಶ್ರೀರಾಮನ ಕೋಪದಿಂದ ಅದು ಪೂರ್ಣವಾಗಿ ದಹಿಸಿಹೋಗುವುದು.

"ರಾವಣಾ! ನಿನ್ನ ಪಾಪಕಾರ್ಯದಿಂದ ನೀನೊಬ್ಬನಲ್ಲದೆ, ನಿನ್ನ ಸಹೋದರರು, ಮಕ್ಕಳು, ಮರಿಮಕ್ಕಳು, ಜ್ಞಾತಿಗಳು, ಬಂಧುಗಳು, ಪ್ರಜೆಗಳು ಎಲ್ಲರೂ ಸಾಯುವರು; ಸರ್ವನಾಶವಾಗುವುದು. ನಾನು ಶ್ರೀರಾಮನ ರಾಯಭಾರಿಯಾಗಿ ಬಂದಿದ್ದೇನೆ. ನಾನು ನಿನ್ನ ಹಾಗೆ ರಾಕ್ಷಸ ನಲ್ಲ. ರಾಮನಂತೆ ಮನುಷ್ಯನೂ ಅಲ್ಲ. ನಿಮ್ಮಿಬ್ಬರಿಗೂ ಮಧ್ಯಸ್ಥನಾದ ವಾನರನು. ನನ್ನ ಮಾತು ಸತ್ಯವೆಂದು ತಿಳಿ. ಶ್ರೀರಾಮನೊಡನೆ ನೀನು ಖಂಡಿತ ಯುದ್ಧಮಾಡಿ ಜಯಿಸಲಾರೆ. ಮುಕ್ಕಣ್ಣನಾದ ರುದ್ರನಾಗಲಿ,

ಅಯೋನಿಜನಾದ ಬ್ರಹ್ಮನಾಗಲಿ, ತ್ರಿಲೋಕಾಧಿಪತಿಯಾದ ಇಂದ್ರನೇ ಆಗಲಿ ಯಾರೂ ನಿನ್ನನ್ನು ರಕ್ಷಿಸಲಾರರು. ಸರ್ವಲೋಕೇಶ್ವರನೂ, ರಾಜ ಸಿಂಹನೂ ಆಗಿರುವ ಶ್ರೀರಾಮನನ್ನು ನೀನು ಮರೆಹೊಗು. ಅದೊಂದೇ ನಿನಗಿರುವ ಮಾರ್ಗ. ನನ್ನ ಮಾತನ್ನು ನಂಬು" ಎಂದು ಹನುಮಂತನು ನಯ, ವಿನಯ, ಭಯಗಳಿಂದ ವಿಸ್ತಾರವಾಗಿ ಎಲ್ಲವನ್ನೂ ತಿಳಿಸಿದನು.

ಮೂರ್ಖರಿಗೆ ಹಿತನುಡಿಗಳು ರುಚಿಸುವುದಿಲ್ಲ. ಬುದ್ಧಿಮಾತುಗಳನ್ನು ಅವರು ಲಕ್ಷಿಸುವುದಿಲ್ಲ. ರಾವಣನಿಗೂ ಹಾಗೆಯೇ ಆಯಿತು. ಅತಿಯಾದ ಕೋಪದಿಂದ ಕಟಕಟನೆ ಹಲ್ಲು ಕಡಿಯುತ್ತ, ಹನುಮಂತನನ್ನು ಕೊಲ್ಲು ವಂತೆ ರಾಕ್ಷಸರಿಗೆ ಅಪ್ಪಣೆ ಮಾಡಿದನು. ದೂತಕಾರ್ಯಕ್ಕೆ ಬಂದವನನ್ನು ಕೊಲ್ಲುವುದು ರಾಜಧರ್ಮಕ್ಕೆ ವಿರುದ್ಧವೆಂದು ನೀತಿವಂತನಾದ ವಿಭೀಷಣನು ಸಲಹೆ ಇತ್ತನು. ಅನಂತರ ರಾವಣನು ಸ್ವಲ್ಪ ಯೋಚನೆ ಮಾಡಿ, ಕಪಿಗಳಿಗೆ ಅಲಂಕಾರಪ್ರಾಯವಾದ ಬಾಲಕ್ಕೆ ಬೆಂಕಿ ಹತ್ತಿಸಿ ಸುಟ್ಟುಬಿಡು ವಂತೆಯೂ, ಪಟ್ಟಣದ ಬೀದಿ ಬೀದಿಯಲ್ಲಿ ಮೆರವಣಿಗೆ ಮಾಡುವಂತೆಯೂ ತನ್ನ ಪರಿವಾರಕ್ಕೆ ತಿಳಿಸಿದನು. ರಾಕ್ಷಸರು ಬಂದು ಹನುಮಂತನ ಬಾಲಕ್ಕೆ ಬಟ್ಟೆ ಸುತ್ತಿದಷ್ಟೂ ಅದು ಬೆಳೆಯುತ್ತಲೇ ಇತ್ತು. ಈ ವಿಚಾರ ಊರಿನಲ್ಲೆಲ್ಲಾ ಹರಡಿತು. ಸೀತಾದೇವಿಗೂ ಗೊತ್ತಾಯಿತು. ಕೂಡಲೇ ಅವಳು ಅಗ್ನಿದೇವನಿಂದ ಅವನಿಗೆ ಯಾವ ತೊಂದರೆಯೂ ಉಂಟಾಗದಿರ ಲೆಂದು ಅಗ್ನಿಯನ್ನು ಪ್ರಾರ್ಥಿಸಿದಳು. ಬಾಲಕ್ಕೆ ಬೆಂಕಿಯನ್ನು ರಾಕ್ಷಸರು ಹತ್ತಿಸಿದರು. ಅದು ತಣ್ಣಗಿರುವುದನ್ನು ಕಂಡು ಹನುಮಂತನಿಗೆ ಆಶ್ಚರ್ಯ ವಾಯಿತು.

ತನಗೆ ಇಷ್ಟು ಉಪಕಾರಮಾಡಿದ ಅಗ್ನಿದೇವರಿಗೆ ಆಹುತಿ ಕೊಡ ಬೇಡವೇ? ಹನುಮಂತನು ಕೂಡಲೇ ಮೇಲಕ್ಕೆ ಹಾರಿದನು. ಮನೆಯಿಂದ ಮನೆಗೆ ಹಾರುತಾ ಎಲ್ಲ ಕಡೆಗೂ ಬೆಂಕಿ ಇಟ್ಟನು. ರಾವಣನ ಅರಮನೆಗೂ ಅಗ್ನಿಪ್ರವೇಶವಾಯಿತು. ವಾಯುದೇವನೂ ಸಹಾಯ ಮಾಡಿದನು. ವಿಭೀಷಣನ ಮನೆಯೊಂದನ್ನು ಬಿಟ್ಟು ಲಂಕೆಯನ್ನೆಲ್ಲಾ ಅಗ್ನಿಗೆ ಆಹುತಿ ಕೊಟ್ಟನು. ಹೀಗೆ ಹನುಮಂತನು ಅಶೋಕವನವನ್ನು ಹಾಳುಮಾಡಿ, ಪ್ರಬಲ ರಾಕ್ಷಸರನ್ನು ಕೊಂದು, ರಾವಣನಿಗೆ ಬುದ್ಧಿ ಹೇಳಿ, ತನ್ನ ಅದ್ಭುತ

ಶಕ್ತಿಯನ್ನು ಪ್ರದರ್ಶನಮಾಡಿ, ಲಂಕಾದಹನಮಾಡಿ, ಶ್ರೀರಾಮನ ಸ್ಮರಣೆ ಮಾಡುತ್ತಾ, ಸಮುದ್ರವನ್ನು ದಾಟಿ, ಜಾಂಬವಾದಿ ಕಪಿನಾಯಕರು ಕಾಯುತ್ತಿದ್ದ ಸ್ಥಳಕ್ಕೆ ಬಂದನು. ಲಂಕೆಯಲ್ಲಿ ನಡೆದ ಸಮಸ್ತ ವಿಷಯವನ್ನೂ ಅವರಿಗೆ ತಿಳಿಸಿದನು.

ಅನಂತರ ಕಪಿನಾಯಕರೆಲ್ಲ ಹನುಮಂತನ ಮುಂದಾಳುತನದಲ್ಲಿ ಕಿಷ್ಕಿಂಧೆಗೆ ಹೋಗಿ ಶ್ರೀರಾಮ, ಸುಗ್ರೀವಾದಿಗಳಿಗೆ ಎಲ್ಲವನ್ನೂ ತಿಳಿಸಿದರು. ಹನುಮಂತನು ಶ್ರೀರಾಮನಿಗೆ ಸೀತಾದೇವಿಯು ಕೊಟ್ಟಿದ್ದ ಚೂಡಾಮಣಿಯನ್ನು ಕೊಟ್ಟನು. ಶ್ರೀರಾಮನು ಸಮಸ್ತ ವಾನರ ಸೈನ್ಯದೊಡನೆ ಸಮುದ್ರತೀರಕ್ಕೆ ಬಂದು ನಳನಿಂದ ಸಮುದ್ರಕ್ಕೆ ಸೇತುವೆ ಕಟ್ಟಿಸಿ, ಲಂಕೆಯನ್ನು ಪ್ರವೇಶಮಾಡಿ, ಅಲ್ಲಿಂದ ಸಮಸ್ತ ರಾಕ್ಷಸರನ್ನೂ ಕೊಂದು ಸೀತಾದೇವಿಯನ್ನು ಕರೆದುಕೊಂಡು ಅಯೋಧ್ಯೆಗೆ ಹಿಂದಿರುಗಿ ಬಂದನು. ಭರತನ ಪ್ರಾರ್ಥನೆಯಂತೆ ಶ್ರೀರಾಮನು ರಾಜ್ಯಭಾರ ವಹಿಸಿಕೊಂಡನು. ಅವನ ಪಟ್ಟಾಭಿಷೇಕವು ವಿಜೃಂಭಣೆಯಿಂದ ನಡೆಯಿತು. ಅನಂತರ ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ಪ್ರಯಾಣ ಮಾಡಿದರು.

ಹನುಮಂತನು ಮಾತ್ರ ಅಲ್ಲಿಯೇ ಇದ್ದನು. ಸೀತಾರಾಮರು, ಲಕ್ಷ್ಮೀನಾರಾಯಣರ ಅವತಾರವೆಂದು ಅವಿಚ್ಛಿನ್ನ ಭಕ್ತಿಯನ್ನು ಪ್ರದರ್ಶನ ಮಾಡಿದ ಮಹಾ ಜ್ಞಾನಿ ಹನುಮಂತ. ಅವನಷ್ಟು ಭಕ್ತಿಯನ್ನು, ವಿನಯವನ್ನು, ಸೇವೆಯನ್ನು ಸಲ್ಲಿಸಿದ ವ್ಯಕ್ತಿ ಜಗತ್ತಿನಲ್ಲಿ ಇನ್ನಾರೂ ಇಲ್ಲ. ಭಕ್ತ ಪರಾಧೀನನಾದ ಶ್ರೀರಾಮನು ಈ ಕಾರಣದಿಂದಲೇ ಹನುಮಂತನನ್ನು ಚಿರಂಜೀವಿಯಾಗಿರುವಂತೆ ಹರಸಿದ್ದಾನೆ. ಹನುಮಂತನ ಅನುಪಮ ಗುಣಗಳನ್ನೂ, ಧೈರ್ಯವನ್ನೂ, ವಿದ್ಯೆಯನ್ನೂ, ಭಕ್ತಿಯನ್ನೂ, ನಯ ವಿನಯ ಸೌಶೀಲ್ಯಾದಿ ಸಮಸ್ತ ಸದ್ಗುಣಗಳನ್ನೂ ಮೆಚ್ಚಿ, ಶ್ರೀರಾಮನು 'ಆಂಜನೇಯ! ನೀನು ಬ್ರಹ್ಮಪಟ್ಟಕ್ಕೆ ಯೋಗ್ಯನಾದವನು. ಇದಕ್ಕಾಗಿ ನೀನು ಕಾದಿರು. ಇದು ನನ್ನ ಸಂಕಲ್ಪ. ಇದಕ್ಕೆ ಭಂಗತರಬೇಡ. ನನ್ನ ಚರಿತ್ರೆಯನ್ನು ಜನರು ಜಗತ್ತಿನಲ್ಲಿ ಎಲ್ಲಿಯವರೆಗೆ ಜ್ಞಾಪಿಸಿಕೊಳ್ಳುವರೋ, ಅಲ್ಲಿಯವರೆಗೆ ನೀನು ಶಾಶ್ವತವಾಗಿರು, ನೀನು ಚಿರಂಜೀವಿ' ಎಂದು ಹೇಳಿದನು. ಅವನ ಮಾತು ಸತ್ಯ.

ಆದುದರಿಂದಲೇ ಹನುಮಂತನನ್ನು ದೇವರೆಂದೇ ಜನರು ಪೂಜಿಸುವರು. ಇಂದು ಕೂಡ, ಗ್ರಾಮಗಳಲ್ಲಿ, ನಗರಗಳಲ್ಲಿ, ಎಲ್ಲೆಲ್ಲಿಯೂ ಹನುಮಂತರಾಯನ ದೇವಸ್ಥಾನಗಳಿವೆ.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ದೇವೇಂದ್ರ—ದೇವತೆಗಳಿಗೆ ಒಡೆಯ. ಐರಾವತ—ಇಂದ್ರನ ಪಟ್ಟದ ಆನೆ. ಪ್ರಾಣಿಕೋಟಿ—ಪ್ರಾಣಿಗಳ ಸಮೂಹ. ದಾನವ—ರಾಕ್ಷಸ. ಮೊರೆಯಿಡು—ದುಃಖವನ್ನು ಹೇಳಿಕೋ. ಸುವರ್ಣ—ಬಂಗಾರ. ಶೋಕ—ದುಃಖ. ತ್ರಿಗುಣಾತ್ಮಕ—ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳ ಸ್ವರೂಪನು. ಹನುಮಂತ—ಕೆನ್ನೆಯುಳ್ಳವನು—ಎಂದರೆ ವಜ್ರಾಯುಧದ ಪೆಟ್ಟಿನಿಂದ ಚಪ್ಪಟೆಯಾದ ಕೆನ್ನೆಯುಳ್ಳವನೆಂದರ್ಥ. ಅರಿವು—ಜ್ಞಾನ. ವಾಗ್ಮಿ—ಮಾತಿನ ಚತುರ. ತೇಜಸ್ಸು—ಕಾಂತಿ. ಶಸ್ತ್ರ—ಆಯುಧ. ಅಸ್ತ್ರ—ಮಂತ್ರದ ಬಲವುಳ್ಳ ಆಯುಧ (ಬಾಣ). ಉಪದ್ರವ—ತೊಂದರೆ. ಸೂತ್ರ—ಶಾಸ್ತ್ರದ ವಿಧಿಯನ್ನು ಹೇಳುವ ಸಣ್ಣ ಪಂಕ್ತಿ. ವೃತ್ತಿ—ಸೂತ್ರದ ವಿವರವಾದ ಅರ್ಥ. ವಾಕ್ಪಟುತ್ವ—ಮಾತಿನ ಚಾತುರ್ಯ. ಗೂಢಚಾರ—ರಹಸ್ಯವಾಗಿ ರಾಜ್ಯಕಾರ್ಯಕ್ಕಾಗಿ ಸುದ್ದಿಯನ್ನು ಸಂಗ್ರಹಿಸುವವನು, ಗುಪ್ತ ಸೇವಕನು. ಶಂಕೆ—ಸಂದೇಹ. ಅಪೂರ್ವ ಶೋಭೆ—ಹಿಂದೆ ಎಲ್ಲಿಯೂ ಕಾಣದ ಕಾಂತಿ. ಶಿಕ್ಷಿತನಾಗಿ—ಪಾಠಮಾಡಿ. ಅಧ್ಯಯನ—ಹೇಳಿಸಿಕೊಳ್ಳುವಿಕೆ-ಪಾಠ. ಸಖ್ಯ—ಸ್ನೇಹ. ಆಂಜನೇಯ—ಅಂಜನಾದೇವಿಯ ಮಗ. ದುರ್ಗಮ—ಹೋಗಲು ಅಸಾಧ್ಯವಾದ. ನಾಗಲೋಕ—ಸರ್ಪಲೋಕ-ಪಾತಾಳ. ದೈತ್ಯರು—ರಾಕ್ಷಸರು, ದಿತಿಯ ಮಕ್ಕಳು. ಯಶಸ್ವಿ—ಕೀರ್ತಿವಂತ. ನಾಮಾಂಕಿತ—ಹೆಸರಿನ ಗುರುತು. ಜಾಜ್ವಲ್ಯಮಾನ—ತುಂಬ ಹೊಳೆಯುತ್ತಿರುವ. ಶಿಲ್ಪಶಾಸ್ತ್ರ—ವಿಗ್ರಹಗಳನ್ನು ಕೆತ್ತುವ, ಮನೆಗಳನ್ನು ಕಟ್ಟುವ ಶಾಸ್ತ್ರ. ಭೋಗ್ಯವಸ್ತುಗಳು—ಅನುಭವಿಸಲು ಯೋಗ್ಯವಾದ ಪದಾರ್ಥಗಳು. ಗೃಧ್ರ—ಹದ್ದು. ಬಂಧಿತಳು—ಸೆರೆಯಲ್ಲಿರುವವಳು. ವಾನರಸಿಂಹ—ಶ್ರೇಷ್ಠವಾನರ. ಸೋಪಾನ—ಮೆಟ್ಟಿಲು. ಪುರದ್ವಾರ—ನಗರದ ಹೆಬ್ಬಾಗಿಲು. ಪ್ರಾಕಾರ—ಕೋಟೆಯ ಒಳಭಾಗ. ಉಪ್ಪರಿಗೆ—ಮಹಡಿ. ಅಸುಗೆ—ಅಶೋಕ (ಮುತ್ತುಗ). ಕೈಹಿಡಿ—ಮದುವೆಯಾಗು. ಸೌಶೀಲ್ಯ—ಒಳ್ಳೆಯ ನಡತೆ. ಕ್ಷಮೆ—ಶಾಂತಿ. ಪ್ರಾಜ್ಞ—ಜ್ಞಾನಿ. ಭಂಗಪಡಿಸು—ಮುರಿದುಹಾಕು. ಪ್ರಾಸಾದ—ಉಪ್ಪರಿಗೆ. ಬ್ರಹ್ಮಾಸ್ತ್ರ—ಬ್ರಹ್ಮನು ಕೊಟ್ಟ ಬಾಣ (ಮಂತ್ರದ ಆಯುಧ) ದುಷ್ಕೃತ್ಯ—ಕೆಟ್ಟ ಕೆಲಸ. ಗಳಿಸು—ಸಂಪಾದಿಸು. ರಾಯಭಾರಿ—ರಾಜದೂತ. ಮರೆಹೊಗು—ಶರಣುಬೀಳು. ಅವಿಚ್ಛಿನ್ನ—ಕಡಿಮೆಯಾಗದ, ಕಡಿದುಹೋಗದ.

೨. ಟಿಪ್ಪಣಿಗಳು :—

ಸೂರ್ಯಗ್ರಹಣ—ಸೂರ್ಯಚಂದ್ರರನ್ನು ರಾಹು, ಕೇತು ಎಂಬ ರಾಕ್ಷಸರು ಹಿಡಿಯುತ್ತಾರೆ; ಅದೇ ಸೂರ್ಯ, ಚಂದ್ರಗ್ರಹಣಗಳು ಎಂದು ಪುರಾಣದ ಕಥೆಯಿದೆ. (ಛಾಯಾಗ್ರಹಗಳೆಂದು ಅವುಗಳಿಗೆ ಹೆಸರಿದೆ. ನೆರಳು ಬೀಳುವುದೆಂದು ಅದರ ಅರ್ಥವಿರಬೇಕು.) ಭೂಮಿಯು ಸೂರ್ಯನ ಸುತ್ತಲೂ ಸುತ್ತುತ್ತದೆ. ಚಂದ್ರನು ಭೂಮಿಯ ಸುತ್ತಲೂ ಸುತ್ತುತ್ತಾನೆ. ಈ ಸಂಚಾರದಲ್ಲಿ ಭೂಮಿಗೂ ಸೂರ್ಯನಿಗೂ ಮಧ್ಯೆ ಚಂದ್ರನು ಬಂದಾಗ ನಮಗೆ ಸೂರ್ಯನು ಕಾಣದೆ ಆಗುತ್ತಾನೆ. ಅವನಿಗೆ ಅಡ್ಡವಾದ ಚಂದ್ರನ ಹಿಂಭಾಗ ನಮಗೆ ಕಪ್ಪಾಗಿ ಕಾಣುತ್ತದೆ. ಇದೇ ಸೂರ್ಯಗ್ರಹಣ.

ವಜ್ರಾಯುಧ—ಇದು ಇಂದ್ರನ ಆಯುಧ. ಬೆಟ್ಟಗಳ ರೆಕ್ಕೆಯನ್ನು ಕಡಿಯಲು ಇಂದ್ರನು ದಧೀಚಿಮುನಿಯ ಬೆನ್ನುಮೂಳೆಯಿಂದ ವಜ್ರಾಯುಧವನ್ನು ಮಾಡಿಕೊಂಡು ಹಾರುತ್ತಿದ್ದ ಬೆಟ್ಟಗಳ ರೆಕ್ಕೆಗಳನ್ನು ಕಡಿದನೆಂದು ಪುರಾಣದ ಕಥೆ ಇದೆ. (ವಜ್ರಾಯುಧ-ಸಿಡಿಲು.)

ವೇದಗಳು—ಋಗ್ವೇದ, ಯಜುರ್ವೇದ, ಸಾಮವೇದ.

ವೇದಾಂಗಗಳು—ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ.

ಅಷ್ಟದಿಕ್ಪಾಲಕರು— ಇಂದ್ರ, ಅಗ್ನಿ, ಯಮ, ನಿರಋತಿ, ವರುಣ, ವಾಯು, ಕುಬೇರ, ಈಶಾನ-ಇವರು ದಿಕ್ಪಾಲಕರು.

ತ್ರಿವಿಕ್ರಮಾವತಾರ—ಪ್ರಹ್ಲಾದನ ಮಗ ಬಲಿಚಕ್ರವರ್ತಿಯು ತನ್ನ ಮಹಾ ಪರಾಕ್ರಮದಿಂದ ಇಂದ್ರನನ್ನು ಗೆದ್ದು ಓಡಿಸಿಬಿಟ್ಟಿದ್ದನು. ಯಾರಿಗೂ ಅವನನ್ನು ಗೆಲ್ಲಲು ಸಾಧ್ಯವಾಗಲಿಲ್ಲ. ಮಹಾವಿಷ್ಣು ಕಾಶ್ಯಪ ಮುನಿಯ ಮಗನಾಗಿ, ಉಪೇಂದ್ರನೆಂಬ ಹೆಸರಿನ ವಾಮನ ವಟುವಾಗಿ ಬಲಿಯ ಯಾಗಕ್ಕೆ ಬಂದು ಮೂರಡಿ ಭೂಮಿಯ ಭಿಕ್ಷೆಯನ್ನು ಬೇಡಿದನು. ಬಲಿಯು ಅದರಂತೆ ದಾನಮಾಡಲು ಆತನು ಕೂಡಲೆ ಬೆಳೆದು ಒಂದು ಹೆಜ್ಜೆಯಿಂದ ಭೂಮಿಯನ್ನೂ, ಮತ್ತೊಂದರಿಂದ ಗಗನಮಂಡಲವನ್ನೂ ಅಳೆದು, ಮೂರನೆಯ ಅಡಿಯನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ತುಳಿದು ಬಂಧಿಸಿದನು. ಇದು ವಾಮನಾವತಾರದ ಕಥೆ.

ರಾವಣನಿಗೆ ನಂದಿಯ ಶಾಪ—ಹಿಂದೆ ಒಂದು ದಿನ ರಾವಣನು ಕೈಲಾಸದ ಬಳಿ ಹೋಗುತ್ತಿದ್ದಾಗ ಅಲ್ಲಿದ್ದ ಶಿವನ ಸೇವಕ ನಂದಿಯನ್ನು ಕಂಡು 'ಕಪಿಯ ಹಾಗೆ ಇದ್ದೀಯೆ' ಎಂದು ಹಾಸ್ಯ ಮಾಡಿದನು. ಕೋಪಗೊಂಡ ನಂದಿ 'ಕಪಿಯಿಂದಲೇ ನಿನ್ನ ರಾಜ್ಯ ನಾಶವಾಗಲಿ' ಎಂದು ಶಪಿಸಿದನು. ಈಗ ಹನುಮನನ್ನು ಕಂಡು ರಾವಣನಿಗೆ ಆ ಶಾಪದ ನೆನಪಾಯಿತು.

೩. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿರಿ (ಬರೆಯಿರಿ):—

೧. ಆಂಜನೇಯನು ಹನುಮಂತ ಎನ್ನಿಸಿಕೊಂಡುದು ಹೇಗೆ?

೨. ಹನುಮಂತನಿಗೆ ಬ್ರಹ್ಮನೂ ಇಂದ್ರಾದಿಗಳೂ ಕೊಟ್ಟ ವರಗಳು ಯಾವುವು?

೩. ಹನುಮಂತನಿಗೆ ಮುನಿಗಳು ಏನೆಂದು ಶಾಪವನ್ನು ಕೊಟ್ಟರು, ಏಕೆ?

೪. ಆಂಜನೇಯನ ಪಾಂಡಿತ್ಯ ಎಂತಹುದು?

೫. ರಾಮಲಕ್ಷ್ಮಣರಿಗೆ ಹನುಮನ ಪರಿಚಯವಾದುದು ಹೇಗೆ? ಅದರಿಂದಾದ ಲಾಭವೇನು?

೬. ಹನುಮಂತನ ಯೋಗ್ಯತೆಯ ವಿಷಯವಾಗಿ ರಾಮನು ಲಕ್ಷ್ಮಣನಿಗೆ ಏನೆಂದು ಹೇಳಿದನು?

೭. ರಾಮನ ಸ್ನೇಹದಿಂದ ಸುಗ್ರೀವನಿಗಾದ ಲಾಭವೇನು? ಅದಕ್ಕೆ ಸುಗ್ರೀವನು ಮಾಡಿದ ಪ್ರತ್ಯುಪಕಾರವೇನು?

೮. ಸ್ವಯಂಪ್ರಭೆಯು ಯಾರು? ಅವಳಿದ್ದ ಬಿಲದ್ವಾರವನ್ನು ಪ್ರವೇಶಿಸಿದ ಕಪಿಗಳಿಗೆ ಆದ ಲಾಭವೇನು?

೯. ಸೀತೆಯ ವೃತ್ತಾಂತವನ್ನು ಕಪಿಗಳಿಗೆ ತಿಳಿಸಿದವನು ಯಾರು? ಏನೆಂದು ತಿಳಿಸಿದನು?

೧೦. ಹನುಮಂತನು ಸಮುದ್ರವನ್ನು ದಾಟಿದುದು ಹೇಗೆ?

೧೧. ಲಂಕೆಯ ಹೊರಭಾಗ, ಒಳಭಾಗಗಳು ಹನುಮಂತನಿಗೆ ಹೇಗೆ ಕಂಡವು? ಅವುಗಳ ಸೊಗಸೇನು?

೧೨. ಹನುಮಂತನು ಸೀತಾದೇವಿಯನ್ನು ಕಂಡುದು ಹೇಗೆ? ಆತನು ಆಕೆಯನ್ನು ಹೇಗೆ ಸಮಾಧಾನ ಪಡಿಸಿದನು?

೧೩. ಹನುಮಂತನು ಅಶೋಕವನವನ್ನು ನಾಶಮಾಡಿದುದು ಏಕೆ?

೧೪. ಹನುಮಂತನು ರಾವಣನಿಗೆ ಹೇಳಿದ ಹಿತನುಡಿಗಳು ಯಾವುವು?

೧೫. ರಾವಣನಿಂದ ಹನುಮನಿಗೆ ದೊರೆತ ಶಿಕ್ಷೆಯೇನು? ಅದರ ಪರಿಣಾಮ ಏನಾಯಿತು?

೧೬. ರಾಮನು ಸೀತೆಯನ್ನು ಮತ್ತೆ ಪಡೆದುದು ಹೇಗೆ?

೧೭. ಹನುಮಂತನು 'ಚಿರಂಜೀವಿ' ಯಾದುದು ಹೇಗೆ?

೪. ಈ ಮಾತುಗಳು ಬಂದಿರುವ ಸಂದರ್ಭಗಳನ್ನೂ ಅಭಿಪ್ರಾಯವನ್ನೂ ತಿಳಿಸಿ:—

೧. ಹನುಮಂತನೆಂಬ ಹೆಸರಿನಿಂದ ಇವನ ಕೀರ್ತಿ ಜಗತ್ತಿಗೆಲ್ಲ ಹರಡಲಿ.

೨. ಇವನು ಉತ್ತಮೋತ್ತಮ ವಾಗ್ಮಿಯಾಗಲಿ.

೩. ಇವನ ಶಕ್ತಿ ಇವನಿಗೆ ಅರಿಯದೇ ಹೋಗಲಿ.

೪. ಇವನೊಬ್ಬ ಸಮರ್ಥ ಪುರುಷನಂತಿದೆ.

೫. ರಾಮನ ಭಾಗ್ಯವೇ ಭಾಗ್ಯ.

೬. ಯಾವ ಅಸ್ತ್ರವೂ ನನ್ನನ್ನು ಕಟ್ಟಲಾರದು.

೭. ಧರ್ಮವು ಅಧರ್ಮವನ್ನು ನಾಶಮಾಡುವುದು.

೮. ಮೂರ್ಖರಿಗೆ ಹಿತನುಡಿಗಳು ರುಚಿಸುವುದಿಲ್ಲ.

೫. ವ್ಯಾಕರಣ:—

೧. 'ಪದ' ಎಂದರೇನು? ಅದು ಎಷ್ಟು ವಿಧ?

೨. ನಾಮಪದದಲ್ಲಿ ಎಷ್ಟು ವಿಧ?

೩. ಭಾವನಾಮ ಎಂದರೇನು? ಈ ಭಾವನಾಮಗಳನ್ನು ಒಡೆದು ಭಾವ ಪ್ರತ್ಯಯಗಳನ್ನು ಕಂಡುಹಿಡಿಯಿರಿ:—

ಸೌಂದರ್ಯ, ಸೌಶೀಲ್ಯ, ಸ್ವಾತಂತ್ರ್ಯ, ಬಡತನ.

೪. ಈ ಕ್ರಿಯಾಪದಗಳ ಪ್ರಯೋಗ ವಿಶೇಷಗಳನ್ನು ಗಮನಿಸಿ:—

ಮರೆಹೊಗು—ಆಶ್ರಯಪಡೆ, ಶರಣುಬೀಳು.
ಮೊರೆಯಿಡು—ಪ್ರಾರ್ಥಿಸು, ದುಃಖವನ್ನು ಹೇಳಿಕೋ.
ಕೈಹಿಡಿ—ಮದುವೆಯಾಗು, ಕಾಪಾಡು, ಸಹಾಯಮಾಡು.
ಕೈಮುಗಿ—ನಮಸ್ಕಾರ ಮಾಡು.
ಕೊನೆಗಾಣು—ಕಳೆದುಹೋಗು, ಮುಗಿದುಹೋಗು.
ಪಾರುಮಾಡು—ದುಃಖದಿಂದ ರಕ್ಷಿಸು, ದಡವನ್ನು ಸೇರಿಸು.

# ೨. ಮಧ್ಯಮ ವ್ಯಾಯೋಗ

ನಮ್ಮ ದೇಶದ ಭಾಷೆಗಳಲ್ಲಿ ಬಹು ಹಳೆಯ ಭಾಷೆ ಸಂಸ್ಕೃತ. ಆ ಭಾಷೆಯ ಸಾಹಿತ್ಯ ಅಮೋಘವಾದುದು. ವೇದಗಳು, ಪುರಾಣಗಳು, ಇತಿಹಾಸಗಳಲ್ಲದೆ, ಕಾವ್ಯ, ನಾಟಕಾದಿ ಗ್ರಂಥಗಳು ಸಂಸ್ಕೃತದಲ್ಲಿ ಹೇರಳವಾಗಿವೆ. 'ಭಾಸ' ಮತ್ತು 'ಕಾಳಿದಾಸ' ಈ ಇಬ್ಬರು ಹೆಸರುವಾಸಿಯಾದ ಮಹಾಕವಿಗಳು, ಸೂರ್ಯ, ಚಂದ್ರರ ಹಾಗೆ. ಈ ಇಬ್ಬರು ಕವಿಗಳ ಕೀರ್ತಿ ಶಾಶ್ವತವಾಗಿದೆ, ಪ್ರಪಂಚಕ್ಕೆಲ್ಲ ಹರಡಿದೆ.

ಭಾಸ ಕವಿಯ ಕಾಲ, ದೇಶಗಳು ತಿಳಿಯವು. (ಕಾಳಿದಾಸನ ಕಾಲವೂ ಸರಿಯಾಗಿ ತೀರ್ಮಾನವಾಗಿಲ್ಲ.) ಕಾಳಿದಾಸನು ಭಾಸನನ್ನು ಹೊಗಳಿರುವುದರಿಂದ ಕಾಳಿದಾಸನಿಗಿಂತ ಹಿಂದಿನವನೆಂದು ತಿಳಿಯಬಹುದು. ಚಂದ್ರಗುಪ್ತ ವಿಕ್ರಮಾದಿತ್ಯನ ಕಾಲಕ್ಕಿಂತ ಹಿಂದಿನವನು ಭಾಸಕವಿ ಎಂದಿಷ್ಟು ಮಾತ್ರ ಹೇಳಬಹುದು. ಭಾಸಕವಿಯು ಬುದ್ಧನಿಗಿಂತಲೂ ಹಿಂದಿನವನು ಎಂದು ಕೆಲವರು ವಾದಿಸುತ್ತಾರೆ. ಕ್ರಿ. ಶ. ೧–೨ನೆಯ ಶತಮಾನದವನೆಂದು ಮತ್ತೆ ಕೆಲವರ ವಾದ.

ಭಾಸ ಕವಿಯು ಅನೇಕ ನಾಟಕಗಳನ್ನು ಬರೆದಿದ್ದಾನೆ. ಆದರೆ ೧೩ ನಾಟಕಗಳು ಮಾತ್ರ ದೊರೆತಿವೆ. ಅವು 'ಸ್ವಪ್ನವಾಸವದತ್ತ' 'ಪ್ರತಿಜ್ಞಾಯೌಗಂಧರಾಯಣ' 'ಚಾರುದತ್ತ' 'ಅಭಿಷೇಕ' 'ಪ್ರತಿಮಾ' 'ಅವಿಮಾರಕ' 'ಪಂಚರಾತ್ರ' 'ಯಜ್ಞಫಲ' 'ಬಾಲಚರಿತ' 'ಮಧ್ಯಮ ವ್ಯಾಯೋಗ' 'ದೂತವಾಕ್ಯ' 'ದೂತ ಘಟೋತ್ಕಚ' 'ಕರ್ಣಭಾರ' 'ಊರುಭಂಗ' ಎಂಬ ೧೩ ನಾಟಕಗಳು.

ಭಾಸ ಕವಿಯ ಏಕಾಂಕ ನಾಟಕಗಳಲ್ಲಿ ಒಂದಾದ 'ಮಧ್ಯಮ ವ್ಯಾಯೋಗ'ದ ಕಥೆಯನ್ನು ಇಲ್ಲಿ ಆರಿಸಿ ಕೊಟ್ಟಿದೆ. ಈ ಕಥೆ ಕವಿಯ ಕಲ್ಪನೆ, ಮಹಾಭಾರತದಲ್ಲಿಲ್ಲ. ಆದರೆ ತುಂಬ ಸ್ವಾರಸ್ಯವಾಗಿದೆ: 'ಕುಮಾರ ಕಿಂಕರ' ಅವರ 'ಭಾಸ ನಾಟಕ ಕಥೆಗಳು' ಎಂಬ ಪುಸ್ತಕದಿಂದ ಈ ಕಥೆಯನ್ನು ಆರಿಸಿದೆ.

ಭಯಂಕರವಾದ ವನಪ್ರದೇಶ. ಸಂಜೆಯ ಸಮಯ. ಒಬ್ಬ ಬ್ರಾಹ್ಮಣನು ತನ್ನ ಹೆಂಡತಿ ಮತ್ತು ಮೂವರು ಮಕ್ಕಳೊಡನೆ ಆ ಕಾಡಿನ ಮಾರ್ಗವಾಗಿ ಹೋಗುತ್ತಿದ್ದನು. ದಾರಿಯಲ್ಲಿ ಸಿಕ್ಕಿದ ಕೆಲವರು ಮುನಿಜನರು 'ಅಯ್ಯಾ, ಇಷ್ಟು ಹೊತ್ತಿನಲ್ಲಿ ಈ ದಾರಿಯಲ್ಲಿ ಹೋಗಬೇಡಿ. ರಾಕ್ಷಸರ ಹಾವಳಿ ಹೆಚ್ಚು ಈ ಕಡೆ', ಎಂದು ಹಿತವನ್ನು ಹೇಳಿದರು. ಅನಿವಾರ್ಯವಾದ ಕೆಲಸವಿದ್ದುದರಿಂದ ಆ ಬ್ರಾಹ್ಮಣನು ಆ ಕಾಡನ್ನು ದಾಟ

ಸಮೀಪದಲ್ಲಿದ್ದ ತನ್ನ ಸೋದರಮಾವನ ಹಳ್ಳಿಗೆ ಹೋಗಲೇಬೇಕಾಗಿತ್ತು. ಆದುದರಿಂದ ಬೇಗ ಬೇಗ ಅವರೆಲ್ಲ ಹೋಗುತ್ತಿದ್ದರು.

ಆಗ ಇದ್ದಕ್ಕಿದ್ದಂತೆ ಓರ್ವ ಭಯಂಕರ ವ್ಯಕ್ತಿ ಎದುರಿಗೆ, ಸ್ವಲ್ಪ ದೂರದಲ್ಲಿ ಕಾಣಿಸಿಕೊಂಡನು. ಮಳೆಗಾಲದ ಮೇಘದಂತೆ ಕಪ್ಪಾದ ಮೈ; ಹೊಂಬಣ್ಣದ ಕೂದಲು, ಗಂಟು ಹುಬ್ಬುಗಳು, ದೊಡ್ಡ ಕೆಂಗಣ್ಣುಗಳು, ಕತ್ತಿನಲ್ಲಿ ಬಂಗಾರದ ಹಾರ. ಥಳಥಳನೆ ಮಿಂಚುತ್ತಿರುವ ಕಾರ್ಮೋಡ ದಂತಿದ್ದ ಅವನನ್ನು ಕಂಡು ಆ ಬ್ರಾಹ್ಮಣರು ಹೆದರಿದರು. ಪ್ರಳಯರುದ್ರ ನಂತಿದ್ದ ಆ ಭಯಂಕರ ವ್ಯಕ್ತಿಯನ್ನು ಕಂಡು ಅವರು ತಲೆತಪ್ಪಿಸಿಕೊಳ್ಳಲು ಓಡಲಾರಂಭಿಸಿದರು.

ಹೆಬ್ಬುಲಿಯು ಹಿಂದೆ ಅಟ್ಟಿಕೊಂಡು ಬಂದಾಗ ಓಡುವ ದನಗಳಂತೆ, ಅವರು ತನಗೆ ಹೆದರಿ ಓಡುತ್ತಿರುವರೆಂದು ತಿಳಿದು ಆ ವ್ಯಕ್ತಿಯು "ಅಯ್ಯಾ ಬ್ರಾಹ್ಮಣ, ಗರುಡನ ರೆಕ್ಕೆಯ ಗಾಳಿಯಿಂದ ಹೆದರಿ ಓಡುತ್ತಿರುವ ಸರ್ಪದಂತೆ, ಹೆಂಡತಿ ಮಕ್ಕಳೊಡನೆ ಓಡುತ್ತಿರುವೆಯಲ್ಲಾ! ನಿನಗೆ ಎಷ್ಟೇ ರೋಷವಿದ್ದರೂ ನನ್ನನ್ನು ಏನೂ ಮಾಡಲಾರೆ. ನನ್ನಿಂದ ನೀನು ತಪ್ಪಿಸಿ ಕೊಳ್ಳಲೂ ಸಾಧ್ಯವಿಲ್ಲ. ಓಡಬೇಡ, ನಿಲ್ಲು" ಎಂದನು.

ಭಯಂಕರನಾದರೂ ಬುದ್ಧಿವಂತನೆಂದು ಅವನ ಮಾತಿನಿಂದ ತಿಳಿದ ಬ್ರಾಹ್ಮಣನು ತನ್ನ ಹೆಂಡತಿ ಮಕ್ಕಳಿಗೆ ಧೈರ್ಯವನ್ನು ಹೇಳಿ ನಿಲ್ಲಿಸಿದನು. ಹೇಗೂ ತಾವು ರಾಕ್ಷಸನ ಬಾಯಿಗೆ ತುತ್ತಾಗುವುದು ನಿಜವೆಂದು ಅವರು ನಿಶ್ಚಯಿಸಿಬಿಟ್ಟಿದ್ದರು.

"ಯಾರಾದರೂ ಪುಣ್ಯಾತ್ಮರು ನಮ್ಮ ಸಹಾಯಕ್ಕೆ ದೊರೆತರೆ ಉಳಿದೇವು. ಆದುದರಿಂದ ಗಟ್ಟಿಯಾಗಿ ಕೂಗಿಕೊಳ್ಳೋಣವೇ" ಎಂದು ಸಲಹೆಮಾಡಿದಳು ಆ ಬ್ರಾಹ್ಮಣನ ಹೆಂಡತಿ. ಆ ಬ್ರಾಹ್ಮಣನಿಗೆ ಆಗ ಸಮೀಪದಲ್ಲಿ ಎಲ್ಲಿಯೋ ಪಾಂಡವರ ಆಶ್ರಮವಿರಬೇಕೆಂದು ನೆನಪಾಯಿತು. ಹನ್ನೆರಡು ವರ್ಷ ವನವಾಸಮಾಡಬೇಕಾಗಿದ್ದ ಪಾಂಡವರು ಆ ವನದಲ್ಲಿ ಪರ್ಣಶಾಲೆಯನ್ನುಕಟ್ಟಿಕೊಂಡು ವಾಸಮಾಡುತ್ತಿದ್ದರು. ಆತನು "ಹೌದು, ಸಮೀಪದಲ್ಲಿ ಪಾಂಡವರ ಆಶ್ರಮವಿದೆ. ನಮಗೆ ಅವರ ಸಹಾಯ ದೊರೆತರೆ ಸಾಕು. ಈ ರಾಕ್ಷಸನಿಂದ ಪಾರಾದಂತೆಯೇ?" ಎಂದನು.

"ಅಪ್ಪಾ, ಪಾಂಡವರು ಶತಕುಂಭವೆಂಬ ಯಜ್ಞವನ್ನು ನೋಡಲು ಧೌಮ್ಯಮಹರ್ಷಿಗಳ ಆಶ್ರಮಕ್ಕೆ ಹೋಗಿರುವರಂತೆ. ಭೀಮನನ್ನು ಮಾತ್ರ ಮನೆಯ ಕಾವಲಿಗೆ ಇರಿಸಿರುವರಂತೆ. ಹೀಗೆಂದು ಒಬ್ಬ ಬ್ರಾಹ್ಮಣನು ಹೇಳಿದನು" ಎಂದನು ಮೊದಲನೆಯ ಮಗ.

"ಹಾಗಾದರೆ ಸಂತೋಷ. ಭೀಮನೊಬ್ಬನಿದ್ದರೆ ಸಾಕು, ಪಾಂಡವರೆಲ್ಲ ಇದ್ದ ಹಾಗೆಯೇ!" ಎಂದನು ವೃದ್ಧ ಬ್ರಾಹ್ಮಣ. "ಈ ಹೊತ್ತಿನಲ್ಲಿ ಅವನೂ ವ್ಯಾಯಾಮಕ್ಕಾಗಿ ದೂರ ಹೋಗಿರಬಹುದು" ಎಂದು ಆ ಮಗನು ಹೇಳಲು, ಅವರ ಜೀವ ಹಾರಿಹೋದಂತಾಯಿತು. ತಮ್ಮ ಆಯುಷ್ಯ ಅಂದಿಗೇ ತೀರಿತೆಂದು ಅವರು ನೊಂದರು.

'ಆಪತ್ಕಾಲದಲ್ಲಿ ಧೈರ್ಯವನ್ನು ಅವಲಂಬಿಸಬೇಕು' ಎಂದು ಹಿರಿಯರು ಹೇಳುವ ಮಾತು ಆ ಬ್ರಾಹ್ಮಣನಿಗೆ ನೆನಪಾಯಿತು. ಆತನು ಧೈರ್ಯತಂದುಕೊಂಡು "ಅಯ್ಯಾ ಪುರುಷ, ನಮ್ಮನ್ನೇಕೆ ಹಿಂಸಿಸುವೆ? ನಮ್ಮನ್ನು ಬಿಟ್ಟುಬಿಡು" ಎಂದನು.

ಆ ರಾಕ್ಷಸನು "ಒಂದು ನಿಯಮದ ಮೇಲೆ ನಿಮ್ಮನ್ನು ಬಿಡುತ್ತೇನೆ" ಎಂದನು.

"ಏನು ಆ ನಿಯಮ?" ಎಂದು ಕೇಳಿದನು ಬ್ರಾಹ್ಮಣ.

ಆಗ ರಾಕ್ಷಸನು "ನನಗೆ ಪೂಜ್ಯಳಾದ ತಾಯಿ ಇದ್ದಾಳೆ. ಆಕೆಯ ಉಪವಾಸಾಂತ್ಯದ ಪಾರಣೆಗಾಗಿ ಒಬ್ಬ ಮನುಷ್ಯನನ್ನು ತೆಗೆದುಕೊಂಡು ಹೋಗಬೇಕಾಗಿದೆ. ಆದ್ದರಿಂದ ನಿಮ್ಮನ್ನು ಹಿಡಿದಿದ್ದೇನೆ. ನೀನೂ ನಿನ್ನ ಹೆಂಡತಿಯೂ ಇಬ್ಬರು ಮಕ್ಕಳೂ ಉಳಿಯಬೇಕಾದರೆ, ಒಬ್ಬ ಮಗನನ್ನು ನನಗೆ ಕೊಡು. ಇಲ್ಲವಾದರೆ ನಿಮ್ಮನ್ನೆಲ್ಲಾ ಕೊಲ್ಲಬೇಕಾಗುವುದು" ಎಂದನು.

ಆ ವೃದ್ಧನು "ಮಾಡಬೇಕಾದ ಯಜ್ಞಾದಿ ಸತ್ಕರ್ಮಗಳನ್ನೆಲ್ಲ ಮಾಡಿದ್ದೇನೆ. ಪ್ರಪಂಚದ ಸುಖವೂ ಸಾಕಾಗಿದೆ. ವೃದ್ಧನಾದ ನಾನು ಬರುತ್ತೇನೆ" ಎಂದನು.

"ಆರ್ಯ, ಎಲ್ಲಿಯಾದರೂ ಉಂಟೆ? ಗಂಡನ ಕಣ್ಣೆದುರಿಗೆ ಸಾಯುವುದು ಹೆಂಡತಿಗೆ ಪುಣ್ಯ. ಪತಿವ್ರತೆಯಾಗಿ ಸಾಯಲು ನನಗೆ ಅವಕಾಶ ಕೊಡಿ" ಎಂದು ಬೇಡಿದಳು ಆ ಬ್ರಾಹ್ಮಣನ ಹೆಂಡತಿ.

ರಾಕ್ಷಸನು ಮುದುಕನಾದ ಆತನನ್ನು ಒಪ್ಪಲಿಲ್ಲ; ಹೆಂಗಸನ್ನು ತನ್ನ ತಾಯಿಯು ಒಪ್ಪುವುದಿಲ್ಲವೆಂದನು. ಅಂತೂ ಮೂವರು ಮಕ್ಕಳಲ್ಲಿ ಒಬ್ಬನು ಹೋಗಲೇಬೇಕಾಯಿತು ರಾಕ್ಷಸಿಯ ಆಹಾರಕ್ಕಾಗಿ.

ಅವರಲ್ಲಿ ಮೊದಲನೆಯವನು "ಅಪ್ಪಾ, ನನ್ನ ಪ್ರಾಣಗಳಿಂದ ಗುರು ಜನರನ್ನೂ ವಂಶವನ್ನೂ ಕಾಪಾಡಲು ನಾನು ಸಿದ್ಧನಾಗಿದ್ದೇನೆ, ನನ್ನನ್ನು ಕಳಿಸಿಕೊಡಿ" ಎಂದನು. ಎರಡನೆಯವನು "ಅಣ್ಣಾ, ಹಾಗಾಗದು. ಜ್ಯೇಷ್ಠನೂ ಶ್ರೇಷ್ಠನೂ ಆದ ನೀನು ಹಿರಿಯರಿಗೆ ಬೇಕಾದವನು. ನಾನು ರಾಕ್ಷಸನ ಹಿಂದೆ ಹೋಗಲು ಸಿದ್ಧನಾಗಿದ್ದೇನೆ" ಎಂದನು. ಮೂರನೆಯವನು "ಜ್ಯೇಷ್ಠಭ್ರಾತಾ ಪಿತೃಸಮಃ (ಹಿರಿಯಣ್ಣ ತಂದೆಗೆ ಸಮ) ಎಂದು ಶಾಸ್ತ್ರವುಂಟು. ಹಿರಿಯರಾದ ನಿಮ್ಮನ್ನೆಲ್ಲ ಉಳಿಸಬೇಕಾದುದು ನನ್ನ ಕರ್ತವ್ಯ" ಎಂದನು. ಆಗ ಹಿರಿಯನು ತಮ್ಮಂದಿರಿಗೆ ಸಮಾಧಾನ ಹೇಳುತ್ತ "ತಂದೆಯ ಆಪತ್ತನ್ನು ದೊಡ್ಡಮಗ ಹರಿಸಬೇಕು. ಆದ್ದರಿಂದ ನಿಮ್ಮನ್ನೆಲ್ಲ ಉಳಿಸುವುದು ನನ್ನ ಕರ್ತವ್ಯ, ಪುಣ್ಯ" ಎಂದನು.

ಹಿರಿಯಮಗ ಸಾಯಲು ಸಿದ್ಧನಾಗಿರುವುದನ್ನು ನೋಡಿ ಬ್ರಾಹ್ಮಣನ ಮನಸ್ಸು ತಳಮಳಿಸಿತು. "ಅವನು ಹಿರಿಯ ಮಗನನ್ನು ಬಿಟ್ಟುಕೊಡಲಾರೆ" ಎಂದನು. "ಹಾಗಾದರೆ ಕಿರಿಯ ಮಗನನ್ನು ನಾನೂ ಬಿಟ್ಟುಕೊಡಲಾರೆ" ಎಂದಳು ಆ ಬ್ರಾಹ್ಮಣನ ಹೆಂಡತಿ.

ಇದನ್ನು ನೋಡಿ ಮಧ್ಯದ ಮಗನು "ತಾಯಿ ತಂದೆಗಳಿಗೇ ಬೇಡವಾದವನು ಯಾರಿಗೆ ಬೇಕಾದಾನು ?" ಎಂದನು. ಆ ರಾಕ್ಷಸನು "ಅಯ್ಯಾ ನೀನು ನನಗೆ ಬೇಕಾದವನು. ಬಾ, ಹೋಗೋಣ" ಎಂದನು. ತನ್ನ ಪ್ರಾಣವನ್ನು ಕೊಟ್ಟು ಹಿರಿಯರ ಜೀವಗಳನ್ನೂ ವಂಶದ ಹೆಸರನ್ನೂ ಉಳಿಸುವ ಪುಣ್ಯ ತನಗೆ ಬಂದುದಕ್ಕೆ ಅವನು ಸಂತೋಷಪಟ್ಟನು. 'ಬಂಧು ಸ್ನೇಹಕ್ಕಿಂತ ಯಮನ ಸ್ನೇಹ ದುರ್ಲಭ. ಅದನ್ನು ಪಡೆಯುವುದೇ ಉತ್ತಮ' ಎಂದುಕೊಂಡು ಅವನು ರಾಕ್ಷಸನ ಹಿಂದೆ ಹೋಗಲು ನಿಶ್ಚಯಿಸಿದನು. ಅನಂತರ ಅವನು ಹಿರಿಯರಿಗೆಲ್ಲಾ ನಮಸ್ಕಾರಮಾಡಿ ಅವರ ಆಶೀರ್ವಾದಗಳನ್ನು ಪಡೆದನು.

ಮೃತ್ಯು ಮುಖನಾಗಿದ್ದ ಅವನಿಗೆ ಬಾಯಾರಿಕೆಯಾಯಿತು. ಅವನು "ಅಯ್ಯಾ, ಪುರುಷ, ಸಮೀಪದ ಸರೋವರದಲ್ಲಿ ಸ್ವಲ್ಪ ನೀರನ್ನು ಕುಡಿದು ಬರುತ್ತೇನೆ" ಎಂದನು. "ತಾಯಿಯ ಆಹಾರ ಸಮಯ ಮೀರಿ ಹೋಗುತ್ತಿದೆ. ಬೇಗ ಬಾ" ಎಂದು ರಾಕ್ಷಸನು ಹೇಳಲು ಅವನು ಹೊರಟು ಹೋದನು.

ತನ್ನ ವಂಶಪರ್ವತದ ಮೂರು ಶಿಖರಗಳಲ್ಲಿ ಒಂದು ಮುರಿಯಿತೆಂದು ಆ ಬ್ರಾಹ್ಮಣನು ತುಂಬಾ ದುಃಖಪಟ್ಟನು.

ನೀರು ಕುಡಿಯಲು ಹೋದ ಬಾಲಕನು ಎಷ್ಟು ಹೊತ್ತಾದರೂ ಬರಲಿಲ್ಲ. ತಾಯಿಯ ಆಹಾರಕ್ಕೆ ತಡವಾಗುತ್ತಿರಲು ಆ ರಾಕ್ಷಸನು "ಅಯ್ಯಾ, ನಿನ್ನ ತಮ್ಮನ ಹೆಸರೇನು?" ಎಂದು ಮೊದಲನೆಯ ಮಗನನ್ನು ಕೇಳಲು, ಅವನು "ನಿರ್ಭಾಗ್ಯ ಮಧ್ಯಮ" ಎಂದನು. ಮಧ್ಯಮನೆಂಬ ಹೆಸರು ಅವನಿಗೆ ಸರಿಯಾಗಿ ಒಪ್ಪುವುದೆಂದು ರಾಕ್ಷಸನು ಭಾವಿಸಿ "ಮಧ್ಯಮಾ, ಮಧ್ಯಮಾ, ಬೇಗ ಬಾ" ಎಂದು ಗಟ್ಟಿಯಾಗಿ ಕೂಗಿದನು.

ರಾಕ್ಷಸನ ಈ ಕೂಗು ಆ ಭಯಂಕರಾರಣ್ಯದಲ್ಲಿ ಪ್ರತಿಧ್ವನಿಕೊಟ್ಟಿತು. ಗಂಭೀರವಾದ ಆ ಮಾರ್ದನಿಯು ಪರ್ಣಶಾಲೆಯ ಮುಂದೆ ವ್ಯಾಯಾಮ ಮಾಡುತ್ತಿದ್ದ ಭೀಮಸೇನನ ಕಿವಿಗೆ ಬಿದ್ದಿತು. ಆತನು "ಯಾರ ಧ್ವನಿ ಇದು! ನೂರಾರು ಹಕ್ಕಿಗಳ ಕಲಕಲಧ್ವನಿಯಿಂದ ತುಂಬಿರುವ ಈ ಘೋರಾರಣ್ಯದಲ್ಲಿ ಗಂಭೀರವಾಗಿ ಸುಳಿದು ಬರುತ್ತಿದೆ. ಅರ್ಜುನನ ಧ್ವನಿಯಂತೆ ಕಾಣುತ್ತಿದೆಯಲ್ಲಾ!" ಎಂದುಕೊಂಡು ಹಾಗೆಯೇ ಕೇಳುತ್ತ ನಿಂತನು. ಬ್ರಾಹ್ಮಣವಟು ತಡಮಾಡುತ್ತಿರುವುದನ್ನು ಕಂಡು ರಾಕ್ಷಸನು "ಮಧ್ಯಮಾ, ಮಧ್ಯಮಾ, ಬೇಗ ಬಾ" ಎಂದು ಗಟ್ಟಿಯಾಗಿ ಮತ್ತೆ ಕೂಗಿದನು.

ಈ ಕೂಗನ್ನು ಕೇಳಿದ ಭೀಮನಿಗೆ ಮನಸ್ಸಿನಲ್ಲಿ ಏನೋ ಕಳವಳವಾಯಿತು. ತನ್ನ ತಮ್ಮಂದಿರು ಯಾರೋ ತನ್ನನ್ನು ಕರೆಯುತ್ತಿರುವರೆನ್ನಿಸಿತು. ಕೂಡಲೆ ಆತನು ಆ ಧ್ವನಿಯು ಬಂದ ದಿಕ್ಕನ್ನೇ ಅನುಸರಿಸಿ ಬಂದನು. ಬ್ರಾಹ್ಮಣವಟು ತಡಮಾಡುತ್ತಿರುವುದನ್ನು ನೋಡಿ

ರಾಕ್ಷಸನಿಗೆ ತುಂಬಾ ಬೇಸರವಾಯಿತು. "ಅಯ್ಯಾ ಮಧ್ಯಮಾ, ಬೇಗ ಬಾ" ಎಂದು ಗಟ್ಟಿಯಾಗಿ, ಕಾಡು ನಡುಗುವಂತೆ, ಕೂಗಿದನು. ಕೂಡಲೆ ಭೀಮನು "ಇಗೋ ಬಂದೆ" ಎಂದು ಹೇಳುತ್ತ ಮುನ್ನುಗ್ಗಿ ಬಂದು ನೋಡಲು, ಭೀಕರ ಕರಾಳಾಕೃತಿಯ ರಾಕ್ಷಸನು ಕಂಡನು.

ಅವನ ಗಂಭೀರ ಮುಖಮುದ್ರೆಯನ್ನು ನೋಡಿ ಭೀಮನಿಗೆ ಆಶ್ಚರ್ಯವಾಯಿತು. ಸಿಂಹದ ಮುಖ, ಸಿಂಹದ ಕೋರೆಗಳು, ಜೇನುಹುಳುವಿನಂಥ ಕಣ್ಣುಗಳು, ಕಂದು ಬಣ್ಣದ ಹುಬ್ಬು, ಗರುಡನ ಮೂಗು, ಆನೆಯ ಕೆನೆ ಗಳು, ಮೇಘದ ಧ್ವನಿ, ಕೆದರಿದ ಉದ್ದವಾದ ಕೂದಲು, ವಿಶಾಲವಾಗಿ ಉಬ್ಬಿದ ಎದೆ, ವಜ್ರದಂತಿರುವ ಮೈ, ಉಕ್ಕಿನ ಕೋಲಿನಂತಿರುವ ತೋಳು, ಮದ್ದಾನೆ, ಗೂಳಿಗಳ ಗಂಭೀರ ನಡಿಗೆ, ಇವುಗಳನ್ನು ಕಂಡು ಅವನು ಯಾರೋ ಮಹಾಪುರುಷನಿರಬೇಕು ಎನ್ನಿಸಿತು ಭೀಮನಿಗೆ. "ರಾಕ್ಷಸಿಯ ಮಗನಂತೆ ಕಾಣುವನು. ಆದರೆ ಲೋಕವೀರನ ಮಗನಾಗಿರಬೇಕು" ಎಂದುಕೊಂಡನು.

ತನ್ನ ಕೂಗಿಗೆ ಪ್ರತ್ಯುತ್ತರ ಕೊಡುತ್ತ ಬಂದವನು ಬ್ರಾಹ್ಮಣವಟುವಲ್ಲ; ಮಹಾಕಾಯದ ಗಂಭೀರ ಮೂರ್ತಿ—ಎಂಬುದನ್ನು ನೋಡಿ ರಾಕ್ಷಸನಿಗೆ ದಿಗ್ಭ್ರಮೆಯಾಯಿತು. ಅವನ ಆಕಾರವನ್ನು ನೋಡುತ್ತಾನೆ: ಸಿಂಹದಂಥ ಆಕಾರ, ತಾಳೆಯ ಮರಗಳಂತಿರುವ ತೋಳುಗಳು, ಸಣ್ಣ ನಡು, ಮುಚ್ಚಿದ ಗರುಡನ ರೆಕ್ಕೆಗಳಂತೆ ಸವರಿದ ಹಾಗೆ ಬೆಳೆದಿರುವ ಪಕ್ಕಗಳು, ತಾವರೆಯಂತೆ ವಿಶಾಲವಾದ ಕಣ್ಣುಗಳು. "ಈತನು ಯಾರೋ? ಮಹಾ ವಿಷ್ಣುವೇ ಇರಬಹುದೇ? ಈತನನ್ನು ಕಂಡರೆ ಬಂಧುವನ್ನು ನೋಡಿದಂತೆ ಒಂದು ವಿಧವಾದ ಸಂತೋಷವಾಗುತ್ತಿದೆ" ಎಂದುಕೊಂಡನು ಆ ರಾಕ್ಷಸ. ಅನಂತರ ಅವನು ಆ ಬ್ರಾಹ್ಮಣವಟು ಹೋಗಿದ್ದ ದಿಕ್ಕಿಗೆ ತಿರುಗಿ "ಓ ಮಧ್ಯಮಾ, ನಿನ್ನನ್ನೇ ನಾನು ಕೂಗುತ್ತಿರುವುದು" ಎಂದು ಮತ್ತೊಮ್ಮೆ ಗಟ್ಟಿಯಾಗಿ ಕೂಗಿದನು.

"ಆದ್ದರಿಂದಲೇ ನಾನು ಬಂದಿರುವುದು" ಎಂದನು ಭೀಮ.

"ನೀನೂ ಮಧ್ಯಮನೇನು?" ಎಂದು ಕೇಳಿದನು ರಾಕ್ಷಸ.

"ನಾನೇ ಮಧ್ಯಮ, ಮತ್ತಾರೂ ಅಲ್ಲ" ಎಂದನು ಭೀಮ.

"ಹೇಗೆ?"

"ಭೂಮಿಯಲ್ಲಿ ಮಧ್ಯಮ; ಸೋದರರಲ್ಲಿ ಮಧ್ಯಮ; ಪಂಚಭೂತಗಳಲ್ಲಿ ಮಧ್ಯಮ; ಕ್ಷತ್ರಿಯರಲ್ಲಿ ಮಧ್ಯಮ; ಎಲ್ಲ ಕಾರ್ಯಗಳಲ್ಲಿಯೂ ಮಧ್ಯಮ."

ಈ ಮಾತನ್ನು ಕೇಳಿ ಬ್ರಾಹ್ಮಣನಿಗೆ ಅವನು ಭೀಮನೇ ಇರಬೇಕೆಂದೆನ್ನಿಸಿತು. ತಮ್ಮನ್ನು ಕಾಪಾಡಲು ದೇವರೇ ಅವನನ್ನು ಕಳುಹಿಸಿರಬೇಕು ಎಂದುಕೊಂಡನು.

ಇಷ್ಟು ಹೊತ್ತಿಗೆ ಆ ಬ್ರಾಹ್ಮಣವಟು ಬಾಯಾರಿಕೆಯನ್ನು ತೀರಿಸಿಕೊಂಡು, ತನಗೆ ತಾನೇ ಜಲಾಂಜಲಿಯನ್ನೂ ಕೊಟ್ಟುಕೊಂಡು ಬಂದನು. ಅವನನ್ನು ನೋಡಿ ರಾಕ್ಷಸನು "ಇಷ್ಟು ಹೊತ್ತಾಯಿತೆ? ಮಧ್ಯಮಾ, ಬೇಗ ಬಾ" ಎಂದನು.

ತನ್ನ ಮಗನು ರಾಕ್ಷಸನ ಬಳಿಯಲ್ಲಿ ನಿಂತುದನ್ನು ನೋಡಿ ವೃದ್ಧ ಬ್ರಾಹ್ಮಣನು ಭೀಮನ ಬಳಿಗೆ ಬಂದು "ಅಯ್ಯಾ ಮಧ್ಯಮಾ, ನನ್ನ ಮಗನನ್ನು ಕಾಪಾಡು" ಎಂದು ಕೇಳಿಕೊಂಡನು. ಭೀಮನು ಆತನಿಗೆ ಧೈರ್ಯಹೇಳಿ ನಮಸ್ಕಾರ ಮಾಡಿದನು. ಬ್ರಾಹ್ಮಣನು "ವಾಯುವಿನಂತೆ ದೀರ್ಘಾಯುವಾಗು" ಎಂದು ಹರಸಿದನು.

ಭೀಮನು ಬ್ರಾಹ್ಮಣನ ಭಯಕ್ಕೆ ಕಾರಣವನ್ನು ಕೇಳಿದನು. ಆ ಬ್ರಾಹ್ಮಣನು "ನಾನು, ಯುಧಿಷ್ಠಿರನು ಹಿಂದೆ ಆಳುತ್ತಿದ್ದ ಕುರುಜಾಂಗಲ ದೇಶದ ಯೂಪ ಗ್ರಾಮದವನು. ಕೇಶವದಾಸನೆಂದು ನನ್ನ ಹೆಸರು. ಈ ಕಾಡಿನ ಆಚೆ ಇರುವ ಉದ್ಯಾಮಕ ಗ್ರಾಮದಲ್ಲಿ 'ಯಜ್ಞಬಂಧು' ಎಂಬ ನನ್ನ ಸೋದರಮಾವನಿದ್ದಾನೆ. ಆತನ ಮಗನ ಉಪನಯನಕ್ಕಾಗಿ ಹೆಂಡತಿಮಕ್ಕಳೊಡನೆ ಹೋಗುತ್ತಿದ್ದೇನೆ. ಇಲ್ಲಿ ಈ ಭಯಂಕರಾಕಾರದ ರಾಕ್ಷಸನು ನಮ್ಮ ಮೇಲೆ ಬಿದ್ದು ಕೊಲ್ಲಲು ಬಯಸುತ್ತಿದ್ದಾನೆ. ಇಗೋ, ಆ ನನ್ನ ಮಗನನ್ನು ಹಿಡಿದುಕೊಂಡು ಹೋಗಲು ನಿಶ್ಚಯಿಸಿ

ದ್ದಾನೆ. ನಿನ್ನಂಥ ಧರ್ಮಾತ್ಮನ, ವೀರನ ಎದುರಿನಲ್ಲಿಯೇ ಇಷ್ಟು ಅನ್ಯಾಯವೇ?" ಎಂದನು.

ಭೀಮನು, "ಹಾಗೋ! ನಿಮ್ಮ ದಾರಿಗೆ ಇವನು ಅಡ್ಡ ಬಂದನೋ? ಇರಲಿ, ಹೆದರದಿರಿ. ಇವನನ್ನು ನಿಗ್ರಹಿಸಿ ನಿಮ್ಮ ಮಗನನ್ನು ಬಿಡಿಸಿಕೊಡುತ್ತೇನೆ" ಎಂದು ಸಮಾಧಾನ ಹೇಳಿ, ಆ ರಾಕ್ಷಸನ ಕಡೆ ತಿರುಗಿ "ಅಯ್ಯಾ ಪುರುಷ, ನಿಲ್ಲು. ತಾರೆಗಳಿಂದ ಬಳಸಿ, ಬೆಳ್ದಿಂಗಳಿಂದ ಕೂಡಿರುವ ಚಂದ್ರನನ್ನು ರಾಹು ಮುತ್ತುವಂತೆ, ಸತೀಸುತರೊಡನೆ ಪ್ರಯಾಣ ಮಾಡುತ್ತಿರುವ ಈ ಬ್ರಾಹ್ಮಣನನ್ನು ಏಕೆ ಹಿಂಸಿಸುತ್ತಿರುವೆ? ಧರ್ಮಾತ್ಮನಾದ ಈತನನ್ನು ನೋಯಿಸದೆ ಬಿಟ್ಟು ಬಿಡು" ಎಂದನು.

ಭೀಮನ ಮಾತಿನ ಧೋರಣೆಗೆ ಬಗ್ಗುವಂಥವನೇ ಆ ರಾಕ್ಷಸ? ಅವನು "ಬಿಡುವುದಿಲ್ಲ" ಎಂದು ದಿಟ್ಟತನದಿಂದ ಹೇಳಿದನು.

ಅವನ ಮಾತಿನ ದರ್ಪವನ್ನು ನೋಡಿ ಭೀಮನಿಗೆ ಆಶ್ಚರ್ಯ ವಾಯಿತು. "ಆಹಾ, ಇವನು ಯಾರ ಮಗನಾಗಿರಬಹುದು! ನನ್ನ ಸೋದರರ ಗುಣಗಳೆಲ್ಲ ಇವನಲ್ಲಿ ತುಂಬಿವೆ. ಬಾಲವೀರ ಅಭಿಮನ್ಯುವಿನ ನೆನಪಾಗುತ್ತಿದೆ" ಎಂದುಕೊಂಡನು. ಅನಂತರ ಸ್ವಲ್ಪ ದರ್ಪದಿಂದ "ಅಯ್ಯಾ ಪುರುಷ, ಆ ಬ್ರಾಹ್ಮಣ ವಟುವನ್ನು ಬಿಟ್ಟು ಬಿಡು" ಎಂದನು. ರಾಕ್ಷಸನು ಭೀಮನಷ್ಟೇ ದರ್ಪದಿಂದ "ಬಿಡುವುದಿಲ್ಲ. ನನ್ನ ತಾಯಿಯ ಆಜ್ಞೆಯಂತೆ ಇವನನ್ನು ಹಿಡಿದಿದ್ದೇನೆ. ನನ್ನ ತಂದೆಯೇ ಬಂದು 'ಬಿಡು' ಎಂದರೂ ಬಿಡುವುದಿಲ್ಲ" ಎಂದನು.

ಆ ರಾಕ್ಷಸನ ಮಾತೃ ಭಕ್ತಿಯನ್ನು ನೋಡಿ ಭೀಮನಿಗೆ ಸಂತೋಷ ವಾಯಿತು. ತಾಯಿ ಎಲ್ಲ ದೇವರಿಗಿಂತ ಹಿರಿಯ ದೇವತೆಯೆಂಬುದನ್ನು ಆತನು ಜ್ಞಾಪಿಸಿಕೊಂಡನು. ಅನಂತರ "ಅಯ್ಯಾ, ನಿಮ್ಮ ತಾಯಿಯು ಯಾರು?" ಎಂದು ಕೇಳಿದನು. ರಾಕ್ಷಸನು "ಹಿಡಿಂಬೆ ಎಂಬ ರಾಕ್ಷಸಿ. ಕುರುಕುಲ ಪ್ರದೀಪನಾದ ಪಾಂಡವನನ್ನು ವರಿಸಿದ ಭಾಗ್ಯವತಿ. ಪೂರ್ಣ ಚಂದ್ರನಿಂದ ಗಗನವು ಶೋಭಿಸುವಂತೆ, ಆ ಭೀಮಸೇನನನ್ನು ಕೂಡಿ ಪುಣ್ಯ ವತಿಯಾಗಿದ್ದಾಳೆ" ಎಂದನು.

ಅವನ ಮಾತನ್ನು ಕೇಳಿ ಭೀಮನಿಗೆ ಬಹು ಆನಂದವಾಯಿತು. ತನ್ನ ಮಗ ಘಟೋತ್ಕಚನೇ* ಆ ರಾಕ್ಷಸನೆಂಬುದನ್ನರಿತ ಆತನು ಅವನ, ಧೈರ್ಯ, ಗಾಂಭೀರ್ಯ, ದರ್ಪ, ಮಾತೃಪ್ರೇಮಗಳನ್ನು ಕಂಡು ಹಿಗ್ಗಿದನು. "ರೂಪ, ಸತ್ವ, ಬಲಗಳಲ್ಲಿ ಪಿತೃಗಳನ್ನು ಹೋಲುವ ಇವನ ಗರ್ವವು ತಕ್ಕದ್ದೇ. ಆದರೆ ಪ್ರಜೆಗಳಲ್ಲಿ ಕರುಣೆಯೊಂದನ್ನು ಮಾತ್ರ ತೋರಿಸದೆ ಇರುವನಲ್ಲಾ!" ಎಂದುಕೊಂಡನು. ಆಮೇಲೆ "ಅಯ್ಯಾ, ಆ ವಟುವನ್ನು ಬಿಟ್ಟುಬಿಡು" ಎಂದನು. ಅವನು ಮತ್ತಷ್ಟು ಗಡುಸಿನಿಂದ "ಬಿಡುವುದಿಲ್ಲ ಎಂದ ಮೇಲೆ ಬಿಡುವುದೇ ಇಲ್ಲ" ಎಂದು ಗರ್ಜಿಸಿದನು.

ಭೀಮನು ಅವನ ಹಠಕ್ಕೆ ಸಂತೋಷಪಟ್ಟನು. ಆ ಬ್ರಾಹ್ಮಣನನ್ನು ಕರೆದು "ಅಯ್ಯಾ, ನಿನ್ನ ಮಗನನ್ನು ಕರೆದುಕೋ. ನಾನೇ ಅವನ ಬದಲು ಹೋಗುತ್ತೇನೆ" ಎಂದನು. ಬ್ರಾಹ್ಮಣವಟು ಭೀಮನನ್ನು ತಡೆದು "ನನ್ನ ಗುರುಗಳ ಜೀವರಕ್ಷಣೆಗೆಂದು ನನ್ನ ಪ್ರಾಣವನ್ನು ಮೀಸಲಾಗಿಟ್ಟಿದ್ದೇನೆ. ರೂಪಗುಣಸಂಪನ್ನನಾದ ನೀನು ಸಾಯುವುದು ಯುಕ್ತವಲ್ಲ" ಎಂದನು. ಭೀಮನು "ಆದಾಗದು. ಕ್ಷತ್ರಿಯನಾದ ನಾನು ದುಃಖದಲ್ಲಿರುವವರ ದುಃಖವನ್ನು ದೂರಮಾಡಲೇಬೇಕು. ಪೂಜ್ಯನಾದ ನೀನು ಸುಖವಾಗಿರು. ನಿನ್ನ ಶರೀರಕ್ಕೆ ಬದಲು ನನ್ನ ಶರೀರವನ್ನು ಕೊಡಲು ಸಿದ್ಧನಾಗಿದ್ದೇನೆ" ಎಂದನು.

ಅವನು ಕ್ಷತ್ರಿಯನೆಂಬುದನ್ನು ತಿಳಿದು ಘಟೋತ್ಕಚನು "ಕ್ಷತ್ರಿಯನಾದುದರಿಂದಲೇ ಇವನಿಗಿಷ್ಟು ಗರ್ವ! ಇರಲಿ, ಇವನನ್ನೇ ಹಿಡಿದುಕೊಂಡು

---

* ಹಿಂದೆ, ಅರಗಿನ ಮನೆಯಿಂದ ಭೀಮನು ತಾಯಿ ಸೋದರರನ್ನು ಹೊತ್ತುಕೊಂಡು ಸುರಂಗದ ಮೂಲಕ ಹೊರಟು ವನಕ್ಕೆ ಬಂದನು. ಅಲ್ಲಿ ಅವರೆಲ್ಲ ಮಲಗಿರಲು ಭೀಮನು ಅವರ ಕಾವಲಿಗಾಗಿ ಕುಳಿತಿದ್ದನು. ನರವಾಸನೆಯನ್ನರಿತ ಹಿಡಿಂಬನು ತನ್ನ ತಂಗಿ ಹಿಡಿಂಬೆಯನ್ನು ಕರೆದು ಆ ಮನುಷ್ಯನನ್ನು ಹಿಡಿದುತರಲು ಕಳುಹಿಸಿದನು. ಅವಳು ಭೀಮನಲ್ಲಿ ಮೋಹಗೊಂಡಳು. ತಡವಾಯಿತೆಂದು ಬಂದು ನೋಡಿದ ಹಿಡಿಂಬನು ಕೋಪದಿಂದ ಭೀಮನ ಮೇಲೆ ಬಿದ್ದನು. ಅವನನ್ನು ಆತನು ಹೊಡೆದು ಕೊಂದನು. ಕುಂತಿಯ ಅನುಜ್ಞೆಯಂತೆ ಭೀಮನು ಹಿಡಿಂಬೆಯನ್ನು ಮದುವೆಯಾದನು. ಅವಳ ಮಗನೇ ಘಟೋತ್ಕಚ. ವನವಾಸಕ್ಕೆ ಬಂದ ಮೇಲೆ ಭೀಮನಿಗೆ ಹೆಂಡತಿಯ ಭೇಟಿಯಾಗಿರಲಿಲ್ಲ.

ಹೋಗುತ್ತೇನೆ” ಎಂದುಕೊಂಡು “ಬಹು ಸಂತೋಷ, ಈ ವಟುವಿಗೆ ಬದಲು ನೀನೇ ಬಂದುಬಿಡು” ಎಂದನು.

ಭೀಮನು, “ಅತಿ ಬಲನಾದ ನಾನು ಇನ್ನೊಬ್ಬರನ್ನು ಹಿಂಬಾಲಿಸಿ ಹೋಗುವವನಲ್ಲ. ನಿನಗೆ ಶಕ್ತಿಯಿದ್ದರೆ ನನ್ನನ್ನು ಬಲಾತ್ಕಾರದಿಂದ ಕರೆದುಕೊಂಡು ಹೋಗು” ಎಂದನು.

ಅವನ ಗರ್ವವನ್ನು ಕಂಡು ರೇಗಿದ ಘಟೋತ್ಕಚನು “ನಾನು ಯಾರೆಂಬುದು ಗೊತ್ತಿದೆಯೋ?” ಎಂದು ಗುಡುಗಿದನು. ಭೀಮನು “ಗೊತ್ತು, ಗೊತ್ತು. ನೀನು ನನ್ನ ಮಗನಲ್ಲವೆ?” ಎಂದನು. ಘಟೋತ್ಕಚನಿಗೆ ಮತ್ತಷ್ಟು ರೇಗಿತು. ಅವನು “ಏನು, ನಾನು ನಿನ್ನ ಮಗನೆ? ಹೇಗೆ?” ಎಂದು ಬಿರುಸಾಗಿ ಕೇಳಿದನು. ಆಗ ಭೀಮನಿಗೆ ತಾನು ಬಾಯಿ ಜಾರಿದುದರ ಅರಿವಾಯಿತು. ಆತನು ಉಪಾಯದಿಂದ “ಓಹೋ, ಕೋಪ ಬಂದಿತೋ? ಸ್ವಲ್ಪ ಶಾಂತನಾಗು. ಕ್ಷತ್ರಿಯರು ಪ್ರಜೆಗಳನ್ನೆಲ್ಲ ತಮ್ಮ ಮಕ್ಕಳಂತೆ ಭಾವಿಸುತ್ತಾರೆ. ಅದರಂತೆ ನಾನು ನಿನ್ನನ್ನು ಹಾಗೆ ಕರೆದೆ” ಎಂದು ಜಾರಿಕೊಂಡನು.

ಘಟೋತ್ಕಚನಿಗೆ ಭೀಮನು ಜಾರಿಕೊಂಡುದರ ಸುಳಿವು ತಿಳಿಯಿತು. ಅವನು “ಹೆದರಿದವರ ಆಯುಧವನ್ನು ಹಿಡಿದುಬಿಟ್ಟೆಯಲ್ಲಾ!” ಎಂದು, (ನಾಲಿಗೆಯನ್ನು ತಿರುಗಿಸಿದುದು ಅಂಜುಬುರುಕರ ಲಕ್ಷಣವೆಂದು) ತೆಗಳಿದನು. ಭೀಮನು “ಅಯ್ಯಾ, ಸತ್ಯವಾಗಿ ಹೇಳುತ್ತೇನೆ ಕೇಳು. ಭಯವೆಂದರೇನು ಎಂಬುದನ್ನು ಕನಸಿನಲ್ಲಿಯೂ ಕಾಣೆ. ಭಯ ಎಂದರೇನು ಎಂದು ನಿನ್ನಿಂದ ತಿಳಿಯಬೇಕೆಂದಿದ್ದೇನೆ” ಎಂದನು. “ಹಾಗಾದರೆ ನಿನಗೆ ಭಯವನ್ನು ಉಪದೇಶಿಸುತ್ತೇನೆ. ಆಯುಧವನ್ನು ಹಿಡಿದುಕೋ” ಎಂದನು ಘಟೋತ್ಕಚ. “ಆಯುಧವೆ? ಹಿಡಿದುಕೊಂಡೇ ಇದ್ದೇನಲ್ಲಾ!” ಎಂದನು ಭೀಮ. “ಎಲ್ಲಿ, ಬರಿಯ ಕೈಯಲ್ಲಿರುವೆಯಲ್ಲಾ?” ಎನ್ನಲು, “ಚಿನ್ನದ ಕಂಬದಂತಿದ್ದು, ಶತ್ರುಗಳನ್ನು ಪುಡಿಗುಟ್ಟುವುದರಲ್ಲಿಯೇ ನಿರತವಾಗಿರುವ ನನ್ನ ಈ ಬಲ ತೋಳೇ ನನಗೆ ಸಹಜವಾದ ಆಯುಧ” ಎಂದನು ಭೀಮ.

“ಸುಮ್ಮನೆ ಬಾಯಿಗೆ ಬಂದಂತೆ ಹರಟಬೇಡ. ನೀನಾಡಿದ ಮಾತು ನನ್ನ ತಂದೆಯಾದ ಭೀಮಸೇನನಿಗೆ ಒಪ್ಪುವ ಮಾತು” ಎಂದನು

ಘಟೋತ್ಕಚ ಕೋಪದಿಂದ. ಅವನ ಪಿತೃಪ್ರೇಮ ಭೀಮನನ್ನು ಚಕಿತಗೊಳಿಸಿತು. ತಂದೆಯನ್ನು ಕಾಣದಿದ್ದರೂ ತಂದೆಯಲ್ಲಿ ಅವನಿಗಿರುವ ಭಕ್ತಿ, ಪ್ರೇಮ ಭೀಮನನ್ನು ಸಂತೋಷ ಸಾಗರದಲ್ಲಿ ಮುಳುಗಿಸಿತು. ಅದನ್ನು ತೋರ್ಪಡಿಸದೆ ಆತನು "ಯಾರಯ್ಯಾ ಆ ಭೀಮಸೇನ? ಅವನು ಯಾರಿಗೆ ಸಮ? ಈಶ್ವರನಿಗೋ, ಕೃಷ್ಣನಿಗೋ, ಇಂದ್ರನಿಗೋ, ಯಮನಿಗೋ—ಯಾರಿಗೆ ಸಮನಯ್ಯಾ ನಿನ್ನ ತಂದೆ?" ಎಂದನು. "ಎಲ್ಲರಿಗೂ" ಎಂದನು ಘಟೋತ್ಕಚ ಠೀವಿಯಿಂದ. "ಶುದ್ಧ ಸುಳ್ಳು" ಎಂದು ತಿರಸ್ಕಾರದಿಂದ ನುಡಿದನು ಭೀಮ.

ತನ್ನ ತಂದೆಯನ್ನು ತೆಗಳಿದುದಕ್ಕಾಗಿ ಘಟೋತ್ಕಚನಿಗೆ ರೇಗಿತು. "ನನ್ನ ತಂದೆಯನ್ನು ನಿಂದಿಸುವೆಯಾ?" ಎಂದುದೇ, ಒಂದು ದೊಡ್ಡ ಮರವನ್ನು ಕಿತ್ತು ಹೊಡೆದನು. ಅದಕೂ ಭೀಮನು ಜಗ್ಗಲಿಲ್ಲ; ಒಂದೇ ಕೈಯಿಂದ ಆ ಮರವನ್ನು ಹಿಡಿದು ಬಿಸಾಟನು. ಘಟೋತ್ಕಚನು ಪಕ್ಕದಲ್ಲಿದ್ದ ಬೆಟ್ಟದ ಶಿಖರವನ್ನು ಕಿತ್ತು ಹೊಡೆದನು. ಭೀಮನು ಆ ಕೋಡುಗಲ್ಲನ್ನೂ ಹಿಡಿದು ಬಿಸಾಟು "ಕಾಡಾನೆ ರೇಗಿದರೆ ಹುಲಿಯನ್ನು ಹೆದರಿಸಬಲ್ಲುದೆ?" ಎಂದು ಮೂದಲಿಸಿದನು.

ಹೇಗೂ ಎದುರಾಳಿಯನ್ನು ಗೆಲ್ಲಲು ಸಾಧ್ಯವಾಗಲಿಲ್ಲವೆಂದು ಘಟೋತ್ಕಚನಿಗೆ ಚಿಂತೆಯಾಯಿತು. ಅವನು "ನಾನು ಭೀಮಸೇನನ ಮಗ, ವಾಯುವಿನ ಮೊಮ್ಮಗ. ಬಾಹುಯುದ್ಧದಲ್ಲಿ ನನಗೆ ಸಮಾನರಿಲ್ಲ. ಮಲ್ಲಯುದ್ಧಕ್ಕೆ ಸಿದ್ಧನಾಗು" ಎನ್ನಲು, ಭೀಮನು "ಹಾಗೆಯೇ ಆಗಲಿ" ಎಂದನು. ಇಬ್ಬರೂ ತುಂಬಾ ಹೊತ್ತು ಹೋರಾಡಿದರು. ಯಾರೂ ಸೋಲಲಿಲ್ಲ. ಸಮಯ ಕಾದು ಘಟೋತ್ಕಚನು ಭೀಮನನ್ನು ಸರಿಯಾದ ಪಟ್ಟಿನಿಂದ ಹಿಡಿದು "ಕಾಡಾನೆಯನ್ನು ಬಲವಾದ ಹಗ್ಗಗಳಿಂದ ಬಿಗಿಯುವಂತೆ ನನ್ನ ತೋಳುಗಳಿಂದ ನಿನ್ನನ್ನು ಬಿಗಿದಿದ್ದೇನೆ. ಹೇಗೆ ಬಿಡಿಸಿಕೊಳ್ಳುವೆಯೋ ನೋಡುತ್ತೇನೆ" ಎಂದನು. ಅವನ ಬಲವಾದ ಪಟ್ಟಿಗೆ ಭೀಮನು ಸಂತೋಷಪಟ್ಟನು. ತನ್ನ ಮಗನು ತನ್ನಷ್ಟೇ ವೀರನಾಗಿರುವುದನ್ನು ಕಂಡು ಆತನು ಹೆಮ್ಮೆಪಟ್ಟನು. "ದುರ್ಯೋಧನಾ, ನಿನ್ನ ಶತ್ರುಪಕ್ಷ ಬೆಳೆಯುತ್ತಿದೆ. ಸರಿಯಾದ ರಕ್ಷಣೆ

ಮಾಡಿಕೋ" ಎಂದುಕೊಂಡನು. ಅನಂತರ, ಗಟ್ಟಿಯಾಗಿ ಹಿಡಿದುಕೊಂಡಿರುವಂತೆ ಹೇಳಿ, ಒಂದು ಸಲ ಕೊಡವಿದನು. ಪಟ್ಟು ತಪ್ಪಿಹೋಯಿತು. ಭೀಮನು ಬಿಡಿಸಿಕೊಂಡು "ನಾನು ಮಹಾ ಶೂರನೆಂಬ ಗರ್ವವನ್ನು ಬಿಡು. ಬಾಹು ಯುದ್ಧವೆಂದರೆ ನನಗೆ ಪ್ರಾಣ. ಆಯಾಸವೇ ತೋರುವುದಿಲ್ಲ. ಇಷ್ಟೇ ತಾನೆ ನಿನ್ನ ಶಕ್ತಿಯೆಲ್ಲ?" ಎಂದು ಹೀಯಾಳಿಸಿದನು.

ತನ್ನ ಶಕ್ತಿಯು ವ್ಯರ್ಥವಾದುದಲ್ಲದೆ ನಿಂದೆಗೊಳಗಾಗಬೇಕಾಯಿತೆಂದು ಘಟೋತ್ಕಚನಿಗೆ ಯೋಚನೆಯಾಯಿತು. ಅವನು ತನ್ನ ತಾಯಿಯ ಅನುಗ್ರಹದಿಂದ ಬಂದಿದ್ದ ಮಾಯಾಪಾಶವನ್ನು ಭೀಮನ ಮೇಲೆ ಬಿಟ್ಟನು. ಅದು ಭೀಮನನ್ನು ಕಟ್ಟಿಹಾಕಿತು. ಆತನು ಮುಂದಕ್ಕಡಿಯಿಡಲಾರದಾದನು. ಅನಂತರ ಬ್ರಾಹ್ಮಣನ ಅರ್ಘ್ಯ ಪಾತ್ರೆಯ ಜಲದಿಂದ ಆಚಮನ ಮಾಡಿ, ಈಶ್ವರನು ಅನುಗ್ರಹಿಸಿದ್ದ ಮಂತ್ರದ ಬಲದಿಂದ ಆ ಮಾಯಾಪಾಶವನ್ನು ಬಿಡಿಸಿಕೊಂಡನು.

ಘಟೋತ್ಕಚನಿಗೆ ಬೇರೆ ದಾರಿ ಕಾಣಲಿಲ್ಲ. ಅವನು "ಅಯ್ಯಾ, ನಿನ್ನ ಹಿಂದಿನ ಒಪ್ಪಂದದಂತೆ ನಡೆದುಕೋ. ನನ್ನ ತಾಯಿಯ ಆಹಾರದ ವೇಳೆ ಮೀರುತ್ತಿದೆ" ಎಂದನು. ಭೀಮನು ಅದಕ್ಕೊಪ್ಪಿ ಅವನೊಡನೆ ಹೊರಟನು. ಜಡಿಮಳೆಯನ್ನು ಲೆಕ್ಕಿಸದೆ ಮುನ್ನುಗ್ಗುವ ಗೂಳಿಯಂತೆ, ರಾಕ್ಷಸನನ್ನನುಸರಿಸಿ ಭೀಮನು ಹೋಗುವುದನ್ನು ಕಂಡು ಆ ಬ್ರಾಹ್ಮಣರು ನೊಂದರು. ತಾವೂ ಅವರನ್ನು ಹಿಂಬಾಲಿಸಿದರು.

ಘಟೋತ್ಕಚನು ತನ್ನ ಮನೆಯ ಬಾಗಿಲ ಹೊರಗೆ ಭೀಮನನ್ನು ನಿಲ್ಲಿಸಿ, ತಾನು ಒಳಗೆ ಹೋಗಿ ತಾಯಿಗೆ ನಮಸ್ಕಾರ ಮಾಡಿ "ಅಮ್ಮಾ ನಿನ್ನ ಊಟಕ್ಕೆ ಸೊಗಸಾದ ಮನುಷ್ಯನನ್ನು ತಂದಿದ್ದೇನೆ" ಎಂದನು. "ಮಗನೆ, ಚಿರಕಾಲ ಬಾಳು. ಎಂಥ ಮನುಷ್ಯನನ್ನು ತಂದಿರುವೆ?" ಎಂದು ಕೇಳಿದಳು ಹಿಡಿಂಬೆ.

"ಮಾತಿನಲ್ಲಿ ಮಾತ್ರ ಮನುಷ್ಯನೇ ಹೊರತು, ಶಕ್ತಿಯಲ್ಲಲ್ಲ."

"ಹುಡುಗನೋ, ಮುದುಕನೋ?"

"ಹುಡುಗನೂ ಅಲ್ಲ ಮುದುಕನೂ ಅಲ್ಲ."

ಮನುಷ್ಯನನ್ನು ನೋಡಲು ಹಿಡಿಂಬೆ ಮಗನೊಡನೆ ಹೊರಗೆಬಂದು ನೋಡುತ್ತಾಳೆ—ಭೀಮಸೇನ, ತನ್ನ ಪತಿದೇವ. "ಈ ಮನುಷ್ಯನನ್ನೇ ತಂದಿದ್ದು?" ಎಂದು ಕೇಳಲು, ಅವನು ಆಶ್ಚರ್ಯದಿಂದ "ಯಾರಮ್ಮಾ ಇವನು?" ಎಂದನು. "ಹುಚ್ಚ, ನಿನಗೂ, ನನಗೂ ದೈವ ಸ್ವರೂಪನು ಈತ" ಎಂದು ಹೇಳಿ, "ಆರ್ಯಪುತ್ರನಿಗೆ ಜಯವಾಗಲಿ" ಎಂದು ನಮಸ್ಕರಿಸಿದಳು. ಭೀಮನು ತನ್ನ ಪ್ರಿಯೆಯಾದ ಹಿಡಿಂಬೆಯನ್ನು ಬಹು ದಿನಗಳ ಮೇಲೆ ಕಂಡು ಆನಂದಪಟ್ಟನು. ಆಕೆಯ ದರ್ಶನದಿಂದ ಆತನ ವನವಾಸದ ಬೇಸರವು ಬಹುಮಟ್ಟಿಗೆ ಕಡಿಮೆಯಾಯಿತು. ಹಿಡಿಂಬೆಯು ತನ್ನ ವೃತ್ತಾಂತವನ್ನೆಲ್ಲ ಪತಿಗೆ ತಿಳಿಸಿದಳು. ತಾಯಿಯ ಮಾತಿನಂತೆ ಘಟೋತ್ಕಚನು ತಂದೆಗೆ ನಮಸ್ಕಾರಮಾಡುತ್ತ "ಧಾರ್ತರಾಷ್ಟ್ರವನಕ್ಕೆ ಕಾಡುಕಿಚ್ಚಾದ ಘಟೋತ್ಕಚನು ವಂದಿಸುತ್ತೇನೆ. ತಿಳಿಯದೆ ಮಾಡಿದ ಮಗನ ಅಪರಾಧವನ್ನು ಕ್ಷಮಿಸಬೇಕು" ಎಂದನು.

ಭೀಮನು ಮಗನನ್ನು ತಬ್ಬಿಕೊಂಡು "ಮಗನೇ, ನೀನು ಕ್ರಮತಪ್ಪಿ ನಡೆದುದೂ ಬಲುಸೊಗಸಾಗಿತ್ತು. ನಿನ್ನ ಪಿತೃಗಳು ಬಯಸುವುದೂ ರಿಪುಭಯಂಕರರಾದ ಮಕ್ಕಳನ್ನೇ. ಅತಿಬಲ ಪರಾಕ್ರಮಿಯಾಗು" ಎಂದು ಹರಸಿದನು.

ಇಷ್ಟೆಲ್ಲ ನೋಡುತ್ತಿದ್ದ ಆ ಬ್ರಾಹ್ಮಣರಿಗೆ ತಮ್ಮನ್ನು ತಡೆದವನು ಘಟೋತ್ಕಚನೆಂದೂ ತಮ್ಮನ್ನು ಸಲಹಿದವನು ಭೀಮನೆಂದೂ ಆಗ ತಿಳಿಯಿತು. ತಂದೆಯ ಮಾತಿನಂತೆ ಘಟೋತ್ಕಚನು ಆ ಬ್ರಾಹ್ಮಣನಿಗೆ ನಮಸ್ಕಾರಮಾಡಿದನು. ಕೇಶವದಾಸನು "ತಂದೆಗೆ ಸಮಾನನಾದ ಗುಣವಂತನೂ ಕೀರ್ತಿವಂತನೂ ಆಗು" ಎಂದು ಆಶೀರ್ವಾದಮಾಡಿದನು. ಭೀಮನು ಪತ್ನೀ ಪುತ್ರರೊಡನೆ ಹೊರಟು ಆ ಬ್ರಾಹ್ಮಣನನ್ನು ಕಾಡುದಾಟಿಸಿ ಬೀಳುಕೊಟ್ಟನು.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ಹಾವಳಿ—ಪೀಡೆ. ಅನಿವಾರ್ಯ—ಮಾಡಲೇಬೇಕಾದ. ಪ್ರಳಯ—ಜಗತ್ತಿನ ನಾಶಕಾಲ. ಪಾರಾಗು—ಬಿಡುಗಡೆ ಹೊಂದು. ಪಾರಣೆ—ಉಪವಾಸವ್ರತವನ್ನು

ಮುಗಿಸಿದ ಮೇಲೆ ಮೂರನೆಯ ದಿನ ಊಟ ಮಾಡುವಿಕೆ. ಜ್ಯೇಷ್ಠ—ಹಿರಿಯ. ನಿರ್ಭಾಗ್ಯ—ಭಾಗ್ಯವಿಲ್ಲದವನು, ಪುಣ್ಯವಿಲ್ಲದವನು. ಭೀಕರ—ಹೆದರಿಕೆಯಾಗುವ. ಕರಾಳ—ಕಪ್ಪು. ಮಹಾಕಾಯ—ದೊಡ್ಡ ದೇಹದವನು. ದಿಗ್ಭ್ರಮೆ—ಏನೂ ತೋಚದಿರುವಿಕೆ. ಮಧ್ಯಮ—ಹಿರಿಯನೂ ಅಲ್ಲ, ಕಿರಿಯನೂ ಅಲ್ಲ, ನಡುಮಗ. ಪಂಚಭೂತಗಳು—ಭೂಮಿ, ಜಲ, ಅಗ್ನಿ, ವಾಯು, ಆಕಾಶಗಳು. ವಟು—ಬ್ರಹ್ಮಚಾರಿ. ಜಲಾಂಜಲಿ—ಸತ್ತವರಿಗೆ ಕೊಡುವ ಬೊಗಸೆ ನೀರು. ದೀರ್ಘಾಯು—ಬಹುಕಾಲ ಬದುಕುವವನು. ಧೋರಣೆ—ಠೀವಿ, ಜೋರು. ದರ್ಪ—ಗರ್ವ, ಬಿಗುಮಾನ. ಗಡಸು—ಬಿಗಿ, ಕೋಪದ ಬಿರುನುಡಿ. ಚಕಿತಗೊಳಿಸು—ಆಶ್ಚರ್ಯಗೊಳಿಸು. ಮಲ್ಲಯುದ್ಧ—ಬಾಹುಯುದ್ಧ; ಕುಸ್ತಿ. ಪಟ್ಟು—ಹಿಡಿತ. ಧಾರ್ತರಾಷ್ಟ್ರವನ—ಧೃತರಾಷ್ಟ್ರನ ಮಕ್ಕಳೆಂಬ ಕಾಡು. ಕಿಚ್ಚು—ಬೆಂಕಿ. ವ್ಯಾಯೋಗ—ಸಂಬಂಧ, ಪ್ರವೇಶ.

**೨. ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಬರೆಯಿರಿ:—**

೧. "ಮಧ್ಯಮ ವ್ಯಾಯೋಗ" ಎಂದರೇನು?

೨. ಈ ಕಥೆಗೆ 'ಮಧ್ಯಮ ವ್ಯಾಯೋಗ' ಎಂದು ಏಕೆ ಹೆಸರಾಯಿತು?

೩. ಬ್ರಾಹ್ಮಣರಿಗೆ ಬಂದಿದ್ದ ವಿಪತ್ತೇನು?

೪. ರಾಕ್ಷಸನು ಯಾರು? ಅವನು ಎಲ್ಲ ಬ್ರಾಹ್ಮಣರನ್ನೂ ಏಕೆ ಕೊಲ್ಲಲಿಲ್ಲ?

೫. ನಡುಮಗನು (ಮಧ್ಯಮ) ರಾಕ್ಷಸನ ಪಾಲಾದುದು ಹೇಗೆ?

೬. ಭೀಮನು ರಾಕ್ಷಸನಿದ್ದ ಸ್ಥಳಕ್ಕೆ ಬರಲು ಕಾರಣವೇನು?

೭. ಭೀಮ ಘಟೋತ್ಕಚರ ಸಂಭಾಷಣೆಯನ್ನೂ ಯುದ್ಧವನ್ನೂ ವರ್ಣಿಸಿ.

೮. ಘಟೋತ್ಕಚನು ತಾಯಿ, ತಂದೆಗಳಲ್ಲಿಟ್ಟಿದ್ದ ಭಕ್ತಿಯನ್ನು ಈ ಕಥೆಯಲ್ಲಿ ಹೇಗೆ ವರ್ಣಿಸಿದೆ?

೯. ಹಿಡಿಂಬೆಯು ಯಾರು? ಈ ಕಥೆಯಲ್ಲಿ ಅವಳು ಎಲ್ಲಿ ಬರುತ್ತಾಳೆ?

೧೦. ಘಟೋತ್ಕಚನು ಪೆಚ್ಚಾದುದು ಯಾವಾಗ? ತಂದೆಯನ್ನು ತಿಳಿದಾಗ ಅವನು ಏನು ಮಾಡಿದನು?

೧೧. ಬ್ರಾಹ್ಮಣನ ಮಧ್ಯಮ ಪುತ್ರನ ಗತಿ ಏನಾಯಿತು?

೧೨. ಈ ಕಥೆಯಲ್ಲಿ ಕಾಣುವ ಕವಿಯ ಚಮತ್ಕಾರವೇನು?

೩. ಸಂದರ್ಭಸಹಿತ ಈ ಮಾತುಗಳ ಅಭಿಪ್ರಾಯವನ್ನು ತಿಳಿಯಿರಿ:—

೧. ಗಂಡನೆದುರಿಗೆ ಸಾಯುವುದು ಹೆಂಡತಿಗೆ ಪುಣ್ಯ.

೨. ನಾನೇ ಮಧ್ಯಮ, ಮತ್ತಾರೂ ಅಲ್ಲ.

೩. ನೀನಾಡಿದ ಮಾತು ನನ್ನ ತಂದೆ ಭೀಮನಿಗೆ ಒಪ್ಪುವ ಮಾತು.

೪. ಕಾಡಾನೆ ರೇಗಿದರೆ ಹುಲಿಯನ್ನು ಹೆದರಿಸಬಲ್ಲುದೇ?

೫. ಮಾತಿನಲ್ಲಿ ಮಾತ್ರ ಮನುಷ್ಯನೇ ಹೊರತು ಶಕ್ತಿಯಲ್ಲಲ್ಲ.

೪. ವ್ಯಾಕರಣ:—

೧. ಸರ್ವನಾಮ ಎಂದರೇನು? ಅದು ಎಷ್ಟು ವಿಧ?

೨. ಈ ಸರ್ವನಾಮಗಳ ಲಿಂಗ, ವಚನಗಳನ್ನು ಕಂಡುಹಿಡಿದು, ಬೇರೆ ಲಿಂಗ, ವಚನಗಳಲ್ಲಿ ಹೇಳಿರಿ.
ನಾನು, ನೀನು, ಇವನು, ಈತ, ಈಕೆ.

# ೩. ಕಿರಾತರೊಡನೆ ಕದನ

ಪ್ರೊ. ಎ. ಎನ್. ಮೂರ್ತಿರಾವ್, ಎಂ.ಎ., ಅವರು ಇಂಗ್ಲೀಷಿನ ಪ್ರಾಧ್ಯಾಪಕರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಬಹು ಕಾಲ ಸೇವೆ ಸಲ್ಲಿಸಿ ನಿವೃತ್ತರಾದವರು. ಇವರು ನಿವೃತ್ತಿಯನಂತರ ಮೈಸೂರು ಸರ್ಕಾರದ ಸಂಸ್ಕೃತಿ ಪ್ರಚಾರ ಶಾಖೆಯ ಡೈರೆಕ್ಟರಾಗಿಯೂ ಕೆಲವು ಕಾಲ ದುಡಿದು ನಿವೃತ್ತರಾದರು. ಈಗಲೂ ಅಖಿಲ ಭಾರತ ಸಾಹಿತ್ಯ ಅಕ್ಯಾಡೆಮಿಯಲ್ಲಿ ಒಬ್ಬ ಮುಖ್ಯ ಸದಸ್ಯರಾಗಿ ಕನ್ನಡ ನಾಡಿನ ಪ್ರತಿನಿಧಿಯಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಇದ್ದರು.

ಶ್ರೀ ಮೂರ್ತಿರಾಯರು ಇಂಗ್ಲೀಷಿನಲ್ಲಿ ಪ್ರಖ್ಯಾತ ವಿದ್ವಾಂಸರಾಗಿರುವಂತೆಯೇ ಕನ್ನಡದಲ್ಲಿಯೂ ಪ್ರಸಿದ್ಧ ಸಾಹಿತಿಗಳು. ಇಂಗ್ಲೀಷಿನ ಅನೇಕ ಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸುವಂತೆಯೇ ಕನ್ನಡದ ಹಲವು ಗ್ರಂಥಗಳನ್ನು ಇಂಗ್ಲೀಷಿಗೂ ಅನುವಾದಿಸಿದ್ದಾರೆ. ಇದರಲ್ಲಿ ಶ್ರೀ ಶಿವರಾಮಕಾರಂತರ 'ಮರಳಿ ಮಣ್ಣಿಗೆ' ಯ ಅನುವಾದ 'Back to the soil' ಎಂಬುದು ಪ್ರಸಿದ್ಧವಾದ ಗ್ರಂಥ. ಇಂಗ್ಲೀಷಿನಿಂದ ಭಾಷಾಂತರ ಹೊಂದಿದ ಅನೇಕ ಗ್ರಂಥಗಳಲ್ಲಿ 'Coral Island' ಗ್ರಂಥದ ಕನ್ನಡಾನುವಾದ 'ಹವಳ ದ್ವೀಪ'ವೂ ಒಂದು ಪ್ರಸಿದ್ಧವಾದ ಸಾಹಸದ ಕೈಹೊತ್ತಿಗೆ.

ಶ್ರೀ ಮೂರ್ತಿರಾಯರು 'ಯೋಧನ ಪುನರಾಗಮನ' 'ಪಾಶ್ಚಾತ್ಯ ಸಣ್ಣ ಕಥೆಗಳು' 'ಹಗಲುಗನಸುಗಳು' ಇತ್ಯಾದಿ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಇವರದು ಸರಳವಾದ ಶೈಲಿ.

'ಹವಳ ದ್ವೀಪ' ಬಲು ಮುದ್ದಾದ, ಸಾಹಸಮಯವಾದ ಕಥೆ. ಮೂರ್ತಿರಾಯರು ಚಿಕ್ಕ ವಯಸ್ಸಿನಲ್ಲಿ ಓದಿ ಆನಂದಿಸಿದುದರಿಂದ ಕನ್ನಡಿಗ ಬಾಲಕರಿಗಾಗಿ ಅದನ್ನು ಕನ್ನಡಿಸಿದರಂತೆ. ದಕ್ಷಿಣ ಸಾಗರದಲ್ಲಿರುವ 'ಹವಳ ದ್ವೀಪ'ವನ್ನು ನೋಡಲು ಹೊರಟ ರೋವರ್, ಜಾಕಿ, ಪೀಟರ್ ಎಂಬ ಮೂವರು ಧೀರ ಬಾಲಕರು ತಾವಿದ್ದ ಹಡಗು ಬಿರುಗಾಳಿಯಿಂದ ಬಂಡೆಗೆ ಬಡಿದು ಮುಳುಗಲು ಒಂದು ಸಣ್ಣ ಹುಟ್ಟಿನ ಸಹಾಯದಿಂದ ದಡದ ಕಡೆಗೆ ಬರುತ್ತಾರೆ. ಅವರಲ್ಲಿ ಧೀರನಾದ ಜಾಕಿಯ ಸಹಾಯದಿಂದ ಅವರೆಲ್ಲ ಪೆಸಿಫಿಕ್ ಸಾಗರದಲ್ಲಿದ್ದ ಒಂದು ದ್ವೀಪವನ್ನು ಸೇರುತ್ತಾರೆ. ಅಲ್ಲಿ ಹಣ್ಣು ಹಂಪಲುಗಳಿಂದ ಆನಂದವಾಗಿರುವಾಗ ಒಂದು ದಿನ ಅವರಿಗೆ ಕಿರಾತರೊಡನೆ ಯುದ್ಧ ಒದಗುತ್ತದೆ. ಅದರ ಚಿತ್ರವನ್ನು ಈ ಪಾಠದಲ್ಲಿ ಕಾಣಬಹುದು.

ಕೆಲವು ತಿಂಗಳು ಹೀಗೆಯೇ ಸುಖವಾಗಿ ಕಾಲಕಳೆಯಿತು. ಒಂದು ದಿನ ಅನಿರೀಕ್ಷಿತವಾಗಿ ವಿಶೇಷ ಸಂಗತಿಯೊಂದು ನಡೆಯಿತು. ಅದರಿಂದ ನಮ್ಮ ಜೀವನ ಇದ್ದಕ್ಕಿದ್ದ ಹಾಗೆಯೇ ಭಯಂಕರವಾಗಿ ಪರಿಣಮಿಸಿತು.

ಪೀಟರ್ ಬಂಡೆಗಳ ತುದಿಯಲ್ಲಿ ಕುಣಿದಾಡುವುದು ಹೆಚ್ಚು. ಆಗಿಂದಾಗ ಕಾಲು ಜಾರಿ ನೀರಿಗೆ ಬೀಳುವುದು ಪದ್ಧತಿಯಾಗಿ ಹೋಗಿತ್ತು. ಒಂದು ದಿನ ಹೀಗೆ ನೀರಿಗೆ ಬಿದ್ದು ಮೇಲಕ್ಕೆ ಬಂದು ತನ್ನ ಬಟ್ಟೆಗಳನ್ನು ಹಿಂಡಿಕೊಳ್ಳುತ್ತಿದ್ದನು. ಪದ್ಧತಿಯ ಪ್ರಕಾರ ಆ ದಿನವೂ ನಾನೂ ಜಾಕಿಯೂ ವಜ್ರದ ಗುಹೆಯ ಹತ್ತಿರ ಬಂಡೆಗಳ ಮೇಲೆ ಕುಳಿತಿದ್ದೆವು. ನಾನು ಯಾವುದೋ ಜ್ಞಾನದಲ್ಲಿ ಸಮುದ್ರದ ಕಡೆ ನೋಡಿದೆ. ದಿಗಂತದಲ್ಲಿ ಸಮುದ್ರದ ಮೇಲೆ ಎರಡು ಕರಿಯ ಪದಾರ್ಥಗಳು ಕಂಡುಬಂದವು.

"ಜಾಕಿ, ಅಲ್ಲಿ ಕಾಣುವುದೇನು ನೋಡು."

"ಏನೋ, ಹೇಳುವುದಕ್ಕಾಗುವುದಿಲ್ಲ. ಒಂದೆರಡು ನಿಮಿಷಗಳಿಂದ ನಾನೂ ಅದನ್ನೇ ನೋಡುತ್ತಾ ಇದ್ದೇನೆ. ಮೊದಲು ನೋಡಿದಾಗ ಯಾವುದೋ ಸಮುದ್ರದ ಹಕ್ಕಿಗಳಿರಬೇಕು ಎಂದುಕೊಂಡೆ. ಈಗ ನೋಡಿದರೆ ಹಕ್ಕಿಗಳೆಂದು ತೋರುವುದಿಲ್ಲ. ಹಕ್ಕಿಗಳು ಅಷ್ಟು ದೊಡ್ಡ ವಾಗಿರುವುದಿಲ್ಲ."

"ಅವು ನಮ್ಮ ಕಡೆಗೇ ಬರುತ್ತಿರುವ ಹಾಗೆ ಕಾಣುತ್ತದೆ, ಅಲ್ಲವೇ? ನೋಡು, ಬರಬರುತ್ತಾ ದೊಡ್ಡದಾಗಿ ಕಾಣುತ್ತದೆ."

ಬಟ್ಟೆಗಳನ್ನು ಹಿಂಡಿಕೊಂಡು ಪೀಟರ್ ನಮ್ಮ ಕಡೆಗೆ ತಿರುಗಿದ.

"ಏನಯ್ಯಾ ಅದು, ಅಷ್ಟೊಂದು ಆಸಕ್ತಿಯಿಂದ ನೋಡುತ್ತ ಇದ್ದೀರಿ?"

"ಅಲ್ಲಿ ನೋಡು, ಅವು ಏನಿರಬಹುದು ಹೇಳು."

ಪೀಟರ್ ಬಿಸಲಿಗೆ ತನ್ನ ಕೈಯ್ಯನ್ನು ಮರೆಮಾಡಿಕೊಂಡು ನೋಡಿದ.

"ಮೀನುಗಳಿರಬೇಕು— ಅಲ್ಲ, ಮೀನಲ್ಲ,— ಅವು ದೋಣಿಗಳು ಅಂತ ಕಾಣುತ್ತೆ, ಅಲ್ಲವೆ ಜಾಕಿ?"

ಮತ್ತೆ ಮನುಷ್ಯರ ಮುಖ ನೋಡಬಹುದೆಂದು ನನಗೆ ಬಹಳ ಸಂತೋಷವಾಯಿತು.

"ನೀನು ಹೇಳುವುದು ನಿಜ ಅಂತ ತೋರುತ್ತೆ. ಆದರೂ ಅವು ಬರುತ್ತಾ ಇರುವ ರೀತಿ ನೋಡಿದರೆ ಸಾಧಾರಣವಾಗಿ ದೋಣಿಗಳು ಬರುವ ರೀತಿಯಲ್ಲ," ಎಂದು ಜಾಕಿ ತನಗೆ ತಾನೇ ಮಾತಾಡಿಕೊಳ್ಳುವಂತೆ ಮೆಲ್ಲಗೆ ಹೇಳಿ, ಆ ವಸ್ತುಗಳ ಕಡೆಗೇ ದೃಷ್ಟಿಯನ್ನು ನೆಟ್ಟು ಒಂದೆರಡು ನಿಮಿಷ ಮೌನವಾಗಿ ನಿಂತಿದ್ದನು. ಮುಖ ನೋಡಿದರೆ ಬಹಳ ಯೋಚನೆಯಲ್ಲಿ ಮುಳುಗಿದ್ದಂತೆ ತೋರಿತು. ಅವುಗಳಂತೂ ನಿಮಿಷ ನಿಮಿಷಕ್ಕೂ ಹತ್ತಿರ ಬರುತ್ತಿದ್ದವು. ಕೊನೆಗೆ ಜಾಕಿ ಚಂಗನೆ ಮೇಲಕ್ಕೆದ್ದನು.

"ರೋವರ್, ಅವು ನಾವು ನೋಡಿರುವ ದೋಣಿಗಳಲ್ಲ. ಕಾಡು ಜನರು ಉಪಯೋಗಿಸುವ ತೋಡುದೋಣಿಗಳು. ಯುದ್ಧದ ದೋಣಿಗಳಿದ್ದರೂ ಇರಬಹುದು— ಹೇಳುವುದಕ್ಕಾಗುವುದಿಲ್ಲ. ಒಂದು ವಿಷಯ ಮಾತ್ರ ದೃಢವಾಗಿ ಹೇಳಬಹುದು— ಈ ದಕ್ಷಿಣ ದ್ವೀಪಗಳಲ್ಲಿರುವ ಕಿರಾತರೆಲ್ಲರೂ ಮಹಾ ಕ್ರೂರಿಗಳು, ನರಭಕ್ಷಕರು. ಅವರು ಯಾರನ್ನು ಕಂಡರೂ ದಯೆದಾಕ್ಷಿಣ್ಯಗಳಿಲ್ಲದೆ ನಡೆದುಕೊಳ್ಳುತ್ತಾರೆ. ಅವರು ಈ ದ್ವೀಪದಲ್ಲಿ ಇಳಿಯದೆ ಹೋದರೆ ಬದುಕಿದೆವು. ಇಳಿದರೆ ನಾವು ಅವರ ಕಣ್ಣಿಗೆ ಬೀಳದ ಹಾಗೆ ಅವಿತುಕೊಳ್ಳಬೇಕು."

ಜಾಕಿಯ ಮಾತು ಕೇಳಿ ನಾವು ಬಹಳ ಹೆದರಿದೆವು. ಅವನು ಬಾಯಲ್ಲಿ ಆಡಿದ ಮಾತಿಗಿಂತ ಅವನ ಗಂಭೀರವಾದ ಮುಖ, ಮಾತಿನ ರೀತಿ– ಇವುಗಳಿಂದ ನಮ್ಮ ಹೆದರಿಕೆ ಹೆಚ್ಚಾಯಿತು. ಅವನನ್ನು ಹಿಂಬಾಲಿಸಿ ಹತ್ತಿರದ ಕಾಡಿಗೆ ಹೋಗುತ್ತಿದ್ದಾಗ ನಮ್ಮೆಲ್ಲರ ಮನಸ್ಸೂ ತಳಮಳಿಸುತ್ತಿತ್ತು.

ಕಾಡಿನಲ್ಲಿ ದಟ್ಟವಾಗಿ ಬೆಳೆದಿದ್ದ ಮೆಳೆಯಲ್ಲಿ ಮೂರು ಜನರೂ ಅಡಗಿಕೊಂಡೆವು. ಆಗ ನನಗೆ ನಮ್ಮ ಈಟಿ ಮತ್ತು ಕೊಡಲಿಗಳ ಜ್ಞಾಪಕವಾಯಿತು.

"ಎಂಥ ಕೆಲಸ ಮಾಡಿದೆವು! ನಮ್ಮ ಆ ಯುಧಗಳನ್ನಾದರೂ ತಂದಿದ್ದರೆ ಚೆನ್ನಾಗಿತ್ತು."

"ಇಲ್ಲದಿದ್ದರೆ ಪರವಾಯಿಲ್ಲ, ಇಲ್ಲಿ ಬೇಕಾದಷ್ಟು ದೊಣ್ಣೆಗಳಿವೆಯಲ್ಲ, ಅವೇ ಸಾಕು."

ಜಾಕಿ ಹೇಳಿದಂತೆ ಅಲ್ಲಿ ಹತ್ತಿಪ್ಪತ್ತು ದೋಣ್ಣೆಗಳು ಬಿದ್ದಿದ್ದವು. ಕೆಲಸ ವೇನೂ ಇಲ್ಲದಿದ್ದರೆ ಪೀಟರಿನ ಕೈ ಕಡಿಯುತ್ತದೆ. ಅವನು ಆ ಕಡೆ ಬಂದಾಗ ಲೆಲ್ಲಾ ಮರದ ಕೊಂಬೆಗಳನ್ನು ಕಡಿದು ದೋಣ್ಣೆಗಳನ್ನು ಮಾಡಿದ್ದನು. ಅವು ಯಾವ ಉಪಯೋಗಕ್ಕೂ ಬೇಕಿರಲಿಲ್ಲ; ಕೇವಲ ಹೊತ್ತುಹೋಗು ವುದಕ್ಕಾಗಿ ಮಾಡಿದ್ದಾದ್ದರಿಂದ ಪೀಟರ್ ಅವುಗಳನ್ನು ಅಲ್ಲಿಯೇ ಬಿಟ್ಟಿದ್ದನು. ಮೂವರೂ ಬಲವಾದ ದೋಣ್ಣೆಗಳನ್ನು ಕೈಯಲ್ಲಿ ಹಿಡಿದು ಒಂದು ಬಂಡೆಯ ಹಿಂದೆ ಕುಳಿತೆವು. ನಾವು ಮರೆಯಾಗಿದ್ದರೂ ತೀರ ಪ್ರದೇಶವೆಲ್ಲಾ ನಮಗೆ ಕಾಣುತ್ತಿತ್ತು. ದೋಣಿಗಳು ಬಂಡೆಯ ಸಾಲಿನ ಬಳಿಗೆ ಬರುವವರೆಗೂ ನಾವು ಆಗಿಂದಾಗ ಒಂದೊಂದು ಮಾತಾಡುತ್ತಿದ್ದೆವು. ಆದರೆ ಅವು ಒಳಗಡಲಿಗೆ ಬಂದಮೇಲೆ ಎಲ್ಲರೂ ಒಂದು ಮಾತೂ ಆಡದೆ ನಿಶ್ಶಬ್ದವಾಗಿ ಕುಳಿತು ನಡೆದದ್ದನ್ನೆಲ್ಲಾ ಬಹಳ ಆಸಕ್ತಿಯಿಂದ ನೋಡುತ್ತಿದ್ದೆವು.

ದೋಣಿಗಳು ಇನ್ನೂ ಹತ್ತಿರ ಬಂದವು. ಒಂದನ್ನು ಇನ್ನೊಂದು ಅಟ್ಟಿಕೊಂಡು ಬರುತ್ತಿತ್ತೆಂದು ಈಗ ಸ್ಪಷ್ಟವಾಗಿ ಗೊತ್ತಾಯಿತು. ಮೊದಲ ನೆಯ ದೋಣಿಯಲ್ಲಿ ಹೆಂಗಸರು, ಮಕ್ಕಳು, ಕೆಲವರು ಗಂಡಸರು — ಒಟ್ಟು ಸುಮಾರು ನಲವತ್ತು ಜನರಿದ್ದಿರಬಹುದು. ಹಿಂದಿನ ದೋಣಿಯಲ್ಲಿದ್ದ ವರೆಲ್ಲಾ ವಯಸ್ಕರಾದ ಗಂಡಸರೇ. ಅವರ ಸಂಖ್ಯೆಯೂ ಮೊದಲಿನ ದೋಣಿಯಲ್ಲಿದ್ದಷ್ಟೇ. ಆದರೂ ಅವರಲ್ಲಿ ಆಯುಧಗಳು ಹೆಚ್ಚಾಗಿದ್ದಂತೆ ತೋರಿತು. ಯುದ್ಧಕ್ಕೆ ಸಿದ್ಧರಾಗಿ ಬಂದಿರಬೇಕು. ಎರಡು ದೋಣಿಯವರೂ ತಮ್ಮ ಶಕ್ತಿಯನ್ನೆಲ್ಲಾ ಬಿಟ್ಟು ಹುಟ್ಟುಹಾಕುತ್ತಿದ್ದರು. ಹಿಂದಿದ್ದವರಂತೂ ಮುಂದಿನ ದೋಣಿ ದಡವನ್ನು ಮುಟ್ಟುವುದಕ್ಕೆ ಮುಂಚೆಯೇ ಅದನ್ನು ಹಿಡಿಯಬೇಕೆಂದು ವಿಶ್ವಪ್ರಯತ್ನ ಮಾಡುತ್ತಿದ್ದರು. ಆದರೆ ಅವರ ಸಂಕಲ್ಪ ನೆರವೇರಲಿಲ್ಲ.

ಮುಂದಿನ ದೋಣಿ ನಾವು ಕುಳಿತಿದ್ದ ಸ್ಥಳಕ್ಕೆ ಹತ್ತಿರದಲ್ಲೇ ದಡ ಸೇರಲು ಬರುತ್ತಿತ್ತು. ಗಂಡಸರ ಕೈಯಲ್ಲಿದ್ದ ಹುಟ್ಟುಗಳು ಕ್ಷಣಕ್ಷಣಕ್ಕೂ ನೀರಿಗೆ ಬಿದ್ದು ಮೇಲಕ್ಕೆದ್ದಾಗ ಬಿಸಲಿನಲ್ಲಿ ಥಳಥಳಿಸಿ ಒಂದೇ ಸಮನಾಗಿ ಹನಿಗಳನ್ನು ಎರಚುತ್ತಿದ್ದವು. ದೋಣಿಯ ಮುಂದಿನ ತುದಿ ನೀರನ್ನು ಕತ್ತರಿಸಿಕೊಂಡು ಬರುತ್ತಿತ್ತು. ಹುಟ್ಟುಹಾಕುವವರ ಕರಿಯ ಮುಖದಲ್ಲಿ

ಅವರ ದೃಢಪ್ರತಿಜ್ಞೆಯನ್ನು ಸೂಚಿಸುವಂತೆ ಕಣ್ಣಿನ ಹೊಳಪು ಕಾಣು ತ್ತಿತ್ತು. ಅತಿ ವೇಗದಿಂದ ದೋಣಿ ಸಾಗಿ ಬಂದು ಬಲವಾಗಿ ದಂಡೆಗೆ ಬಡಿಯಿತು. ಕ್ಷಣಮಾತ್ರದಲ್ಲಿ ಅದರಲ್ಲಿದ್ದವರೆಲ್ಲರೂ ನೆಲಕ್ಕೆ ನೆಗೆದರು. "ಇನ್ನೇನು, ನಾವು ಗೆದ್ದೆವು" ಎನ್ನುವಂತೆ ಎಲ್ಲರ ಕಂಠದಿಂದಲೂ ಒಂದು ಕೂಗು ಹೊರಟಿತು. ಒಡನೆಯೇ ಮಕ್ಕಳನ್ನೆತ್ತಿಕೊಂಡಿದ್ದ ಮೂವರು ಹೆಂಗಸರು ಕಾಡಿನ ಕಡೆಗೆ ಓಡಿದರು. ಗಂಡಸರು ಮಾತ್ರ ಕೈಯಲ್ಲಿ ಕಲ್ಲು, ಈಟಿ, ದೊಣ್ಣೆ, ಮುಂತಾದ್ದನ್ನು ಹಿಡಿದು ಗುಂಪಾಗಿ ನೀರಿನ ಅಂಚಿನಲ್ಲೇ ಇದ್ದರು. ತಮ್ಮ ಶತ್ರುಗಳು ದೋಣಿಯಿಂದ ಇಳಿಯು ವುದನ್ನೇ ತಪ್ಪಿಸಬೇಕೆಂದು ಅವರು ಅಲ್ಲಿಯೇ ಕಾದಿದ್ದರು.

ಅವರು ದಡ ಸೇರಿದಾಗ ಹಿಂದಿನ ದೋಣಿಯವರು ಸುಮಾರು ಅರ್ಧ ಮೈಲಿಯಷ್ಟು ಹಿಂದಿದ್ದರು. ಆದರೆ ಬಹಳ ವೇಗವಾಗಿ ಬರುತ್ತಿದ್ದುದರಿಂದ ಕೆಲವು ನಿಮಿಷಗಳಲ್ಲೇ ಅವರೂ ದಡದ ಹತ್ತಿರ ಬಂದರು. ದಡದಲ್ಲಿದ್ದವರ ಮುಖದಲ್ಲಿ ಸ್ವಲ್ಪವೂ ಭಯದ ಚಿಹ್ನೆ ಕಾಣಲಿಲ್ಲ. ಎರಡನೆಯ ದೋಣಿ ಜೂಜಿನ ಕುದುರೆಯಂತೆ ವೇಗವಾಗಿ ಬಂತು. ದಡದಿಂದ ಇನ್ನೂ ಎರಡು ಮೂರು ದೂರವಿದ್ದಾಗಲೇ ಅವರ ಮೇಲೆ ಶತ್ರುಗಳು ಕಲ್ಲಿನ ಮಳೆ ಕರೆದರು. ಆದರೆ ದೋಣಿಯವರು ಅದನ್ನು ಗಮನಕ್ಕೆ ತಂದುಕೊಳ್ಳಲಿಲ್ಲ. ದೋಣಿ ದಡಕ್ಕೆ ಬಡಿದೊಡನೆ ವಿಕಾರವಾಗಿ ಅರಚುತ್ತಾ ಎಲ್ಲರೂ ನೆಲಕ್ಕೆ ಹಾರಿ ಶತ್ರುಗಳೊಡನೆ ಕಾದಿ ಅವರನ್ನು ಹಿಂದು ಹಿಂದಕ್ಕೆ ಓಡಿಸಿಕೊಂಡು ಬಂದರು.

ಆಗ ನಡೆದ ಯುದ್ಧ ಕಣ್ಣಿಂದ ನೋಡಲಾರದಷ್ಟು ಭಯಂಕರ ವಾಗಿತ್ತು. ಪ್ರತಿಯೊಬ್ಬನ ಕೈಯಲ್ಲೂ ಗಂಟುಗಂಟಾದ ಮರದಿಂದ ಮಾಡಿದ ದಪ್ಪದೊಣ್ಣೆಗಳಿದ್ದವು. ಅವುಗಳಿಂದ ಗುರಿಯಿಟ್ಟು ಹೊಡೆದು ಶತ್ರುಗಳ ತಲೆಯನ್ನು ಚೂರುಮಾಡುತ್ತಿದ್ದರು. ಅವರೆಲ್ಲರೂ ಮುಕ್ಕಾಲು ಬೆತ್ತಲೆಯಾಗಿದ್ದರು; ಮೈಯೆಲ್ಲಾ ಕಾಡಿಗೆಯಂತೆ ಕಪ್ಪು; ಕೆದರಿದ ತಲೆ. ವಿಕಾರವಾಗಿ ಅರಚುತ್ತ ಓಡಿ, ನೆಗೆದು, ದೊಣ್ಣೆಗಳನ್ನು ಬೀಸಿ ಮಲ್ಲ ಯುದ್ಧಮಾಡಿ ಕೊಲೆ ಮಾಡುತ್ತಿದ್ದ ಈ ಜನರನ್ನು ನೋಡಿದರೆ ಇವರೇನು ಮನುಷ್ಯರೋ ಅಥವಾ ಪಿಶಾಚಿಗಳೋ ಎಂಬ ಸಂದೇಹ ಬರುವಹಾಗಿತ್ತು.

ಹೀಗೆ ನಿರ್ದಯರಾಗಿ ಒಬ್ಬರನ್ನೊಬ್ಬರು ಸದೆ ಬಡೆದು ರಕ್ತ ಹರಿಸುತ್ತಿದ್ದು ದನ್ನು ನೋಡಿ ನನ್ನ ಹೃದಯ ಒಂದೇ ಸಮನೆ ದಿಗಿಲಿನಿಂದ ಬಡಿಯುತ್ತಿತ್ತು. ಒಂದು ಸಾರಿಯಂತೂ ಮೂರ್ಛೆ ಹೋಗುವಂತಾಗಿ ಮತ್ತೆ ಆ ಕಡೆ ನೋಡಲೇಬಾರದು ಎಂದುಕೊಂಡೆನು. ಆದರೂ ಯಾವುದೋ ಒಂದು ಸೆಳೆತಕ್ಕೆ ಸಿಕ್ಕಿ ಬೇಡ ಬೇಡವೆಂದರೂ ಕಣ್ಣು ಅಲ್ಲಿಯೇ ನೆಟ್ಟುಹೋಗಿತ್ತು. ಅಟ್ಟಸಿಕೊಂಡು ಬಂದವರ ಗುಂಪಿನಲ್ಲಿ ಬಹಳ ವಿಚಿತ್ರವಾದ ರೂಪಿನವ ನೊಬ್ಬನ ಕಡೆಗೆ ನನ್ನ ಗಮನ ಹೋಯಿತು. ಅವನ ಎತ್ತರ, ಬಲವಾದ ಮೈಕಟ್ಟು, ವಿಚಿತ್ರವಾದ ಅಲಂಕಾರ, ಎಲ್ಲವನ್ನೂ ನೋಡಿದರೆ ಅವನೇ ಆ ಗುಂಪಿನ ನಾಯಕನಿರಬೇಕೆಂದು ತೋರಿತು. ವಿಪರೀತವಾಗಿ ಬೆಳೆದಿದ್ದ ಕೂದಲನ್ನು ತಲೆಯಮೇಲೆ ರುಮಾಲಿನಂತೆ ಕಟ್ಟಿಕೊಂಡಿದ್ದನು. ಅದರ ಬಣ್ಣವನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅವನ ಮೈಯನ್ನು ನೋಡಿದರೆ ಇದ್ದಲಿನಂತೆ ಕಪ್ಪು; ಕೂದಲು ಮಾತ್ರ ಅರಶಿನ ಬಣ್ಣ. ಬಹುಶಃ ಕೂದಲಿಗೆ ಬಣ್ಣ ಹಾಕಿಕೊಂಡಿದ್ದಿರಬೇಕು. ತಲೆಯಿಂದ ಕಾಲಿನ ವರೆಗೆ ಪಟ್ಟಿ ಪಟ್ಟಿಯಾಗಿ ಬಣ್ಣ ಬಳಿದುಕೊಂಡಿದ್ದನು. ಆನೆಯಂಥ ಶರೀರ, ಮಾಗಿ ಹಳದಿಯಾದ ಹಲಸಿನ ಹಣ್ಣಿನಂತೆ ಕಾಣುವ ತಲೆ ಗೂದಲು, ಭಯಂಕರವಾಗಿ ಬಣ್ಣ ಬಳಿದ ಕಪ್ಪು ಮೈ—ಅವನೇನಾದರೂ ಚಿಕ್ಕಮಕ್ಕಳ ಕಣ್ಣಿಗೆ ಬಿದ್ದರೆ ಅವು ಕಿಟ್ಟನೆ ಕಿರಚಿಕೊಂಡು ಮೂರ್ಛೆ ಹೋಗುವುದು ಖಂಡಿತ. ಯುದ್ಧದಲ್ಲಿಯೂ ಅವನ ಪರಾಕ್ರಮ ಅದ್ಭುತ ವಾದದ್ದು. ಆಗಲೇ ಅವನು ನಾಲ್ಕು ಜನರನ್ನು ಆಹುತಿ ತೆಗೆದು ಕೊಂಡಿದ್ದನು.

ನಾನು ನೋಡುತ್ತಿದ್ದ ಹಾಗೆ ಅವನಷ್ಟೇ ಎತ್ತರವಾಗಿಯೂ ದೃಢಕಾಯನಾಗಿಯೂ ಇದ್ದ ಮತ್ತೊಬ್ಬ ಯೋಧನು ಅವನೊಡನೆ ಯುದ್ಧಕ್ಕೆ ನಿಂತನು. ಅವನ ಕೈಯಲ್ಲಿದ್ದ ಲಾಠಿಯ ತುದಿಯಲ್ಲಿ ಗರುಡನ ಮೂಗಿನಂತೆ ಬಾಗಿದ್ದ ಅಲಗು ನೆಟ್ಟಿತ್ತು. ಅದನ್ನು ಬೀಸುತ್ತ ನೆಗೆದು ಬಂದು ಶತ್ರುವನ್ನು ಎದುರಿಸಿದನು. ಇಬ್ಬರೂ ಕ್ಷಣಕಾಲ ಎದುರಾಳಿಯ ಚಲನವನ್ನೇ ಕಾಯುತ್ತಾ ನಿಂತರು; ಆಮೇಲೆ ಕುಸ್ತಿಮಾಡುವವರಂತೆ ಒಬ್ಬರ ಸುತ್ತ ಮತ್ತೊಬ್ಬರು ತಿರಿಗಿದರು. ಶತ್ರುವೇನಾದರೂ ಸ್ವಲ್ಪ

ಅಜಾಗರೂಕನಾಗಿದ್ದರೆ ಆ ಸಮಯದಲ್ಲಿ ಅವನನ್ನು ಹೊಡೆದುಹಾಕ ಬೇಕೆಂಬ ಉದ್ದೇಶವಿದ್ದಿರಬಹುದು. ಆದರೆ ಇಬ್ಬರೂ ನುರಿತ ಯೋಧರು; ಸುಲಭವಾಗಿ ಸಿಕ್ಕಿಬೀಳುವವರಲ್ಲ. ಒಂದು ನಿಮಿಷ ಹೀಗೆ ಕಳೆದ ಮೇಲೆ ಇದು ಕೇವಲ ಕಾಲಹರಣವೆಂದು ತಿಳಿದುಕೊಂಡರು. ಇನ್ನು ತಡಮಾಡಿದರೆ ಅಪಾಯ ಹೆಚ್ಚು; ಬೇರೊಂದು ಕಡೆ ತಮ್ಮ ಪಕ್ಷದವರು ಸಾಯುತ್ತಿರ ಬಹುದು. ಆದ್ದರಿಂದ ಇಬ್ಬರೂ ಏಕಕಾಲದಲ್ಲಿಯೇ ಮೇಲೆ ಬೀಳುವ ಯೋಚನೆ ಮಾಡಿರಬೇಕು. ಒಂದೇ ಕ್ಷಣದಲ್ಲಿ ಇಬ್ಬರೂ ನೆಗೆದು ಎದೆ ನಡುಗುವಂತೆ ಘರ್ಜಿಸಿ ತಮ್ಮ ಲಾಠಿಗಳನ್ನು ಬೀಸಿದರು. ಪೆಟ್ಟು ಯಾರಿಗೂ ತಗಲಲಿಲ್ಲ. ಲಾಠಿಗಳು ಒಂದಕ್ಕೊಂದು ಬಡಿದು ಬಲವಾದ ಸದ್ದಾಯಿತು. ಮತ್ತೆ ಲಾಠಿಗಳನ್ನು ಬೀಸಿದರು. ಹೀಗೆ ಒಂದೆರಡು ನಿಮಿಷ ಕಳೆದ ಮೇಲೆ ಹಳದಿ ಕೂದಲಿನವನು ಹಠಾತ್ತಾಗಿ ಜಾರಿದನು. ಇದೇ ಸಮಯವೆಂದು ಅವನ ಶತ್ರು ಲಾಠಿಯನ್ನೆತ್ತಿ ಮುಂದಕ್ಕೆ ನೆಗೆದು ಬಂದನು. ಆದರೆ ಆ ಪೆಟ್ಟು ಬೀಳುವುದರೊಳಗೆ ಅವನ ತಲೆಗೆ ಒಂದು ಕಲ್ಲಿನ ಏಟು ತಗಲಿ ಅವನೇ ಕೆಳಗೆ ಬಿದ್ದನು. ತಮ್ಮ ನಾಯಕನು ಜಾರಿದ್ದನ್ನು ನೋಡಿ ಶತ್ರು ಪಕ್ಷದವರು ಯಾರೋ ಆ ಕಲ್ಲನ್ನು ಬೀರಿದ್ದರು.

ಅಲ್ಲಿಗೆ ಯುದ್ಧದ ಫಲಿತಾಂಶ ನಿಶ್ಚಯವಾದಹಾಗಾಯಿತು. ಮೊದಲಿನ ದೋಣಿಯವರು ತಮ್ಮ ನಾಯಕ ಕಲ್ಲಿನ ಪೆಟ್ಟಿನಿಂದು ಕೆಳಗೆ ಬಿದ್ದುದನ್ನು ನೋಡಿದೊಡನೆಯೇ ಎದೆಗುಂದಿ ಯುದ್ಧಮಾಡುವುದನ್ನು ಬಿಟ್ಟು ಕಾಡಿನ ಕಡೆಗೆ ಪಲಾಯನಮಾಡಿದರು. ಆದರೆ ಒಬ್ಬನೂ ತಪ್ಪಿಸಿ ಕೊಳ್ಳಲಾಗಲಿಲ್ಲ. ಶತ್ರುಪಕ್ಷದವರು ಬೆನ್ನಟ್ಟಿ ಬಂದು ಎಲ್ಲರನ್ನೂ ಹೊಡೆದು ನೆಲಕ್ಕೆ ಉರುಳಿಸಿದರು. ಆದರೆ ಅವರೆಲ್ಲರೂ ಸಾಯಲಿಲ್ಲ. ಅವರ ಸೋಲು ಖಂಡಿತ ಎಂದು ನಿಶ್ಚಯವಾದ ಮೇಲೆ ಶತ್ರುಗಳು ಅವರನ್ನು ಕೊಲ್ಲದೆ ಸಾಧ್ಯವಾದಷ್ಟು ಮಟ್ಟಿಗೆ ಜೀವಸಹಿತ ಕೈಸೆರೆ ಹಿಡಿಯಬೇಕೆಂದೇ ಪ್ರಯತ್ನ ಮಾಡಿದಂತೆ ತೋರಿತು. ಹಾಗೆ ಹದಿನೈದು ಜನರು ಸೆರೆಸಿಕ್ಕಿದರು. ಹಗ್ಗಗಳಿಂದ ಕೈಕಾಲುಗಳನ್ನು ಭದ್ರವಾಗಿ ಬಿಗಿದು ಅವರನ್ನು ಹೊತ್ತು ಕೊಂಡುಹೋಗಿ ಕಾಡಿನ ಪೊದೆಗಳ ಬಳಿ ಮಲಗಿಸಿದರು. ಅವರನ್ನು ಅಲ್ಲಿಯೇ ಬಿಟ್ಟು ಮತ್ತೆ ಯುದ್ಧರಂಗಕ್ಕೆ ಹಿಂತಿರುಗಿ ಗಾಯಗಳನ್ನು ತೊಳೆದುಕೊಳ್ಳು ತ್ತಿದ್ದ ತಮ್ಮ ಸ್ನೇಹಿತರನ್ನು ಸೇರಿಕೊಂಡರು.

ಅಟ್ಟಿಸಿಕೊಂಡು ಬಂದ ಎರಡನೆಯ ದೋಣಿಯಲ್ಲಿ ಮೊದಲು ನಲವತ್ತು ಜನ ಕಿರಾತರಿದ್ದರು. ಯುದ್ಧ ಮುಗಿದ ಮೇಲೆ ಅವರ ಪೈಕಿ ಇಪ್ಪತ್ತೆಂಟು ಜನ ಮಾತ್ರ ಉಳಿದಿದ್ದರು. ಸೋತ ಪಕ್ಷದವರ ಕಡೆ ಮೊದಲೇ ಹೇಳಿದಂತೆ ಉಳಿದ ಹದಿನೈದು ಜನರನ್ನು ಕೈಕಾಲು ಕಟ್ಟಿ ಅಲುಗಾಡದಂತೆ ಕಾಡಿನಲ್ಲಿ ಬಿಟ್ಟಿದ್ದರು. ಅವರೊಡನೆ ಬಂದಿದ್ದ ಹೆಂಗಸರು ಮಕ್ಕಳು ಮಾತ್ರ ಕಾಡಿನಲ್ಲಿ ಎಲ್ಲಿಯೋ ಅಡಗಿಕೊಂಡಿದ್ದರು. ಅವರನ್ನು ಹುಡುಕಿ ಕರೆತರುವುದಕ್ಕಾಗಿ ನಾಯಕನು ಇಬ್ಬರು ಯೋಧರನ್ನು ಕಳಿಸಿದನು.

ನಾವು ಮೂವರೂ ಒಬ್ಬರ ಮುಖವನ್ನೊಬ್ಬರು ನೋಡಿದೆವು. ಯುದ್ಧಮಾಡಿ ದಣಿದಿದ್ದ ಕಿರಾತರಲ್ಲಿ ಯಾರಾದರೂ ಬಾಯಾರಿ ಸಿಹಿ ನೀರು ಹುಡುಕಿಕೊಂಡು ಬಂದರೆ ನಾವು ಅವರ ಕೈಗೆ ಸಿಕ್ಕಿಬೀಳುವ ಸಂಭವವಿತ್ತು. ಆದರೆ ನಮ್ಮೆಲ್ಲರಿಗೂ ಅವರು ಏನು ಮಾಡುವರೋ ನೋಡಬೇಕೆಂಬ ಆಸಕ್ತಿ ಬಲವಾಗಿದ್ದುದರಿಂದ ಆ ಸ್ಥಳವನ್ನು ಬಿಟ್ಟು ಕದಲಲಿಲ್ಲ. ಅಲ್ಲದೆ ನಾವೇನಾದರೂ ಅಲ್ಲಿಂದ ಎದ್ದರೆ ಕಿರಾತರ ಕಣ್ಣಿಗೆ ಬೀಳಬಹುದೆಂಬ ಹೆದರಿಕೆಯೂ ಬಾಧಿಸುತ್ತಿತ್ತು.

ಒಬ್ಬ ಕಿರಾತ ಗುಂಪಿನಿಂದ ಹೊರಟು ಕಾಡಿನ ಕಡೆ ಹೋಗಿ ಸ್ವಲ್ಪ ಕಟ್ಟಿಗೆಯನ್ನು ಹೊತ್ತುತಂದು ಅನಂತರ ಬಿಲ್ಲುಬಾಣಗಳಿಂದ ಮರವನ್ನು ಕೊರೆದು ಬೆಂಕಿ ಹತ್ತಿಸಿದನು. ಅದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ನಾವು ದ್ವೀಪಕ್ಕೆ ಬಂದ ದಿನ ಜಾಕಿ ಬೆಂಕಿ ಹತ್ತಿಸಿದ್ದೂ ಅದೇ ಉಪಾಯದಿಂದ. ಬೆಂಕಿ ಹತ್ತಿಕೊಂಡು ಚೆನ್ನಾಗಿ ಉರಿಯೆದ್ದಮೇಲೆ ಇಬ್ಬರು ಕಿರಾತರು ಎದ್ದು ಕಾಡಿನ ಕಡೆ ಹೋಗಿ ಸೆರೆಸಿಕ್ಕಿದ್ದವನೊಬ್ಬನನ್ನು ಹೊತ್ತುಕೊಂಡೇ ಬಂದರು. ಅವನನ್ನು ಬೆಂಕಿಯ ಹತ್ತಿರ ತಂದಾಗ ಜೀವಸಹಿತ ಸುಟ್ಟುಬಿಡುತ್ತಾರೆಯೋ ಏನೋ ಎಂಬ ಭಯದಿಂದ ನನ್ನ ಹೃದಯ ತಲ್ಲಣಿಸಿತು. ದೊಣ್ಣೆಯನ್ನೆತ್ತಿಕೊಂಡು ಅವನ ಸಹಾಯಕ್ಕೆ ನುಗ್ಗಬೇಕೆಂದಿದ್ದೆ. ಆದರೆ ಜಾಕಿ ಬಲವಾಗಿ ನನ್ನನ್ನು ಅದುಮಿ ಹಿಡಿದನು. ಮರುಕ್ಷಣದಲ್ಲೇ ಕಿರಾತನೊಬ್ಬ ಲಾಠಿಯಿಂದ ಹೊಡೆದು ಆ ಬಂದಿಯನ್ನು ಕೊಂದುಹಾಕಿದನು. ನನ್ನ ಮನಸ್ಸಿನಲ್ಲಿ 'ಸದ್ಯಕ್ಕೆ ಆ ಬಡಪ್ರಾಣಿಯನ್ನು

ಜೀವಸಹಿತ ಸುಡಲಿಲ್ಲವಲ್ಲ' ಎಂದು ಸ್ವಲ್ಪ ಸಂತೋಷವೇ ಆಯಿತು. ಆದರೂ ಆ ಕ್ರೌರ್ಯವನ್ನು ನೋಡಿ ನಾವು ಮೂವರಿಗೂ ಸ್ವಲ್ಪಕಾಲ ಪ್ರಜ್ಞೆ ತಪ್ಪಿತು.

ಇದ್ದಕ್ಕಿದ್ದ ಹಾಗೆ ಕಾಡಿನ ಕಡೆಯಿಂದ ಯಾರೋ ಭಯದಿಂದ ಚೀರಿದ ಸದ್ದು ಕೇಳಿ ನಮಗೆ ಎಚ್ಚರವಾಯಿತು. ಕಿರಾತರು ಕಾಡಿನಲ್ಲಿ ಅವಿತಿದ್ದ ಮೂರು ಜನ ಹೆಂಗಸರನ್ನೂ ಅವರ ಮಕ್ಕಳನ್ನೂ ಎಳೆದು ತಂದರು. ಅವರಲ್ಲಿ ಒಬ್ಬಳು ಇತರರಿಗಿಂತ ವಯಸ್ಸಿನಲ್ಲಿ ಚಿಕ್ಕವಳು. ಇತರರಂತೆ ಅವಳಿಗೂ ಮೂಗು ಚಪ್ಪಟೆಯಾಗಿ ತುಟಿಗಳು ದಪ್ಪನಾಗಿದ್ದರೂ ಆಕೆ ಪೂರ್ತಿ ಕಪ್ಪಾಗಿರದೆ ಸ್ವಲ್ಪ ಕಂದು ಬಣ್ಣದವಳಾಗಿದ್ದಳು. ಬೇರೆ ಜನಾಂಗಕ್ಕೆ ಸೇರಿದವಳಿರಬೇಕು. ಅವಳ ಮುಖ ನೋಡಿದರೆ ಬಹಳ ಲಜ್ಜಾಶೀಲಳಾಗಿಯೂ ಮೃದು ಸ್ವಭಾವದವಳಾಗಿಯೂ ಕಂಡಳು. ಅವರೆಲ್ಲರ ಕೂದಲು ನೀಳವಾಗಿರದೆ ಚಿಕ್ಕಮಕ್ಕಳ ಕೂದಲಿನಂತೆ ಕಪ್ಪಾಗಿ ಗುಂಗುರು ಗುಂಗುರಾಗಿತ್ತು.

ಆ ಬಡ ಹೆಂಗಸರಿಗೆ ಏನು ಚಿತ್ರಹಿಂಸೆ ಕೊಡುವರೋ ಎಂದು ಶಂಕೆಯಿಂದ ನಾವು ನೋಡುತ್ತಿರುವಾಗ ಕಿರಾತರ ನಾಯಕನು ಅವರ ಬಳಿಗೆ ಬಂದು ದೊಡ್ಡವಳೊಬ್ಬಳು ಕಂಕುಳಲ್ಲಿ ಎತ್ತಿಕೊಂಡಿದ್ದ ಮಗುವನ್ನು ಹಿಡಿದೆಳೆದನು. ತಾಯಿ ಭಯದಿಂದ ಕಿರುಚುತ್ತ ಹಿಂದಕ್ಕೆ ಸರಿದಳು. ಆದರೆ ಕಿರಾತನು ವಿಕಟವಾಗಿ ನಗುತ್ತಾ ಮಗುವನ್ನು ಸೆಳೆದುಕೊಂಡು ಅದನ್ನು ಕೊಂದುಹಾಕುವೆನೆನ್ನುವಂತೆ ಅವಳನ್ನು ಬೆದರಿಸಿ ಏನೋ ಮಾತಾಡಿದನು. ತಾಯಿ ಅಳುತ್ತಾ ನೆಲಕ್ಕೆ ಒರಗಿದ್ದನ್ನೂ ಮಗುವಿನ ಅಳುವನ್ನೂ ಕೇಳಿ ಜಾಕಿಗೆ ಬಹಳ ಸಂಕಟವಾಗಿರಬೇಕು. ಅವನು ಕಟಕಟನೆ ಹಲ್ಲು ಕಡಿದದ್ದು ಕೇಳಿಸಿತು.

ಅಷ್ಟು ಹೊತ್ತಿಗೆ ಕಂದು ಬಣ್ಣದ ಹುಡುಗಿಯನ್ನು ನಾಯಕನ ಬಳಿಗೆ ಎಳೆತಂದರು. ನಾಯಕನು ಮಗುವನ್ನು ನೆಲದ ಮೇಲೆ ಬಿಟ್ಟು ಅವಳನ್ನು ಬಹಳ ಕೋಪದಿಂದ ಏನೇನೋ ಪ್ರಶ್ನೆಮಾಡಿದನು. ಅವನ ಮಾತುಗಳೇನೋ ಸ್ಪಷ್ಟವಾಗಿ ಕೇಳುತ್ತಿದ್ದರೂ ಭಾಷೆಯ ಪರಿಚಯವಿಲ್ಲದ್ದರಿಂದ ನಮಗೆ ಏನೂ ಅರ್ಥವಾಗಲಿಲ್ಲ. ಆಕೆ ಅವನ ಮಾತಿಗೆ ಯಾವ ಉತ್ತರ

ವನ್ನೂ ಕೊಡದೆ ಮೌನವಾಗಿದ್ದಳು. ನಾಯಕನು ಮತ್ತೆ ಮತ್ತೆ ಬೆಂಕಿಯ ಕಡೆಗೆ ಬೆರಳು ತೋರಿಸುತ್ತಿದ್ದುದನ್ನು ನೋಡಿದರೆ ಅವಳನ್ನು ಸುಟ್ಟುಬಿಡುವೆ ನೆಂದು ಹೆದರಿಸುತ್ತಿದ್ದಿರಬೇಕು.

ಜಾಕಿ ಪೀಟರನ ಅಂಗಿಯನ್ನು ಹಿಡಿದೆಳೆದು ಪಿಸುಮಾತಿನಲ್ಲಿ ಕೇಳಿದ "ಪೀಟರ್, ನಿನ್ನ ಚೂರಿ ಜೇಬಿನಲ್ಲಿದೆಯೇ?"

ಪೀಟರನ ಮುಖ ರಕ್ತವೇ ಇಲ್ಲದೆ ಶವದ ಮುಖದಂತೆ ಬಿಳಿಚಿ ಕೊಂಡಿತ್ತು. 'ಇದೆ' ಎಂದ.

"ಸರಿ, ಹಾಗಾದರೆ. ಕಿರಾತರು ಆ ಬಡ ಹೆಂಗಸರಿಗೆ ಹಿಂಸೆ ಕೊಡು ತ್ತಿರುವುದನ್ನು ನೋಡುತ್ತಾ ಸುಮ್ಮನೆ ಕುಳಿತಿರುವುದಕ್ಕಾಗುವುದಿಲ್ಲ. ನಾನು ಹೇಳುವುದನ್ನು ಇಬ್ಬರೂ ಗಮನಿಸಿ. ಒಂದು ಕ್ಷಣವೂ ತಡಮಾಡದೆ ಕೆಲಸ ಮಾಡಬೇಕು. ನೀವಿಬ್ಬರೂ ಚೂರಿಯನ್ನು ತೆಗೆದುಕೊಂಡು ಬೇಗ ಪೊದೆಯ ಬಳಿ ಬಿದ್ದಿರುವ ಬಂದಿಗಳ ಬಳಿಗೆ ಓಡಿಹೋಗಬೇಕು. ಅವರನ್ನು ಬಿಗಿದಿರುವ ಹಗ್ಗಗಳನ್ನು ನಿಮ್ಮ ಚೂರಿಯಿಂದ ತುಂಡು ಮಾಡಿ ಬೇಗ. ಇಲ್ಲದಿದ್ದರೆ ಅನಾಹುತವಾದೀತು. ಬಗ್ಗಿಕೊಂಡು ಓಡಬೇಕು. ಕಿರಾತರ ಕಣ್ಣಿಗೆ ಬಿದ್ದೀರಿ." ಜಾಕಿಯ ಮೈ ಬೆವತು ಮುಖದ ಮೇಲೆ ಹನಿಗಳು ಇಳಿಯುತ್ತಿದ್ದವು. ಕೋಪದಿಂದ ಕಣ್ಣು ಕೆಂಡವಾಗಿ ಮೈಯೆಲ್ಲಾ ಆದುರುತ್ತಿತ್ತು. ನಮಗೆ ಅಷ್ಟು ಮಾತು ಹೇಳಿ ಒಡನೆಯೇ ಬಲವಾದ ಲಾಠಿಯೊಂದನ್ನು ತೆಗೆದುಕೊಂಡು ಮೇಲಕ್ಕೆದ್ದನು.

ಕಿರಾತನೊಬ್ಬ ತನ್ನ ನಾಯಕನ ಅಪ್ಪಣೆಯಂತೆ ಲಾಠಿ ಹಿಡಿದು ಆ ಹುಡುಗಿಯ ಬಳಿಗೆ ನುಗ್ಗುತ್ತಿದ್ದನು. ಅದೇ ಕ್ಷಣದಲ್ಲಿ ಜಾಕಿ ಭಯಂಕರವಾಗಿ ಘರ್ಜನೆ ಮಾಡಿದನು. ಬಂಡೆ ಬಂಡೆಗಳಿಂದಲೂ ಅದು ಮರುದನಿ ಕೊಟ್ಟುಕೊಂಡು ಬಂದಿತು. ಕೂಗು ಹಾಕುತ್ತಲೇ ಓಡಿಹೋಗಿ ಬಂಡೆಯ ತುದಿಯಿಂದ ಸುಮಾರು ಹದಿನೈದು ಅಡಿ ಕೆಳಗಿದ್ದ ಕಿರಾತರ ಮಧ್ಯಕ್ಕೆ ಒಂದೇ ನೆಗೆತ ನೆಗೆದು ಬಂದು ನಿಂತನು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ದೊಣ್ಣೆ ಹಿಡಿದಿದ್ದ ಕಿರಾತನಿಗೆ ಬಲವಾದ ಪೆಟ್ಟು ಕೊಟ್ಟು ಅವನನ್ನು ನೆಲಕ್ಕೆ ಉರುಳಿಸಿದನು. ಅದೇ ಕ್ಷಣದಲ್ಲೇ ನಾವು ಬಂದಿಗಳ ಬಳಿಗೆ ಓಡಿಹೋಗಿ ಹಗ್ಗಗಳನ್ನು ಕತ್ತರಿಸಿದೆವು.

ತನ್ನ ಎದುರಾಳಿ ಬಿದ್ದ ಮೇಲೆ ಜಾಕಿ ಕೆಂಡವನ್ನು ಕಾರುತ್ತ ಹಳದಿಯ ಕೂದಲಿನ ನಾಯಕನ ಮೇಲೆ ನುಗ್ಗಿದನು. ಅವನು ನಾಯಕನ ತಲೆಗೆ ಬೀಸಿದ ಪೆಟ್ಟೇನಾದರೂ ತಗುಲಿದ್ದರೆ ಮತ್ತೊಂದು ಪೆಟ್ಟೇ ಆವಶ್ಯಕ ವಾಗುತ್ತಿರಲಿಲ್ಲ. ನಾಯಕನ ತಲೆ ಒಡೆದು ಚೂರಾಗಬೇಕಾಗಿತ್ತು. ಆದರೆ ಅವನದು ಬೆಕ್ಕಿನಂಥ ಚಟುವಟಿಕೆ; ಒಂದು ಕಡೆಗೆ ನೆಗೆದು ಆ ಏಟನ್ನು ತಪ್ಪಿಸಿಕೊಂಡು ಜಾಕಿಯ ತಲೆಗೆ ಗುರಿಯಿಟ್ಟು ತನ್ನ ಲಾಠಿ ಯನ್ನು ಬೀಸಿದನು. ಜಾಕಿಯೂ ಒಂದು ಪಕ್ಕಕ್ಕೆ ನೆಗೆದು ಏಟು ತಪ್ಪಿಸಿ ಕೊಂಡನು. ಮೊದಲು ಅವರ ಮಧ್ಯಕ್ಕೆ ಧುಮುಕಿದಾಗ ಜಾಕಿಗೆ ಕೋಪದ ಆವೇಶದಿಂದ ಪ್ರಜ್ಞೆಯೇ ಹೋದಂತಿತ್ತು. ನಾಯಕನೊಡನೇನಾದರೂ ಆ ಸ್ಥಿತಿಯಲ್ಲೇ ಯುದ್ಧ ಮಾಡಿದ್ದರೆ ಅವನು ಜಾಕಿಯನ್ನು ಸುಲಭವಾಗಿ ಹೊಡೆದುಹಾಕುತ್ತಿದ್ದನು. ಆದರೆ ಜಾಕಿ ಬೇಗ ಮನಸ್ಸನ್ನು ಹದಕ್ಕೆ ತಂದುಕೊಂಡು ಶತ್ರುವಿನ ಚಲನವಲನಗಳನ್ನು ಜಾಗರೂಕನಾಗಿ ನೋಡಿ ಕೊಂಡು ಯುದ್ಧ ಮಾಡಲಾರಂಭಿಸಿದನು. ಅವನ ಏಟುಗಳು ಮಳೆಯ ಹನಿಗಳು ಬಡಿದಂತೆ ವೇಗವಾಗಿಯೂ ಬಲವಾಗಿಯೂ ಬಿದ್ದವು. ಅವನ ಲಾಠಿ ಕಿರಾತನದಕ್ಕಿಂತಲೂ ಹಗುರವಾಗಿದ್ದುದರಿಂದ ಅವನಿಗೆ ಹೆಚ್ಚು ಆಯಾಸವೂ ಆಗಲಿಲ್ಲ; ಕಿರಾತನ ಏಟುಗಳನ್ನು ಸುಲಭವಾಗಿ ತಪ್ಪಿಸಿ ಕೊಳ್ಳುವುದೂ ಸಾಧ್ಯವಾಯಿತು. ಆದರೆ ಅವನ ಹಗುರವಾದ ಲಾಠಿ ಯಿಂದ ಬಿದ್ದ ಏಟುಗಳಲ್ಲಿ ಶಕ್ತಿ ಕಡಿಮೆ. ಕಿರಾತನಾದರೋ ಭಾರವಾದ ಲಾಠಿಯನ್ನು ಉಪಯೋಗಿಸಿದ್ದರಿಂದ ಬೇಗ ದಣಿಯುತ್ತಾ ಬಂದರೂ ಅವನ ಏಟುಗಳು ತಗಲಿದಾಗ ಬಹಳ ನೋವು ಮಾಡುತ್ತಿದ್ದವು.

ತಮ್ಮ ನಾಯಕನಿಗಿಂತ ಜಾಕಿ ಸಣ್ಣ ಆಳಾಗಿ ಕಂಡಿದ್ದರಿಂದ ಉಳಿದ ಕಿರಾತರೆಲ್ಲರೂ ನಾಯಕನ ಸಹಾಯಕ್ಕೆ ಬರದೆ ಇವರಿಬ್ಬರ ಯುದ್ಧವನ್ನು ನೋಡುತ್ತ ಸುಮ್ಮನೆ ನಿಂತಿದ್ದರು. ಐದು ನಿಮಿಷದೊಳಗೆ ಈ ಹೊಸ ಶತ್ರುವನ್ನು ನಾಯಕನು ತೀರಿಸಿಬಿಡುವನೆಂದು ಅವರ ಎಣಿಕೆ. ಇದರಿಂದಲೇ ಜಾಕಿಯ ಪ್ರಾಣ ಉಳಿದದ್ದು. ಅವರಿಗೇನಾದರೂ ತಮ್ಮ ನಾಯಕ ಸೋಲಬಹುದೆಂಬ ಸಂಶಯ ಬಂದಿದ್ದರೆ ಅರೆನಿಮಿಷದಲ್ಲಿ ಜಾಕಿಯ ಮೇಲೆ ಬಿದ್ದು ಅವನನ್ನು ಕೊಂದುಬಿಡುತ್ತಿದ್ದರು.

ಭಾರವಾದ ಆಯುಧವನ್ನು ಉಪಯೋಗಿಸಿದ್ದರಿಂದ ಎಷ್ಟು ಅನಾನುಕೂಲವೆಂದು ನಾಯಕನಿಗೆ ಸ್ಪಷ್ಟವಾಗುತ್ತ ಬಂತು. ಅವನ ಚಲನೆ ಕ್ರಮೇಣ ನಿಧಾನವಾಯಿತು. ಕಷ್ಟಪಟ್ಟು ಏದುಸಿರು ಎಳೆಯುವುದ ಕ್ಕಾರಂಭಿಸಿದನು. ಅವನ ಪಡೆಯವರು ಇದನ್ನು ಕಂಡು ಆಶ್ಚರ್ಯದಿಂದ ಅವನಿಗೆ ಸಹಾಯ ಮಾಡುವುದಕ್ಕೆ ಹತ್ತಿರ ಸರಿಯುತ್ತಿದ್ದರು. ಇದನ್ನು ನೋಡಿ ಜಾಕಿ ತನ್ನ ಹಣೆಯಬರಹ ತೀರಿತೆಂದು ದೃಢಮಾಡಿಕೊಂಡನು. ಆದರೂ ಧೈರ್ಯಗುಂದದೆ, ಶಕ್ತಿಯನ್ನೆಲ್ಲಾ ಬಿಟ್ಟು ಒಂದು ಪೆಟ್ಟುಹಾಕಿ ಶತ್ರುವನ್ನು ಕೊಲ್ಲುವುದು, ಇಲ್ಲದಿದ್ದರೆ ಸಾಯುವುದು ಎಂದುಕೊಂಡಿರ ಬೇಕು. ಕಿರಾತನು ಮತ್ತೆ ದೊಣ್ಣೆಯನ್ನು ಬೀಸುತ್ತಿದ್ದನು. ಪಕ್ಕಕ್ಕೆ ನೆಗೆದು ಸುಲಭವಾಗಿ ಅದನ್ನು ತಪ್ಪಿಸಿಕೊಳ್ಳಬಹುದಾಗಿತ್ತು. ಆದರೆ ಜಾಕಿ ಪಕ್ಕಕ್ಕೆ ಹಾರುವುದಕ್ಕೆ ಬದಲು ಏಟು ಬೀಳುವ ಮುನ್ನ ಹಠಾತ್ತಾಗಿ ನಾಯಕನ ಮೈಮೇಲೆಯೇ ನುಗ್ಗಿ ತನ್ನ ಲಾಠಿಯನ್ನು ಮಧ್ಯದಲ್ಲಿ ಹಿಡಿದು, ಇದ್ದ ಬಲವನ್ನೆಲ್ಲಾ ಉಪಯೋಗಿಸಿ ಶತ್ರುವಿನ ಹಣೆಯ ಮಧ್ಯಕ್ಕೆ ಸರಿ ಯಾಗಿ ಪೆಟ್ಟುಕೊಟ್ಟನು. ಏಟಿನ ರಭಸಕ್ಕೆ ಜಾಕಿಯೇ ಕೆಳಗೆ ಬಿದ್ದನು. ಅವನ ಮೈಮೇಲೆ ಕಿರಾತರ ನಾಯಕನೂ ಬಿದ್ದನು.

ಕೂಡಲೇ ಜಾಕಿಯನ್ನು ತೀರಿಸಿಬಿಡಬೇಕೆಂದು ಹತ್ತು ಹನ್ನೆರಡು ಜನ ಕಿರಾತರು ಲಾಠಿಗಳನ್ನೆತ್ತಿದ್ದರು. ಆದರೆ ಜಾಕಿಯ ಶರೀರವು ನಾಯಕನ ಶರೀರದಿಂದ ಮುಚ್ಚಿಹೋಗಿದ್ದುದರಿಂದ ಅವರು ಒಂದು ನಿಮಿಷ ಕೈತಡೆಯಬೇಕಾಯಿತು. ಆ ಒಂದು ನಿಮಿಷವೇ ಜಾಕಿಯ ಪ್ರಾಣವನ್ನು ಕಾಪಾಡಿತು. ಅಷ್ಟು ಹೊತ್ತಿಗೆ ನಾವು ಬಂಧನದಿಂದ ಬಿಡಿಸಿದ ಕಿರಾತರು ಲಾಠಿಹಿಡಿದು ತಮ್ಮ ಶತ್ರುಗಳ ಮೇಲೆ ಬಿದ್ದರು. ಕಿರಾತರು ತಮ್ಮ ನಾಯಕನನ್ನು ಎತ್ತಿ ಬೇರೆ ಕಡೆ ಮಲಗಿಸುವುದರೊಳಗಾಗಿ ಅವರಲ್ಲಿ ಏಳು ಜನ ಪೆಟ್ಟುತಿಂದು ಕೆಳಗೆ ಬಿದ್ದುಹೋದರು. ನಾನೂ ಪೀಟರನೂ ಇನ್ನಿಬ್ಬರನ್ನು ಉರುಳಿಸಿದೆವು. ಕಿರಾತರು ತಮ್ಮ ನಾಯಕನಿಗೂ ಜಾಕಿಗೂ ನಡೆಯುತ್ತಿದ್ದ ಯುದ್ಧವನ್ನು ನೋಡುವುದರಲ್ಲಿ ಮಗ್ನರಾಗಿದ್ದುದರಿಂದ ಅವರಿಗೆ ಬೇರೆ ಕಡೆ ಗಮನವೇ ಇರಲಿಲ್ಲ. ತಾವು ಕಟ್ಟಿಹಾಕಿದ್ದ ಶತ್ರುಗಳು ಮತ್ತೆ ತಮ್ಮ ಮೇಲೆ ಬೀಳಬಹುದೆಂದು ಅವರು ಕನಸಿನಲ್ಲಿಯೂ ಎಣಿಸಿರ

ಲಿಲ್ಲ. ಆದರಿಂದಲೇ ನಮ್ಮ ಕೆಲಸ ಅಷ್ಟು ಸುಲಭವಾಯಿತು. ಅಷ್ಟ ಜನ ಬಿದ್ದ ಮೇಲೂ ಅವರಲ್ಲಿ ನಮ್ಮ ಪಕ್ಷದವರಿಗಿಂತ ಮೂರು ಜನ ಹೆಚ್ಚಾಗಿದ್ದರು. ಆದರೆ ಇದ್ದಕ್ಕಿದ್ದಹಾಗೆ ಇಷ್ಟೊಂದು ಜನ ಅನಿರೀಕ್ಷಿತ ವಾಗಿ ಮೇಲೆ ಬಿದ್ದುದರಿಂದ ಅವರಿಗೆ ಕಕವುಕ ಹಿಡಿದಿತ್ತು. ನಾವಾದರೋ ಒಂಭತ್ತು ಜನರನ್ನು ಬಲಿ ತೆಗೆದುಕೊಂಡು ಉತ್ಸಾಹದಿಂದ ಉಕ್ಕುತ್ತಿದ್ದೆವು. ಅವರ ಮೇಲೆ ಅವರ ಕಡೆಯ ನಾಯಕ ಬಿದ್ದುಹೋದುದರಿಂದ ಅವರ ಧೈರ್ಯ ಕುಗ್ಗಿತ್ತು. ಅಷ್ಟರಲ್ಲೇ ಜಾಕಿ ಕಿರಾತ ನಾಯಕನನ್ನು ಒತ್ತರಿಸಿ ಎದ್ದು ಹುಚ್ಚು ಹಿಡಿದವನಂತೆ ಯುದ್ಧ ಮಾಡಿ, ಒಂದು ನಿಮಿಷದೊಳಗೆ ಮೂವರು ಶತ್ರುಗಳನ್ನು ನೆಲಸಮ ಮಾಡಿದನು. ಈ ಎರಡು ಪಕ್ಷ ದಲ್ಲಿಯೂ ಸಂಖ್ಯೆ ಒಂದೇ ಸಮನಾಯಿತು. ಜಾಕಿಗೆ ಬೆಂಬಲವಾಗಿ ನಾನೂ ಪೀಟರನೂ ನಮ್ಮ ಪಕ್ಷದ ಕಿರಾತರೂ ನಿಂತ ಮೇಲೆ ಕಾಲು ಘಂಟೆ ಯೊಳಗಾಗಿ ಶತ್ರುಗಳೆಲ್ಲರೂ ಪೆಟ್ಟು ತಿಂದು ಬಿದ್ದರು, ಇಲ್ಲವೆ ಕೈಸೆರೆ ಯಾದರು. ಅವರೆಲ್ಲರ ಕೈಕಾಲುಗಳನ್ನೂ ಕಟ್ಟಿಹಾಕಿ ಸಾಲಾಗಿ ಅಲ್ಲಿಯೇ ಉರುಳಿಸಿದೆವು.

ಯುದ್ಧ ಮುಗಿದಮೇಲೆ ನಮ್ಮ ಕಡೆಯ ಕಿರಾತರೆಲ್ಲರೂ ಆಶ್ಚರ್ಯ ದಿಂದ ನಮ್ಮ ಸುತ್ತ ಬಂದು ನಿಂತು ಪ್ರಶ್ನೆಗಳ ಸುರಿಮಳೆ ಕರೆದರು. ಅವರ ಭಾಷೆ ನಮಗೆ ಏನೇನೂ ಗೊತ್ತಾಗಲಿಲ್ಲವಾದ್ದರಿಂದ ನಾವು ಉತ್ತರ ಕೊಡುವಂತಿರಲಿಲ್ಲ. ನಾವು ಉತ್ತರ ಕೊಟ್ಟಿದ್ದರೂ ಅವರಿಗೆ ಅರ್ಥವಾಗು ತ್ತಿರಲಿಲ್ಲ. ನಾವು ಅವರ ಸ್ನೇಹಿತರೆಂದು ಭರವಸೆ ಕೊಡಬೇಕಾಯಿತು. ಆ ವೇಳೆಗೆ ಮೊದಲನೆಯ ದೋಣಿಯ ನಾಯಕನು ಸ್ವಲ್ಪ ವಿಶ್ರಾಂತಿ ಪಡೆದು ಸುಧಾರಿಸಿಕೊಂಡು ನಿಂತಿದ್ದನು. ಜಾಕಿ ಅವನ ಬಳಿಗೆ ಹೋಗಿ ಸ್ನೇಹ ಭಾವದಿಂದ ಅವನ ಕೈಹಿಡಿದು ಚೆನ್ನಾಗಿ ಕುಲುಕಿದನು. ಜಾಕಿಯ ನಗು ಮುಖವನ್ನೂ ಅವನ ನಡವಳಿಕೆಯನ್ನೂ ನೋಡಿ ಅವನ ಉದ್ದೇಶ ಅವರೆಲ್ಲರಿಗೂ ಅರ್ಥವಾಗಿರಬೇಕು. ಕೂಡಲೇ ಅವರೆಲ್ಲ ಹತ್ತಿರ ಬಂದು ನಮ್ಮೆಲ್ಲರ ಕೈಯನ್ನೂ ಕುಲುಕಿದರು. ಇದು ನಡೆಯುತ್ತಿದ್ದಾಗ ಶತ್ರು ಪಕದ ನಾಯಕನ ಕೋಪಕ್ಕೆ ತುತ್ತಾಗಿದ್ದ ಕಂದು ಬಣ್ಣದ ಹುಡುಗಿ ಹತ್ತಿರದಲ್ಲೇ ಇದ್ದ ಬಂಡೆಯೊಂದರ ಮೇಲೆ ಕುಳಿತು ನಡೆದದ್ದೆಲ್ಲವನ್ನೂ

ನೋಡುತ್ತಿದ್ದಳು. ತನ್ನ ಹಿಂದೆ ಬರಬೇಕೆಂದು ಜಾಕಿ ಅವಳಿಗೆ ಸನ್ನೆ ಮಾಡಿ, ನಾಯಕನ ಕೈಹಿಡಿದುಕೊಂಡು ನಮ್ಮ ಗುಡಿಸಲಿನ ಕಡೆ ಹೊರಡುವುದರಲ್ಲಿದ್ದನು. ಅಷ್ಟರಲ್ಲೇ ನೆಲದ ಮೇಲೆ ಮಲಗಿದ್ದ ಮಗುವಿನ ಮೇಲೆ ಕಣ್ಣು ಬಿತ್ತು. ನಾಯಕನ ಕೈ ಬಿಟ್ಟು ಮಗುವನ್ನು ಎತ್ತಿಕೊಂಡು ನೋಡಿದನು. ಯುದ್ಧ ನಡೆಯುತ್ತಿದ್ದಾಗ ದೇವರ ದಯದಿಂದ ಅದು ಯಾರ ಕಾಲಿಗೂ ಸಿಕ್ಕಿರಲಿಲ್ಲ; ಸುಖವಾಗಿತ್ತು. ತನ್ನ ಮಗುವಿನ ಆಸೆ ತೀರಿತೆಂದು ಮೂರ್ಛೆಹೋಗಿದ್ದ ಆ ಮಗುವಿನ ತಾಯಿಯು ಕಣ್ಣು ತೆರೆದು ದಿಗ್ಭ್ರಮೆಹಿಡಿದವಳಂತೆ ಸುತ್ತಲೂ ನೋಡುತ್ತಿದ್ದಳು.

"ಎಲ್ಲಿ, ದಾರಿ ಬಿಡಿ. ನಾನು ಆಕೆಯನ್ನು ಸುಧಾರಿಸುತ್ತೇನೆ" ಎಂದು ಜಾಕಿ ನಮ್ಮೆಲ್ಲರನ್ನೂ ಒಂದು ಕಡೆಗೆ ತಳ್ಳಿ ಅವಳ ಬಳಿಗೆ ಹೋಗಿ ಸಮಾಧಾನಪಡಿಸಲು ಯತ್ನಿಸಿದನು. ಮಗುವನ್ನು ಆಕೆಯ ಮಡಲಿನಲ್ಲಿಟ್ಟು ಅದರ ಕೆನ್ನೆಯನ್ನು ತಾಯಿಯ ಕೆನ್ನೆಗೆ ಸೋಕಿಸಿದ ಕೂಡಲೇ ಆಕೆಗೆ ಚೈತನ್ಯ ಬಂತು. ಆನಂದದಿಂದ ಕೂಗಿಕೊಳ್ಳುತ್ತಾ ಮಗುವನ್ನು ಪದೇ ಪದೇ ಎದೆಗೆ ಅಪ್ಪಿಕೊಂಡಳು. ಶತ್ರುಗಳೆಲ್ಲಾ ನಾಶವಾಗಿದ್ದರೆನ್ನುವುದು ಅವಳ ಮನಸ್ಸಿಗೆ ಇನ್ನೂ ನಾಟರಲಿಲ್ಲವೇನೊ. ಒಂದು ನಿಮಿಷವಾದ ಮೇಲೆ ಏನೋ ನೆನಪುಮಾಡಿಕೊಂಡವಳಂತೆ ತಟ್ಟನೆ ಎದ್ದು ಮಗುವಿನೊಡನೆ ಕಾಡಿನ ಕಡೆಗೆ ಓಡುವ ಯತ್ನಮಾಡಿದಳು. ಆದರೆ ಜಾಕಿ "ಇನ್ನೇನು ಭಯವಿಲ್ಲ. ನಾವೆಲ್ಲರೂ ಸ್ನೇಹಿತರು" ಎನ್ನುವಂತೆ ಸನ್ನೆಮಾಡಿ ಆಕೆಗೆ ಧೈರ್ಯಕೊಟ್ಟನು.

"ರೋವರ್, ಪೀಟರ್, ನೀವಿಬ್ಬರೂ ಇವರನ್ನೆಲ್ಲಾ ಕರೆದುಕೊಂಡು ಬನ್ನಿ. ಗುಡಿಸಲ ಬಳಿಗೆ ಹೋಗೋಣ. ಈ ಬಡಪಾಯಿಗಳು ಬಹಳ ಹಸಿದಿರಬೇಕು. ಅವರಿಗೆ ಏನಾದರೂ ಆಹಾರ ಕೊಡೋಣ" ಎಂದು ಹೇಳಿ ನಾಯಕನ ಕೈ ಹಿಡಿದುಕೊಂಡು ಹೊರಟನು.

ಹತ್ತು ನಿಮಿಷಗಳಲ್ಲೇ ನಮ್ಮ ಗುಡಿಸಲನ್ನು ತಲಪಿ ಕಿರಾತರೆಲ್ಲರನ್ನೂ ಅದರ ಮುಂದೆ ಅರ್ಧಚಂದ್ರಾಕಾರವಾಗಿ ಕೂರಿಸಿ ಅವರ ಮುಂದೆ ಗೆಣಸು, ಟಾರೊ, ತೆಂಗಿನಕಾಯಿ, ಮೀನು, ಹಣ್ಣುಗಳು ಮುಂತಾದ್ದನ್ನು ತಂದಿಟ್ಟೆವು. ಅವರಿಗೆ ಈ ಬಗೆಯ ಆಹಾರ ಚೆನ್ನಾಗಿ ಅಭ್ಯಾಸವಾಗಿದ್ದಿರ

ಬೇಕು. ಎಲ್ಲರೂ ಬಹಳ ಸಂತೋಷದಿಂದ ಊಟಮಾಡಿ ಹಸನ್ಮುಖಿಗಳಾಗಿ ಕುಳಿತರು.

ಎಲ್ಲರಿಗೂ ಬಹಳ ಆಯಾಸವಾಗಿದ್ದುದರಿಂದ ಸೂರ್ಯ ಮುಳುಗುತ್ತಿದ್ದ ಹಾಗೆಯೇ ಮಲಗಿದೆವು. ನನಗಂತೂ ಮಲಗಿದ ಕೂಡಲೇ ನಿದ್ದೆ ಬಂತು. ನಮಗಿಂತಲೂ ಹೆಚ್ಚು ದಣಿದಿದ್ದ ಕಿರಾತರೂ ಬೇಗ ನಿದ್ದೆ ಮಾಡಿರಬೇಕು. ಎಷ್ಟು ಹೊತ್ತು ಮಲಗಿದ್ದೆವೋ ತಿಳಿಯದು. ನನಗೆ ಎಚ್ಚರವಾದಾಗ ಸೂರ್ಯನು ಆಗಲೇ ಅಂತರಿಕ್ಷದಲ್ಲಿ ಸ್ವಲ್ಪದೂರ ಪ್ರಯಾಣ ಮಾಡಿದ್ದನು. ನಾನು ಜಾಕಿಯನ್ನು ಎಬ್ಬಿಸಿದಾಗ ಅವನು ಸ್ವಲ್ಪ ಬೆದರಿದವನಂತೆ ನೆಗೆದನು. ಒಂದು ಕ್ಷಣವಾದ ಮೇಲೆ ಹಿಂದಿನ ದಿನದ ಘಟನೆಗಳನ್ನೆಲ್ಲಾ ಜ್ಞಾಪಿಸಿಕೊಂಡು ಪೀಟರನನ್ನೂ ಎಬ್ಬಿಸಿದನು.

"ಏಳು, ಏಳು, ಬೆಳಗಿನ ತಿಂಡಿಯ ಯೋಚನೆಯೂ ಬೇಡವೇ? ಲೋ ಪೀಟರ್, ಸೋಮಾರಿ, ಎಷ್ಟು ಹೊತ್ತೋ ನೈಗಳ್ಳನಾಗಿ ಬಿದ್ದಿರುವುದು!"

ಪೀಟರ್ ಕಣ್ಣು ಹೊಸಕಿಕೊಂಡು ಎದ್ದು ಮಂಕು ಮಂಕಾಗಿ ಸುತ್ತ ನೋಡಿದನು.

"ಎಲಾ ಎಲಾ, ಆಗಲೇ ನಾಳೆ ಬಂದುಬಿಟ್ಟಿದೆ! ನಾನು ಇನ್ನೂ ಇವೊತ್ತು ಅಂದುಕೊಂಡಿದ್ದೆ!" ಎನ್ನುವ ಹೊತ್ತಿಗೆ ಗುಡಿಸಲ ಮುಂದಿನ ಬಂಡೆಯ ಮೇಲೆ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು ಹಣ್ಣು ತಿನ್ನುತ್ತಿದ್ದ ಕಿರಾತಿನಿ ಕಣ್ಣಿಗೆ ಬಿದ್ದಳು. "ನೀನೆಲ್ಲಿಂದ ವಕ್ಕರಿಸಿದೆ ಮಾರಾಯತಿ? ಯಾರು ಔತನ ಕೊಟ್ಟಿದ್ದರಮ್ಮ ನಿನಗೆ? ಪರವಾಯಿಲ್ಲ! ಸ್ವಂತ ಮನೇಲಿದ್ದ ಹಾಗೆ ನಿಸ್ಸಂಕೋಚವಾಗಿ ಫಲಾಹಾರಕ್ಕೆ ಕೂತುಬಿಟ್ಟಿದ್ದೀ" ಎಂದುಕೊಂಡು ಮೇಲಕ್ಕೆದ್ದನು.

ಉಳಿದ ಕಿರಾತರೂ ಅಷ್ಟುಹೊತ್ತಿಗೆ ಎದ್ದರು. ಎಲ್ಲರಿಗೂ ತಿಂಡಿಯಾದ ಮೇಲೆ ನಾವು ಮತ್ತೆ ಅವರೊಡನೆ ಸನ್ನೆಯಿಂದ ಮಾತಾಡುವ ಪ್ರಯತ್ನಮಾಡಿದೆವು. ಆದರೆ ಅದರಿಂದ ಹೆಚ್ಚು ಪ್ರಯೋಜನವಾಗಲಿಲ್ಲ. ಜಾಕಿ ಸ್ವಲ್ಪ ಯೋಚನೆಮಾಡಿ ಒಂದು ಉಪಾಯ ಕಂಡುಹಿಡಿದನು. ನಾಯಕನೆದುರಿಗೆ ನಿಂತು ತನ್ನ ಎದೆಯ ಮೇಲೆ ಕೈಯಿಟ್ಟುಕೊಂಡು ಸ್ಪಷ್ಟ

ವಾಗಿ ಮೂರು ಸಾರಿ "ಜಾಕಿ, ಜಾಕಿ, ಜಾಕಿ," ಎಂದು ಹೇಳಿ, ಆಮೇಲೆ ನನ್ನ ಕಡೆಗೂ ಪೀಟರನ ಕಡೆಗೂ ಕೈ ತೋರಿಸಿ ನಮ್ಮ ಹೆಸರುಗಳನ್ನೂ ಹೇಳಿ ಪುನಃ ತನ್ನ ಕಡೆಗೇ ತೋರಿಸಿಕೊಂಡು 'ಜಾಕಿ' ಎಂದನು. ಅನಂತರ ನಾಯಕನ ಎದೆಯ ಮೇಲೆ ಕೈಯಿಟ್ಟು "ನಿನ್ನ ಹೆಸರೇನು?" ಎನ್ನುವಂತೆ ಪ್ರಶ್ನೆಯ ಸನ್ನೆಮಾಡಿದನು. ಕಿರಾತನಿಗೆ ಜಾಕಿಯ ಉದ್ದೇಶ ಅರ್ಥವಾಯಿತು. "ಟರಾರ, ಟರಾರ," ಎಂದು ಎರಡು ಸಲ ತನ್ನ ಹೆಸರು ಹೇಳಿದನು. ಜಾಕಿ ತಾನೂ ಅವನ ಹೆಸರನ್ನು 'ಟರಾರ' ಎಂದು ಉಚ್ಚರಿಸಿದಾಗ ಅವನು ಬಹಳ ಸಂತೋಷದಿಂದ ತಲೆದೂಗಿ "ಚಕ್" ಎಂದನು. ಅದನ್ನು ಕೇಳಿ ಪೀಟರ್ ಗಟ್ಟಿಯಾಗಿ ನಕ್ಕುಬಿಟ್ಟನು. ಆದರೆ ಜಾಕಿ ಅವನ ಕಡೆ ತಿರುಗಿ "ಪೀಟರ್, ನನಗೆ ಈಗ ಬಂದಿರುವುದಕ್ಕಿಂತ ಹೆಚ್ಚು ಕೋಪ ತೋರಿಸಬೇಕು. ನಿನಗೆ ಸ್ವಲ್ಪವೂ ಬುದ್ಧಿಯಿಲ್ಲ. ಅವನನ್ನು ಹಾಸ್ಯಮಾಡಿ ನಕ್ಕರೆ ಅವನು ಏನು ತಿಳಿದುಕೊಂಡಾನು! ಸುಮ್ಮನಿರು" ಎಂದು ಗದರಿಸಬೇಕಾಯಿತು. ಅನಂತರ ಜಾಕಿ ನಮ್ಮ ಗುಡಿಸಲಿನ ಬಾಗಿಲ ಹತ್ತಿರ ಕುಳಿತಿದ್ದ ಎಣ್ಣೆಗೆಂಪಿನ ಹುಡುಗಿಯ ಕಡೆ ಬೆರಳು ತೋರಿಸಿ ಮತ್ತೆ ಪ್ರಶ್ನಾರ್ಥಕವಾದ ಸನ್ನೆಮಾಡಿದನು. ನಾಯಕ "ಆವತಿ" ಎಂದನು.

ಜಾಕಿ ತನ್ನ ಕೊಡಲಿಯನ್ನು ತೆಗೆದುಕೊಂಡು ಕಿರಾತರಿಗೆಲ್ಲಾ ತನ್ನನ್ನು ಹಿಂಬಾಲಿಸಬೇಕೆಂದು ಸನ್ನೆಮಾಡಿ, ಹಿಂದಿನ ಯುದ್ಧ ನಡೆದ ಸ್ಥಳಕ್ಕೆ ಹೋದನು. ನಮ್ಮ ಅತಿಥಿಗಳನ್ನು ಆದರಿಸುವ ಸಡಗರದಲ್ಲಿ ನಾವು ಕೈಕಾಲು ಕಟ್ಟಿಹಾಕಿದ್ದ ಬಂದಿಗಳ ವಿಷಯವೇ ಮರೆತುಹೋಗಿತ್ತು. ಅವರೂ ರಾತ್ರಿ ಚೆನ್ನಾಗಿ ನಿದ್ದೆಮಾಡಿದ್ದಿರಬೇಕು. ಬಹಳ ಹಸಿದಿದ್ದರೆಂದು ಕಾಣುತ್ತದೆ; ನಾವು ಕೊಟ್ಟ ತಿಂಡಿಯನ್ನು ಆತುರದಿಂದ ಗವಗವನೆ ತಿಂದರು.

ಆಮೇಲೆ ಜಾಕಿ ಮರಳಿನಲ್ಲಿ ಗುಂಡಿ ತೋಡುವುದಕ್ಕೆ ಮೊದಲುಮಾಡಿದನು. ಒಂದೆರಡು ನಿಮಿಷ ಕೆಲಸಮಾಡಿದನಂತರ ಕಿರಾತರ ಕಡೆ ತಿರುಗಿ ಮೊದಲು ಯುದ್ಧದಲ್ಲಿ ಸತ್ತುಬಿದ್ದವರ ಹೆಣಗಳನ್ನೂ ಅನಂತರ ಗುಂಡಿಯನ್ನೂ ತೋರಿಸಿದನು. ಕಿರಾತರು ಅವನ ಅಭಿಪ್ರಾಯವನ್ನು ಕೂಡಲೇ

ಅರ್ಥಮಾಡಿಕೊಂಡು ಅರ್ಧಗಂಟೆಯೊಳಗಾಗಿ ಹೆಣಗಳೆಲ್ಲಾ ಹಿಡಿಸುವಂತೆ ದೊಡ್ಡದಾಗಿ ಹಳ್ಳ ತೆಗೆದರು. ಶತ್ರುಗಳನ್ನು ಹೂಳುವಾಗ ಅವರು ಯಾವ ವಿಧವಾದ ಮರ್ಯಾದೆಯನ್ನೂ ತೋರಿಸದೆ ಬೇಕಾಬಿಟ್ಟಿಯಾಗಿ ಹಳ್ಳದೊಳಕ್ಕೆ ಎಸೆದರು. ನಾವು ಎದುರಿಗೆ ನಿಂತು ಆ ಕೆಲಸ ಮಾಡಿಸದಿದ್ದರೆ ಅವರು ಆ ವಿಷಯದಲ್ಲಿ ತೊಂದರೆಯನ್ನೇ ತೆಗೆದುಕೊಳ್ಳುತ್ತಿರಲಿಲ್ಲ. ಕೊಳೆತು ಹದ್ದುಗಳ ಪಾಲಾಗಲೆಂದು ಶವಗಳನ್ನು ಹಾಗೆ ಬಿಟ್ಟುಬಿಡುತ್ತಿದ್ದರು. ಹಳದಿಯ ಕೂದಲಿನ ನಾಯಕನನ್ನೇ ಕೊನೆಯಲ್ಲಿ ಹೂಳಿದರು. ಆ ಬಡಪಾಯಿ ಜಾಕಿಯ ಏಟಿನಿಂದ ಜ್ಞಾನ ತಪ್ಪಿ ಬಿದ್ದಿದ್ದನೇ ಹೊರತು ಸತ್ತಿರಲಿಲ್ಲ. ಆದರೆ ಯುದ್ಧ ನಡೆಯುತ್ತಿದ್ದಾಗ ಅವನು ಮೇಲಕ್ಕೇಳುವುದನ್ನು ನೋಡಿ ಶತ್ರುಪಕ್ಷದವನೊಬ್ಬನು ಮತ್ತೊಂದು ಏಟುಕೊಟ್ಟು ಅವನನ್ನು ಕೊಂದುಹಾಕಿದನು.

ಕಿರಾತರ ದೋಣಿ ಬಲವಾಗಿ ದಡಕ್ಕೆ ತಗುಲಿದ್ದರಿಂದ ಸ್ವಲ್ಪ ಕೆಟ್ಟು ಹೋಗಿತ್ತು. ಅದನ್ನು ಸರಿಮಾಡುವುದಕ್ಕೆ ಮೂರು ನಾಲ್ಕು ದಿನ ಹಿಡಿಯಿತು. ಅದು ಸಿದ್ಧವಾದಮೇಲೆ ನಾವೂ ಸಹಾಯಮಾಡಿ ಬಂದಿಗಳನ್ನು ದೋಣಿಗೆ ಸಾಗಿಸಿದ್ದಲ್ಲದೆ ಕಿರಾತರಿಗೆ ಒಂದೆರಡು ದಿನಕ್ಕೆ ಬೇಕಾಗುವಷ್ಟು ಆಹಾರ ಪದಾರ್ಥಗಳನ್ನೂ ಶೇಖರಿಸಿ ಅದನ್ನು ದೋಣಿಯಲ್ಲಿಟ್ಟೆವು. ಹೊರಡುವ ದಿನ ಟರಾರನು ನಮಗೆ ಏನೇನೋ ಸನ್ನೆಮಾಡಿ ಮಾತಾಡಿದನು. ನಾವು ಅವರ ಅರ್ಥವನ್ನು ಗ್ರಹಿಸಿಕೊಳ್ಳುವುದಕ್ಕೆ ಬಹಳ ಹೊತ್ತು ಹಿಡಿಯಿತು. ನಾವೂ ಅವನ ಜೊತೆಯಲ್ಲೇ ಪ್ರಯಾಣಮಾಡಿ ಅವನ ದ್ವೀಪದಲ್ಲಿ ವಾಸಮಾಡಲೆಂದೇ ಅವನ ಮಾತಿನ ಸಾರಾಂಶ. ಆದರೆ ನಮಗೆ ನಮ್ಮ ದ್ವೀಪವನ್ನು ಬಿಟ್ಟು ಹೋಗುವ ಉದ್ದೇಶವಿರಲಿಲ್ಲವಾದ್ದರಿಂದ ತಲೆ ಅಲ್ಲಾಡಿಸಿಬಿಟ್ಟೆವು. ನಮ್ಮ ಗುರುತಿಗಾಗಿ ಒಂದು ಮರದ ಚೂರಿನ ಮೇಲೆ ನಮ್ಮ ಹೆಸರುಗಳನ್ನು ಕೆತ್ತಿಕೊಟ್ಟೆವು.

ನೀರಿನ ಬಳಿಗೆ ಬಂದ ಮೇಲೆ ನಾವು ಅವರೆಲ್ಲರೊಡನೆಯೂ ಕೈಕುಲುಕಿ ಸಾಗಕಳಿಸಿದೆವು. ಆದರೆ ಹೊರಡುವುದಕ್ಕೆ ಮುಂಚೆ ಟರಾರನು ಜಾಕಿಯ ಹತ್ತಿರ ಬಂದು ಅವನ ಮೂಗಿನ ಮೇಲೆ ತನ್ನ ಮೂಗನ್ನು ಉಜ್ಜಿ, ಅನಂತರ ನಮಗೂ ಹಾಗೆ ಮಾಡಿದನು. ನಮ್ಮಲ್ಲಿ ಕೈಕುಲುಕುವ ಪದ್ಧತಿ

ಯಿರುವ ಹಾಗೆ ಅವರಲ್ಲಿ ಮೂಗು ಉಜ್ಜುವ ಪದ್ಧತಿಯಿರಬೇಕು. ಅದಕ್ಕೆ ಮರ್ಯಾದೆ ಸಲ್ಲಿಸಬೇಕೆಂದೂ ನಾವು ಅವರೆಲ್ಲರೊಡನೆಯೂ ಮೂಗು ಉಜ್ಜಿದ್ದಾಯಿತು. ಎಲ್ಲರೂ ದೋಣಿಯಲ್ಲಿ ಕುಳಿತು ಹೊರಟರು. ನಾವು ದಡದಲ್ಲಿಯೇ ಕುಳಿತು ಒಂದು ಘಂಟೆಯ ಕಾಲ ದೋಣಿಯನ್ನೇ ನೋಡುತ್ತಿದ್ದೆವು. ಅಷ್ಟು ಹೊತ್ತಿಗೆ ಅದು ಕಣ್ಮರೆಯಾಯಿತು. ನಮ್ಮಂತೆಯೇ ಮನುಷ್ಯರಾದವರ ಸಹವಾಸ ದೊರಕಿದ್ದು ಮತ್ತೆ ಕಳೆದುಹೋಯಿತಲ್ಲ ಎಂದು ನಮ್ಮ ಮನಸ್ಸಿನಲ್ಲಿ ಆ ದಿನವೆಲ್ಲಾ ವ್ಯಸನ.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ಅನಿರೀಕ್ಷಿತ—ಊಹಿಸದೆ ಬರುವ. ದಿಗಂತ—ದೂರದ ಸಮುದ್ರದಲ್ಲಿ ಸಮುದ್ರ ಆಕಾಶ ಸೇರಿದಂತೆ ಕಾಣುವ ಸ್ಥಳ. ತಳಮಳಿಸು—ಕಲಕು, ಕದಡಿಹೋಗು. ಮಲ್ಲಯುದ್ಧ—ಜಟ್ಟಿ ಕಾಳಗ. ಎದುರಾಳಿ—ಶತ್ರು. ಪಲಾಯನ ಮಾಡು—ಓಡಿಹೋಗು. ಜೀವಸಹಿತ—ಬದುಕಿರುವಂತೆ. ಕಿರಾತರು—ಕಾಡು ಜನರು. ಲಜ್ಜಾಶೀಲಳು—ನಾಚಿಕೆ ಸ್ವಭಾವದವಳು. ಆವೇಶ—ಜ್ಞಾನವೇ ಇಲ್ಲದಷ್ಟು ಕೋಪದ ಉದ್ರೇಕ. ದಣಿ—ಆಯಾಸಗೊಳ್ಳು. ಏದುಸಿರು—ಮೇಲುಸಿರು. ರಭಸ—ವೇಗ. ಎಣಿಸು—ಊಹಿಸು, ಆಲೋಚಿಸು. ದಿಗ್ಭ್ರಮೆ—ಏನು ಮಾಡಲೂ ತಿಳಿಯದ ಭ್ರಾಂತಿ. ಹಸನ್ಮುಖಿಗಳು—ನಗುಮುಖದವರು. ಮೈಗಳ್ಳ—ಸೋಮಾರಿ.

**೨. ಈ ಮಾತುಗಳ ಸಂದರ್ಭಗಳನ್ನು ತಿಳಿಸಿ ಅಭಿಪ್ರಾಯವನ್ನು ಬರೆಯಿರಿ:—**

೧. ಅವರು ಯಾರನ್ನು ಕಂಡರೂ ದಯೆದಾಕ್ಷಿಣ್ಯಗಳಿಲ್ಲದೆ ನಡೆದುಕೊಳ್ಳುತ್ತಾರೆ.

೨. ಇನ್ನೇನು ನಾವು ಗೆದ್ದೆವು.

೩. ಸದ್ಯಕ್ಕೆ ಆ ಬಡಪ್ರಾಣಿಯನ್ನು ಜೀವಸಹಿತ ಸುಡಲಿಲ್ಲವಲ್ಲ.

೪. ಇದರಿಂದಲೇ ಜಾಕಿಯ ಪ್ರಾಣ ಉಳಿದದ್ದು.

೫. ಅವನನ್ನು ಹಾಸ್ಯಮಾಡಿ ನಕ್ಕರೆ ಅವನು ಏನು ತಿಳಿದುಕೊಂಡಾನು.

೬. ನೀನೆಲ್ಲಿಂದ ವಕ್ರಿಸಿದೆ ಮಾರಾಯಣಿ?

೩. ಈ ಪ್ರಶ್ನೆಗಳ ಉತ್ತರವನ್ನು ಬರೆಯಿರಿ:—

೧. ಕಿರಾತರ ಎರಡು ಪಡೆಗಳಿಗೆ ನಡೆದ ಯುದ್ಧವನ್ನು ವಿವರಿಸಿ.

೨. ಕಿರಾತರು ನಡೆಸಿದ ದೌರ್ಜನ್ಯ ಕೃತ್ಯಗಳನ್ನು ವಿವರಿಸಿ.

೩. ಜಾಕಿ, ಪೀಟರ್, ರೋವರ್—ಈ ಮೂವರೂ ಕಿರಾತರಿಗೆ ಹೇಗೆ ಸಹಾಯ ಮಾಡಿದರು?

೪. ಜಾಕಿ ಮತ್ತು ಕಿರಾತರ ಯುದ್ಧ ನಡೆದುದು ಏಕೆ? ಅದರ ಫಲಿತಾಂಶವೇನು?

೫. ಜಾಕಿ ಮೃತ್ಯುವಿನಿಂದ ಪಾರಾದುದು ಹೇಗೆ?

೬. ಟಿರಾರನು ಯಾರು? ಅವನಿಗೂ ಜಾಕಿಗೂ ಸ್ನೇಹವಾದುದು ಹೇಗೆ?

೭. ಜಾಕಿಯ ಗುಣ, ಶೀಲ, ಧೈರ್ಯ, ಸಾಹಸಗಳನ್ನು ವಿವರಿಸಿ.

೮. ಕಿರಾತರ ನಡೆ, ನುಡಿ, ಗುಣ, ಸ್ವಭಾವಗಳನ್ನು ಚಿತ್ರಿಸಿ.

೪. ವ್ಯಾಕರಣ:—

೧. ಗುಣವಾಚಕ ಎಂದರೇನು?

೨. ಕ್ರಿಯಾಪದ ಎಂದರೇನು?

೩. ಕಾಲಗಳು ಎಷ್ಟು? ಪುರುಷಗಳು ಎಷ್ಟು?

೪. ಈ ಕ್ರಿಯಾಪದಗಳ ಧಾತುವನ್ನು ಕಂಡುಹಿಡಿದು ಮೂರು ಕಾಲಗಳಲ್ಲಿಯೂ ಪ್ರಯೋಗಗಳನ್ನು ನಡೆಸಿ—

ಇದ್ದನು, ಬಂದರು, ನಿಂತರು, ಕಾಣುತ್ತದೆ, ಹೋಯಿತು.

# ೪. ವೀರಮಾತೆ ಜೀಜಾಬಾಯಿ

ಪಂಡಿತ ಎಚ್. ಎಂ. ರಾಮಾರಾಧ್ಯರು ಗೌ. ಹೈಸ್ಕೂಲಿನಲ್ಲಿ ಕನ್ನಡ ಭಾಷೆಯನ್ನು ಮಕ್ಕಳಿಗೆ ಬೋಧಿಸುತ್ತ ಕನ್ನಡ ತಾಯಿಯ ಸೇವೆಯನ್ನು ಮಾಡುತ್ತಿರುವ ಕನ್ನಡ ಪಂಡಿತರು. 'ವಾಗೀಶ' ಇವರ ಕಾವ್ಯನಾಮ. ಇವರು 'ಆದರ್ಶ ಮಹಿಳಾ ರತ್ನಗಳು' 'ಧರ್ಮಾಶ್ವಮೇಧ' 'ಗದ್ಯಮಣಿ ಮುಕುರ' 'ವೀರಭೂಮಿ' ಇತ್ಯಾದಿ ಹಲವು ಉತ್ತಮ ಪುಸ್ತಕಗಳನ್ನು ಬರೆದಿದ್ದಾರೆ. 'ಸುಧೆ' ಎಂಬ ಇವರ ಕೈಹೊತ್ತಗೆ ಸಂಸ್ಕೃತದ ಹಲವು ಉತ್ತಮ ಸುಭಾಷಿತಗಳ ಕನ್ನಡ ಪದ್ಯಾನುವಾದ ರೂಪವಾಗಿದೆ. ಕಾವ್ಯಾಮೃತವನ್ನು ಸವಿಯಲು ಆಶಿಸುವವರಿಗೆ ಈ 'ಸುಧೆ' ಆ ದಾಹವನ್ನು ಅಡಗಿಸಬಲ್ಲುದು. ಪ್ರಕೃತ, 'ವೀರಮಾತೆ ಜೀಜಾಬಾಯಿ' ಎಂಬ ಈ ಪಾಠವನ್ನು ಶ್ರೀಯುತ ರಾಮಾರಾಧ್ಯರ 'ಆದರ್ಶ ಮಹಿಳಾ ರತ್ನಗಳು' ಎಂಬ ಪುಸ್ತಕದಿಂದ ಆರಿಸಿದೆ.

ಮಕ್ಕಳ ಜೀವನವನ್ನು ರೂಪುಗೊಳಿಸುವುದರಲ್ಲಿ ತಾಯಿ, ತಂದೆ, ಗುರು— ಈ ಮೂವರೂ ಹೊಣೆಗಾರರು. ಇದರಲ್ಲಿ ತಾಯಿಯ ಹೊಣೆ ತುಂಬ ಹೆಚ್ಚು. ಉತ್ತಮಳಾದ ತಾಯಿ ತನ್ನ ಮಕ್ಕಳನ್ನು ಮಹಾವ್ಯಕ್ತಿಗಳನ್ನಾಗಿ ಮಾರ್ಪಡಿಸಬಲ್ಲಳು. ಭರತ, ಧ್ರುವ, ರಾಮ, ಕೃಷ್ಣ ಮೊದಲಾದ ಮಹಾ ಪುರುಷರು ತಮ್ಮ ಮಾತೆಯರಿಂದ ಸ್ಫೂರ್ತಿ ಪಡೆದವರು. ಚರಿತ್ರೆಯಲ್ಲಿ ಚಾಣಕ್ಯನೇ ಮೊದಲಾದ ಹಲವರು ತಾಯಿಯ ಆಜ್ಞೆಯಂತೆ ಶ್ರಮಿಸಿ, ಮಾತೃದೇಶದ ದಾಸ್ಯಶೃಂಖಲೆಯನ್ನು ತಪ್ಪಿಸಿದವರು. 'ಮನೆಯೆ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು' ಎಂದು ಒಬ್ಬ ಕವಿ ಹಾಡಿದಂತೆ, ಜನನಿಯಿಂದ ಪಾಠ ಕಲಿತು ಮಹಾವ್ಯಕ್ತಿಯಾಗಿ ಹಿಂದೂರಾಜ್ಯ ಸ್ಥಾಪಕನಾದ ಶಿವಾಜಿ ಮಹಾರಾಜನೂ ಧನ್ಯ. ಆ ವೀರಮಾತೆಯ ದಿವ್ಯಚರಿತ್ರೆಯನ್ನು ಇಲ್ಲಿ ಸಂಗ್ರಹಿಸಿದೆ.

೧೭ನೆಯ ಶತಕದ ಮಧ್ಯಭಾಗದಲ್ಲಿ ಭಾರತವು ರಾಜಕೀಯ ಹಾಗೂ ಧಾರ್ಮಿಕ ಸಮಸ್ಯೆಗಳ ತೊಡಕಿನಲ್ಲಿ ಸಿಕ್ಕಿ ನಿಸ್ತೇಜವಾಗಿತ್ತು. ಉತ್ತರದಲ್ಲಿ ಮೊಗಲ್ ಸಾಮ್ರಾಜ್ಯವೂ, ದಕ್ಷಿಣದಲ್ಲಿ ಷಾಹಿ ರಾಜ್ಯಗಳೂ ಹಿಂದೂ ಧರ್ಮದ ಮೇಲೆ ಧಾಳಿ ನಡೆಸುತ್ತಿದ್ದುವು. ವಿಜಯನಗರವು ತಲೆಯೆತ್ತಿ ಪರಕೀಯರ ಧಾಳಿಗೆ ಅಡ್ಡಲಾಗಿ ನಿಂತು ಕೆಲವುಕಾಲ ಸನಾತನ ಧರ್ಮಕ್ಕೆ ಜೀವ ತುಂಬಿತು. ಆದರೆ ಹಿಂದುಗಳ ದೌರ್ಭಾಗ್ಯದಿಂದ ಅದು ಅಸ್ತಮಿಸಿದಮೇಲೆ ಜನ ಹಳೆಯ ಪಲ್ಲವಿಯನ್ನೇ ಹಾಡಬೇಕಾಯಿತು. ಸನಾತನ ಧರ್ಮವೆಂಬ ನಂದಾದೀವಿಗೆ ಎಣ್ಣೆ ಮುಗಿದು ಆರಿಹೋಗುವ

ಸ್ಥಿತಿಗಿಳಿಯಿತು. ಇಂತಹ ಘೋರ ವಿಪತ್ಕಾಲದಲ್ಲಿ ಭಾರತದ ಸುಯೋಗದಿಂದ ಅವತರಿಸಿ ತನ್ನ ಅಪರಿಮಿತ ಸಾಹಸದಿಂದ ಹಿಂದುತ್ವವನ್ನೂ, ಹಿಂದೂ ಧರ್ಮವನ್ನೂ ಉಳಿಸಿ, ಕೇವಲ ಮಹಾರಾಷ್ಟ್ರದಲ್ಲಲ್ಲದೆ ಸಂಪೂರ್ಣ ಭಾರತದಲ್ಲೇ ನವಚೈತನ್ಯವನ್ನುಂಟುಮಾಡಿ, ಆಗಿನ ಭಾರತೀಯರ ದಾಸ್ಯಬುದ್ಧಿಯನ್ನು ನಿವಾರಿಸಿ, ಅವರ ಮೂಗಿಗೆ ಪರಕೀಯರು ತೊಡಿಸಿದ್ದ ಆಡಳಿತದ ಮೂಗುದಾರವನ್ನು ಕಿತ್ತುಹಾಕಿ ಸ್ವಾತಂತ್ರ್ಯಪ್ರೇಮವನ್ನು ಹುಟ್ಟಿಸಿದ ಮಹಾಪುರುಷ, ಭಾರತದ ನೆಪೋಲಿಯನ್ ಶಿವಾಜಿ ಮಹಾರಾಜ. ಈ ವೀರ ಪುರುಷನ ಜನ್ಮದಾತೆಯೇ ವೀರಮಾತೆ ಜೀಜಾಬಾಯಿ.

ಜೀಜಾಬಾಯಿಯ ತಂದೆಯ ಹೆಸರು ಲಖ್ಖೋಜಿ ಜಾದವರಾಯನೆಂದು. ಈತ ದೇವಗಿರಿಯ ಯಾದವ ವಂಶಕ್ಕೆ ಸೇರಿದವನು. ಅಹಮ್ಮದ್ ನಗರದಲ್ಲಿ ಅರಸುಗೆಯ್ಯುತ್ತಿದ್ದ ನಿಜಾಮುಶಾಹಿ ವಂಶದವರ ಆಶ್ರಯದಲ್ಲಿ ಇವನು ಸಿಂಧ್‌ಖೇಡವೆಂಬ ಗ್ರಾಮದ ದೇಶಮುಖನಾಗಿ (ಅಧಿಪತಿ) ಹತ್ತು ಸಾವಿರ ಕುದುರೆಗಳ ಸೈನ್ಯಕ್ಕೆ ದಳಪತಿಯಾಗಿದ್ದನು. ಹುಟ್ಟನಿಂದಲೇ ಇವನು ವೀರನಾದ್ದರಿಂದ ಎಲ್ಲೆಲ್ಲೂ ಈತನ ಹೆಸರು ಹಬ್ಬಿತ್ತು. ಜೀಜಾಬಾಯಿ ವೀರಮಾತೆಯಾಗಲು ತಂದೆಯ ವೀರಸಂಪತ್ತೇ ಕಾರಣ. ಜೊತೆಗೆ ವೀರನ ಕೈಯನ್ನೂ ಹಿಡಿದಳು. ಹೀಗೆ ತಂದೆ ಮತ್ತು ಪತಿಯಿಂದ ದೊರಕಿದ ಆಸ್ತಿಯನ್ನೇ ಮಗನಿಗೂ ದಾನಮಾಡಿದಳು.

ಮಹಾರಾಷ್ಟ್ರದ ಭೌಂಸ್ಲೆ ಮನೆತನಕ್ಕೆ ಸೇರಿದ ಷಾಹಜಿಯೊಡನೆ ಈಕೆಯ ವಿವಾಹ ೧೬೦೫ ರಲ್ಲಿ (ಎಳನೆಯ ವಯಸ್ಸಿನಲ್ಲಿ) ನಡೆಯಿತು. ಷಾಹಜಿ ಒಳ್ಳೆಯ ಸಾಹಸಿ, ರಣಪಂಡಿತ, ಕಾರ್ಯದಕ್ಷ. ಇವನು ತನ್ನ ಪರಾಕ್ರಮದಿಂದ ಎಷ್ಟೋ ಸಾರಿ ಮೊಗಲರೊಡನೆ ಹೋರಾಡಿ ಅವರ ಆಡಳಿತ ದಕ್ಷಿಣ ಭಾರತಕ್ಕೆ ಚಾಚದಂತೆ ಮಾಡಿ ಅಹಮ್ಮದ್ ನಗರದಲ್ಲಿ ಪ್ರಭಾವಶಾಲಿಯಾದನು. ಅವನ ಸಾಮರ್ಥ್ಯಕ್ಕೆ ಮೆಚ್ಚಿದ ನಿಜಾಮುಶಾಹಿಯಿಂದ ಪುಣೆಯ ಪ್ರಾಂತವೆಲ್ಲಾ ಅವನಿಗೆ ಜಹಗೀರಾಗಿ ಸಿಕ್ಕಿತ್ತು. ಅಳಿಯನ ಈ ಏಳಿಗೆ ಮಾವನ ಕಣ್ಣನ್ನು ಕುಕ್ಕಿತು. ತನ್ನ ಉನ್ನತಿಯ ದಾರಿಗೆ ಮುಳ್ಳಾಗಿದ್ದ ಅಳಿಯನನ್ನು ಹೇಗಾದರೂ ಮಾಡಿ ಮುರಿಯಬೇಕೆಂದು ಜಾದವರಾಯ ಸಮಯನಿರೀಕ್ಷೆಯಲ್ಲಿದ್ದನು. ಅಷ್ಟರಲ್ಲಿ ಮೊಗಲ್

ಚಕ್ರವರ್ತಿಗೂ ಅಹಮ್ಮದ್ ನಗರದ ಸುಲ್ತಾನನಿಗೂ ಯುದ್ಧ ಸಂಭವಿಸಿತು. ಜಾದವರಾಯ ಮೊಗಲರ ಕಡೆ ಜಾರಿದನು. ಅಹಮ್ಮದ್ ನಗರವನ್ನು ಉಳಿಸಲು ತಾನು ಮಾಡಿದ ಪ್ರಯತ್ನವೆಲ್ಲಾ ವಿಫಲವಾಗಲು ಷಾಹಜಿ ಜೀಜಾಬಾಯಿಯನ್ನೂ, ತನ್ನ ಹಿರಿಯ ಮಗನಾದ ಶಂಭೂಜಿಯನ್ನೂ ಕರೆದು ಕೊಂಡು ಬಿಜಾಪುರದ ಸುಲ್ತಾನನ ಆಶ್ರಯವನ್ನು ಪಡೆಯಲು ಹೋಗು ತ್ತಿದ್ದನು. ಅಳಿಯನನ್ನು ಸೆರೆಹಿಡಿಯಲು ಬೆನ್ನಟ್ಟಿಬಂದ ಜಾದವರಾಯನಿಗೆ ಮಗಳು ಮಾತ್ರ ಸಿಕ್ಕಿದಳು. ಅವಳನ್ನೇ ಸೆರೆಹಿಡಿದು ರಾಯನು ತವರೂರಿಗೆ ನಡೆಯೆಂದನು. ಆಗ ಜೀಜಾ "ನನ್ನ ಪತಿಗೆ ನೀನು ಶತ್ರುವಾದ್ದರಿಂದ ನನಗೂ ಶತ್ರು. ವೈರಿಯ ಮನೆಗೆ ನಾನು ಬರಲಾರೆ. ಬೇಕಾದರೆ ನನ್ನ ಪತಿಯಮೇಲಿನ ಸೇಡನ್ನು ನನ್ನ ಮೇಲೆ ತೀರಿಸಿಕೊಳ್ಳಬಹುದು" ಎಂದು ಉತ್ತರಕೊಟ್ಟಳು. ರಾಯನಿಗೆ ಮುಖ ಕೆತ್ತಿದಂತಾಯಿತು. ಮರುಮಾತಾಡದೆ ಮಗಳನ್ನು ಬಿಟ್ಟು ಹೊರಟುಹೋದನು. ಪತಿ ಎಲ್ಲಿ ಹೋದನೆಂಬುದನ್ನು ಅರಿಯದೆ ಯಾರೊ ಆಪ್ತರ ಸಹಾಯದಿಂದ ಜೀಜಾಬಾಯಿ ತನ್ನ ಜಹಗೀರಿಗೆ ಸೇರಿದ ಶಿವನೇರು ದುರ್ಗಕ್ಕೆ ಬಂದಳು. ಆ ಸಂದರ್ಭದಲ್ಲಿ ಆಕೆ ಗರ್ಭಿಣಿ. ಅಳಿಯ ಮಾವಂದಿರ ದ್ವೇಷಕ್ಕೆ ನಿರಪರಾಧಿನಿಯಾದ ಅವಳು ಸಿಕ್ಕಿ ನೋಯ ಬೇಕಾಯಿತು. ದಿಕ್ಕಿಲ್ಲದ ಆಕೆ ದುರ್ಗದ ಅಧಿದೇವತೆಯಾದ ಶಿವಾಯಿ ದೇವಿಯನ್ನೇ ಸಂಪೂರ್ಣವಾಗಿ ಶರಣುಹೊಂದಿ ತನಗೊದಗಿದ ವಿಪತ್ತನ್ನು ಪರಿಹರಿಸಬೇಕೆಂದು ಪ್ರಾರ್ಥಿಸುತ್ತಾ ಕಾಲ ಕಳೆಯಲಾರಂಭಿಸಿದಳು. ಕ್ರಿ. ಶ. ೧೬೨೭ ನೆಯ ಏಪ್ರಿಲ್ ತಿಂಗಳು ಹತ್ತರಲ್ಲಿ (ಕೆಲವರು ಶಿವಾಜಿಯ ಜನನ ೧೬೩೦ ಎಂದು ಲೆಕ್ಕ ಹಾಕುತ್ತಾರೆ) ಭಾವಿ ಛತ್ರಪತಿಯು ಹುಟ್ಟಿ ದನು. ಶಿವಾಯಿ ದೇವಿಯ ಕೃಪಾಛತ್ರದಲ್ಲಿ ಬದುಕುತ್ತಿದ್ದ ಜೀಜಾಬಾಯಿ ತನ್ನ ಮಗನಿಗೆ ಶಿವಾಜಿಯೆಂದು ಹೆಸರಿಟ್ಟು ಆ ತಾಯಿಗೆ ತನ್ನ ಕೃತಜ್ಞತೆ ಯನ್ನು ತೋರಿಸಿದಳು.

ಷಾಹಜಿ ತನ್ನ ಧೈರ್ಯ ಶೌರ್ಯ ಸಾಮರ್ಥ್ಯಗಳಿಂದ ಬಿಜಾಪುರ ದಲ್ಲಿಯೂ ಉನ್ನತಪದವಿಗೆ ಬಂದನು. ಆದರೇನು? "ಕತ್ತೆಗೆ ಜ್ವರ ಬಂದರೆ ಎತ್ತಿಗೆ ಬರೆಯೆಳೆದರು" ಎಂಬಂತೆ ಮಾವನ ಮೇಲಿನ ಕೋಪದಿಂದ ಜೀಜಾಬಾಯಿಯನ್ನು ಅಲಕ್ಷ್ಯಮಾಡಿ ಶಿವಾಜಿ ಹುಟ್ಟಿದ ಮೂರು ವರ್ಷಗಳ

ಮೇಲೆ ಮೋಹಿತೆ ಮನೆತನಕ್ಕೆ ಸೇರಿದ ತುಕಾಬಾಯಿ ಎಂಬುವಳನ್ನು ಮದುವೆಯಾದನು. ಈ ಸಂಗತಿಯನು ತಿಳಿದ ಜೀಜಾಳ ಹೃದಯ ಕುಸಿದು ಹೋಯಿತು. ಪತಿಯ ಮೇಲೆ ಅಸಮಾಧಾನವುಂಟಾದರೂ ಪತಿಪರಾಯಣೆ ಯಾದ ಆಕೆ ಇದೆಲ್ಲ ವಿಧಿವೈಚಿತ್ರ್ಯವೆಂದು ಮನಸ್ಸಿಗೆ ಸಮಾಧಾನ ಹೇಳಿ ಕೊಂಡು ಪತಿಯನ್ನೇ ಧ್ಯಾನಿಸುತ್ತಾ ತನ್ನ ಮುದ್ದು ಮಗುವಿನ ಪೋಷಣೆ ಯಲ್ಲಿ ಆಸಕ್ತಳಾದಳು. ಷಾಹಜಿಯು ಹೆಂಡತಿ ಮತ್ತು ಮಗನ ರಕ್ಷಣೆ ಗಾಗಿ ದಾದಾಜಿಕೊಂಡದೇವನೆಂಬ ಬ್ರಾಹ್ಮಣನನ್ನು ನಿಯಮಿಸಿ ಪುಣೆಯ ಜಹಗೀರಿನ ಆಡಳಿತವನ್ನು ಅವನಿಗೊಪ್ಪಿಸಿದನು.

ಶಿವಾಜಿಯ ಭವಿಷ್ಯಜೀವನ ಅಷ್ಟು ಹಿರಿದಾಗಿ ಅರಳಿದುದರ ಕಾರಣ ಗಳನ್ನು ನಾವು ಹುಡುಕಬೇಕಾದ್ದಿಲ್ಲ. ಮಹಾರಾಷ್ಟ್ರದ ಗುಡ್ಡಗಾಡಿನ ವಾಸ ಅವನಿಗೆ ಸಾಹಸವನ್ನು ಕಲಿಸಿತು. ದಕ್ಷನಾದ ದಾದಾಜಿ ಗುರುವಿನಿಂದ ಅವನಿಗೆ ರಾಜಕೀಯ ಶಿಕ್ಷಣ ದೊರಕಿತು. ಇದೆಲ್ಲಕ್ಕಿಂತಲೂ ಮಿಗಿಲಾಗಿ ಅವನಿಗೆ ಬಾಲ್ಯದಲ್ಲಿ ತಾಯಿಯಿಂದ ದೊರೆತ ಶಿಕ್ಷಣ ಅತಿ ಮುಖ್ಯವಾದುದು. ಹೆತ್ತ ತಾಯಿಯ ಉಪದೇಶದಿಂದ ಮಹಾ ಪುರುಷರಾದವರಲ್ಲಿ ಶಿವಾಜಿಯೇ ಮೊದಲಿಗನೆಂದು ಧಾರಾಳವಾಗಿ ಹೇಳಬಹುದು. ಬಾಲ್ಯದ ತನ್ನ ಮಗನ ಹೃದಯದಲ್ಲಿ ಜೀಜಾಬಾಯಿ ಶೌರ್ಯ ಮತ್ತು ಸದ್ಗುಣಗಳ ಬೀಜವನ್ನು ಬಿತ್ತದೆಹೋಗಿದ್ದ ಪಕ್ಷದಲ್ಲಿ ಶಿವಾಜಿಯೊಬ್ಬ ಐತಿಹಾಸಿಕ ಪುರುಷನಾಗುತ್ತಿ ದ್ದನೋ ಇಲ್ಲವೋ ಹೇಳಲಾಗುವುದಿಲ್ಲ. ಮಕ್ಕಳಿಗೆ ತಂದೆಯ ಶಿಕ್ಷಣಕ್ಕಿಂತ ತಾಯಿಯ ಶಿಕ್ಷಣ ಹೆಚ್ಚು ಫಲಕಾರಿಯೆಂಬುದಕ್ಕೆ ಶಿವಾಜಿಯ ಜೀವನ ಒಂದು ದೊಡ್ಡ ಉದಾಹರಣೆಯಾಗಿದೆ.

ಪತಿಯ ಅನಾದರಣೆಗೆ ಪಕ್ಕಾದ ಜೀಜಾಬಾಯಿಗೆ ಮಗನೇ ಬಾಳಿನ ಗುರಿಯಾದನು. ಅವನ ಅಭಿವೃದ್ಧಿಯೇ ಅವಳ ಸರ್ವಸ್ವವಾಯಿತು. ಪುತ್ರನ ಲಾಲನೆ ಪಾಲನೆಗಾಗಿ ಆಕೆ ಅನುಭವಿಸಿದ ಯಾತನೆ, ಇದಿರಿಸಿದ ಕಷ್ಟ ಅಷ್ಟಿಷ್ಟಲ್ಲ. ಮೇಲಾಗಿ ತನ್ನ ತಾಯ್ತನದ ಕರ್ತವ್ಯವನ್ನು ಆಕೆ ಬಹಳ ಜಾಣತನದಿಂದಲೂ ಎಚ್ಚರಿಕೆಯಿಂದಲೂ ಮಾಡಿದಳು. ಆಕೆ ಶರೀರದೃಷ್ಟಿ ಯಿಂದ ಹೆಂಗಸಾದರೂ ಮಾನಸಿಕವಾಗಿ ಸಾಹಸಪ್ರಿಯಳು. ವೀರವಂಶದಲ್ಲಿ ಹುಟ್ಟಿ ವೀರಪತ್ನಿಯಾಗಿದ್ದವಳು. ಪತಿ ತನ್ನ ವಿಷಯದಲ್ಲಿ ಅನ್ಯಾಯವಾಗಿ

ನಡೆದುಕೊಂಡಿದ್ದರೂ ಆತನ ಪೌರುಷವನ್ನು ಸ್ಮರಣೆಗೆ ತಂದುಕೊಂಡು ಸಂತೋಷಪಡುತ್ತಿದ್ದಳು. ಆದುದರಿಂದ ತನ್ನ ಮಗ ಉಭಯವಂಶಗಳ ಘನತೆಗೆ ಗೋಪುರವಾಗಿ ಬೆಳಗುವಂತಾಗಬೇಕೆಂಬುದು ಅವಳಿಗಿದ್ದ ಹಿರಿಯ ಬಯಕೆ. ಈ ಆಸೆಗೆ ತಕ್ಕಂತೆ ಮಗನನ್ನು ತಯಾರುಮಾಡಲಾರಂಭಿಸಿದಳು. ದಿನವೂ ಮಗನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು ರಾಮಾಯಣ ಮಹಾಭಾರತದ ಪುಣ್ಯ ವ್ಯಕ್ತಿಗಳ ಕಥೆಗಳನ್ನೂ, ರಾಜಪುತ್ರರ ಶೌರ್ಯಪ್ರಧಾನವಾದ ಸಂಗತಿಗಳನ್ನೂ ಹೇಳಿ ಅವನಿಗೆ ವೀರರಸವನ್ನು ಪಾನಮಾಡಿಸುತ್ತಿದ್ದಳು. ಜೊತೆಗೆ ತಮ್ಮ ಉಭಯ ವಂಶದವರು ಮಾಡಿದ ಸಾಹಸಗಳನ್ನು ತಿಳಿಯಪಡಿಸುತ್ತಿದ್ದಳು. ತಾಯಿ ಕಥೆ ಹೇಳುತ್ತಿರುವಾಗ ಬಾಲಕ ಶಿವಾಜಿಗೆ ಕಥೆಯಲ್ಲಿನ ವೀರವ್ಯಕ್ತಿಗಳೂ, ಅವರ ಯುದ್ಧದ ಚಿತ್ರಗಳೂ, ರಣದ ಭೀಷಣತೆಯೂ ಕಣ್ಣೆದುರಿಗೆ ಸುಳಿದಂತಾಗಿ ಮೈನವಿರೆದ್ದು ಉತ್ಸಾಹ ಉಕ್ಕೇರುತ್ತಿತ್ತು. ತಾನೂ ಅಂತಹ ಸಾಹಸಿಗನಾಗಬೇಕೆಂಬ ಸವಿಗನಸುಗಳನ್ನು ನಿತ್ಯವೂ ಮೆಲುಕುಹಾಕುತ್ತಿದ್ದನು. ಇದಕ್ಕಿಂತ ಹೆಚ್ಚಾಗಿ ಅವನ ಮನಸ್ಸಿನಲ್ಲಿ ಮನೆಮಾಡಿ ನಿಂತ ವಿಷಯವೆಂದರೆ, ಮಹಾಭಾರತದ ನಾಯಕ ಶಿರೋಮಣಿ ಶ್ರೀಕೃಷ್ಣನ ರಾಜತಂತ್ರ ಕೌಶಲ!

ಜೀಜಾಬಾಯಿ ಸದ್ಗುಣಗಳ ಗಣಿ. ಆಕೆಯ ಬಾಳು ನಿರ್ಮಲವಾದದ್ದು. ಧಾರ್ಮಿಕಭಾವನೆಯಲ್ಲಿ ಅವಳೆಂದೂ ಬಡವಳಲ್ಲ. ಪತಿಯಿಂದ ದೂರಳಾದಮೇಲೆ ಅವಳಲ್ಲಿ ಮೊದಲಿಗಿಂತ ಧರ್ಮಶ್ರದ್ಧೆ ಅಧಿಕವಾಯಿತು. ದಿನವೆಲ್ಲಾ ಭವಾನಿ ದೇವಿಯ ಭಜನೆ, ಕೀರ್ತನೆ ಮತ್ತು ಸತ್ಕಥಾಶ್ರವಣಗಳಲ್ಲಿ ಕಾಲ ನೂಕುತ್ತಿದ್ದಳು. ಸಾಧುಸಂತರ ಮತ್ತು ಗೋಮಾತೆಯ ಸೇವೆಯಲ್ಲಿ ಅವಳಿಗೆ ಅತೀವ ಭಕ್ತಿ. ಪ್ರತಿದಿನ ಕೆಲವರು ಸಾಧುಗಳಿಗೆ ಅನ್ನ ನೀಡದೆ, ಗೋವುಗಳನ್ನು ಪೂಜಿಸಿ ಅವುಗಳಿಗೆ ಮೇವನ್ನು ಹಾಕದೆ ಆಕೆ ಒಂದು ತೊಟ್ಟು ನೀರನ್ನೂ ಬಾಯಿಗೆ ಬಿಡುತ್ತಿರಲಿಲ್ಲ. ಬಾಲಕ ಶಿವಾಜಿಯ ಮನಸ್ಸಿನ ಮೇಲೆ ಈ ಆಚರಣೆಗಳು ಅಳಿಸಲಾರದ ಗೆರೆಗಳನ್ನೆಳೆದುವು. ಅವನ ಮನಸ್ಸು ರೂಪಗ್ರಾಹಿ (ಫೋಟೋ ಕ್ಯಾಮರ) ಯಂತೆ ತಾಯಿಯ ಆಚರಣೆಯ ಭಾವಚಿತ್ರಗಳನ್ನಿಳಿಸಿ ಜೋಕೆಯಾಗಿಟ್ಟುಕೊಂಡಿತು. ಶಿವಛತ್ರಪತಿ ಎಂತಹ ಧರ್ಮವೀರನಾಗಿದ್ದನೆಂಬುದನ್ನು ಆತನ ಚರಿತ್ರೆಯನ್ನೋದಿದವರೆಲ್ಲರೂ

ಬಲ್ಲರು. ಅವನು ಭವಾನೀದೇವಿಯ ಪರಮಭಕ್ತನಾಗಿದ್ದುದು ಲೋಕ ಪ್ರಸಿದ್ಧವಾಗಿದೆ. ಆತನಿಗೆ ರಾಜಕಾರ್ಯದಲ್ಲಿ ತೊಡಕುಗಳು ಬಂದಾಗ ಮತ್ತು ಯುದ್ಧಕಾಲದಲ್ಲಿ ಇದಿರಿಸಬೇಕಾದ ವಿಪತ್ತಿನ ಸಂದರ್ಭದಲ್ಲಿ ಜಗನ್ಮಾತೆ ಭವಾನಿದೇವಿಯು ಆತನ ಮೈತುಂಬಿ ಸಲಹೆ ಕೊಡುತ್ತಿದ್ದಳಂತೆ. ಅಕ್ಕಪಕ್ಕದಲ್ಲಿದ್ದವರು ಅದನ್ನು ಕೇಳಿ ಅನಂತರ ಶಿವಾಜಿಗೆ ಹೇಳುತ್ತಿದ್ದರಂತೆ. ಪುರಾಣ ಪುಣ್ಯಕಥೆಗಳಲ್ಲಿ ತಾಯಿ ಉಂಟುಮಾಡಿದ ಆಸಕ್ತಿಯು ಅವನ ಜೀವಿತದಲ್ಲೆಲ್ಲಾ ಉಳಿದಿತ್ತು. ಹರಿಕಥೆ ಮತ್ತು ಪುರಾಣಗಳು ಎಲ್ಲಿ ನಡೆಯಲಿ ಅಲ್ಲಿಗೆ ಸಾಮಾನ್ಯ ಮನುಷ್ಯನಂತೆ ಹೋಗಿ ಬಹಳ ಶ್ರದ್ಧಾಭಕ್ತಿಗಳಿಂದ ಕೇಳಿ ಬರುತ್ತಿದ್ದನು. ಸಾಧುಗಳು ಯಾವ ಮತದವರೇ ಆಗಿರಲಿ ಅವರಲ್ಲಿ ಅವನಿಗೆ ಅತ್ಯಂತ ಪೂಜ್ಯಭಾವನೆಯಿತ್ತು. ಸಮರ್ಥ ರಾಮದಾಸ ಸ್ವಾಮಿಯವರ ಪರಮ ಶಿಷ್ಯನಾಗಿದ್ದುದಲ್ಲದೆ, ಒಂದು ದಿನ ತೀವ್ರ ವೈರಾಗ್ಯವನ್ನು ಹೊಂದಿ ತನ್ನ ಸಮಸ್ತ ರಾಜ್ಯದ ದಾನಪತ್ರವನ್ನು ಅವರ ಭಿಕ್ಷಾಪಾತ್ರೆಗೆ ಹಾಕಿದ ಸಂಗತಿ ಸರ್ವವಿದಿತವಾಗಿದೆ. ಶಿವಾಜಿಯ ರಾಜ್ಯ ಗೋವುಗಳಿಗೆ ಸ್ವರ್ಗವಾಗಿತ್ತು. ಮುದಿಗೋವುಗಳನ್ನು ಸಾಕಲು ಪೋಷಣಗೃಹಗಳನ್ನು ಏರ್ಪಡಿಸಿದ್ದನು. ಗೋವುಗಳನ್ನು ಯಾರೂ ಹಿಂಸಿಸಕೂಡದೆಂಬ ಕಟ್ಟಾಜ್ಞೆಯಿರುವಾಗ ಗೋವಧೆಯ ಸುದ್ದಿಯೆಲ್ಲಿ ಬಂತು? ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಒಂದು ಸಾರಿ ಶಿವಾಜಿಯು ತಂದೆಯನ್ನು ನೋಡಲು ಬಿಜಾಪುರಕ್ಕೆ ಹೋಗಿದ್ದಾಗ ಅಲ್ಲಿ ಒಬ್ಬ ಕಟುಕರವನ ಕೈಗೆ ಸಿಕ್ಕಿದ ಗೋವನ್ನು ತನ್ನ ಸಾಹಸದಿಂದ ಕಾಪಾಡಿದನು. ಈ ವರ್ತಮಾನ ಸುಲ್ತಾನನವರೆಗೂ ಮುಟ್ಟಿ ಅವನ ಮನಸ್ಸನ್ನು ಪರಿವರ್ತನೆಗೊಳಿಸಿತು. ಗೋವಧೆಯಿಂದ ಹಿಂದುಗಳ ಮನಸ್ಸು ನೋಯುವುದೆಂಬ ಪಾಠವನ್ನು ಶಿವಾಜಿಯ ಕೃತ್ಯದಿಂದ ಕಲಿತ ಅವನು ತನ್ನ ರಾಜ್ಯದಲ್ಲಿ ಗೋವಧೆಯನ್ನು ನಿಲ್ಲಿಸಿಬಿಟ್ಟನಂತೆ! ಮತ್ತೊಂದು ಸಾರಿ ಗೋವನ್ನು ಕೊಲ್ಲಲು ಕಟುಕನೊಬ್ಬನು ಪ್ರಯತ್ನಿಸಿದಾಗ ಶಿವಾಜಿ ಅವನ ಮೇಲೆ ಬಿದ್ದು ಅವನನ್ನೇ ಕೊಂದುಬಿಟ್ಟನು. ಇಂತಹ ಸಣ್ಣ ವಿಷಯಕ್ಕೆ ಹೀಗೆಲ್ಲಾ ಮಾಡುವುದು ತರವಲ್ಲ ಎಂದು ತಾಯಿ ಹೇಳಿದಾಗ "ಇದು ಸಣ್ಣ ವಿಚಾರವೆ? ಗೋವಧೆ ಎಂದರೆ ಹಿಂದುಗಳ ಧಾರ್ಮಿಕ ವಧೆ. ಅದನ್ನು ನೋಡಿಕೊಂಡು ತಲೆಬಗ್ಗಿಸುವುದಕ್ಕಿಂತಲೂ ಅದರ ರಕ್ಷಣಾ ಕಾರ್ಯದಲ್ಲಿ ಸಾಯುವುದು ಮೇಲು" ಎಂದು ಉತ್ತರ ಕೊಟ್ಟನು.

ಜೀಜಾಬಾಯಿಯಲ್ಲಿ ಸ್ವಧರ್ಮ ಮತ್ತು ಸ್ವರಾಷ್ಟ್ರಪ್ರೇಮವು ತುಂಬಿ ತುಳುಕಾಡುತ್ತಿತ್ತು. ವಿಧರ್ಮೀಯರು ಮಾಡುತ್ತಿದ್ದ ಮತಪ್ರಚಾರ, ಬಲವಂತವಾಗಿ ಹಿಂದುಗಳನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳುವುದು, ಸೇರಲಿಚ್ಛಿಸದಿರುವವರಿಗೆ ಹಿಂಸೆ ಕೊಡುವುದು—ಇವೇ ಮೊದಲಾದುವು ಆವಳ ಮನಸ್ಸನ್ನು ಪದೇ ಪದೇ ಕಲಕುತ್ತಿದ್ದವು. ಹಿಂದುಗಳಾದವರು ಕೂಡ ತಮ್ಮ ಪವಿತ್ರ ಸಂಸ್ಕೃತಿಯನ್ನು ಕಡೆಗಣಿಸಿ ಅಧಿಕಾರದಾಸೆಯಿಂದ ಪರಕೀಯರ ವೇಷ, ಭಾಷೆ, ಆಚರಣೆಗಳಿಗೆ ತುತ್ತಾಗಿ ಅವರ ಸೇವೆಯಲ್ಲಿ ನಿರತರಾಗಿರುವುದನ್ನು ಕಂಡು ದುಃಖವಾದಾಗ ಭವಾನಿಯ ಸನ್ನಿಧಿಯಲ್ಲಿ ಕುಳಿತು, 'ತಾಯಿ, ಈ ಅತ್ಯಾಚಾರ ಅನಾಚಾರಗಳಿಗೆ ಅಂತ್ಯವೇ ಇಲ್ಲವೇ?' ಎಂದು ಕಣ್ಣೀರಿಡುತ್ತಿದ್ದಳು. 'ಅಳುವುದೇಕಮ್ಮಾ?' ಎಂದು ಮಗ ಪ್ರಶ್ನಿಸಿದಾಗ ದೇಶದ ಪರಿಸ್ಥಿತಿಗಳನ್ನು ಅವನಿಗೆ ವಿವರಿಸಿ ಹೇಳುತ್ತಿದ್ದಳು. ಇದರಿಂದ ಶಿವಾಜಿಯಲ್ಲಿ ಧರ್ಮಾಭಿಮಾನ, ರಾಷ್ಟ್ರಾಭಿಮಾನಗಳೆರಡೂ ಜೊತೆ ಜೊತೆಯಲ್ಲೇ ಬೆಳೆದವು. ಇನ್ನೊಂದು ವಿಶೇಷ ಸಂಗತಿಯೆಂದರೆ—ಮಗನಲ್ಲಿ ಪರಮತ ದ್ವೇಷವಂಕುರಿಸಲು ಜೀಜಾಬಾಯಿ ಅವಕಾಶ ಕೊಡಲಿಲ್ಲ. ತಾಯಿಯಲ್ಲಿದ್ದ ಪರಮತಸಹಿಷ್ಣುತೆಗೆ ಶಿವಾಜಿ ಸಾಕ್ಷಿಯಾಗಿದ್ದನೆಂಬುದಕ್ಕೆ ಅವನು ಒಂದು ಸಾರಿ ತನಗೆ ಸಿಕ್ಕಿದ ಕೊರಾನಿಗೆ ಗೌರವವನ್ನು ತೋರಿಸಿದ, ಮಸೀದಿಗಳನ್ನೂ ಹಿಂದೂ ದೇವಾಲಯದಂತೆಯೇ ಕಾಣುತ್ತಿದ್ದ, ಅನೇಕ ಮಹಮ್ಮದೀಯರಿಗೆ ಅಧಿಕಾರಗಳನ್ನು ಕೊಟ್ಟು ತನ್ನ ರಾಜ್ಯದಲ್ಲಿಟ್ಟುಕೊಂಡಿದ್ದ, ಫಕೀರರನ್ನೂ ಆದರಿಸುತ್ತಿದ್ದ—ಸುಂದರ ನಿದರ್ಶನಗಳು ಅವನ ಚರಿತ್ರೆಯಲ್ಲಿವೆ. ಕೆಲವು ಮುಸಲ್ಮಾನ ಇತಿಹಾಸಕಾರರೇ ಶಿವಾಜಿಯ ಅನ್ಯಮತಸಹನೆಯನ್ನು ಮುಕ್ತಕಂಠದಿಂದ ಹಾಡಿದ್ದಾರೆ.

ತಾಯಿಯ ಶಿಕ್ಷಣಪ್ರಭಾವದಿಂದ ಶಿವಾಜಿಯ ಹದಿನಾರನೆಯ ವಯಸ್ಸಿನಲ್ಲೇ ಸಾಹಸಜೀವನ ಆರಂಭವಾಯಿತು. ಸಮವಯಸ್ಕರೊಡನೆ ಎಲ್ಲಾದರೂ ಧೈರ್ಯದಿಂದ ನುಗ್ಗಿ ಕೊಳ್ಳೆಹೊಡೆಯುವುದರಲ್ಲಿ ತೊಡಗಿ ಸ್ವತಂತ್ರ ಪಾಳೆಯಗಾರನಂತೆ ವರ್ತಿಸಲಾರಂಭಿಸಿದನು. ಜೀಜಾಬಾಯಿ ಮನಶ್ಶಾಸ್ತ್ರಜ್ಞಳಲ್ಲದಿದ್ದರೂ ತಾಯ್ತನದ ಅನುಭವದಿಂದ ಮಗನಲ್ಲಿರುವ

ತುಂಟತನವು ಪ್ರತಿಭೆ ಮತ್ತು ಸಾಹಸದ ಹೆಗ್ಗುರುತೆಂದು ತಿಳಿದು ಅದನ್ನು ತನ್ನ ಬೋಧನೆಯಿಂದ ಶಕ್ತಿಸಾಧನೆಯ ಕಡೆಗೆ ತಿರುಗಿಸಿದಳು. ಮೆಲ್ಲ ಮೆಲ್ಲನೆ ಜಹಗೀರಿಯ ಆಡಳಿತದ ಹೊರೆಯನ್ನು ಅವನ ಭುಜದ ಮೇಲಿಟ್ಟಳು. ರೈತರ ನ್ಯಾಯತೀರ್ಮಾನಕ್ಕಾಗಿ ಕಳುಹಿಸಿ ಅವನು ಮಾಡಿದ ತೀರ್ಮಾನದಲ್ಲಿರುವ ಗುಣಗಳನ್ನು ಮೆಚ್ಚಿ ದೋಷವಿದ್ದರೆ ತಿದ್ದುತ್ತಿದ್ದಳು. ದಾದಾಜಿಕೊಂಡ ದೇವನಿಂದ ಮಗನಿಗೆ ಕ್ಷತ್ರಿಯೋಚಿತವಾದ ಶಿಕ್ಷಣವನ್ನು ಕೊಡಿಸಿದಳು. ಕತ್ತಿವರಸೆ, ಪಟ್ಟಾವರಸೆ, ಬಾಣಪ್ರಯೋಗ, ಗುಂಡುಹಾರಿಸುವುದು, ಕುದುರೆ ಸವಾರಿ— ಮೊದಲಾದ ವೀರ ವಿದ್ಯೆಗಳನ್ನು ಕಲಿಸಿ ಅವುಗಳಲ್ಲಿ ಪರಿಣತನನ್ನಾಗಿ ಮಾಡಿದಳು. ಇದೆಲ್ಲಕ್ಕೂ ಹೆಚ್ಚಾಗಿ ತಾನು ಅನುಭವಿಸಿ ಕಲಿತ ಕಷ್ಟಸಹಿಷ್ಣುತೆಯ ಪಾಠವನ್ನೂ ಹೇಳಿಕೊಟ್ಟಳು. ವಯಸ್ಸು ಕಳೆದಂತೆ ಶಿವಾಜಿಗೆ ದೇಶದ ಪರಿಸ್ಥಿತಿಗಳನ್ನು ಗಮನಕ್ಕೆ ತಂದು, "ನೀನು ಆದರ್ಶ ಹಿಂದುವಾದರೆ ಸ್ವರಾಜ್ಯವನ್ನು ಸ್ಥಾಪಿಸಿ, ದುಷ್ಟರಾದ ವಿಧರ್ಮಿಯರ ಅತ್ಯಾಚಾರದಿಂದ ಸನಾತನ ಧರ್ಮವನ್ನು ಉದ್ಧರಿಸು" ಎಂದು ಅವನ ಬೆನ್ನುತಟ್ಟಿ, ದೇವರ ಮೇಲೆ ಭಾರ ಹಾಕಿ ದಿಗ್ವಿಜಯ ಕಾರ್ಯಗಳಿಗೆ ಕಳುಹಿಸಲಾರಂಭಿಸಿದಳು. ಶಿವಾಜಿ ಮಾವಳಿಗಳೆಂಬ ಮರಾಠಾ ವೀರರನ್ನು ಸಂಘಟಿಸಿ, ಅವರ ಸಹಾಯದಿಂದ ಮೊದಲು ಸಣ್ಣ ಸಣ್ಣ ದುರ್ಗಗಳನ್ನು ಹಿಡಿದು, ಕಡೆಗೆ ವಿಶಾಲವೂ ಆದರ್ಶವೂ ಆದ ಹಿಂದೂ ಸಾಮ್ರಾಜ್ಯವನ್ನು ಸ್ಥಾಪಿಸಿ, ಶಾಸ್ತ್ರೋಕ್ತವಾಗಿ ಪಟ್ಟಾಭಿಷಿಕ್ತನಾಗಿ 'ಕ್ಷತ್ರಿಯ ಕುಲಾವತಂಸ ಶ್ರೀರಾಜ ಶಿವಛತ್ರಪತಿ'ಯೆನಿಸಿಕೊಂಡನು.

ಪಟ್ಟಾಭಿಷೇಕದ ದಿನ ಶಿವಾಜಿ ಮಂಗಳಸ್ನಾನ ಮಾಡಿ, ವಸ್ತ್ರಭೂಷಣಗಳಿಂದ ಅಲಂಕೃತನಾಗಿ ಬಂದು ತಾಯಿಗೆ ನಮಸ್ಕರಿಸಿ ಸಿಂಹಾಸನವನ್ನೇರಲು ಅನುಜ್ಞೆಯನ್ನು ಬೇಡಿದನು. ಎಂಭತ್ತು ವರ್ಷದ ಮುದುಕಿ ಜೀಜಾಬಾಯಿ ಆನಂದಬಾಷ್ಪವನ್ನು ಸುರಿಸುತ್ತಾ ಹರಸಿ ಹೇಳಿದ ವಚನಗಳಿವು: "ಮಗು, ಒಬ್ಬ ಸಣ್ಣ ಜಹಗೀರುದಾರನ ಮಗನಾಗಿದ್ದ ನೀನು ಸ್ವಸಾಮರ್ಥ್ಯದಿಂದ ಇಂದು ವಿಶಾಲ ಸಾಮ್ರಾಜ್ಯದ ರತ್ನಸಿಂಹಾಸನವನ್ನೇರಲು ಹೊರಟಿರುವೆ. ನೀನೀಗ ಹತ್ತಲಿರುವ ಸಿಂಹಾಸನ ಸುಖದ ಸುಪ್ಪತ್ತಿಗೆಯಲ್ಲ, ಮುಳ್ಳಿನ ಹಾಸುಗೆ! ಆದುದರಿಂದ ಎಚ್ಚರವಿರಲಿ!

ಪುರಾಣ ಪುರುಷರಾದ ದೊರೆಗಳ ದಿವ್ಯಾದರ್ಶದಂತೆ ನಡೆ. ಪ್ರಜೆಗಳನ್ನು ಮಕ್ಕಳೆಂದು ತಿಳಿದು ಪರಿಪಾಲಿಸು. ನಿನ್ನ ರಾಜತ್ವವು ಪ್ರಜೆಗಳ ಹಿತಕ್ಕೆ ಅನುಕೂಲವಾಗದಿದ್ದರೆ ಇದುವರೆಗೆ ನೀನು ಪಟ್ಟ ಶ್ರಮ ವ್ಯರ್ಥವೆಂದೇ ಭಾವಿಸು. ಹಿಂದಿನ ಸ್ಥಿತಿಯನ್ನು ಮರೆತು ಸುಖ ಸಿಕ್ಕಿದೆಯೆಂದು ಹಿಗ್ಗಿ ಕರ್ತವ್ಯಬಾಹಿರನಾದೀಯೆ, ಜೋಕೆ! ಯಾವ ಘನೋದ್ದೇಶದಿಂದ ನೀನು ರಾಜ್ಯಸ್ಥಾಪನೆ ಮಾಡಿದೆಯೋ ಅಂತಹ ಧರ್ಮರಕ್ಷಣೆಗೆ ನಿನ್ನ ಜೀವನವನ್ನು ಮುಡುಪಿಡು. ಸತ್ಯ ಧರ್ಮಗಳು ನಿನ್ನ ಬಾಳಿನ ಉಸಿರಾಗಲಿ, ಸ್ವರಾಜ್ಯ ವನ್ನು ಸ್ಥಾಪಿಸಿರುವೆ. ಇದು ಮುಂದೆ ಸುರಾಜ್ಯವಾಗಿ ರಾಮರಾಜ್ಯವಾಗು ವಂತೆ ಭವಾನಿ ದೇವಿಯು ಅನುಗ್ರಹಿಸಲಿ.'' ಜೀಜಾಬಾಯಿಯ ಜೀವನದ ತಿರುಳಿನಂತಿವೆಯಲ್ಲವೆ ಈ ಮಾತುಗಳು?

ಜೀಜಾಬಾಯಿ ಪ್ರಾಚೀನಾರ್ಯ ಮಹಿಳೆಯರಿಗೆ ಸಮನಾದ ಪತಿ ಪರಾಯಣೆ. ಪತಿ ತನ್ನನ್ನು ದೂರಮಾಡಿದ ನಂತರ ಆತನ ಮೇಲೆ ಕೋಪ ಮಾಡಲಿಲ್ಲ, ದ್ವೇಷಿಸಲಿಲ್ಲ, ದೂಷಿಸಲಿಲ್ಲ. ತಾನು ಹಿಂದೆ ಯಾವ ಸಾಧ್ವೀಮಣಿಗೋ ಎಸಗಿದ ಅಪಚಾರದ ಫಲವು ಈಗ ತನ್ನನ್ನು ಪತಿಯಿಂದ ಅಗಲಿಸಿದೆ—ಎಂದು ಮನಸ್ಸಿಗೆ ಶಾಂತಿ ತಂದುಕೊಂಡು ಪತಿಸಾನ್ನಿಧ್ಯದಲ್ಲೇ ಇರುವೆನೆಂಬ ಭಾವನೆಯಿಂದ ಪತಿಧ್ಯಾನಾಸಕ್ತಳಾಗಿ ಕಾಲ ನೂಕುತ್ತಿದ್ದಳು. ಬಿಜಾಪುರ ಸಂಸ್ಥಾನದ ಏಳಿಗೆಗಾಗಿ ದುಡಿಯುತ್ತಿದ್ದ ಪತಿಯ ಧೈರ್ಯ ಶೌರ್ಯ ಪರಾಕ್ರಮದ ವರ್ತಮಾನಗಳನ್ನು ಕೇಳಿ ಅವಳಿಗೆ ಅತ್ಯಂತ ಸಂತೋಷವಾಗುತ್ತಿತ್ತು. ಶಿವಾಜಿಯ ಹಾವಳಿಯನ್ನು ಸಹಿಸಲಾರದೆ ಒಂದು ಸಾರಿ ಬಿಜಾಪುರದ ಸುಲ್ತಾನನು ಷಾಹಜಿಯನ್ನೇ ಮಧ್ಯಸ್ಥಿಕೆಗಾಗಿ ಕಳುಹಿಸಿದಾಗ ಜೀಜಾಬಾಯಿ ಮಗನೊಡನೆ ಪತಿಯನ್ನು ಅತ್ಯಂತ ವೈಭವ ದಿಂದಲೂ, ವಿಶ್ವಾಸದಿಂದಲೂ ಇದಿರ್ಗೊಂಡು ನಮಸ್ಕರಿಸಿದಳು. ಪತ್ನಿಯ ನಿಷ್ಕಲ್ಮಷ ಹೃದಯವನ್ನು ಕಂಡು ಷಾಹಜಿ ಕಣ್ಣೀರಿಟ್ಟು ತನ್ನ ಅವಿವೇಕ ಕ್ಕಾಗಿ ಕ್ಷಮಾಪಣೆಯನ್ನು ಕೇಳಿದನು. 'ದಯವಿಟ್ಟು ನನ್ನಮೇಲೆ ಪಾಪ ಹೊರಿಸಬೇಡಿ. ನಾನು ನಿಮ್ಮ ಚರಣದಾಸಿ. ಕ್ಲೇಶವಾದ ಸಂಸಾರದಿಂದ ನನ್ನನ್ನು ಬಿಡುಗಡೆ ಮಾಡಿ ಆತ್ಮೋನ್ನತಿಯ ಮಾರ್ಗ ತೋರಿಸಿದಿರಿ. ಇದಕ್ಕಿಂತ ಹೆಚ್ಚಿನ ಉಪಕಾರವಿನ್ನೇನಿದೆ?' ಎಂದು ಅತಿ ವಿನಯದಿಂದ

ಉತ್ತರಕೊಟ್ಟಳು. ಕ್ರಿ. ಶ. ೧೬೬೪ ರಲ್ಲಿ ಷಾಹಜಿ ಶಿವಮೊಗ್ಗಿ ಪ್ರಾಂತದಲ್ಲಿ ತುಂಗಭದ್ರಾ ನದಿಯ ದಡದಲ್ಲಿರುವ ಬಸವಪಟ್ಟಣವೆಂಬ ಊರಿನ ಸಮೀಪ ದಲ್ಲಿ ಬೇಟೆಯಾಡುತ್ತಿರುವಾಗ ಕುದುರೆಯಿಂದ ಬಿದ್ದು ಮೃತಿಹೊಂದಿದನು. ಪತಿಯ ಮರಣವಾರ್ತೆಯನ್ನು ಕೇಳಿದ ತತ್‌ಕ್ಷಣವೇ ಜೀಜಾಬಾಯಿ ಅಗ್ನಿಪ್ರವೇಶಕ್ಕೆ ಅನುವಾದಳು. ಆಗ ಶಿವಾಜಿ ಕಣ್ಣೀರಿಡುತ್ತಾ, "ಅಮ್ಮಾ ನನಗಿನ್ನಾರು ದಿಕ್ಕು? ನಿನ್ನ ಬೆಂಬಲವಿಲ್ಲದೆ ಸ್ವರಾಜ್ಯ ಸ್ಥಾಪನೆಮಾಡುವ ಶಕ್ತಿ ನನ್ನಲ್ಲಿಲ್ಲ. ನಿನ್ನ ಉತ್ತೇಜನದಿಂದ ಇದುವರೆಗೆ ನಾನು ಸಾಧಿಸಿದುದೆಲ್ಲಾ ನಿನ್ನೊಡನೆ ಈ ಬೆಂಕಿಯಲ್ಲೇ ಭಸ್ಮವಾಗಿಹೋಗುವುದು. ಮತ್ತೆ ವಿಧರ್ಮೀಯರ ಹಾವಳಿ ದೇಶದಲ್ಲಿ ಬೇರೂರಿದಂತೆಯೇ ಸರಿ. ನಾನೂ ನಿನ್ನ ಜೊತೆಯಲ್ಲೇ ಬರುವೆನು" ಎನ್ನಲು, ಮಗನ ಮಾತಿನ ಮಹತ್ತ್ವವನ್ನರಿತ ಜೀಜಾಬಾಯಿ ತನ್ನ ಸಂಕಲ್ಪವನ್ನು ಬಿಡಬೇಕಾಯಿತು. ಈ ಘಟನೆಗಳೆರಡರ ಜೊತೆಗೆ ಹಿಂದೆ ತನ್ನ ತಂದೆ ಸೆರೆಹಿಡಿದಾಗ ಆಡಿದ ಮಾತುಗಳು—ಇವೆಲ್ಲಾ ಆಕೆಯ ಪತಿಪರಾಯಣತೆಗೆ ರತ್ನದಂತಹ ನಿದರ್ಶನಗಳಲ್ಲವೆ?

ಜೀಜಾಬಾಯಿಯ ಜೀವನಜ್ಯೋತಿಯಲ್ಲಿ ಎಣ್ಣೆ ಮುಗಿದುಬಂತು. ಮಗನ ಪಟ್ಟಾಭಿಷೇಕವಾದ ಅನತಿ ದಿವಸಗಳಲ್ಲಿಯೇ ರೋಗಗ್ರಸ್ತಳಾಗಿ ಹಾಸುಗೆ ಹಿಡಿದಳು. ತಾನಿನ್ನು ಬದುಕುವುದಿಲ್ಲವೆಂದು ಮನವರಿಕೆಯಾಗುತ್ತಲೇ ಬಡಬಗ್ಗರಿಗೆ ಅಪರಿಮಿತವಾಗಿ ದಾನಮಾಡಿದಳು. ಆ ವೀರಮಾತೆಯ ಕೊನೆಯ ದಿನ ಪುತ್ರಪೌತ್ರಾದಿ ಬಂಧುವರ್ಗದವರೂ, ಅಧಿಕಾರಿಗಳೂ ಆಕೆಯನ್ನು ಸುತ್ತುಗಟ್ಟಿ ನಿಂತು ಕಣ್ಣೀರಿನ ಕಾಣಿಕೆಯನ್ನು ಅರ್ಪಿಸುತ್ತಿದ್ದರು. ಜೀಜಾಬಾಯಿಯ ಮುಖದಲ್ಲಿ ಶಾಂತಿ ಮತ್ತು ತೃಪ್ತಿಯ ಗೆರೆಗಳು ಮಿರುಮಿರನೆ ಮಿಂಚುತ್ತಿದ್ದುವು. ಮಗನು ತನ್ನ ಮಹತ್ತ್ವಾಕಾಂಕ್ಷೆಯನ್ನು ಪೂರ್ಣಮಾಡಿ ಹಾರಿಸಿದ ಸ್ವಾತಂತ್ರ್ಯದ ಧ್ವಜವನ್ನು ಕಣ್ಣಾರೆ ನೋಡುವ ಸೌಭಾಗ್ಯ ದೊರೆಯಿತಲ್ಲ–ಎಂಬ ಆನಂದ ಮತ್ತು ಹೆಮ್ಮೆಗಳಿಂದಲೇ ದೇಹತ್ಯಾಗಮಾಡಿದಳು. ಶಿವಾಜಿ ತಾಯಿಯ ಅಂತ್ಯಕರ್ಮಗಳನ್ನು ಶ್ರದ್ಧಾಭಕ್ತಿಯಿಂದ ನೆರವೇರಿಸಿ, ಆಕೆಯ ಅಸ್ಥಿಗಳನ್ನು ಗಂಗಾ ಯಮುನಾ ಸಂಗಮದಲ್ಲಿ ಬಿಡಿಸಿದನು.

ತಾಯ್ತನದ ಕರ್ತವ್ಯವನ್ನು ಸಮರ್ಪಕವಾದ ರೀತಿಯಲ್ಲಿ ಆಚರಿಸಿ ಕೀರ್ತಿಗಳಿಸಿದವರಲ್ಲಿ ಜೀಜಾಬಾಯಿ ಮೊದಲನೆಯವಳೆಂದರೆ ಯಾರೂ

ಅಲ್ಲವೆನ್ನುವುದಿಲ್ಲ. ತನ್ನ ಅತ್ಯುತ್ತಮವಾದ ಶಿಕ್ಷಣದಿಂದ ಮಗನನ್ನು ತೇಜಶ್ಶಾಲಿಯನ್ನಾಗಿ ಮಾಡಿ ಪ್ರಪಂಚದ ಮಹಾಪುರುಷರ ಶ್ರೇಣಿಯಲ್ಲಿ ಕೂಡಿಸಿದಳು. ಮಗನಿಗೆ ಆಕೆ ಕೇವಲ ತಾಯಿಯಾಗಿರಲಿಲ್ಲ. ತಂದೆ, ಗುರು, ದೈವ, ಮಂತ್ರಿ, ಮಾರ್ಗದರ್ಶಿನಿ—ಹೀಗೆ ಎಲ್ಲ ವಿಧದಲ್ಲಿಯೂ ಅವಳ ಪಾತ್ರ ಹಿರಿದಾಗಿತ್ತು. ರಾಜನೀತಿಯಲ್ಲೂ ಆಕೆ ಅತಿ ಚತುರೆ. ಆಡಳಿತ ವಿಷಯದಲ್ಲಿ ಅವಳು ನೀಡುತ್ತಿದ್ದ ಸಲಹೆಯನ್ನು ಕೇಳಿ ಮಂತ್ರಿಗಳೆಲ್ಲಾ ತಲೆದೂಗುತ್ತಿದರು. ಶಿವಾಜಿ ಔರಂಗಜೇಬನ ಭೇಟಿಗಾಗಿ ದೆಹಲಿಗೆ ಹೋದಾಗ ಸೆರೆಸಿಕ್ಕಿದ್ದನಷ್ಟೆ. ಅವನು ಅಲ್ಲಿಂದ ತಪ್ಪಿಸಿಕೊಂಡು ಹಿಂದಿರುಗಿ ಬರಬೇಕಾದರೆ ಸುಮಾರು ಒಂದು ವರ್ಷ ಹಿಡಿಯಿತು. ಅಲ್ಲಿಯವರೆಗೆ ಸುತ್ತಲೂ ಆವರಿಸಿದ್ದ ಪ್ರಬಲ ಶತ್ರುಗಳ ಮಧ್ಯೆ ಎಚ್ಚರಿಕೆ, ಜಾಣ್ಮೆ, ದಕ್ಷತೆ—ಮೊದಲಾದುವುಗಳಿಂದ ರಾಜಕಾರ್ಯಗಳನ್ನು ನಡೆಸಿಕೊಂಡು ಹೋದಳು.

ಶಿವಾಜಿಯ ಮಾತೃಭಕ್ತಿಯೂ ಅನುಪಮವಾದುದು. ತನ್ನ ಕುಲದೇವತೆಯಾದ ಭವಾನಿಯೆಂದೇ ತಾಯಿಯನ್ನು ಪೂಜಿಸುತ್ತಿದ್ದನು. ಪ್ರಾತಃಕಾಲ ಎದ್ದಕೂಡಲೇ ತಾಯಿಯ ಸಂದರ್ಶನಮಾಡಿ ನಮಸ್ಕರಿಸಿ, ಆಶೀರ್ವಾದ ಪಡೆದಹೊರತೂ ಯಾವ ಕೆಲಸಕ್ಕೂ ಕೈಹಾಕುತ್ತಿರಲಿಲ್ಲ. ತಾಯಿಯ ಆಶೀರ್ವಾದದಲ್ಲಿ ಅವನಿಗೆ ಸಂಪೂರ್ಣವಾದ ನಂಬಿಕೆಯಿತ್ತು. ತನ್ನ ಸರ್ವ ಅಭಿವೃದ್ಧಿಗೂ ತಾಯಿಯೇ ಕಾರಣಳೆಂಬುದನ್ನು ಅವನೆಂದೂ ಮರೆಯಲಿಲ್ಲ. ಅತಿ ಸಾಮಾನ್ಯವಾದ ವಿಚಾರದಿಂದ ಸಕಲ ರಾಜಕಾರ್ಯಗಳತನಕ ಎಲ್ಲವನ್ನೂ ತಾಯಿಯೊಡನೆ ಆಲೋಚಿಸಿ ಸಲಹೆಗಳನ್ನು ಪಡೆಯಬೇಕು. ಯುದ್ಧಕ್ಕೆ ಹೊರಟಾಗ ತನ್ನನ್ನೂ ಸೈನ್ಯವನ್ನೂ ತಾಯಿ ಆಶೀರ್ವದಿಸಬೇಕು. ತಾನು ಯುದ್ಧದಲ್ಲಿ ತೋರಿಸಿದ ಸಾಹಸಗಳನ್ನು ವರದಿಮಾಡಬೇಕು. ತನ್ನ ಪ್ರತಿಯೊಂದು ಕೆಲಸವನ್ನೂ ಆಕೆ ಮೆಚ್ಚಬೇಕು. ಹಾಗಾದರೆ ಅವನ ಮನಸ್ಸಿಗೆ ಸಮಾಧಾನ. ತಾಯಿ ಬದುಕಿರುವವರೆಗೆ ಈ ರಾಜ್ಯಕ್ಕೆ ಒಡತಿ ನನ್ನ ತಾಯಿ, ನಾನಲ್ಲ ಎಂದು ಹೇಳುತ್ತಿದ್ದನು. ಒಟ್ಟಿನಲ್ಲಿ ಆ ತಾಯಿಗೆ ತಕ್ಕ ಮಗ ಛತ್ರಪತಿ, ಇವನಿಗೆ ತಕ್ಕ ತಾಯಿ ಆ ಮಹಾಸತಿ.

ಆಧುನಿಕ ಭಾರತದ ತಾಯಿಯರು ತಮ್ಮ ಉಪದೇಶದಿಂದ ಶಿವಾಜಿಯಂತಹ ಕಡುಗಲಿಗಳನ್ನು ಕಡೆದು ಭಾರತದ ಸ್ವಾತಂತ್ರ್ಯವನ್ನು ಅಮರಗೊಳಿಸಲು ಮಹಾಮಾತೃ ಶ್ರೀ ಜೀಜಾಬಾಯಿಯ ತಾಯ್ತನ ಸ್ಫೂರ್ತಿಯನ್ನು ನೀಡಲಿ.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ತೊಡಕು—ತೊಂದರೆ, ಸಿಕ್ಕು. ನಿಸ್ತೇಜ—ಕಾಂತಿಹೀನ, ಶಕ್ತಿಹೀನ. ಥಾಳಿ—ಮುತ್ತಿಗೆ, ಲೂಟಿ. ಅಸ್ತಮಿಸು—ಮುಳುಗು. ಹಳೆಯ ಪಲ್ಲವಿಯನ್ನು ಹಾಡು—ಹಿಂದಿನ ಸ್ಥಿತಿಗೆ ಇಳಿ. ಸುಯೋಗ—ಪುಣ್ಯ. ನವಚೈತನ್ಯ—ಹೊಸ ಶಕ್ತಿ. ಅರಸುಗೈ—ರಾಜ್ಯವಾಳು. ದೇಶಮುಖ—ಪಟೇಲ, ಗೌಡ. ದಳಪತಿ—ಸೇನಾಧಿಪತಿ. ಏಳಿಗೆ—ಬಾಳು. ಛತ್ರಪತಿ—ಚಕ್ರವರ್ತಿ. ಮಿಗಿಲು—ಹೆಚ್ಚು. ಐತಿಹಾಸಿಕ—ಚರಿತ್ರೆಯಲ್ಲಿ ಪ್ರಸಿದ್ಧ. ಶಿಕ್ಷಣ—ವಿದ್ಯಾಭ್ಯಾಸ (ತರಪೇತು). ಪಕ್ವಾದ—ಗುರಿಯಾದ. ಯಾತನೆ—ನೋವು. ಉಭಯ ವಂಶಗಳು—ತಂದೆಯ, ತಾಯಿಯ ಎರಡೂ ಕಡೆಯ ವಂಶಗಳು. ಘನತೆ—ಗೌರವ. ಬಯಕೆ—ಆಸೆ. ಭೀಷಣತೆ—ಭಯಂಕರವಾಗಿರುವಿಕೆ. ನವಿರೇಳು—ರೋಮಾಂಚನವಾಗು. ಸತ್ಕಥಾಶ್ರವಣ—ಒಳ್ಳೆಯ ಕಥೆಗಳನ್ನು ಕೇಳುವಿಕೆ. ಆಸಕ್ತಿ—ಆಸೆ, ಕುತೂಹಲ. ವಿಧರ್ಮಿಯರು—ಹಿಂದೂ ಧರ್ಮದ ವಿರೋಧಿಗಳು, ಮುಸ್ಲಿಮರು. ಪರಮತ ಸಹಿಷ್ಣುತೆ—ಇತರ ಮತಗಳ ವಿಷಯದಲ್ಲಿ ಸಹನೆ. ಕ್ಷತ್ರಿಯೋಚಿತ—ಕ್ಷತ್ರಿಯನಿಗೆ ಬೇಕಾದ. ಅತ್ಯಾಚಾರ—ಅಧರ್ಮಾಚರಣೆ. ಸಂಘಟಿಸು—ಒಂದುಗೂಡಿಸು. ಆದರ್ಶ—ಮಾದರಿ. ಆನಂದಬಾಷ್ಪ—ಸಂತೋಷದ ಕಣ್ಣೀರು. ಸುಪ್ಪತ್ತಿಗೆ—ಮೆತ್ತೆ, ಮೃದುಹಾಸಿಗೆ. ಮುಡುಪಿಡು—ಮೀಸಲುಮಾಡು. ಎಸಗಿದ—ಮಾಡಿದ. ಅಪಚಾರ—ಅನ್ಯಾಯ. ಏಳಿಗೆ—ಅಭಿವೃದ್ಧಿ. ಆತ್ಮೋನ್ನತಿ—ಆತ್ಮಶ್ರೇಯಸ್ಸು, ಮುಕ್ತಿ. ಸಂಕಲ್ಪ—ಆಸೆ, ಇಚ್ಛೆ. ಒಡತಿ—ಯಜಮಾನಿ. ಕಡುಗಲಿ—ಮಹಾವೀರ. ಸ್ಫೂರ್ತಿ—ಹುಮ್ಮಸ್ಸು, ಪ್ರೋತ್ಸಾಹ.

**೨. ಈ ಮಾತುಗಳ ಅಭಿಪ್ರಾಯವನ್ನು ಸಂದರ್ಭದೊಡನೆ ವಿವರಿಸಿ:—**

೧. ಕತ್ತೆಗೆ ಜ್ವರ ಬಂದರೆ ಎತ್ತಿಗೆ ಬರೆ ಎಳೆದರು.

೨. ಮಕ್ಕಳಿಗೆ ತಂದೆಯ ಶಿಕ್ಷಣಕ್ಕಿಂತ ತಾಯಿಯ ಶಿಕ್ಷಣವೇ ಹೆಚ್ಚು ಫಲಕಾರಿ.

೩. ಗೋವಧೆಯೆಂದರೆ ಹಿಂದುಗಳ ಧಾರ್ಮಿಕ ವಧೆ.

೪. ಗೋವಧೆಯನ್ನು ನೋಡಿಕೊಂಡು ತಲೆ ತಗ್ಗಿಸುವುದಕ್ಕಿಂತಲೂ ಅದರ ರಕ್ಷಣಾಕಾರ್ಯದಲ್ಲಿ ಸಾಯುವುದು ಮೇಲು.

೫. ಸಿಂಹಾಸನ ಸುಖದ ಸುಪ್ಪತ್ತಿಗೆಯಲ್ಲ; ಮುಳ್ಳಿನ ಹಾಸುಗೆ.

೬. ರಾಜ್ಯಕ್ಕೆ ಒಡತಿ ತಾಯಿ, ನಾನಲ್ಲ.

**೩. ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಬರೆಯಿರಿ :—**

೧. ಜೀಜಾಬಾಯಿ ಯಾರು? ಆಕೆಯು ವೀರವನಿತೆಯಾದುದು ಹೇಗೆ?

೨. ಶಿವಾಜಿಯ ಬಾಲ್ಯವನ್ನೂ, ಅವನ ವಿದ್ಯಾಭ್ಯಾಸವನ್ನೂ ವಿವರಿಸಿ.

೩. ಜೀಜಾಬಾಯಿ ತನ್ನ ಗಂಡನಿಂದ ದೂರವಿರಲು ಕಾರಣವೇನು? ಆಕೆಯ ಜೀವನದ ದುಃಸ್ಥಿತಿ ಏನು?

೪. ಜೀಜಾಬಾಯಿಯ ಪತಿಭಕ್ತಿಯನ್ನು ವಿವರಿಸಿ.

೫. ಜೀಜಾಬಾಯಿಯ ರಾಷ್ಟ್ರಪ್ರೇಮ, ಧರ್ಮಪ್ರೇಮಗಳನ್ನು ಚಿತ್ರಿಸಿ.

೬. ಜೀಜಾಬಾಯಿಯು ಶಿವಾಜಿಯನ್ನು ವೀರಪುರುಷನನ್ನಾಗಿ ಮಾಡಿದುದು ಹೇಗೆ?

೭. ಗೋವಿನ ಮೇಲೆ ಶಿವಾಜಿಗಿದ್ದ ಪ್ರೇಮವನ್ನು ತಿಳಿಸಿ.

೮. ಶಿವಾಜಿಯು ತಾಯಿಯಿಂದ ಕಲಿತ ಸದ್ಗುಣಗಳು ಯಾವುವು?

೯. ಶಿವಾಜಿಯು ರಾಜ್ಯವನ್ನು ಸ್ಥಾಪಿಸಿದುದು ಹೇಗೆ?

೧೦. ತಾಯಿಗೆ ತಕ್ಕ ಮಗ ಶಿವಾಜಿ— ಹೇಗೆ?

೧೧. ಶಿವಾಜಿಯ ರಾಜ್ಯಭಾರವನ್ನು ವರ್ಣಿಸಿ.

**೪. ಟಿಪ್ಪಣಿ :—**

೧. ನೆಪೋಲಿಯನ್— ಇವನು ಫ್ರಾನ್ಸ್ ದೇಶದ ಮಹಾವೀರ. ಇವನು ಇಂಗ್ಲಿಷರನ್ನು ಸದೆಬಡೆಯುತ್ತಿದ್ದನು. ಇವನ ಹೆಸರನ್ನು ಕೇಳಿದರೆ ಸಾಕು, ಶತ್ರುಗಳು ನಡುಗುತ್ತಿದ್ದರು. ಕಡೆಗೆ ಇಂಗ್ಲಿಷರು ಇವನನ್ನು ಹಿಡಿದು ಸೆಂಟ್ ಹೆಲೀನಾ ದ್ವೀಪದಲ್ಲಿ ಸೆರೆಯಲ್ಲಿಟ್ಟರು. ಅಲ್ಲಿಯೇ ಸತ್ತನು. 'ಫ್ರಾನ್ಸಿನ ಸಿಂಹ' ಎಂದು ಇವನನ್ನು ಕರೆಯುತ್ತಿದ್ದರು.

೨. ಔರಂಗಜೇಬ— ದೆಹಲಿಯಲ್ಲಿ ಆಳುತ್ತಿದ್ದ ಮೊಗಲ್ ಬಾದಷಹ. ಇವನು ಹಿಂದೂಮತದ ಪರಮದ್ವೇಷಿ. ತನ್ನ ಮತವನ್ನು ಬೆಳೆಸಲು ಏನು ಬೇಕಾದರೂ ಮಾಡುತ್ತಿದ್ದನು. ಇತರ ಮತಗಳನ್ನು ಸಹಿಸುತ್ತಿರಲಿಲ್ಲ. ಆದರೂ ಮಹಾಶೂರ, ತಂತ್ರಿ. ಶಿವಾಜಿಯನ್ನು ಉಪಾಯದಿಂದ ದೆಹಲಿಗೆ ಕರೆಸಿಕೊಂಡು

ಸೆರೆಯಲ್ಲಿಟ್ಟನು. ಆದರೆ ಶಿವಾಜಿಯು ಅವನಷ್ಟೇ ಉಪಾಯಶಾಲಿ. ಹಣ್ಣಿನ ಗೂಡೆಯಲ್ಲಿ ಕುಳಿತು ಸೆರೆಯಿಂದ ಪಾರಾದನು.

೫. **ವ್ಯಾಕರಣ:—**

೧. ಲಿಂಗ—ಎಂದರೇನು? ಲಿಂಗಗಳೆಷ್ಟು?

೨. ಈ ಪದಗಳಿಗೆ ಬೇರೆ ಲಿಂಗ, ವಚನಗಳನ್ನು ಬರೆಯಿರಿ:—

ಒಡತಿ, ಅಮ್ಮ, ಮಗ, ಸತಿ, ದೇವಿ, ರಾಜ್ಯ, ಶಿಷ್ಯ, ಬಾಲಕ.

೩. ಈ ವಿಶೇಷ ಪ್ರಯೋಗಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಉಪಯೋಗಿಸಿ:—

ಹಳೆಯ ಪಲ್ಲವಿಯನ್ನು ಹಾಡು, ಕೈಹಿಡಿ, ಮುಳ್ಳಾಗು, ಕಣ್ಣನ್ನು ಕುಕ್ಕು, ಮುಖಕೆತ್ತು, ಮೊಲಕುಹಾಕು.

# ೫. ರಾಜಶೇಖರ ವಿಲಾಸದ ಕಥೆ

ಕನ್ನಡ ಸಾಹಿತ್ಯದಲ್ಲಿ ವೀರಶೈವ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಜೈನ, ಹಿಂದೂ, ವೀರಶೈವ—ಈ ಮೂರು ಮತಗಳ ಮಹಾಕವಿಗಳೂ ಕನ್ನಡದಲ್ಲಿ ಶ್ರೇಷ್ಠ ಕಾವ್ಯಗಳನ್ನು ರಚಿಸಿದ್ದಾರೆ. ಹರಿಹರ, ರಾಘವಾಂಕ ಮುಂತಾದವರಂತೆ ಷಡಕ್ಷರಿಯೂ ಒಬ್ಬ ಶ್ರೇಷ್ಠ ಕವಿ. ಈತನು ಮೈಸೂರು ಡಿಸ್ಟ್ರಿಕ್ಟಿನ ಎಳಂದೂರು ಗ್ರಾಮದವನು. ಇಲ್ಲಿ ಈತನು ಸಂನ್ಯಾಸಿಯಾಗಿದ್ದ ಮಠವು ಇದ್ದ ಸ್ಥಳವನ್ನು ಈಗಲೂ ಕಾಣಬಹುದು. ಈತನು ಕ್ರಿ.ಶ. ೧೬೫೪ರಲ್ಲಿ ಇದ್ದನೆಂದು ಹೇಳುತ್ತಾರೆ. ಈತನಿಗೆ ಷಡಕ್ಷರದೇವ ಎಂಬ ಹೆಸರೂ ಇದೆ. ಈ ಕವಿಯು ಬಸವರಾಜವಿಜಯ, (ವೃಷಭೇಂದ್ರ ವಿಜಯ) ರಾಜಶೇಖರ ವಿಲಾಸ, ಶಬರಶಂಕರ ವಿಲಾಸ, ವೀರಭದ್ರ ದಂಡಕ ಎಂಬ ಗ್ರಂಥಗಳನ್ನು ಬರೆದು ಪ್ರಖ್ಯಾತನಾಗಿದ್ದಾನೆ. ಶಿವಭಕ್ತಿಯನ್ನು ಪ್ರಚಾರ ಮಾಡುವುದರಲ್ಲಿ ಈತನ ಗ್ರಂಥಗಳು ತುಂಬ ಹೆಸರಾದವು. ಈತನ ಶೈಲಿ ಬಿಗಿಯಾಗಿಯೂ, ರಸವತ್ತಾಗಿಯೂ ಇದೆ. ಈತನ 'ರಾಜಶೇಖರ ವಿಲಾಸ' ಕಾವ್ಯದ ಕಥೆ ಈ ರೀತಿ ಇದೆ:

೧

## ರಾಜಶೇಖರನ ಜನ್ಮ

ಮೇರುಗಿರಿಯ ದಕ್ಷಿಣ ದಿಕ್ಕಿನಲ್ಲಿ ಚೋಳಮಂಡಲವು ಧರಣೀಕಾಂತೆಯ ಸೀಮಂತ ರತ್ನದಂತೆ ಮೆರೆಯುತ್ತಿರುವುದು. ಆ ದೇಶವನ್ನು ಕಾವೇರೀ ನದಿಯು ತಾಯಿಯಂತೆ ಪಯೋದಾನ ಮಾಡುತ್ತ ಕಾಪಾಡುತ್ತಿರುವಳು. ಆ ಚೋಳ ಮಂಡಲವು ಸರ್ವ ಸಸ್ಯಸಮೃದ್ಧಿಯಿಂದ ದೇವನಗರಿಯನ್ನೂ ಹಳಿಯುವಂತಿತ್ತು.

'ಧರ್ಮವತಿ' ಎಂಬುದು ಆ ದೇಶದ ರಾಜಧಾನಿ. ಆ ನಗರಿಯು ಶೈವಧರ್ಮದ ತವರಿನಂತೆ ರಂಜಿಸುತ್ತಿತ್ತು. ಸರ್ವದಾ ಶಿವಸಾನ್ನಿಧ್ಯದಿಂದ ಪ್ರಕಾಶಿಸುತ್ತಿದ್ದ ಆ ಪುರಿಯು ಕೈಲಾಸದಂತೆ ಪವಿತ್ರವಾಗಿತ್ತು.

ಪರಮೇಶ್ವರನ ಪಾದಪೂಜೆಯಲ್ಲಿ ನಿರತನಾದ ಸತ್ಯೇಂದ್ರಚೋಳನು ಆ ದೇಶದ ಅರಸು. ಆತನು ಸಕಲಶಾಸ್ತ್ರ ಪಂಡಿತನು; ರಾಜನೀತಿ ವಿಶಾರದನು; ಜ್ಞಾನಿಗಳಿಗೆ ಆಶ್ರಯನು. ಅಮೃತಮತಿ ಎಂಬ ನಾರೀಮಣಿಯು ಆ ಸತ್ಯೇಂದ್ರನ ಪಟ್ಟದರಸಿ. ಆಕೆ ಲಾವಣ್ಯವತಿ, ಯಶೋವತಿ, ಕುಶಲಮತಿ,

ಗುಣಸಂಪನ್ನೆ ಎಂದು ಹೆಸರು ಪಡೆದಿದ್ದಳು. ಆ ನಾಡಿನ ಜನರು ಆಕೆಯನ್ನು ತಾಯಿಯಂತೆ ಭಕ್ತಿಯಿಂದ ಗೌರವಿಸುತ್ತಿದ್ದರು.

ಪತಿದ್ರೋಹಿ ಎಂಬಾತನು ಆ ಸತ್ಯೇಂದ್ರಚೋಳನ ಮುಖ್ಯ ಮಂತ್ರಿ. ಆತನು ಶಿವಭಕ್ತ, ಸಮದರ್ಶಿ, ಸದ್ಗುಣವಂತ, ರಾಜನೀತಿವಿಶಾರದ. ಆತನು ರಾಜ್ಯದ ಧರ್ಮ-ಕೋಶಗಳೆರಡನ್ನೂ ಜಾಗರೂಕತೆಯಿಂದ ಬೆಳೆಸಿ ಕಾಪಾಡುತ್ತಿದ್ದನು. ಆತನಿಗೆ ಮಿತವಚನ ಎಂಬ ಒಬ್ಬ ಮಗನಿದ್ದನು.

ಸತ್ಯೇಂದ್ರನಿಗೆ ಬಹುಕಾಲ ಮಕ್ಕಳಾಗಲಿಲ್ಲ. ಸಕಲ ಸಂಪತ್ತುಗಳು ತುಂಬಿದ್ದರೂ, ಮಕ್ಕಳಿಲ್ಲದುದು ಆ ರಾಜದಂಪತಿಗಳಿಗೆ ತುಂಬಾ ದುಃಖ ವಾಗಿತ್ತು. ಅವರು ಉತ್ತಮ ಸಂತತಿಗಾಗಿ ಜಪ, ತಪ, ಯಾಗ, ವ್ರತಾದಿ ಪುಣ್ಯಕಾರ್ಯಗಳನ್ನು ಮಾಡುತ್ತಿದ್ದರು. ರಾಜನು ತನ್ನ ದುಃಖವನ್ನು ಮಂತ್ರಿಯೊಡನೆ ತೋಡಿಕೊಂಡರೂ ಪರಿಹಾರೋಪಾಯವನ್ನು ಕಾಣದೆ ಚಿಂತಾಮಗ್ನನಾಗಿದ್ದನು.

ರಾಣಿಯು ತಾನು ಸಂತಾನವಿಲ್ಲದ ಬಂಜೆಯೆಂದು ಅಪಕೀರ್ತಿಗೆ ಗುರಿಯಾದುದಕ್ಕಾಗಿ ಕೊರಗುತ್ತಿದ್ದಳು. ಆಕೆಯು ತನ್ನ ದುಃಖವನ್ನು ಕೆಳದಿಯೊಡನೆ ಹೇಳಿಕೊಳ್ಳುತ್ತ, "ಸಖಿ, ಎಳೆವಯಸ್ಸಿನ ಮಕ್ಕಳನ್ನು ಬಾಚಿ ಅಪ್ಪಿಕೊಂಡು ಮುದ್ದಿಸುವ ಆನಂದ, ಆ ಭಾಗ್ಯ ನನಗಿಲ್ಲ. ಶಿವಭಕ್ತಿ ಇಲ್ಲದವನ ಬಾಳ್ವೆ, ಕವಿತೆ ಇಲ್ಲದವನ ಜಾಣ್ಮೆ, ಕಳೆಯಿಲ್ಲದ ಹೆಣ್ಣು, ವೇಗವಿಲ್ಲದ ಕುದುರೆ, ಮಕ್ಕಳಿಲ್ಲದ ಐಶ್ವರ್ಯ—ಇವಕ್ಕೆ ಜಗತ್ತಿನಲ್ಲಿ ಬೆಲೆಯುಂಟೆ? ಅರಳೆಲೆ, ಮಾಂಗಾಯಿಗಳು ಅಲುಗುತ್ತಿರುವಂತೆ ಓಡಿ ಬರುತ್ತಿರುವ ಮುದ್ದುಕುವರನನ್ನು ಎಂದು ಕಾಣುವೆನೋ! 'ಅಮ್ಮಾ' ಎಂದು ಕರೆದು ಕೈಹಿಡಿದೆಳೆಯುವ ಮಗನು ನನಗಾಗುವನೆ? ಮುದ್ದು ಮಗನನ್ನಪ್ಪಿ, ಮುಖ ನೋಡಿ ನಲಿದು, ಪ್ರೀತಿಯಿಂದ ಹಾಲೂಡಿ, ತೊಟ್ಟಿಲಲ್ಲಿಟ್ಟು ತೂಗುವ ಹೆಣ್ಣು ಏನು ಪುಣ್ಯ ಮಾಡಿರುವಳೋ!" ಎಂದು ನಾನಾ ರೀತಿಯಾಗಿ ಮರುಗಿದಳು.

ಆ ವೇಳೆಗೆ ಅಲ್ಲಿಗೆ ಬಂದ ರಾಜನು ತನ್ನರಸಿಯ ಮನೋವ್ಯಥೆಯನ್ನು ಅರಿತು ತಾನೂ ಸಮದುಃಖಿಯಾದನು. ಆಗ ರಾಣಿಯು, "ಆರ್ಯಪುತ್ರ, ಗಿಳಿಮರಿ ಇಲ್ಲದ ವನವೂ, ಝೇಂಕಾರದೊಡನೆ ಮರಿದುಂಬಿಯು ವಿಹರಿಸದ

ಹೂಗೊಳವೂ, ಹಂಸಶಿಶು ಅಡಿಯಿಡದ ಒದ್ದೆ ಮರಳೂ, ಮಗನಾಡದ ಅಂಗಳವೂ ಸೊಗಸುವುವೆ?" ಎಂದು ಕಂಬನಿ ತುಂಬಿದಳು.

ಆಗ ರಾಜನು ಆಕೆಯನ್ನು ಸಂತಯಿಸಿ, "ದೇವಿ, ನಿನ್ನ ಮಾತು ನಿಜ. ತನಯನಿಲ್ಲದವನ ಸಂಸಾರವು ಅಸಾರ; ತೆನೆಯಿಲ್ಲದ ಸಸಿಯಂತೆ ವ್ಯರ್ಥ. ನಮಗೆ ಗುರುಕೃಪೆಯುಂಟಾದರೆ ಉತ್ತಮಪುತ್ರನಾಗುವುದರಿದೆ? ಕಲ್ಪವೃಕ್ಷ ವಿದ್ದೂ ದಾರಿದ್ರ್ಯವೇಕೆ? ಆದ್ದರಿಂದ ಗುರುಕೃಪೆಗಾಗಿ ಪೂಜಾದಿಗಳನ್ನು ಮಾಡುತ್ತಿರೋಣ" ಎಂದು ಆಕೆಯ ಮನಸ್ಸನ್ನು ತಿಳಿಗೊಳಿಸಿದನು.

ಒಂದು ದಿನ ರಾಜಗುರುಗಳಾದ ಚಿದ್ಘನ ಶಿವಾರ್ಯರು ಅರಮನೆಗೆ ಬಿಜಯಮಾಡಿದರು. ರಾಜನು ಸಕಲ ರಾಜಮರ್ಯಾದೆಗಳಿಂದ ಅವರನ್ನು ಎದುರುಗೊಂಡು ಸಾಷ್ಟಾಂಗ ಪ್ರಣಾಮ ಮಾಡಿ, ಅರ್ಘ್ಯಪಾದ್ಯಾದಿಗಳಿಂದ ಸತ್ಕರಿಸಿ ರಾಜಗೃಹಕ್ಕೆ ಕರೆತಂದನು. ಗುರುಗಳಿಗೆ ಉಚಿತಾಸನವಿತ್ತು ರಾಜನೂ, ಉಳಿದವರೂ ತಮ್ಮ ತಮ್ಮ ಪೀಠಗಳಲ್ಲಿ ಕುಳಿತರು. ಆಗ ರಾಜನು "ಗುರುವರ್ಯ, ತಮ್ಮ ಪದಾರ್ಪಣೆಯಿಂದ ನನ್ನ ಮನೆಯು ಪವಿತ್ರವಾಯಿತು. ತಮ್ಮ ದರ್ಶನದಿಂದ ನಾವು ಕೃತಾರ್ಥರಾದೆವು" ಎಂದು ಭಕ್ತಿ, ವಿನಯಗಳಿಂದ ನುಡಿದನು.

ಶಿವಾರ್ಯರಿಗೆ ರಾಜನಲ್ಲಿ ಕರುಣೆಯುಂಟಾಯಿತು. ಅವರು "ರಾಜ, ನಿನ್ನ ವಿನಯವು ವಂಶೋಚಿತವಾದುದು. ನಿನ್ನ ಮನಸ್ಸಿನ ವ್ಯಥೆ ಏನು, ತಿಳಿಸು. ಅದನ್ನು ಪರಿಹರಿಸುವೆವು" ಎಂದರು.

ರಾಜನು "ದೇವ, ತಮ್ಮ ಮುಖದಿಂದ ಶಿವಲೀಲೆಗಳನ್ನು ಕೇಳ ಬೇಕೆಂದು ನನಗೆ ಆಸೆಯಾಗಿದೆ. ದಯೆಯಿಂದ ಅಪ್ಪಣೆಕೊಡಿಸುವುದು" ಎಂದು ಬೇಡಿದನು.

ಸಂತಾನಪ್ರಾಪ್ತಿಯ ಚಿಂತೆಯಿಂದ ಕೊರಗುತ್ತಿದ್ದರೂ, ಅದನ್ನು ಬೇಡದೆ ಪರಶಿವನ ಲೀಲಾವಿಲಾಸಗಳನ್ನು ಕೇಳಬಯಸಿದ ಆ ರಾಜನ ಶಿವಭಕ್ತಿಯನ್ನು ಗುರುಗಳು ಮೆಚ್ಚಿಕೊಂಡರು. ಅವರು ಶಿಷ್ಯಾಭಿಮಾನದಿಂದ ಶಿವ-ದಾಕ್ಷಾಯಣಿಯರ ಕಲ್ಯಾಣ, ಶಿವನ ಅರ್ಧಚಂದ್ರಾಭರಣ ಸ್ವೀಕಾರ, ಶಿವನ ಬ್ರಹ್ಮಾಂಡ ಸೃಷ್ಟಿ, ವೃಷಭವಾಹನ ವಿಲಾಸ, ಗಂಗಾಧರಲೀಲೆ, ಕಾಮದಹನ, ಪಾರ್ವತೀ ಪರಿಣಯ, ಶಿವನ ಭಿಕ್ಷುಕಲೀಲೆ, ದಕ್ಷಯಜ್ಞ

ಧ್ವಂಸ, ಗಜಚರ್ಮಾಂಬರಧಾರಣೆ, ಬ್ರಹ್ಮ ಶಿರಃಖಂಡನ, ಕಾಲಕೂಟ ವಿಷಪಾನ– ಮುಂತಾದ ಇಪ್ಪತ್ತೈದು ಶಿವಲೀಲೆಗಳನ್ನು ಹೃದಯಂಗಮವಾಗಿ ಭಕ್ತಿಪರರಾಗಿ ವರ್ಣಿಸಿದರು. ರಾಜನೂ, ಉಳಿದವರೂ ಶಿವಲೀಲೆಗಳನ್ನು ಕೇಳಿ ಆನಂದಪಟ್ಟರು.

ಅನಂತರ ರಾಣಿಯು ಮಿತಪರಿವಾರದೊಡನೆ ಬಂದು ಗುರುಗಳ ಪಾದಗಳಿಗೆ ಪುಷ್ಪಾಂಜಲಿಯಿತ್ತು ನಮಸ್ಕಾರ ಮಾಡಿದಳು. ಗುರುಗಳು ಆಕೆಯ ಇಂಗಿತವನ್ನರಿತು, "ಬಾ, ಮಗಳೆ, ನಿನಗೆ ಶಿವಪಂಚಾಕ್ಷರಿಯನ್ನು ಉಪದೇಶಿಸುವೆವು. ಅದರ ಮಹಿಮೆಯಿಂದ ನಿನ್ನ ಗರ್ಭದಲ್ಲಿ ಸೂರ್ಯವಂಶ ತಿಲಕನಾದ ಮಗನು ಹುಟ್ಟುವನು. ಆದ್ದರಿಂದ ಭಕ್ತಿಯಿಂದ ಶಿವಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಿರು" ಎಂದು ಹೇಳಿ, ಮಂತ್ರೋಪದೇಶ ಮಾಡಿ ಆಕೆಯ ಸೇವೆಯನ್ನು ಪ್ರೀತಿಯಿಂದ ಸ್ವೀಕರಿಸಿ ಹರಸಿ ಹಿಂದಿರುಗಿದರು.

ಸ್ವಲ್ಪಕಾಲ ಕಳೆಯಿತು. ಅಮೃತಮತಿಯು ಗರ್ಭಿಣಿಯಾದಳು. ಒಂದು ರಾತ್ರಿ ಬೆಳಗಿನಜಾವದ ಸಮಯದಲ್ಲಿ ಆಕೆಯು ಸ್ವಪ್ನದಲ್ಲಿ ಒಂದು ಮದ್ದಾನೆ, ಅರಳಿದ ಪದ್ಮ, ವೃಷಭ, ಸೂರ್ಯ, ಚಂದ್ರ, ಮೇರುಗಳನ್ನು ಕಂಡಳು. ಆಕೆಯು ಅದನ್ನು ಬೆಳಗ್ಗೆ ತನ್ನ ಪತಿಗೆ ತಿಳಿಸಿದಳು. ಆತನು ಸಂತೋಷದಿಂದ, "ದೇವಿ, ನೀನು ಕಂಡುದೆಲ್ಲ ಶುಭಚಿಹ್ನೆಗಳು. ಅವು ನಿನ್ನ ಗರ್ಭದಲ್ಲಿ ಶ್ರೇಷ್ಠನಾದ ಮಗನು ಹುಟ್ಟುವನೆಂಬುದನ್ನು ಸೂಚಿಸುತ್ತವೆ. ಆನೆಯು ಮಂಗಳವನ್ನೂ, ಪದ್ಮವು ಸುಗುಣವನ್ನೂ, ವೃಷಭವು ಶಿವಭಕ್ತಿಯನ್ನೂ, ಸೂರ್ಯನು ತೇಜಸ್ಸನ್ನೂ, ಸಮುದ್ರವು ಗಾಂಭೀರ್ಯವನ್ನೂ, ಮೇರು ಚಕ್ರವರ್ತಿತ್ವವನ್ನೂ, ಚಂದ್ರನು ಕಲೆಯನ್ನೂ ಸೂಚಿಸುವುವು. ಆದ್ದರಿಂದ ಈ ಸುಗುಣಗಳುಳ್ಳ ಪುತ್ರನು ನಿನ್ನಲ್ಲಿ ಜನಿಸುವುದಕ್ಕೆ ಇವು ಶುಭ ಸೂಚನೆಗಳು. ನಿನ್ನದು ಶುಭಸ್ವಪ್ನ" ಎಂದನು.

ಕೆಲವು ದಿನಗಳ ಮೇಲೆ ಅರಸಿಯು ಒಬ್ಬ ಸುಕುಮಾರನಾದ ಮಗನನ್ನು ಹಡೆದಳು. ರಾಜನಿಗೆ ಪುತ್ರೋತ್ಸವವಾದುದನ್ನು ಕೇಳಿ ಜನರು ಆನಂದಿಸಿದರು. ಉದಯಾಚಲದಿಂದೇರುವ ಬಾಲಸೂರ್ಯನ ಉದಯವು ಜಗದ ಕತ್ತಲೆಯನ್ನು ಕಳೆಯುವಂತೆ, ಪುತ್ರೋತ್ಸವವು ಆ ನಾಡಿನ ಜನರ ಮನಶ್ಚಿಂತೆಯನ್ನು ದೂರಮಾಡಿತು. ಚಿದ್ಘನ ಶಿವಾಚಾರ್ಯರು ಬಿಜಯಮಾಡಿ

ಆ ಕುಮಾರನ ಜಾತಕರ್ಮವನ್ನು ಮಾಡಿಸಿ, ಉಡುರಾಜಶೇಖರನ ಪ್ರಸಾದದಿಂದ ಹುಟ್ಟಿದ ಆ ಕುಮಾರನಿಗೆ ರಾಜಶೇಖರನೆಂದು ಹೆಸರಿಟ್ಟರು.

ಶುಕ್ಲಪಕ್ಷದ ಚಂದ್ರನಂತೆ ರಾಜಕುಮಾರನು ಸುಖವಾಗಿ ಬೆಳೆದನು. ಮಂತ್ರಿಸುತನಾದ ಮಿತವಚನನೊಡನೆ ಅವನನ್ನು ವಿದ್ಯಾಭ್ಯಾಸಕ್ಕಾಗಿ ಉತ್ತಮರಾದ ಗುರುಗಳ ಬಳಿ ಬಿಟ್ಟರು. ಮುಂಗಾರು ಮೋಡದ ಜಲಬಿಂದುವು ಮುತ್ತಿನ ಚಿಪ್ಪಿನಲ್ಲಿ ಬಿದ್ದು ಮುತ್ತಾಗುವಂತೆ, ಆಚಾರ್ಯರ ಉಪದೇಶಗಳು ಇವರಿಬ್ಬರಲ್ಲಿಯೂ ನೂರ್ಮಡಿಯಾಗಿ ಫಲಿಸಿದುವು.

ಸೋದರರಂತೆ ಬೆಳೆಯುತ್ತಿದ್ದ ಅವರಿಬ್ಬರೂ ಸಕಲವಿದ್ಯಾಪಾರಂಗತರಾಗಿ ಯೌವನಕ್ಕಡಿಯಿಟ್ಟರು. ಆಗ ಒಂದು ದಿನ ಚಿದ್ಘನ ಶಿವಾಚಾರ್ಯರು ಅರಮನೆಗೆ ಬಿಜಯಮಾಡಿ ಆ ಕುಮಾರರಿಬ್ಬರಿಗೂ ಶಿವದೀಕ್ಷೆಯನ್ನಿತ್ತು, ಷಡಕ್ಷರ ಶಿವಮಂತ್ರವನ್ನುಪದೇಶಿಸಿ, ಆ ಮಂತ್ರವನ್ನು ನಿಷ್ಠೆಯಿಂದ ಜಪಿಸಿ ಸಕಲ ಸನ್ಮಂಗಳಗಳನ್ನೂ ಪಡೆಯುವುದೆಂದು ಹರಸಿ ಹೋದರು.

ಸ್ವಲ್ಪಕಾಲ ಕಳೆಯಿತು. ಸರ್ವವಿದ್ಯಾವಿಶಾರದನಾಗಿ ತಾರುಣ್ಯದ ಕಳೆಯಿಂದ ರಂಜಿಸುತ್ತಿದ್ದ ರಾಜಶೇಖರನಿಗೆ ಯೌವರಾಜ್ಯಾಭಿಷೇಕಮಾಡಲು ರಾಜನು ನಿರ್ಧರಿಸಿದನು. ಪೌರರು ಆ ಸುದ್ದಿಯನ್ನು ಕೇಳಿ ಆನಂದಿಸಿದರು. ಶುಭಮುಹೂರ್ತದಲ್ಲಿ ಸಕಲ ಪುಣ್ಯತೀರ್ಥಗಳ ಜಲದಿಂದ ರಾಜಶೇಖರನಿಗೆ ಯೌವರಾಜ್ಯಾಭಿಷೇಕವು ಮಹಾವೈಭವದಿಂದ ನಡೆಯಿತು. ಸತ್ಯೇಂದ್ರ ಚೋಳನು ರಾಜ್ಯದ ಆಡಳಿತವನ್ನು ಮಗನ ಹೆಗಲಮೇಲಿರಿಸಿ ತಾನು ಅನವರತವೂ ಗೌರೀಶನ ಪಾದಪಂಕಜಗಳನ್ನು ಪೂಜಿಸಿ ಧ್ಯಾನಿಸುವುದರಲ್ಲಿಯೇ ಆನಂದದಿಂದ ಕಾಲಯಾಪನೆ ಮಾಡುತ್ತಿದ್ದನು.

## ರಾಜಶೇಖರನ ದಿಗ್ವಿಜಯ

ಒಂದು ದಿನ ಯುವರಾಜನು ಓಲಗವನ್ನು ಕೊಡುತ್ತಿರುವಾಗ ಕಿರಾತನೊಬ್ಬನು ಬಂದು ರಾಜದರ್ಶನವನ್ನು ಬೇಡುತ್ತಿರುವುದಾಗಿ ದ್ವಾರಪಾಲಕನು ನಿವೇದಿಸಿದನು. ಯುವರಾಜನು ಅನುಮತಿಕೊಡಲು ಆ ಕಿರಾತನು ಸಭಾದ್ವಾರದ ಬಳಿ ನಿಂತು ಕೈಜೋಡಿಸಿ ನಮಸ್ಕಾರ ಮಾಡಿ, ತನ್ನ ಕಂಕುಳಲ್ಲಿದ್ದ ಚರ್ಮದ ಕರಂಡದಲ್ಲಿ ಜೋಪಾನವಾಗಿರಿಸಿದ್ದ ಒಂದು ಅನರ್ಘ್ಯ

ರತ್ನವನ್ನು ಹೊರಕ್ಕೆ ತೆಗೆದು ರಾಜನ ಮುಂದಿರಿಸಿದನು. ಅದರ ಪ್ರಕಾಶವನ್ನು ಕಂಡು ಅಲ್ಲಿದ್ದವರೆಲ್ಲ ಬೆರಗಾದರು. ಆಗ ಅವನು ವಿನಯದಿಂದ, "ಪ್ರಭೂ, ದಕ್ಷಿಣ ಸಮುದ್ರತೀರದಲ್ಲಿ ಪುಳಿಂದಪುರವೆಂಬ ಒಂದು ಬೇಡರ ನಗರವುಂಟು. ಕಾಲಮೇಘನೆಂಬ ಕಿರಾತರೊಡೆಯನು ಅದರ ಯಜಮಾನ. ಆತನು ಒಂದು ಸಲ ತನ್ನ ಬೇಡಪಡೆಯೊಡನೆ ಬೇಟೆಗೆ ಹೊರಟು ಆನೆ, ಹುಲಿ, ಕರಡಿ, ಜಿಂಕೆ ಮೊದಲಾದ ಕಾಡು ಮೃಗಗಳನ್ನೆಲ್ಲ ಬೇಟೆಯಾಡುತ್ತ ಒಂದು ನದೀತೀರಕ್ಕೆ ಬಂದನು. ಅವರು ಬೇಟೆಯನ್ನು ನಿಲ್ಲಿಸಿ ಆ ನದಿಯಲ್ಲಿ ಮಿಂದು ಆಯಾಸವನ್ನು ಪರಿಹರಿಸಿಕೊಂಡು ತೀರವನ್ನು ಸೇರಿದರು.

"ಆಗ ಇದ್ದಕ್ಕಿದ್ದಂತೆ ಒಂದು ಪ್ರಚಂಡ ಸಿಂಹವು ನುಗ್ಗಿ ಬೇಟೆನಾಯಿಗಳನ್ನೂ ಅನೇಕ ಬೇಡರನ್ನೂ ಕೊಂದು ಗದ್ದಲವನ್ನು ಮಾಡಿತು. ಆಗ ಕಾಲಮೇಘನು ತನ್ನ ಬೇಡಪಡೆಯೊಡನೆ ಅದನ್ನು ಸುತ್ತುಗಟ್ಟಿ, ತಾನೇ ಧೈರ್ಯದಿಂದ ಮುಂದೆನುಗ್ಗಿ ಕತ್ತಿಯಿಂದ ಅದನ್ನು ಕತ್ತರಿಸಿದನು. ಅನಂತರ ಅದರ ತಲೆಯನ್ನು ಛೇದಿಸಲು ಅದರಲ್ಲಿ ಈ ಅನರ್ಘ್ಯರತ್ನವು ಕಂಡಿತು.

"ಇದರ ಪ್ರಕಾಶವನ್ನುನೋಡಿ ಅವರು ಬೆರಗಾಗಿರುವಷ್ಟರಲ್ಲಿ ಸಿಂಹಳ ದೇಶದಿಂದ ಕೆಲವರು ರಾಜಭಟರು ಬಂದು ಆ ಸಿಂಹವು ತಮ್ಮದೆಂದೂ, ಆ ರತ್ನವೂ ತಮಗೆ ಸೇರಬೇಕಾದುದೆಂದೂ ಜಗಳಮಾಡಿದರು. ಕಾಲಮೇಘನು 'ನಮ್ಮ ಪ್ರಭುವಾದ ಚಕ್ರವರ್ತಿ ರಾಜಶೇಖರನಿಗೆ ಇದು ಸೇರಬೇಕಾದುದು. ಜೋಪಾನವಾಗಿಟ್ಟುಕೊಂಡು ಹೋಗಿ ನಮ್ಮ ಕಾಣಿಕೆಯೆಂದು ಚಕ್ರವರ್ತಿಗೊಪ್ಪಿಸು' ಎಂದು ಆಜ್ಞೆಮಾಡಿ ರಹಸ್ಯವಾಗಿ ನನ್ನೊಡನೆ ಈ ರತ್ನವನ್ನು ಕಳಿಸಿರುವನು. ಆತನು ಇನ್ನೂ ಆ ಸಿಂಹಳದೇಶದವರೊಡನೆ ಹೋರಾಡುತ್ತಿರುವನು. ಆ ಸಿಂಹಳನು ತಾನು ಸಮುದ್ರದ ಮಧ್ಯೆ ಇರುವುದರಿಂದ ತನ್ನನ್ನು ಯಾರೂ ಮುಟ್ಟಲಾರರೆಂದು ಗರ್ವಿಸಿ ಮೆರೆಯುತ್ತಿದ್ದಾನೆ. ಪ್ರಭುಗಳು ನಮ್ಮ ಕಿರಾತರೊಡೆಯನ ಭಕ್ತಿಯ ಕಾಣಿಕೆಯನ್ನು ಸ್ವೀಕರಿಸಿ ಆತನನ್ನು ಕಾಪಾಡಬೇಕು" ಎಂದು ಬಿನ್ನವಿಸಿದನು.

ರಾಜಶೇಖರನು ಅದನ್ನು ಪ್ರೀತಿಯಿಂದ ತೆಗೆದುಕೊಂಡು ಕೋಶಾಧ್ಯಕ್ಷನ ಕಡೆ ತಿರುಗಿ ನೋಡಿದನು. ಕೋಶಾಧಿಕಾರಿಯು ಕೂಡಲೆ ಎದ್ದು ನಿಂತು, "ಪ್ರಭೂ, ಆ ಸಿಂಹಳನು ಇದುವರೆಗೂ ನಮಗೆ ಕಪ್ಪವನ್ನು

ಕೊಟ್ಟಿಲ್ಲ" ಎಂದು ನಿವೇದಿಸಿದನು. ಸೊಕ್ಕಿದ ಆ ಸಿಂಹಳನನ್ನು ಸದೆಯಲು ಇದೇ ತಕ್ಕ ಸಮಯವೆಂದು ಬಗೆದು ರಾಜಶೇಖರನು ಅವನಮೇಲೆ ದಂಡೆತ್ತಿ ಹೋಗಲು ರಣಕಹಳೆಯನ್ನು ಮೊಳಗಿಸುವಂತೆ ಆಜ್ಞೆ ಮಾಡಿದನು.

ಮಂತ್ರಿಸುತ ಮಿತವಚನನು "ದೇವ ತಾವು ಆಜ್ಞೆ ಮಾಡಿದರೆ ನಾನು ಹೋಗಿ ಆ ಸಿಂಹಳನನ್ನು ಹಿಡಿದು ತರುತ್ತೇನೆ. ಸಿಂಹದ ಮುಂದೆ ಹುಲ್ಲೆಯಾಟವೆ? ಈ ಮಹಾಕಾರ್ಯಕ್ಕೆ ತಾವೇ ಹೋಗಬೇಕೆ?" ಎಂದು ವಿಜ್ಞಾಪಿಸಿದನು.

"ಮಿತವಚನ, ನಿನ್ನಿಂದಾಗದ ಕೆಲಸ ಒಂದುಂಟೆ? ನನ್ನ ಭುಜಗಳ ತೀಟೆಯನ್ನು ತೀರಿಸಿಕೊಳ್ಳಲು ನಾನೇ ಸಿಂಹಳನ ಮೇಲೆ ವಿಜಯಯಾತ್ರೆ ಹೊರಡುತ್ತೇನೆ"ಎಂದು ಹೇಳಿ, ರಾಜಶೇಖರನು ತಂದೆಯ ಹರಕೆ ಪಡೆದು, ಮಂತ್ರಿ ಸೇನಾನಿಗಳೊಡನೆ ದಂಡೆತ್ತಿ ಹೊರಟನು.

ಕೆಲವು ದಿನಗಳಲ್ಲಿ ರಾಜಶೇಖರನ ಸೈನ್ಯವು ಸಿಂಹಳದ ತೀರದಲ್ಲಿ ಬಂದಿಳಿಯಿತು. ರಾತ್ರಿಯಲ್ಲಿ ಎಲ್ಲರೂ ವಿಶ್ರಾಂತಿ ಪಡೆದರು. ರಾಜಶೇಖರನು ಸೂರ್ಯೋದಯಕ್ಕೆ ಮುಂಚೆಯೇ ಎದ್ದು, ಶಿವಾರ್ಚನಾದಿ ನಿತ್ಯವಿಧಿಗಳನ್ನೆಲ್ಲ ಮುಗಿಸಿದನು. ಆತನ ಆಜ್ಞೆಯಂತೆ ಕೂಡಲೆ ರಣಭೇರಿಗಳು ದಿಕ್ತಟಗಳಲ್ಲಿ ಪ್ರತಿಧ್ವನಿ ಬರುವಂತೆ ಮೊಳಗಿದುವು.

ಆ ಧ್ವನಿಯನ್ನು ಕೇಳಿ ಸಿಂಹಳನು ಬೆರಗಾದನು. ಕಪ್ಪವನ್ನು ಕೊಡಲಿಲ್ಲವೆಂಬ ನೆವದಿಂದ ಸತ್ಯೇಂದ್ರಚೋಳನ ಮಗ ರಾಜಶೇಖರನು ಯುದ್ಧಕ್ಕೆ ಬಂದಿರುವುದಾಗಿ ಅವನ ಭಟರು ತಿಳಿಸಿದರು. ರಾಜಶೇಖರನ ಸೊಕ್ಕನ್ನು ಮುರಿಯುವೆನೆಂದು ಸಿಂಹಳನು ಮಹಾರೋಷದಿಂದ ಯುದ್ಧಕ್ಕೆ ಹೊರಟನು.

ಎರಡು ಸೈನ್ಯಗಳೂ ಹೊಡೆದಾಡಲಾರಂಭಿಸಿದುವು. ಲಕ್ಷ-ಲಕ್ಷ ಸಂಖ್ಯೆಯಲ್ಲಿ ಸೈನಿಕರ ತಲೆಗಳುರುಳಿದುವು. ಆನೆ ಕುದುರೆಗಳಂತೂ ಲೆಕ್ಕವಿಲ್ಲದಷ್ಟು ನಾಶವಾದುವು. ಎರಡು ಕಡೆಯ ಸೈನಿಕರೂ ಜೀವದ ಹಂಗು ತೊರೆದು ಕಾದಿದರು. ಸಿಂಹಳನ ಕಡೆಯಲ್ಲಿ ಅನೇಕ ರಥಿಕರು ಮಿತವಚನನಿಂದ ಹತರಾದರು. ಕೋಪೋದ್ರಿಕ್ತನಾದ ಸಿಂಹಳನು ರಾಜಶೇಖರನ ಮೇಲೆ ಸರಳ ಮಳೆಯನ್ನು ಕರೆದನು. ರಾಜಶೇಖರನು ಅವುಗಳನ್ನೆಲ್ಲ ಪರಿಹರಿಸಿಕೊಂಡು ಅವನ ಮೇಲೆ ಒಂದು ಅಮೋಘವಾದ ಶಸ್ತ್ರವನ್ನು

ಬಿಟ್ಟನು. ಅದರ ಪೆಟ್ಟಿಗೆ ಸಿಂಹಳನು ಮೂರ್ಛಿತನಾಗಿ ಬಿದ್ದನು. ಅದನ್ನು ನೋಡಿ ಅವನ ಕಡೆಯವರೆಲ್ಲ ಒಟ್ಟಿಗೆ ರಾಜಶೇಖರನನ್ನು ಮುತ್ತಿದರು. ಅವರೆಲ್ಲರೂ ಸ್ವಲ್ಪ ಹೊತ್ತಿನಲ್ಲಿಯೇ ಮಿತವಚನನ ಕತ್ತಿಗೆ ಆಹುತಿಯಾದರು. ಸ್ವಲ್ಪ ಸಮಯದಲ್ಲಿ ಸಿಂಹಳನಿಗೆ ಮೂರ್ಛೆ ತೀರಿತು. ಅವನು ತನ್ನ ಸೈನ್ಯವು ನಷ್ಟವಾದುದನ್ನು ನೋಡಿ ಯುದ್ಧರಂಗದಿಂದ ಮೆಲ್ಲನೆ ಹಿಂದೆ ಸರಿದನು. ಓಡಿಹೋಗುತ್ತಿದ್ದ ಅವನನ್ನು ಒಂದೇ ಪೆಟ್ಟಿಗೆ ಸಾಯಿಸಬೇಕೆಂದು ರಾಜಶೇಖರನು ಒಂದು ಮಹಾಸ್ತ್ರವನ್ನು ಬಿಲ್ಲಿಗೆ ಹೂಡಲು ತೆಗೆದನು. ಮಿತವಚನನು ಓಡುವವನನ್ನು ಕೊಲ್ಲಬಾರದೆಂದು ತಡೆಯಲು 'ಬದುಕಿದೆಯಾ ಬಡಜೀವವೆ' ಎಂದು ಸಿಂಹಳನು ತನ್ನ ನಗರಿಯನ್ನು ಹೊಕ್ಕನು.

ಕಮಲಾವತಿ ಎಂಬುದು ಸಿಂಹಳದೇಶದ ರಾಜಧಾನಿ. ರಾಜಶೇಖರನು ಆ ನಗರಿಯ ಮೇಲೆ ನುಗ್ಗಿದನು. ಆ ಸಿಂಹಳನು ಅಳಿದುಳಿದ ಸೈನ್ಯದೊಡನೆ ಮತ್ತೆ ರಾಜಶೇಖರನನ್ನು ಎದುರಿಸಲು ಅನುವಾದನು. ಆಗ ಅವನ ಮಂತ್ರಿಯು "ದೇವ, ರಾಜಶೇಖರನು ಸಾಮಾನ್ಯ ಮನುಷ್ಯನಲ್ಲ. ಈಶ್ವರಾನುಗ್ರಹ ಸಂಭೂತನು. ಆತನೊಡನೆ ಸಂಧಿಮಾಡಿಕೊಳ್ಳುವುದೇ ಉತ್ತಮ ಮಾರ್ಗ. ದೈವಭಕ್ತನಾದ ಪ್ರಬಲ ವಿರೋಧಿಯನ್ನು ಕೆಣಕಿದವನು ಬಿರುಗಾಳಿಗೆ ಸಿಕ್ಕಿದ ಸೊಡರಿನಂತಾಗುವನು" ಎಂದು ಸಲಹೆ ಕೊಟ್ಟನು. ಹಿಂದೆ ತನಗೆ ಬಿದ್ದ ಪೆಟ್ಟಿನ ನೆನಪಾಗಿ ರಾಜನು ಸಂಧಿಮಾಡಿಕೊಳ್ಳಲು ಒಪ್ಪಿದನು.

ಕೂಡಲೆ ಸಿಂಹಳನು ಅನೇಕ ರತ್ನಗಳನ್ನು ರಾಜಶೇಖರನಿಗೆ ಕಾಣಿಕೆಯಾಗಿ ಒಪ್ಪಿಸಿ, ತನ್ನ ಕಿರೀಟದ ಮಣಿಗಳ ಪ್ರಕಾಶದಿಂದ ಆತನ ಪಾದಗಳನ್ನು ಬೆಳಗಿದನು. ಸಿಂಹಳನು ರಾಜಶೇಖರನನ್ನು ರಾಜಬೀದಿಗಳಲ್ಲಿ ವಿಜೃಂಭಣೆಯ ಮೆರವಣಿಗೆಯಲ್ಲಿ ಕರೆತಂದು ಗೌರವಿಸಿದನು.

## ೨

## ಸರ್ವಮಂಗಳಾ ಕಲ್ಯಾಣ

ಚಕ್ರವರ್ತಿಯ ಮಗನಾದ ರಾಜಶೇಖರನು ಪುರವೀಧಿಗಳಲ್ಲಿ ಆನೆಯ ಮೇಲೆ ಕುಳಿತು ಉತ್ಸವದಲ್ಲಿ ಬರುತ್ತಿರುವುದನ್ನು ಕೇಳಿ ಪುರಜನರು ದಾರಿಯ ಎರಡು ಕಡೆಗಳಲ್ಲಿಯೂ ನಿಂತು ಹರ್ಷಧ್ವನಿಗಳಿಂದ ಆತನನ್ನು ಸ್ವಾಗತಿಸಿ

ದರು. ಮಹಡಿಗಳ ಮೇಲೆ ನಿಂತು ಪುರಸ್ತ್ರೀಯರು ಮನ್ಮಥಾಕಾರನಾದ
ಆತನನ್ನು ನೋಡಿ ಆನಂದಪಡುತ್ತಿದ್ದರು. ಆತನು ಪೌರರ ಕಾಣಿಕೆಗಳನ್ನು
ಸ್ವೀಕರಿಸುತ್ತ ಬರುತ್ತಿದ್ದನು.

ಒಂದು ಕಡೆ ಒಂದು ಮಹಡಿಯಮೇಲೆ ಓರ್ವ ಅಪೂರ್ವ ಸುಂದರಿ
ನಿಂತು ತನ್ನನ್ನೇ ಎವೆಯಿಕ್ಕದೆ ನೋಡುತ್ತಿರುವುದನ್ನು ರಾಜಶೇಖರನು
ಕಂಡನು. ರತಿಯಂತೆ ರಮಣೀಯ ಸೌಂದರ್ಯವುಳ್ಳ ಆ ಯುವತೀ
ಮಣಿಯು ಸುರಸುಂದರಿ ಇರಬೇಕೆನ್ನಿಸಿತು ಆತನಿಗೆ. ಆ ಯುವತಿ ಸಿಂಹಳ
ರಾಜನ ಮಗಳು-ಸರ್ವಮಂಗಳೆ. ಸರ್ವಮಂಗಳಾದೇವಿಯ ಅನುಗ್ರಹ
ದಿಂದ ಅವಳು ಹುಟ್ಟಿದಳು. ಅವಳು ಸಖಿಯರೊಡನೆ ಸಂಗೀತಾಭ್ಯಾಸದಲ್ಲಿ
ರುವಾಗ ಜನರು ರಾಜಶೇಖರನ ಮೆರವಣಿಗೆಯ ಸುದ್ದಿಯನ್ನು ತಿಳಿಸಲು,
ಕುತೂಹಲದಿಂದ ಬಂದ ಅವಳು ಮಹಡಿಯಿಂದ ಆತನನ್ನು ನೋಡು
ತ್ತಿದ್ದಳು.

ವನಲಕ್ಷ್ಮಿಯು ವಸಂತನನ್ನು ನೋಡುವಂತೆ, ತನ್ನನ್ನೇ ನೋಡು
ತ್ತಿದ್ದ ಸರ್ವಮಂಗಳೆಯನ್ನು ಕಂಡು ರಾಜಶೇಖರನ ಮನಸ್ಸು ಕಲಕಿ
ದಂತಾಯಿತು. ಆಕೆಯ ರೂಪಕ್ಕೆ ಮೋಹಗೊಂಡ ಆತನು "ಯಾರಿಗೂ
ವಶವಾಗದ, ಎಂದೂ ಜಾರದ, ನನ್ನ ಮನಸ್ಸು ಈ ಯುವತಿಯ
ಸೌಂದರ್ಯಕ್ಕೆ ಸೆರೆಯಾಗಲು ಕಾರಣವೇನು? ಶಶಿಮೌಳಿಯ ಇಚ್ಛೆ
ಇದ್ದಂತಾಗಲಿ!" ಎಂದು ತನ್ನಲ್ಲಿ ತಾನೇ ಸಮಾಧಾನಗೊಂಡನು.

ಉತ್ಸವವು ಮುಂದೆ ಸಾಗಿತು. ರಾಜಶೇಖರನು ಕಣ್ಮರೆಯಾಗು
ತ್ತಲೆ ಸರ್ವಮಂಗಳೆಯ ಮನಸ್ಸೂ ಆತನಲ್ಲಿ ನಟ್ಟಿದ್ದುದನ್ನು ತಿಳಿದ
ಸಖಿಯರು ಅದನ್ನು ಮಹಾರಾಣಿಗೆ ತಿಳಿಸಿದರು. ಸರ್ವಮಂಗಳೆಗೆ
ರಾಜಶೇಖರನು ಅನುರೂಪನಾದ ವರ. ಅವರಿಬ್ಬರ ದಾಂಪತ್ಯ ರತ್ನ-ಚಿನ್ನ
ಗಳ ಜೋಡಿಯಂತೆ ಸೊಗಸಾಗಿರುವುದೆಂದು ತಿಳಿದು ಆಕೆ ಅದನ್ನು ರಾಜನಿಗೆ
ವಿಜ್ಞಾಪಿಸಿದಳು. ರಾಜನೂ ಒಪ್ಪಿದನು. ಅಷ್ಟು ಹೊತ್ತಿಗೆ ರಾಜಶೇಖರನ
ಮಂತ್ರಿ ಪತಿಮೋಹಿಯೂ ಬಂದನು. ಅವನು ಯುವರಾಜನ ಮನಸ್ಸು
ಸರ್ವಮಂಗಳೆಯ ಮೇಲಿರುವುದನ್ನು ತಿಳಿಸಿ ಅವರಿಬ್ಬರಿಗೂ ಮದುವೆ
ಮಾಡುವುದೇ ಮಂಗಳಕರವೆಂದು ಸಲಹೆಮಾಡಿದನು.

ರಾಜನಿಗೆ ತನ್ನ ಮನೋರಥವು ಅಷ್ಟು ಸುಲಭವಾಗಿ ಈಡೇರಿದುದಕ್ಕೆ ತುಂಬಾ ಸಂತೋಷವಾಯಿತು. ಕೂಡಲೆ ಪುರೋಹಿತರನ್ನು ಕರೆಸಿ ಶುಭ ಮುಹೂರ್ತವನ್ನು ನಿರ್ಣಯಿಸಿ ಸತ್ಯೇಂದ್ರಚೋಳನಿಗೆ ಆಹ್ವಾನ ಕಳಿಸಿದನು. ಶತ್ರುವಾಗಿದ್ದ ಸಿಂಹಳನು ಸಮೀಪ ಬಂಧುವಾದುದು ಸತ್ಯೇಂದ್ರನಿಗೂ ಸಂತೋಷದ ಸುದ್ದಿಯಾಯಿತು. ಆ ರಾಜದಂಪತಿಗಳು ಸಿಂಹಳನ ರಾಜಧಾನಿಗೆ ಬಂದರು. ಶುಭಮುಹೂರ್ತದಲ್ಲಿ ಸರ್ವಮಂಗಳೆ-ರಾಜಶೇಖರರ ಕಲ್ಯಾಣವು ಮಹಾ ವೈಭವದಿಂದ ನಡೆಯಿತು. ಪಾರ್ವತೀ-ಪರಮೇಶ್ವರರ ಕಲ್ಯಾಣದಂತಿತ್ತು ಅವರ ಅನುಗ್ರಹ ಸಂಜಾತರ ವಿವಾಹ. ರಾಜಶೇಖರನು ತನ್ನ ಸತಿಯೊಡನೆ ಸಂತೋಷದಿಂದ ಕೆಲವುಕಾಲ ಕಳೆದು ಅನಂತರ ರಾಜಧಾನಿಗೆ ಹಿಂದಿರುಗಿದನು. ಸರ್ವಮಂಗಳೆಯ ತಾಯಿ ಕಲಾಧರೆಯು ಉತ್ತಮ ಸತಿಯಾಗಿ ಉಭಯ ಕುಲವರ್ಧಿನಿಯಾಗಿ ಬಾಳುವಂತೆ ಮಗಳಿಗೆ ಬುದ್ಧಿ ಹೇಳಿ ಹರಸಿದಳು.

ಮಗನೂ ಸೊಸೆಯೂ ಬರುವುದನ್ನು ತಿಳಿದು ಸತ್ಯೇಂದ್ರನು ಆನಂದಿಸಿದನು. ಪೌರರು ತಳಿರು ತೋರಣಗಳಿಂದ ನಗರಿಯನ್ನಲಂಕರಿಸಿ ಯುವರಾಜನನ್ನೂ ಯುವರಾಣಿಯನ್ನೂ ಪರಮಾನಂದದಿಂದ ಸ್ವಾಗತಿಸಿದರು. ಅವರು ಹಿರಿಯರ ಆಶೀರ್ವಾದಗಳನ್ನು ಪಡೆದು ಸುಖವಾಗಿ ಬಾಳುತ್ತಿದ್ದರು.

## ೩

## ರಾಜಶೇಖರವಿಲಾಸ

ಒಂದು ದಿನ ರಾಜಶೇಖರನು ರಾಜಸಭೆಯನ್ನು ನಡೆಸಿದನು. ಅನೇಕ ಸಾಮಂತರಾಜರು ಚಕ್ರವರ್ತಿಗೆ ಕಪ್ಪ ಕಾಣಿಕೆಗಳನ್ನು ಸಲ್ಲಿಸಿದರು. ಅವರಲ್ಲಿ ಒಬ್ಬನಾದ ಸಿಂಧುರಾಜನು ತನ್ನಲ್ಲಿದ್ದ ಗಂಧರ್ವಜಾತಿಯ ಎರಡು ಉತ್ತಮಾಶ್ವಗಳನ್ನು ರತ್ನಾಂಜಲಿಯೊಡನೆ ಕಾಣಿಕೆಯಾಗಿ ಒಪ್ಪಿಸಿದನು. ಆ ಎರಡು ಕುದುರೆಗಳೂ ಸರ್ವಶುಭಲಕ್ಷಣಗಳಿಂದ ಕೂಡಿ ಒಂದೇ ರೀತಿಯಾಗಿದ್ದುವು. ಈ ಅಪೂರ್ವ ಕಾಣಿಕೆಯಿಂದ ಸಿಂಧುರಾಜನು ಚಕ್ರವರ್ತಿಯಿಂದ ವಿಶೇಷಬಹುಮಾನ ಪಡೆದು ಹಿಂದಿರುಗಿದನು.

ಅಶ್ವಪರೀಕ್ಷಕರು ಅವುಗಳ ಶುಭಲಕ್ಷಣಗಳನ್ನು ನೋಡಿ ಬಹುವಾಗಿ ಹೊಗಳಿದರು. ರಾಜಶೇಖರನು ಯಾವಾಗಲೂ ತನಗೆ ಕಾಣುವ ಸ್ಥಳದಲ್ಲಿ ಪ್ರತ್ಯೇಕಾಲಯದಲ್ಲಿ ಅವುಗಳನ್ನು ಕಟ್ಟಿಸಿದನು. ಅಂದಿನ ಸಭೆಯು ವಿರಾಮುಗೊಂಡಿತು.

ಒಂದು ದಿನ ರಾಜಶೇಖರನು ಶಿವಪೂಜಾವಿಧಿಗಳನ್ನು ಮುಗಿಸಿ, ಊಟ ಮಾಡಿ, ತಾಂಬೂಲವನ್ನು ಸೇವಿಸುತ್ತ ಮಿತವಚನನೊಡನೆ ಸುಖಾಸೀನನಾಗಿ ಅನೇಕ ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿದ್ದನು. ಆಗ ಎದುರಿಗೆ ಉತ್ತಮಾಶ್ವಗಳು ಕಾಣಲು ಆತನು, "ಮಿತವಚನ, ಈ ಹೊಸ ಕುದುರೆಗಳಲ್ಲಿ ಒಂದನ್ನು ನೀನೂ, ಒಂದನ್ನು ನಾನೂ ಏರಿ ಸೇನೆಯೊಡನೆ ವಿಲಾಸದಿಂದ ನಗರದ ರಾಜಬೀದಿಗಳಲ್ಲಿ ವಿಹರಿಸೋಣ" ಎಂದನು.

ಮಿತವಚನನು ಸ್ವಲ್ಪಕಾಲ ಯೋಚಿಸಿದನು. ಅವನಿಗೆ ಅದು ಉಚಿತವಾಗಿ ಕಾಣಲಿಲ್ಲ. ಆಗ ಅವನು "ವಿವೇಕನಿಧಿ, ತಮ್ಮಾಜ್ಞೆಗೆ ವಿರುದ್ಧವಾಗಿ ಹೇಳುತ್ತೇನೆಂದು ಅನ್ಯಥಾ ಭಾವಿಸಬಾರದು. ಶಿವಭಕ್ತರಾದ ಜನರಿಂದ ತುಂಬಿದ ನಗರವಿದು. ಈ ಹೊಸ ಕುದುರೆಗಳನ್ನೇರಿ ಈ ನಗರಿಯಲ್ಲಿ ವಿಹರಿಸುವುದು ಉಚಿತವಾಗಿ ಕಾಣುವುದಿಲ್ಲ. ರಾಜರಾದವರು ಹೊಸ ಕುದುರೆಗಳನ್ನು ಸಹಣಿಗಳಿಂದ ತಿದ್ದಿಸಿ, ಅವು ದಾರಿಗೆ ಬಂದಮೇಲೆ ಏರುವುದುಚಿತ. ಮಕ್ಕಳಂತಿರುವ ಈ ಶಿವಭಕ್ತರಾದ ಜನರಿಗೆ ನಮ್ಮ ದೆಸೆಯಿಂದ ಏನಾದರೂ ಕೇಡುಂಟಾದರೆ ಚೋಳರಾಜನು ಸೈರಿಸಿಯಾನೆ? ಹಿಂದೆ ಧರ್ಮೇಂದ್ರನ ಮಗನು ರಥವನ್ನೇರಿ ರಾಜಬೀದಿಯಲ್ಲಿ ವಿಹರಿಸುತ್ತಿರುವಾಗ ಅವನ ರಥಕ್ಕೆ ಸಿಕ್ಕಿ ಒಂದು ಮಗು ಸಾಯಲು ಧರ್ಮಸ್ವರೂಪನಾದ ಆ ರಾಜನು ಆ ರಾಜಕುಮಾರನನ್ನು ಮರಣಕ್ಕೆ ಗುರಿಮಾಡಿದನು. ಶಿವಭಕ್ತರು ಅಪರಾಧಿಗಳನ್ನು ಸುತ, ಸೋದರರೆಂದೆಣಿಸುವುದಿಲ್ಲ. ಅಪರಾಧಿಯು ಅಪರಾಧಿಯೆ. ಅತ್ಯಂತ ಪ್ರತಾಪನೂ, ಅಶ್ವಗಜಾದ್ಯಾರೋಹಣಸಮರ್ಥನೂ ಆದ ನಿನಗೆ ನಾನು ಭೀತಿಯನ್ನುಂಟುಮಾಡುತ್ತಿಲ್ಲ. ಹೊಸ ಕುದುರೆಗಳಾದುದರಿಂದ, ಅವುಗಳ ಯೋಗ್ಯತೆಯರಿಯದೆ ಆತುರದಿಂದ ಈ ಕಾರ್ಯಕ್ಕೆಳಿಯುವುದಕ್ಕಿಂತ ಸ್ವಲ್ಪ ನಿಧಾನಿಸುವುದು ಉತ್ತಮವೆಂದು ಭಾವಿಸುತ್ತೇನೆ.

"ಹಿತರಾದವರ ವಚನವನ್ನಾಲಿಸದೆ, ಮುಂದಾಗುವ ಫಲಾಫಲಗಳನ್ನು ವಿಚಾರಿಸದೆ ಕೆಲಸಮಾಡುವವರನ್ನು ಜನರು ತೆಗಳುವರು.

"ಸಿರಿತನ ಬಂದಾಗ ಪರಹಿತವನ್ನೂ, ವಿದ್ಯೆ ಇರುವಾಗ ಮಾತ್ಸರ್ಯ ರಾಹಿತ್ಯವನ್ನೂ, ಪ್ರಭುತ್ವ ಬಂದಾಗ ನ್ಯಾಯಾಚರಣೆಯನ್ನೂ, ಶೌರ್ಯವಿರುವಾಗ ವಿನಯವನ್ನೂ ಪಡೆದು ಶಾಂತಿಯಿಂದ ನಡೆಯುವವರಿಗೆ ಸಮರುಂಟೆ?

"ಅವಶ್ಯವಾಗಿ ಸಂಭವಿಸುವುದನ್ನು ತಪ್ಪಿಸಲು ದೇವನಿಗೂ ಸಾಧ್ಯವಿಲ್ಲ. ಹಾಗೆಂದು ಮಾಡಬಾರದ ಕೆಲಸವನ್ನು ಮಾಡಲು ಬಯಸಬಹುದೆ?

"ಕೊನೆ ಮುಟ್ಟದ, ಫಲವಿಲ್ಲದ, ನಿಂದೆಗೀಡುಮಾಡುವ, ಇತರರಿಗೆ ಸಂಕಟಕರವಾದ, ಇತರರ ನಾಶಕ್ಕೆ ಕಾರಣವಾಗುವ ಕಾರ್ಯವನ್ನು ಉದಾರಮತಿಯಾದವನು ಮಾಡಬಹುದೆ?

"ಇಷ್ಟವಾದುದನ್ನು ಮಾಡಬೇಕು; ಅನಿಷ್ಟವಾದುದನ್ನು ಮಾಡಬಾರದು—ಎಂಬ ನೀತಿಯನ್ನು ರಾಜಕುಮಾರರು ಅಲಕ್ಷಿಸಬಹುದೆ?

"ನೀತಿವಿಶಾರದ, ಆಡಿಗಡಿಗೆ ಆಪ್ತರೊಡನೆ ಚರ್ಚಿಸಿ ಯುಕ್ತಾಯುಕ್ತತೆಯನ್ನರಿತು ಕೆಲಸಮಾಡುವವರ ಕಾರ್ಯಕ್ಕೆಡರುಂಟೆ? ಅವರ ಕಾರ್ಯಸಿದ್ಧಿಯು ಖಂಡಿತ ಆಗುವುದು.

"ನಯವಿದರ ಮಾತು ವಿಪತ್ತನ್ನು ಪರಿಹರಿಸಿ ಸಂಪತ್ತನ್ನು ಸೇರಿಸುವುದು; ಸರ್ವತ್ರ ಕೀರ್ತಿಯನ್ನು ಹರಡುವುದು; ಶತ್ರುಗಳನ್ನು ತಲೆಬಾಗಿಸುವುದು. ನ್ಯಾಯವೇತ್ತರ ಕಾರ್ಯಕ್ಕೆ ಯಾವಾಗಲೂ ಜಯವು ಸಿದ್ಧ.

"ನೀತಿಯೆಂಬುದು ಭ್ರಾಂತಿ ಇಲ್ಲದುದು; ಸಂತೋಷಪ್ರದವಾದುದು. ಇತರರಂತೆ ನೀನೂ ಅದನು ಅಲಕ್ಷಿಸಬಾರದು. ಅಂಥ ಲೋಭ ನಿನ್ನಲ್ಲಿ ಕಂಡೀತೇ? ಜಗತ್ತಿನ ಜನರ ಕಣ್ಣುಗಳನ್ನು ಮುತ್ತುವ ಕೌಳ್ಕತ್ತಲೆಯು ಜಗಚ್ಚಕ್ಷುವಾದ ಸೂರ್ಯನನ್ನು ಮುತ್ತೀತೇ?

"ಯುವರಾಜ, ಸಜ್ಜನರು ಬೇಡವೆಂಬುದನ್ನು ಮಾಡುವುದು ಹಿತಕರವಲ್ಲ. ಚೆನ್ನಾಗಿ ಆಲೋಚಿಸಿ ಸತ್ಕೀರ್ತಿಯನ್ನು ತರುವ ಕಾರ್ಯವನ್ನೇ ಮಾಡಬೇಕಾದುದು ನಮ್ಮ ಕರ್ತವ್ಯ. ಇದರ ಮೇಲೆ ಪ್ರಭುಚಿತ್ತ" ಎಂದು ವಿನಯದಿಂದ ಸಲಹೆ ಮಾಡಿದನು.

ಮಿತವಚನನ ಮಾತನ್ನು ಕೇಳಿ ರಾಜಶೇಖರನು ನಕ್ಕನು. ಆತನು "ಮಿತ್ರ, ಕಾರ್ಗಾಲದ ಮುಗಿಲು ಗುಡುಗುಡಿಸಿ ಗರ್ಜಿಸುವುದೆಂದು ಹೆದರಿ ಹಂಸವು ಜಲಕ್ರೀಡೆಯನ್ನು ಬಿಡುವುದೆ? ಸಂಪಿಗೆಯ ವಾಸನೆಯು ತೀಡುವುದೆಂದು ಹೆದರಿ ದುಂಬಿಯು ಹೂದೋಟಕ್ಕೆ ಹೋಗದಿರುವುದೆ? ಕಾಲಿಗೆ ಮುಳ್ಳು ಚುಚ್ಚುವುದೆಂದು ಹೆದರಿ ಆನೆಯು ಕಾಡಿನಲ್ಲಿ ಸಂಚರಿಸದಿರುವುದೆ? ಆದ್ದರಿಂದ ಮುಂದೇನು ಹಾನಿ ಬರುವುದೋ ಎಂಬ ಹೆದರಿಕೆಯಿಂದ ವಿನೋದಕೇಳಿಯನ್ನು ತೊರೆಯುವವನು ಹೇಡಿ ಎನ್ನಿಸಿಕೊಳ್ಳುವನು. ಇದು ರಾಜಧರ್ಮವೇ?" ಎಂದನು. ಯುವರಾಜನ ಮಾತನ್ನು ಕೇಳಿ ಮಿತವಚನನಿಗೆ ಆಶ್ಚರ್ಯವಾಯಿತು. ಮಹಾಪಂಡಿತನೂ ದೂರದರ್ಶಿಯೂ ಆದ ಆತನು ವಿನೋದಕ್ಕಾಗಿ ತನ್ನನ್ನು ಪರೀಕ್ಷಿಸುತ್ತಿರುವನೆಂದು ಭಾವಿಸಿ ಅವನು "ಯುವರಾಜ, ಧರ್ಮಜನು ಅಶರೀರವಾಣಿಯನ್ನು ಕೇಳಿ ಜಲಪಾನಕ್ಕಾಶಿಸದೆ ಮನಸ್ಸನ್ನು ನಿಗ್ರಹಿಸಿದುದರಿಂದ ತಾನೂ ಉಳಿದುಕೊಂಡನು; ಸೋದರರನ್ನೂ ಬದುಕಿಸಿದನು. ರಾಜಧರ್ಮದಂತೆ ನಡೆದುದರಿಂದ ಆತನು ಶ್ರೇಷ್ಠವಾದ ಕೀರ್ತಿಯನ್ನೂ ಪಡೆದನು. ಹಿತಾಹಿತಗಳನ್ನು ಆಲೋಚಿಸುವುದರಿಂದ ನಮ್ಮ ಹಿರಿಮೆಗೆ ಎಂದೂ ಹಾನಿ ಬರುವುದಿಲ್ಲ.

"ಅಭಿಮಾನ, ಶಿವಭಕ್ತಿ, ಧರ್ಮ, ನಿರ್ಮಲ ಕೀರ್ತಿಗಳಿಗೆ ಚ್ಯುತಿಯುಂಟಾಗುವುದಾದರೆ ಎಂಥವರೂ ಹೆದರಲೇಬೇಕು. ಮನುಷ್ಯನು ತನ್ನ ಮುಖವನ್ನೇ ಕನ್ನಡಿಯಲ್ಲಿ ನೋಡಿ ನಲಿಯುವಂತೆ, ನಿನ್ನ ನಯ ಕೌಶಲವನ್ನು ನನ್ನಲ್ಲಿ ಕಂಡು ಆನಂದಪಡುವುದು ನಿನಗೆ ನ್ಯಾಯವೇ ತಾನೆ!" ಎಂದು ವ್ಯಂಗ್ಯವಾಗಿ ವಿಹಾರಕ್ಕೆ ತನ್ನ ವಿರೋಧವನ್ನು ವ್ಯಕ್ತಪಡಿಸಿದನು.

ರಾಜಶೇಖರನು ಮಿತವಚನನ ಚಾತುರ್ಯಕ್ಕೆ ಮೆಚ್ಚಿದನು. ಆದರೂ ವಿಹಾರ ವಿನೋದವನ್ನು ಬಿಡಲು ಆತನಿಗೆ ಇಷ್ಟವಿರಲಿಲ್ಲ. ಆತನು, "ವಯಸ್ಯ, ಈಶ್ವರನಿಟ್ಟ ಹುಲ್ಲುಕಡ್ಡಿಯನ್ನು ವಿಷ್ಣು ಬ್ರಹ್ಮಾದಿಗಳೂ ಕದಲಿಸಲಾರರು. ಈಶ್ವರಾಜ್ಞೆಯನ್ನು ಭುವನದಲ್ಲಿ ಯಾರೂ ಮೀರಲಾರರು. ಬರುವ ಶುಭಾಶುಭಗಳು ಹೇಗಿದ್ದರೂ ಬಂದೇ ಬರುವುವು. ಆದ್ದರಿಂದ ಹಿಂಜರಿಯುವುದೇಕೆ? ಹೊಸ ಕುದುರೆಗಳಿಂದು ನಾವು ಹೆದರಿದರೆ ನಮ್ಮನ್ನು ಯಾರಾದರೂ ಉತ್ತಮ ಸವಾರರೆಂದು ಕರೆದಾರೆ? ಶಿವಭಕ್ತರಿಗೆ

ಏನಾದರೂ ಹಾನಿಯಾದರೆ ತಂದೆ ಶಿಕ್ಷಿಸಿಯಾನು ಎಂದು ಹೆದರಬೇಡ. ನಿನ್ನ ಅಪರಾಧವು ನನ್ನದು. ಅಂಥ ಸ್ಥಿತಿ ಬಂದಾಗ ಜೀವನದ ಹಂಗು ತೊರೆದು ಮುಕ್ತಿಯನ್ನು ಸಾಧಿಸಲೂ ಸಿದ್ಧ. ಈಶ್ವರೇಚ್ಛೆಯನ್ನಾರು ಬಲ್ಲರು? ಮಿತ್ರ "ನನ್ನಾಸೆಗೆ ಮಣ್ಣೆರಚಬೇಡ. ಈ ಉತ್ತಮಾಶ್ವಗಳ ನ್ನೇರಿ ನಾಳೆಯೇ ನಗರವೀಥಿಗಳಲ್ಲಿ ವಿಹರಿಸೋಣ. ನಮ್ಮ ವೈಹಾಳಿಗೆ ತಕ್ಕ ಏರ್ಪಾಡು ಮಾಡು, ಏಳು!" ಎಂದು ಮಿತವಚನನನ್ನು ಒತ್ತಾಯ ಪಡಿಸಿ ಒಪ್ಪಿಸಿದನು.

ಇದ್ದಕ್ಕಿದ್ದಂತೆ ಯುವರಾಜನು ಈ ರೀತಿ ಒತ್ತಾಯ ಮಾಡುತ್ತಿದ್ದು ದನ್ನು ನೋಡಿ ಮಂತ್ರಿಕುಮಾರನು ಶಿವನ ಲೀಲೆಯನ್ನಾರುಬಲ್ಲರು? ಎಂದು ಕೊಂಡನು. ಏನೋ ಅನರ್ಥವಾಗುವುದು ಎಂದು ಆತನ ಮನಸ್ಸು ಅಳುಕುತ್ತಿತ್ತು. ಸತ್ಪುರುಷರಿಗೆ ಅವರ ಆತ್ಮವೇ ಸಾಕ್ಷಿ. ಆದರೂ ಯತ್ನ ವಿಲ್ಲದೆ ಅವನು ಒಪ್ಪಬೇಕಾಯಿತು.

ಮಾರನೆಯ ದಿನವೇ ರಾಜಶೇಖರನ ವೈಹಾಳಿಗೆ ಸಿದ್ಧತೆಗಳಾಗುವಂತೆ ಮಂತ್ರಿಪುತ್ರನು ವ್ಯವಸ್ಥೆ ಮಾಡಿದನು. ರಾತ್ರಿ ಕಳೆದು ಬೆಳಗಾಗಲು, ರಾಜಶೇಖರನು ಉಷಃಕಾಲಕ್ಕೆ ಎದ್ದು ನಿತ್ಯವಿಧಿಗಳನ್ನು ಮುಗಿಸಿ ಉತ್ಸವೋಚಿತವಾದ ಉಡುಪುಗಳನ್ನು ಧರಿಸಿ ವಿಹಾರಕ್ಕೆ ಸಿದ್ಧನಾದನು. ಮಿತವಚನನೂ ಶಿವಾರ್ಚನಾದಿ ನಿತ್ಯವಿಧಿಗಳನ್ನು ಮುಗಿಸಿ ಮೆರವಣಿಗೆಗೆ ಸಿದನಾಗಿ ಅರಮನೆಗೆ ಬಂದನು. ನಗರಿಯಲ್ಲಿದ್ದ ಅನೇಕ ಸಾಮಂತ ರಾಜಕುಮಾರರೂ ತಮ್ಮ ಕುದುರೆಗಳನ್ನೇರಿ ಉತ್ಸವಕ್ಕೆ ಸಿದ್ಧರಾಗಿ ಬಂದರು.

ಸೇವಕರು ಸುಂದರಾಲಂಕಾರದಿಂದ ಶೋಭಿಸುತ್ತಿದ್ದ ಆ ಉತ್ತಮಾಶ್ವ ಗಳನ್ನು ತಂದು ನಿಲ್ಲಿಸಿದರು. ಮದಿಸಿದ ಆ ಕುದುರೆಗಳನ್ನೇರಲು ಎಂಥ ನಿಷ್ಣಾತನಾದ ಸವಾರನಿಗೂ ಧೈರ್ಯವಿರಲಿಲ್ಲ. ರಾಜಶೇಖರನು 'ಪವನಗತಿ' ಎಂಬ ಕುದುರೆಯನ್ನೂ ಮಿತವಚನನು 'ಹರಿಣಗತಿ' ಎಂಬ ಕುದುರೆಯನ್ನೂ ಏರಿ ಉತ್ಸವದಲ್ಲಿ ಹೊರಟರು. ಜಯಂತ, ನಲಕೂಬರ ರಂತಿದ್ದ ಅವರಿಬ್ಬರೂ ಉತ್ತಮ ಹಯಾರೂಢರಾಗಿ ಬರುತ್ತಿದ್ದುದನ್ನು ನೋಡಿ ಪೌರರು ಪರಮಾನಂದಭರಿತರಾದರು. ಸಾಮಂತರೂ, ಸೈನ್ಯವೂ ಅವರ ಸುತ್ತಲೂ ಹೊರಟಿತು.

ಆ ಕುದುರೆಗಳು ನಾಟ್ಯವಾಡುತ್ತ ಹೊರಟವು. ಇದ್ದಕ್ಕಿದ್ದಂತೆ ಅವು ಜಿಂಕೆಗಳಂತೆ ಹಾರುವುವು; ಚೆಂಡಿನಂತೆ ನೆಗೆಯುವುವು; ಹಠಾತ್ತನೆ ಮಿಂಚಿನಂತೆ ಗಗನದಲ್ಲಿ ಸುಳಿಯುವುವು; ಒಂದೊಂದು ವೇಳೆ ಗರುಡವೇಗದಿಂದ ಒಂದೇ ಸಮನೆ ಓಡುವುವು. ನಿಷ್ಣಾತರಾದ ಕುದುರೆ ಸವಾರರೂ ಅಶ್ವಶಿಕ್ಷಕರೂ ಅವುಗಳ ವಿಚಿತ್ರ ನಡಿಗೆಗೆ ವಿಸ್ಮಯಪಡುತ್ತಿದ್ದರು. ಅವರಿಬ್ಬರೂ ಆ ನಿರಂಕುಶಾಶ್ವಗಳನ್ನು ಮಹಾ ಚತುರತೆಯಿಂದ ನಡೆಸುತ್ತಿದ್ದುದನ್ನು ನೋಡಿ ಜನರು ಆಶ್ಚರ್ಯ ಚಕಿತರಾದರು. ದಾರಿಯುದ್ದಕ್ಕೂ ಪ್ರಜೆಗಳ ಜಯಕಾರಗಳು ಅವರನ್ನು ಸ್ವಾಗತಿಸಿದುವು. ಅಂದು ಆ ನಗರಿಯ ಜನರ ಕಣ್ಣುಗಳಿಗೆ ಸೊಗಸಾದ ಔತಣವಾಯಿತು.

ಉತ್ಸವವು ಮಹಾ ವೈಭವದಿಂದ ನಗರದ ಹೊರಗಿನ ಆಟದ ಬಯಲಿಗೆ ಬಂದಿತು. ಅಲ್ಲಿ ಸೈನಿಕರ ವಿನೋದ ಯುದ್ಧವು ನಡೆಯಿತು. ಅನಂತರ ರಾಜಶೇಖರನು ಅರಮನೆಗೆ ಹಿಂದಿರುಗಲು ಆಜ್ಞೆಮಾಡಿದನು. ಮತ್ತೆ ಮೆರವಣಿಗೆಯು ರಾಜಬೀದಿಗಳಲ್ಲಿ ಹಿಂದಿರುಗಿತು. ಯುವರಾಜನು ಹಿಂದಿರುಗಿ ಬರುತ್ತಿರುವ ವೈಭವವನ್ನು ನೋಡಲು ಜನಗಳು ಮತ್ತೆ ಕಿಕ್ಕಿರಿದಿದ್ದರು. ಪೌರರು ಮತ್ತೆ ಅವರೆಲ್ಲರ ಮೇಲೆ ಹೂಮಳೆ ಕರೆದರು.

ಆ ನಗರಿಯಲ್ಲಿ 'ತಿರುಕೊಳವಿನಾಚಿ' ಎಂಬ ಶಿವಭಕ್ತೆಯೊಬ್ಬಳಿದ್ದಳು. ಪತಿವಿಹೀನೆಯಾದ ಅವಳಿಗೆ 'ಶಂಕರ'ನೆಂಬ ಐದು ವರುಷದ ಮುದ್ದು ಮಗನೊಬ್ಬನೇ ಇದ್ದ ಎಲ್ಲಾ ಆಸ್ತಿ. ರಾಜಶೇಖರನು ವೈಹಾಳಿಯಲ್ಲಿ ಬರುವ ಹೊತ್ತಿಗೆ ಆಕೆಯು ಮಗನನ್ನು ಮನೆಯಲ್ಲಿ ಬಿಟ್ಟು ನೀರು ತರಲೆಂದು ಹೋಗಿದ್ದಳು. ಊರಿನ ಜನರೆಲ್ಲ ರಾಜಬೀದಿಗಳಲ್ಲಿ ನೆರೆದು ರಾಜಕುಮಾರನ ಮೆರವಣಿಗೆಯನ್ನು ನೋಡುತ್ತಿದ್ದರು. ಅವರ ಕಲಕಲ ಧ್ವನಿಯನ್ನು ಕೇಳಿ ಆ ಬಾಲಕನು ಕುತೂಹಲದಿಂದ ಮನೆಯಿಂದ ಹೊರಗೆ ಬಂದು ಜನಸಂದಣಿಯಲ್ಲಿ ನುಗ್ಗಿ ಮುಂದಿನ ಸಾಲಿನಲ್ಲಿ ನಿಂತು ಉತ್ಸವವನ್ನು ನೋಡುತ್ತಿದ್ದನು.

ರಾಜಕುಮಾರನ ಕುದುರೆಯು ಮಹಾ ವೇಗದಿಂದ ಬಂದುದನ್ನು ನೋಡಿ ಜನರು ಹೆದರಿಕೆಯಿಂದ ಚೆದುರಿ ಹಿಂದಕ್ಕೆ ಸರಿದರು. ಆ ಗುಂಪಿನಲ್ಲಿ ಕಾಲೆಡವಿದ ಆ ಬಾಲಕನು 'ಅಮ್ಮಾ' ಎಂದು ಅಳುತ್ತ ಕೆಳಕ್ಕೆ ಬಿದ್ದನು.

ಏನಾದರೂ ಹಾನಿಯಾದರೆ ತಂದೆ ಶಿಕ್ಷಿಸಿಯಾನು ಎಂದು ಹೆದರಬೇಡ. ನಿನ್ನ ಅಪರಾಧವು ನನ್ನದು. ಅಂಥ ಸ್ಥಿತಿ ಬಂದಾಗ ಜೀವನದ ಹಂಗು ತೊರೆದು ಮುಕ್ತಿಯನ್ನು ಸಾಧಿಸಲೂ ಸಿದ್ಧ. ಈಶ್ವರೇಚ್ಛೆಯನ್ನಾರು ಬಲ್ಲರು? ಮಿತ್ರ "ನನ್ನಾಸೆಗೆ ಮಣ್ಣೆರಚಬೇಡ. ಈ ಉತ್ತಮಾಶ್ವಗಳನ್ನೇರಿ ನಾಳೆಯೇ ನಗರವೀಥಿಗಳಲ್ಲಿ ವಿಹರಿಸೋಣ. ನಮ್ಮ ವೈಹಾಳಿಗೆ ತಕ್ಕ ಏರ್ಪಾಡು ಮಾಡು, ಏಳು!" ಎಂದು ಮಿತವಚನನನ್ನು ಒತ್ತಾಯ ಪಡಿಸಿ ಒಪ್ಪಿಸಿದನು.

ಇದ್ದಕ್ಕಿದ್ದಂತೆ ಯುವರಾಜನು ಈ ರೀತಿ ಒತ್ತಾಯ ಮಾಡುತ್ತಿದ್ದುದನ್ನು ನೋಡಿ ಮಂತ್ರಿಕುಮಾರನು ಶಿವನ ಲೀಲೆಯನ್ನಾರುಬಲ್ಲರು? ಎಂದುಕೊಂಡನು. ಏನೋ ಅನರ್ಥವಾಗುವುದು ಎಂದು ಆತನ ಮನಸ್ಸು ಅಳುಕುತ್ತಿತ್ತು. ಸತ್ಪುರುಷರಿಗೆ ಅವರ ಆತ್ಮವೇ ಸಾಕ್ಷಿ. ಆದರೂ ಯತ್ನವಿಲ್ಲದೆ ಅವನು ಒಪ್ಪಬೇಕಾಯಿತು.

ಮಾರನೆಯ ದಿನವೇ ರಾಜಶೇಖರನ ವೈಹಾಳಿಗೆ ಸಿದ್ಧತೆಗಳಾಗುವಂತೆ ಮಂತ್ರಿಪುತ್ರನು ವ್ಯವಸ್ಥೆ ಮಾಡಿದನು. ರಾತ್ರಿ ಕಳೆದು ಬೆಳಗಾಗಲು, ರಾಜಶೇಖರನು ಉಷಃಕಾಲಕ್ಕೆ ಎದ್ದು ನಿತ್ಯವಿಧಿಗಳನ್ನು ಮುಗಿಸಿ ಉತ್ಸವೋಚಿತವಾದ ಉಡುಪುಗಳನ್ನು ಧರಿಸಿ ವಿಹಾರಕ್ಕೆ ಸಿದ್ಧನಾದನು. ಮಿತವಚನನೂ ಶಿವಾರ್ಚನಾದಿ ನಿತ್ಯವಿಧಿಗಳನ್ನು ಮುಗಿಸಿ ಮೆರವಣಿಗೆಗೆ ಸಿದನಾಗಿ ಅರಮನೆಗೆ ಬಂದನು. ನಗರಿಯಲ್ಲಿದ್ದ ಅನೇಕ ಸಾಮಂತ ರಾಜಕುಮಾರರೂ ತಮ್ಮ ಕುದುರೆಗಳನ್ನೇರಿ ಉತ್ಸವಕ್ಕೆ ಸಿದ್ಧರಾಗಿ ಬಂದರು.

ಸೇವಕರು ಸುಂದರಾಲಂಕಾರದಿಂದ ಶೋಭಿಸುತ್ತಿದ್ದ ಆ ಉತ್ತಮಾಶ್ವಗಳನ್ನು ತಂದು ನಿಲ್ಲಿಸಿದರು. ಮದಿಸಿದ ಆ ಕುದುರೆಗಳನ್ನೇರಲು ಎಂಥ ನಿಷ್ಣಾತನಾದ ಸವಾರನಿಗೂ ಧೈರ್ಯವಿರಲಿಲ್ಲ. ರಾಜಶೇಖರನು 'ಪವನಗತಿ' ಎಂಬ ಕುದುರೆಯನ್ನೂ ಮಿತವಚನನು 'ಹರಿಣಗತಿ' ಎಂಬ ಕುದುರೆಯನ್ನೂ ಏರಿ ಉತ್ಸವದಲ್ಲಿ ಹೊರಟರು. ಜಯಂತ, ನಲಕೂಬರರಂತಿದ್ದ ಅವರಿಬ್ಬರೂ ಉತ್ತಮ ಹಯಾರೂಢರಾಗಿ ಬರುತ್ತಿದ್ದುದನ್ನು ನೋಡಿ ಪೌರರು ಪರಮಾನಂದಭರಿತರಾದರು. ಸಾಮಂತರೂ, ಸೈನ್ಯವೂ ಅವರ ಸುತ್ತಲೂ ಹೊರಟಿತು.

ಆ ಕುದುರೆಗಳು ನಾಟ್ಯವಾಡುತ್ತ ಹೊರಟವು. ಇದ್ದಕ್ಕಿದ್ದಂತೆ ಅವು ಜಿಂಕೆಗಳಂತೆ ಹಾರುವುವು; ಚೆಂಡಿನಂತೆ ನೆಗೆಯುವುವು; ಹಠಾತ್ತನೆ ಮಿಂಚಿನಂತೆ ಗಗನದಲ್ಲಿ ಸುಳಿಯುವುವು; ಒಂದೊಂದು ವೇಳೆ ಗರುಡವೇಗದಿಂದ ಒಂದೇ ಸಮನೆ ಓಡುವುವು. ನಿಷ್ಣಾತರಾದ ಕುದುರೆ ಸವಾರರೂ ಅಶ್ವಶಿಕ್ಷಕರೂ ಅವುಗಳ ವಿಚಿತ್ರ ನಡಿಗೆಗೆ ವಿಸ್ಮಯಪಡುತ್ತಿದ್ದರು. ಅವರಿಬ್ಬರೂ ಆ ನಿರಂಕುಶಾಶ್ವಗಳನ್ನು ಮಹಾ ಚತುರತೆಯಿಂದ ನಡೆಸುತ್ತಿದ್ದುದನ್ನು ನೋಡಿ ಜನರು ಆಶ್ಚರ್ಯ ಚಕಿತರಾದರು. ದಾರಿಯುದ್ದಕ್ಕೂ ಪ್ರಜೆಗಳ ಜಯಕಾರಗಳು ಅವರನ್ನು ಸ್ವಾಗತಿಸಿದುವು. ಅಂದು ಆ ನಗರಿಯ ಜನರ ಕಣ್ಣುಗಳಿಗೆ ಸೊಗಸಾದ ಔತಣವಾಯಿತು.

ಉತ್ಸವವು ಮಹಾ ವೈಭವದಿಂದ ನಗರದ ಹೊರಗಿನ ಆಟದ ಬಯಲಿಗೆ ಬಂದಿತು. ಅಲ್ಲಿ ಸೈನಿಕರ ವಿನೋದ ಯುದ್ಧವು ನಡೆಯಿತು. ಅನಂತರ ರಾಜಶೇಖರನು ಅರಮನೆಗೆ ಹಿಂದಿರುಗಲು ಆಜ್ಞೆಮಾಡಿದನು. ಮತ್ತೆ ಮೆರವಣಿಗೆಯು ರಾಜಬೀದಿಗಳಲ್ಲಿ ಹಿಂದಿರುಗಿತು. ಯುವರಾಜನು ಹಿಂದಿರುಗಿ ಬರುತ್ತಿರುವ ವೈಭವವನ್ನು ನೋಡಲು ಜನಗಳು ಮತ್ತೆ ಕಿಕ್ಕಿರಿದಿದ್ದರು. ಪೌರರು ಮತ್ತೆ ಅವರೆಲ್ಲರ ಮೇಲೆ ಹೂಮಳೆ ಕರೆದರು.

ಆ ನಗರಿಯಲ್ಲಿ 'ತಿರುಕೊಳವಿನಾಚಿ' ಎಂಬ ಶಿವಭಕ್ತೆಯೊಬ್ಬಳಿದ್ದಳು. ಪತಿವಿಹೀನೆಯಾದ ಅವಳಿಗೆ 'ಶಂಕರ'ನೆಂಬ ಐದು ವರುಷದ ಮುದ್ದು ಮಗನೊಬ್ಬನೇ ಇದ್ದ ಎಲ್ಲಾ ಆಸ್ತಿ. ರಾಜಶೇಖರನು ವೈಹಾಳಿಯಲ್ಲಿ ಬರುವ ಹೊತ್ತಿಗೆ ಆಕೆಯು ಮಗನನ್ನು ಮನೆಯಲ್ಲಿ ಬಿಟ್ಟು ನೀರು ತರಲೆಂದು ಹೋಗಿದ್ದಳು. ಊರಿನ ಜನರೆಲ್ಲ ರಾಜಬೀದಿಗಳಲ್ಲಿ ನೆರೆದು ರಾಜಕುಮಾರನ ಮೆರವಣಿಗೆಯನ್ನು ನೋಡುತ್ತಿದ್ದರು. ಅವರ ಕಲಕಲ ಧ್ವನಿಯನ್ನು ಕೇಳಿ ಆ ಬಾಲಕನು ಕುತೂಹಲದಿಂದ ಮನೆಯಿಂದ ಹೊರಗೆ ಬಂದು ಜನಸಂದಣಿಯಲ್ಲಿ ನುಗ್ಗಿ ಮುಂದಿನ ಸಾಲಿನಲ್ಲಿ ನಿಂತು ಉತ್ಸವವನ್ನು ನೋಡುತ್ತಿದ್ದನು.

ರಾಜಕುಮಾರನ ಕುದುರೆಯು ಮಹಾ ವೇಗದಿಂದ ಬಂದುದನ್ನು ನೋಡಿ ಜನರು ಹೆದರಿಕೆಯಿಂದ ಚೆದುರಿ ಹಿಂದಕ್ಕೆ ಸರಿದರು. ಆ ಗುಂಪಿನಲ್ಲಿ ಕಾಲೆಡವಿದ ಆ ಬಾಲಕನು 'ಅಮ್ಮಾ' ಎಂದು ಅಳುತ್ತ ಕೆಳಕ್ಕೆ ಬಿದ್ದನು.

ಆ ಬಾಲಕನು ಕೈಯೂರಿಕೊಂಡು ಮೇಲಕ್ಕೇಳುತ್ತಿರುವಷ್ಟರಲ್ಲಿ ರಾಜಶೇಖರನ ಕುದುರೆಯು ಆ ಸ್ಥಳಕ್ಕೆ ಬಂದುಬಿಟ್ಟಿತು. ಕುದುರೆಯ ಕಾಲಿಗೆ ಸಿಕ್ಕಿ ಬಿದ್ದ ಆ ಮಗುವನ್ನು ಎಳೆದುಕೊಳ್ಳಲು ಯಾರಿಗೂ ಸಾಧ್ಯವಾಗಲಿಲ್ಲ. ಜನರು 'ಅಯ್ಯೋ!' ಎಂದು ಕೂಗಿಕೊಂಡರು. ರಾಜಕುಮಾರನು ಆಪತ್ತನ್ನರಿತು ಮಹಾ ಚತುರತೆಯಿಂದ ತನ್ನ ಕುದುರೆಯನ್ನು ಬಿಗಿಹಿಡಿದನು. ಆದರೂ ಅದು ನಿಲ್ಲದಿರಲು, ಬಲವಾಗಿ ಒದೆದು ಅದು ಛಂಗನೆ ಹಾರುವಂತೆ ಮಾಡಿದನು. ಕುದುರೆಯು ಹಾರಿ ನೆಗೆಯಲು ಆ ಮಗು ಮೃತ್ಯುವಿನ ದವಡೆಯಿಂದ ಹೊರಗೆ ಬಂದಂತೆ ವಿಪತ್ತಿನಿಂದ ಪಾರಾದನು.

ಆದರೇನು! ದೈವಸಂಕಲ್ಪ ಬೇರೆ ರೀತಿ ಇತ್ತು. ರಾಜಕುಮಾರನ ಕುದುರೆಯು ಮುಂದುವರಿಯುತ್ತಿದ್ದಂತೆಯೇ ಮಿತವಚನನ ಕುದುರೆಯು ಆ ಸ್ಥಳಕ್ಕೆ ಬಂದಿತು. ಆತನು ಶಕ್ತಿಯನ್ನೆಲ್ಲ ಉಪಯೋಗಿಸಿದರೂ ಆ ಹರಿಣಗತಿಯು ಆ ಮಗುವಿನ ತಲೆಯನ್ನು ಚೆಂಡನ್ನು ಒದೆಯುವಂತೆ ಒದೆದು ಓಡಿತು. ಕಣ್ಣೆವೆಯಿಕ್ಕುವಷ್ಟರಲ್ಲಿ ಆ ಬಾಲಕನ ತಲೆಯು ಕತ್ತರಿಸಿ ಹೋಗಿ ರಕ್ತಧಾರೆಯೊಡನೆ ಕಂಠನಾಳದಿಂದ ಬೇರೆಯಾಯಿತು, ದಂಟಿನಿಂದ ಬೇರೆಯಾದ ತಾವರೆಯಂತೆ.

ಜನರು 'ಶಿವ ಶಿವಾ' ಎಂದು ಮರುಗಿದರು. ರಾಜಶೇಖರ ಮಿತವಚನರಿಬ್ಬರೂ ಆ ಶಿಶುವಧೆಯನ್ನು ಕಂಡು ಬಹುವಾಗಿ ದುಃಖಿಸಿದರು. ಅವರು 'ಇದರ ಫಲವೇನಾಗುವುದೋ, ಶಿವನೇ ಬಲ್ಲನು!' ಎಂದು ಚಿಂತಿಸುತ್ತಾ ಬೇಗಬೇಗನೆ ಮುಂದುವರಿದು ಅರಮನೆಯನ್ನು ಸೇರಿದರು. ಪರಿವಾರವನ್ನು ಬೀಳುಕೊಟ್ಟಮೇಲೆ ಅವರಿಬ್ಬರೂ ಕುಳಿತು ಆ ಅನರ್ಥದ ಫಲವನ್ನು ಕುರಿತು ಚರ್ಚಿಸಿದರು; "ಇನ್ನು ಚಿಂತಿಸಿ ಫಲವೇನು? ಶಿವನು ಮೆಚ್ಚುವಂತೆ ಇದಕ್ಕೆ ತಕ್ಕ ಉದ್ಯೋಗವನ್ನು ಮಾಡಲು ಸಾಹಸ ಮಾಡಬೇಕು" ಎಂದು ನಿಶ್ಚಯಿಸಿಕೊಂಡರು. ಅನಂತರ ಅವರಿಬ್ಬರೂ ತಮ್ಮ ಅಂತಃಪುರಗಳನ್ನು ಸೇರಿದರು.

ಇತ್ತ ಪಟ್ಟಣಿಗರು ಆ ಬಾಲಕನ ರುಂಡಮುಂಡಗಳನ್ನು ನೋಡಿ "ಅಯ್ಯೋ! ಈ ಸುಕುಮಾರನು ಯಾರವನೋ? ಕುದುರೆಯ ಗೊರಸಿನ ಏಟಿನಿಂದ ಮಡಿದನು. ಶಿಶುಹತ್ಯೆಯನ್ನು ಕೇಳಿದರೆ ಚೋಳನೃಪನು

ಸುಮ್ಮನಿರುವನೆ? ಈ ಶಿಶುವಧೆಯ ಪರಿಣಾಮವೇನಾಗುವುದೋ!"
ಎಂದು ನಾನಾ ವಿಧವಾಗಿ ಚಿಂತಿಸಿ ಪರಿತಪಿಸುತ್ತಿದ್ದರು.

ಈ ಹೊತ್ತಿಗೆ ನೀರಿಗೆ ಹೋಗಿದ್ದ ತಿರುಕೊಳವಿನಾಚಿ ಮನೆಗೆ ಬಂದು ಮಗುವನ್ನು ಕಾಣದೆ ಬೀದಿಗೆ ಹೋಗಿರಬಹುದೆಂದೂಹಿಸಿ ಹೆದರಿ ಓಡಿ ಬಂದಳು. ಎಲ್ಲಿ ಹುಡುಕಿದರೂ ಮಗುವು ಕಾಣದಿರಲು, ರಾಜಪುತ್ರನ ಮೆರವಣಿಗೆಯನ್ನು ನೋಡಲು ಜನರು ಕಿಕ್ಕಿರಿದಿರುವುದನ್ನು ನೋಡಿ ತನ್ನ ಮಗನು ಅಲ್ಲಿಗೆ ಹೋಗಿರಬಹುದೆಂಬೂಹಿಸಿ ಅಲ್ಲಿ ನೋಡಿದಳು. ದಾರಿ ಯುದ್ದಕ್ಕೂ "ಶಂಕರನು ಎಲ್ಲಿ ಜನರ ಕಾಲಿಗೆ ಸಿಕ್ಕಿ ಪುಡಿಪುಡಿಯಾಗು ವನೋ, ಆನೆ ಕುದುರೆಗಳ ಕಾಲಿಗೆ ಸಿಕ್ಕುವನೋ, ರಥದ ಚಕ್ರಕ್ಕೆ ಗುರಿ ಯಾಗುವನೋ" ಎಂದು ತವಕಪಟ್ಟು ಓಡಿಓಡಿ ಜನಸಂದಣಿಯಿಂದ ತುಂಬಿದ ರಾಜಬೀದಿಗೆ ಬಂದಳು.

ದಿಕ್ಕುಗೆಟ್ಟವಳಂತೆ ಓಡಿಬರುತ್ತಿದ್ದ ಅವಳನ್ನು ಕಂಡು ಜನರು ಮಡಿದ ಈ ಶಿಶು ಇವಳದಿರಬಹುದು—ಎಂದು ಬಗೆದು ಗುಂಪಿನಲ್ಲಿ ಅವಳಿಗೆ ದಾರಿಕೊಟ್ಟು ಆ ಮಗುವಿನ ಕಳೇಬರದೆಡೆಗೆ ಬಿಟ್ಟು, ಆ ಮಗು ರಾಜಕುಮಾರನ ಕುದುರೆಯ ಗೊರಸಿನ ಪೆಟ್ಟಿಗೆ ಸಿಕ್ಕಿ ಮೃತನಾದನೆಂದು ತಿಳಿಸಿದರು.

ತನ್ನ ಮಗನ ರುಂಡ ಮುಂಡಗಳು ಬೇರ್ಪಟ್ಟಿದ್ದುದನ್ನು ನೋಡಿ ಆ ತಾಯಿಯು ಕಾಡುಕಿಚ್ಚನ್ನು ಕಂಡ ಹುಲ್ಲೆಯಂತೆ ಬೆದರಿದಳು; ಗರುಡ ನೆರಗಿದ ಉರಗಿಯಂತೆ ನಡನಡುಗಿದಳು; ಬುಡ ಕಡಿದ ಎಳೆಬಳ್ಳಿಯಂತೆ ಸೊರಗಿದಳು; ಹಿಸುಕಿದ ಹೂಮಾಲೆಯಂತೆ ಕಲೆಗೆಟ್ಟಳು. ದುಃಖದಿಂದ ದಾರಿಕಾಣಲಾರದ ಆ ತಾಯಿಯು ದುಃಖದಿಂದ ಕೊರಗುತ್ತ ಮೂರ್ಛಿತೆ ಯಾದಳು.

ಸ್ವಲ್ಪ ಹೊತ್ತಿನ ಮೇಲೆ ಚೇತರಿಸಿಕೊಂಡ ಅವಳು ಆ ಕಳೇಬರವನ್ನು ಕಂಡು "ಹಾ ಮಗನೆ, ಎಳೆಗಿಳಿಯ ಕೊರಳನ್ನು ಮುರಿದು ಸಂತೋಷಿಸಿ ದವರಾರು? ಮರಿಯಂಚೆಯನ್ನು ಹೆದರಿಸಿ ರೆಕ್ಕೆಗಳನ್ನು ಕಡಿದವರಾರು? ಮುದ್ದಾದ ಜಿಂಕೆಯ ಮರಿಯ ತಲೆಯನ್ನು ಕಡಿದವರಾರು? ನಾಳನಿಂದ ಕಮಲವನ್ನು ಕಡಿಯುವಂತೆ ನಿನ್ನ ತಲೆಯನ್ನು ಕಂಠನಾಳದಿಂದ ಕತ್ತರಿಸಿ

ದವರು ಯಾರು?" ಎಂದು ಗೋಳಾಡುತ್ತ, ಆ ತಲೆಯನ್ನು ಕೈಗೆತ್ತಿಕೊಂಡು ಧೂಳನ್ನು ಸೆರಗಿನಿಂದೊರಸಿ, ಪಕ್ಕಕ್ಕೆ ಸರಿದಿದ್ದ ಮಾಂಗಾಯಿಸರ ಅರಳೆಲೆ ಮುಂತಾದ ಒಡವೆಗಳನ್ನು ಸರಿಪಡಿಸಿ, ಅದರ ಗಲ್ಲವನ್ನು ಹಿಡಿದು ಮುದ್ದಿಸಿ "ಅಯ್ಯೋ ಮಗನೆ, ನನ್ನರಗಿಣಿಯೆ, ನನ್ನ ವಂಶದ ಕುಡಿಯೆ, ಆ ಕುದುರೆ ಎಲ್ಲಿ ಬಂತು? ಎಲ್ಲಿಯ ರಾಜ ವೈಹಾಳಿ? ಎಲ್ಲಿಯ ದರ್ಶನ? ನಿನಗೆಲ್ಲಿ ವೃತ್ಯು ಕಾದಿತ್ತು? ನಿನ್ನ ಹಿರಿಯರು ಸತ್ತ ದುಃಖವನ್ನು ನಿನ್ನ ಮುಖವನ್ನು ನೋಡಿಕೊಂಡು ಮರೆಯುತ್ತಿದ್ದೆನೇ! ಮಗನೆ, ಇನ್ನಾರಿಂದ ಆ ದುಃಖವನ್ನು ಮರೆಯಲಿ? ಬೇಗ ಬೇಗ ಬೆಳೆದು ಧನವನ್ನಾರ್ಜಿಸಿ ನನಗೆ ಸಂತೋಷವನ್ನೀಯುವೆ ಎಂದು ನಂಬಿದ್ದೆನೇ! ತಿಳಿಯದೆ ಕುದುರೆಯ ಕಾಲಿಗೆ ಸಿಕ್ಕಿ ಮಡಿದೆಯಾ! ಕುದುರೆಯು ನಿನ್ನ ತಲೆಯನ್ನು ಮೆಟ್ಟುವಾಗ ಕಂಗೆಟ್ಟು 'ಅಮ್ಮಾ' ಎಂದು ಚೀರಿದೆಯೋ, ನಾನು ಭಾಗ್ಯಹೀನೆ ಎಂದು ನನ್ನನ್ನು ತೊರೆದೆಯೋ!" ಎಂದು ತನ್ನ ದುಃಖವನ್ನು ತೋಡಿಕೊಂಡು ಹಲುಬಿದಳು.

ಆ ತಾಯಿಯ ಅಳಲನ್ನು ನೋಡಲಾರದೆ, ಅದನ್ನು ಆರಿಸಲಾರದೆ, ದಿನಮಣಿಯು ಅಸ್ತಮಿಸಿದನು. ಕತ್ತಲಾಗಲು ಅವಳು ಆ ಮಗುವಿನ ರುಂಡ ಮುಂಡಗಳನ್ನು ತಬ್ಬಿಕೊಂಡು ಮನೆಗೊಯ್ದು ಅವನ್ನು ಜೋಡಿಸಿ ಸಂಕಟವನ್ನು ಸಹಿಸಲಾರದೆ, "ನನ್ನ ಚಿನ್ನ, ಮಾಯವಾದೆಯಾ! ನನ ಸಂತೋಷಸಾಗರ ಇಂಗಿಹೋಯಿತೆ?- ನನ್ನ ಕಲ್ಪವೃಕ್ಷ ಬಿದ್ದು ಹೋಯಿತೇ?" ಎಂದು ಮರುಗಿ, ಮತ್ತೆ "ಕಂದ ಹಸಿದಿರುವೆ ನೋಡು, ಹೊಟ್ಟೆ ಬೆನ್ನಿಗಂಟಿದೆ. ಕಣ್ಣುಗಳು ಮುಚ್ಚಿಕೊಂಡಿವೆ. ಊಟಮಾಡದೆ ಹೀಗೆ ಒಣಗಬಹುದೆ? ನಿನ್ನ ಜೊತೆಯವರು ಬಂದು 'ಶಂಕರನೆಲ್ಲಿ, ಆಡಬೇಕು' ಎಂದರೆ ಏನು ಹೇಳಲಿ ಮಗನೆ? ಅರಸನ ಕುದುರೆಯಿಂದ ಮಡಿದನೆಂದು ಹೇಳಲೆ? ನೀನಾಡುತ್ತಿದ್ದ ಸ್ಥಲಗಳನ್ನೂ, ನೀನು ಕೂತು ನಿಂತು ಮಲಗುತ್ತಿದ್ದೆಡೆಗಳನ್ನೂ ನೋಡುತ್ತ ಹೇಗೆ ಬಾಳಲಿ? ನನ್ನನ್ನೊಬ್ಬಳನ್ನೇ ಬಿಟ್ಟು ನೀನೆಲ್ಲಿಗೆ ಹೋದೆ? 'ಅಮ್ಮಾ, ಅಳಬೇಡ' ಎಂದು ಕಣ್ಣೀರನ್ನೊರಸುತ್ತಿದ್ದ ನೀನು ಏಕೆ ಮಾತನಾಡುವುದಿಲ್ಲ? ನಿನ್ನನ್ನು ನೋಡುತ್ತಿದ್ದ ನನ್ನ ಕಣ್ಣೊಡೆದುದು; ನಿನ್ನೊಡನೆ ಮಾತನಾಡುತ್ತಿದ್ದ ನನ್ನ

ನಾಲಗೆ ಮುರುಟಿತು; ನಿನ್ನನ್ನು ತಬ್ಬಿಕೊಳ್ಳುತ್ತಿದ್ದ ನನ್ನ ಕೈ ಮುರಿದು ಬಿದ್ದಿತು! ನೀನಿಲ್ಲದ ಮೇಲೆ ನನಗೇನುಳಿದಿದೆ? ಶಂಕರಾ, ನನ್ನ ಸರ್ವಸ್ವ ವಾದ ನಿನ್ನ ಮರಣವನ್ನು ಕಂಡೂ ಸಾಯದಿರುವ ನನ್ನ ಬಾಳನ್ನು ಏನೆನ್ನಲಿ! ಇನ್ನು ಹೇಗೆ ಬಾಳಲಿ! ಶಿವನ ಕೃಪೆ ತಪ್ಪಿದ ಬಳಿಕ ಗತಿ ಇನ್ನಾರು?" ಎಂದು ಹಲತೆರನಾಗಿ ಮರುಗಿದಳು.

ಅನಂತರ ಅವಳು, "ಎಲೆ ಗಿರಿಜಾತೆ, ಶಾಂಕರಿ, ಕರುಣಾಕರೆ, ದಿವ್ಯಮಾತೆ ಇದ್ದೊಬ್ಬ ಮಗನನ್ನೂ ಕಳೆದುಕೊಂಡು ಅಳಲಿಗೀಡಾದ ನನ್ನನ್ನು ಕೃಪೆಯಿಂದ ನೋಡು" ಎಂದು ದೇವಿಯನ್ನು ಬೇಡಿದಳು.

ರಾತ್ರಿಯೆಲ್ಲ ದುಃಖದಲ್ಲಿಯೇ ಕಾಲ ಕಳೆಯಿತು. ಅವಳ ಕಣ್ಣೀರ ಕಾಲುವೆ ಹರಿಯಿತು. ಬೆಳಗಾಗುತ್ತಲೆ ನೆರೆಹೊರೆಯುವರೆಲ್ಲ ಬಂದು ಗುಂಪು ಸೇರಿದರು. ಅವರೂ ಸಮದುಃಖಿಗಳಾಗಿ ಕಂಬನಿಗರೆದರು. ದುಃಖವು ಮೇರೆ ಮೀರಲು (ರೋಷಗೊಂಡ) ಅವಳು ಆ ಮಗುವಿನ ಕಳೇಬರವ ನ್ನೆತ್ತಿಕೊಂಡು ಆ ಅನ್ಯಾಯವನ್ನು ರಾಜನಿಗೆ ತಿಳಿಸಲು ಅರಮನೆಗೆ ತೆರಳಿದಳು.

ಅರಮನೆಯ ಮುಂದೆ ಯಾರೋ ಅಳುತ್ತಿರುವುದನ್ನು ಕೇಳಿ ಸತ್ಯೇಂದ್ರ ಚೋಳನು ಅವಳನ್ನು ಅರಮನೆಯೊಳಕ್ಕೆ ಕರೆಯಿಸಿಕೊಂಡನು. ಆಗ ತಿರುಕೊಳವಿನಾಚಿಯು ಕಣ್ಣೀರು ಕರೆಯುತ್ತ ಗದ್ಗದ ಕಂಠೆಯಾಗಿ ನಿಂತಿರಲು ರಾಜನು "ತಾಯೆ, ಅಳಬೇಡ. ಈ ಅಣುಗನಾರು? ಇವನ ಕೊರಳನ್ನು ಕಡಿದ ಮಹಾ ಪಾತಕಿ ಯಾರು? ಹೇಳು. ಈಗಲೇ ಅದಕ್ಕೆ ತಕ್ಕ ಕಾರ್ಯವನ್ನು ಮಾಡುವೆನು" ಎಂದನು.

ಆಗ ಅವಳು ದುಃಖವನ್ನು ಕಷ್ಟದಿಂದ ಬಿಗಿಹಿಡಿದುಕೊಂಡು, "ದೇವ ನಿನ್ನ ನಗರಿಯಲ್ಲಿ ರವಿ ಎಂಬ ಒಬ್ಬ ವರ್ತಕನು ಉತ್ತಮ ವಣಿಜ ನೆಂದು ಹೆಸರಾಂತು ಶಿವಭಕ್ತನಾಗಿ ಬಾಳುತ್ತಿದ್ದನು. ಆತನೇ ನನ್ನ ಗಂಡನು. ಆತನು ಒಂದು ಸಲ ವ್ಯಾಪಾರಕ್ಕೆಂದು ಹಡಗಿನಲ್ಲಿ ಹೋಗುತ್ತಿರುವಾಗ ಹಡಗು ಸಮುದ್ರದಲ್ಲಿ ಮುಳುಗಿಹೋಗಲು ದಿವಂಗತನಾದನು. ನನ್ನ ಆರು ಜನ ಮಕ್ಕಳೂ ರೋಗದಿಂದ ಸತ್ತರು. ಈ ಮಗು ಆಗ ನನ್ನ ಗರ್ಭದಲ್ಲಿತ್ತು. ನಾನು ನನ್ನ ರಮಣನನ್ನೂ ಆರು ಮಕ್ಕಳನ್ನೂ ಕಳೆದುಕೊಂಡು ಬಡ

ಯಾಗಿ ಗರ್ಭದ ಶಿಶುಹತ್ಯಾ ದೋಷಕ್ಕೆ ಹೆದರಿ ಪ್ರಾಣತ್ಯಾಗ ಮಾಡಿಕೊಳ್ಳಲಾರದೆ ದುಃಖದಿಂದ ಮೂರ್ಛೆ ಹೋದೆನು. ಆಗ ಪರಶಿವನು ಕಾಣಿಸಿಕೊಂಡು ಅಂಜದಿರೆಂದು ಅಭಯವಿತ್ತು 'ನಿನ್ನ ಗರ್ಭದ ಶಿಶುವಿನಿಂದ ನೀನು ಮುಕ್ತಿ ಹೊಂದುವೆ' ಎಂದು ಕರುಣಿಸಿ ಮರೆಯಾದನು. ನಾನು ಪಡೆದ ಆ ಶಿಶುವೇ ಇದು. ಇವನಿಗೆ 'ಶಂಕರ' ಎಂದೇ ಹೆಸರಿಟ್ಟು ಸಾಕುತ್ತಿದ್ದೆನು. ಇವನು ಬಾಲಕನಾದರೂ ಶಿವಶರಣರಲ್ಲಿ ಭಕ್ತಿಯನ್ನು ತೋರಿಸುತ್ತ, ಶಿವನ ಗುಣಗಳನ್ನು ಹಾಡುತ್ತ, ಶಿವಕೀರ್ತನವನ್ನು ಕೇಳುತ್ತ, ಶಿವಭಕ್ತನಾಗಿ ನನ್ನ ಮನಸ್ಸಿನ ದುಃಖವನ್ನು ದೂರ ಮಾಡುತ್ತಿದ್ದನು. ಹೀಗೆಯೇ ಈ ನನ್ನ ಕಂದನು ಐದು ವರುಷದ ಬಾಲಕನಾದನು.

"ಭೂನಾಥ, ನಿನ್ನೆಯು ದಿನ ನಿನ್ನ ಕುಮಾರನೂ ಮಂತ್ರಿಯ ಕುಮಾರನೂ ದಿವ್ಯಾಶ್ವಗಳನ್ನೇರಿ ಪುರದ ಬೀದಿಗಳಲ್ಲಿ ವಿಹರಿಸುತ್ತಿರುವಾಗ ಈ ನನ್ನ ಕಂದನೂ ಬಂದು ಜನಸಂದಣಿಯಲ್ಲಿ ನಿಂತು ನೋಡುತ್ತಿರಲು ಆ ಕುದುರೆಯು ಇವನ ತಲೆಯನ್ನು ಮೆಟ್ಟಿ ಕೊಂದಿತು. ಇವನಿಂದಲೇ ಮುಂದೆ ಬಾಳನ್ನು ಕಾಣುವೆನೆಂದಿದ್ದ ನನ್ನ ಜೀವಿತವು ಮಣ್ಣು ಪಾಲಾಯಿತು. ಇವನು ಈ ರೀತಿ ಸಾಯುವನೆಂಬುದನ್ನು ನಾನು ಕನಸಿನಲ್ಲಿಯೂ ಕಂಡಿರಲಿಲ್ಲ" ಎಂದು ಹೇಳಿ ಕಂಬನಿ ತುಂಬಿದಳು.

ಇದನ್ನು ಕೇಳಿದ ಸತ್ಯೇಂದ್ರಚೋಳನು ಶಿವಭಕ್ತನ ಮರಣಕ್ಕಾಗಿ 'ಶಿವ ಶಿವಾ' ಎಂದು ಮರುಗಿದನು. ಆ ಬಡ ಹೆಂಗಸಿನಮೇಲೆ ಆತನಿಗೆ ಅಪಾರ ಕರುಣೆ ಹುಟ್ಟಿತು; ಹಾಗೆಯೇ ಮಗನ ಮೇಲೆ ಸಹಿಸಲಾರದಷ್ಟು ಕೋಪವೂ ಬಂದಿತು. ಕೂಡಲೆ ಮಂತ್ರಿಗೆ ಕರೆ ಹೋಯಿತು. ಅರಮನೆಗೆ ಆತುರದಿಂದ ಬಂದ ಮಂತ್ರಿಯು ರಾಜನೆದುರಿಗೆ ಸುತನ ಶಿರದೊಡನೆ ನಿಂತಿದ್ದ ತಿರುಕೊಳವಿನಾಚಿಯನ್ನು ಕಂಡು, ಹಿಂದಿನ ದಿನದ ವೈಹಾಳಿಯಲ್ಲಿ ಆ ಮಗು ಸತ್ತ ವಿಷಯವನ್ನು ಸ್ಮರಿಸಿಕೊಂಡು, ಮುಂದಿನ ಪರಿಣಾಮವನ್ನು ಶಿವನೇ ಬಲ್ಲನೆಂದುಕೊಂಡು ಚಿಂತಾಕುಲನಾಗಿ ತಲೆ ತಗ್ಗಿಸಿಕೊಂಡು ನಿಂತನು.

ಮಂತ್ರಿಯ ಮುಖಭಾವದಿಂದಲೇ ಆತನು ಆ ವಿಷಯವನ್ನೆಲ್ಲ ಅರಿತಿರುವನೆಂದೂಹಿಸಿದ ರಾಜನು ಆತನ ಬುದ್ಧಿಗೆ ಮೆಚ್ಚಿ ಅಪರಾಧಿಗಳನ್ನು

ಕರೆಸುವಂತೆ ಆಜ್ಞೆಮಾಡಿದನು. ರಾಜಶೇಖರನೂ ಮಿತವಚನನೂ ಬಂದು ರಾಜನ ಮುಂದೆ ತಲೆ ತಗ್ಗಿಸಿಕೊಂಡು ನಿಂತರು.

ಅಪರಾಧಿಗಳೀರ್ವರನ್ನೂ ಕಂಡು ರಾಜನ ಕಣ್ಣುಗಳು ಕೋಪದಿಂದ ಕೆಂಡಗಳಾದುವು; ಹುಬ್ಬುಗಳು ಗಂಟಿಕ್ಕಿದುವು. ಆತನು "ಏನೀ ಅನರ್ಥ? ಯೌವನ, ಪದವೀ ಮದಗಳಿಂದ ಮುಂದಾಗುವ ಅನರ್ಥವನ್ನೂ ಗಮನಿಸದೆ, ಸ್ವಲ್ಪವೂ ಹೆದರದೆ, ಸಜ್ಜನ ಪದ್ಧತಿಗೆ ವಿರುದ್ಧವಾಗಿ ಗರ್ವದಿಂದ ಮೆರೆದು ಈ ಶಿವಭಕ್ತೆಯ ಮಗುವನ್ನು ಕೊಂದಿರಾ?" ಎಂದು ಗರ್ಜಿಸಿದನು. ಅನಂತರ ರಾಜಶೇಖರನನ್ನು ನೋಡಿ "ಕುಮಾರಾ, ಶರಣರ ಪಾದಗಳನ್ನು ಪೂಜಿಸಿ, ಶಂಕರ ಭಕ್ತನಾಗಿ, ಸಚ್ಚರಿತನಾಗಿ, ಕೀರ್ತಿವಂತನಾಗಿ ಬಾಳಿ ನಮ್ಮನ್ನು ಸಂತೋಷಪಡಿಸುತ್ತೀಯೆಂದು ನಂಬಿದ್ದೆ. ನೀನು ಮಾಡಿದುದೇನು ನೋಡು! ಶತ್ರುರಾಜರ ತಲೆಗಳನ್ನು ಉರುಳಿಸುವುದಕ್ಕೆ ಬದಲಾಗಿ ಶಿವಶರಣೆಯ ಶಿಶುವಿನ ಶಿರವನ್ನು ಅರಿದೆಯಾ? ಶಿವಶರಣರ, ಶಂಭುವಿನ, ಪಾದಪದ್ಮಗಳನ್ನರ್ಚಿಸುವುದರ ಬದಲು ಕಂದನ ಕೊರಳನ್ನು ಕಡಿಯುವ ಲೀಲೆಗೆ ಕೈಹಾಕಬಹುದೆ? ಶಿಶುವಿನ ಶಿರಕ್ಕೆ ನಿನ್ನ ಶಿರವನ್ನಿತ್ತರೂ ಈ ಪಾಪವು ಹೋದೀತೆ? ಶಿವನ ಪೂಜೆಗಿಂತಲೂ ಶರಣರ ಪೂಜೆಯು ಮಿಗಿಲು. ಶಿವಶರಣರಿಗೆ ಮಾಡಿದ ದ್ರೋಹವು ಶಿವದ್ರೋಹಕ್ಕಿಂತಲೂ ಹೆಚ್ಚು" ಎಂದು ಹೇಳಿ, "ನಿಮ್ಮಿಬ್ಬರಲ್ಲಿ ಯಾರು ಈ ಶಿಶುವಿನ ವಧೆಗೆ ಕಾರಣರು?" ಎಂದು ಕೇಳಿದನು.

ಆಗ ಮಿತವಚನನು ಮುಂದೆ ಬಂದು ಕೈಜೋಡಿಸಿ ನಿಂತು "ದೇವ, ನನ್ನ ಬಿನ್ನಹವನ್ನು ಆಲಿಸಬೇಕು. ನಾವಿಬ್ಬರೂ ಹೊಸ ಕುದುರೆಗಳನ್ನೇರಿ ರಾಜಬೀದಿಗಳಲ್ಲಿ ವಿಹರಿಸುತ್ತ ಹೋಗುತ್ತಿರುವಾಗ ಈ ಮಗು ಕುದುರೆಯ ಕಾಲಿಗೆ ಸಿಕ್ಕಲು ಯುವರಾಜನು ಕುದುರೆಯನ್ನು ಮಗುವಿನ ಮೇಲೆ ಹಾರಿಸಿ ಮಗುವನ್ನುಳಿಸಿದನು. ಅಷ್ಟರಲ್ಲಿ ನನ್ನ ಕುದುರೆಯು ಅಲ್ಲಿಗೆ ನುಗಿ ಬಂದು ತನ್ನ ಗೊರಸಿನಿಂದ ಮಗುವಿನ ತಲೆಯನ್ನು ಮೆಟ್ಟಿತು. ತಲೆಯು ಕತ್ತರಿಸಿ ಹೋಗಿ ಮಗುವು ಸತ್ತಿತು. ಆದ್ದರಿಂದ ಆ ಅಪರಾಧವು ನನ್ನದು. ಶಿಶುವಿನ ತಲೆಗೆ ಬದಲಾಗಿ ನನ್ನ ತಲೆಯನ್ನು ಕೊಡುವುದು ನ್ಯಾಯ" ಎಂದು ಬಿನ್ನಯಿಸಿದನು.

ಮಿತವಚನನ ಮಾತನ್ನು ಕೇಳಿ ರಾಜನು ಮಂತ್ರಿಯ ಮುಖವನ್ನು ನೋಡಿದನು. ಆತನು ತನ್ನ ಮಗನ ತಲೆಯನ್ನರಿಯಲು ಒಪ್ಪಿ, ಅಂತೆಯೇ ಆಜ್ಞೆಮಾಡಿದನು.

ಕೂಡಲೆ ರಾಜಶೇಖರನು ಮುಂದೆಬಂದು, "ಮಹಾರಾಜ, ನನ್ನ ಬಿನ್ನಪವನ್ನು ಅವಧರಿಸಬೇಕು. ಈ ತಪ್ಪು ನನ್ನಿಂದಾದುದು. ಸಿಂಧು ರಾಜನು ಕೊಟ್ಟ ಈ ಹೊಸ ಕುದುರೆಗಳನ್ನೇರಿ ಸೈನ್ಯಸಹಿತ ರಾಜಬೀದಿಗಳಲ್ಲಿ ವೈಹಾಳಿ ನಡೆಸೋಣವೆಂದು ಬಲಾತ್ಕರಿಸಿಧವನು ನಾನು. 'ಹೊಸ ಕುದುರೆ ಗಳನ್ನು ಸಹಿಣಿಗಳಿಂದ ತಿದ್ದಿಸುವವರೆಗೂ ನಾವು ಏರಬಾರದು. ಉತ್ಸವದಲ್ಲಿ ಯಾರಿಗಾದರೂ ನೋವಾದರೆ, ಜೀವಹತಿಯಾದರೆ ಶರಣರ ಸಂತಾಪವನ್ನು ಸಹಿಸದ ರಾಜನ ಕೋಪಕ್ಕೆ ನಾವು ಪಾತ್ರರಾಗಬೇಕಾಗುತ್ತದೆ' ಎಂದು ಮಿತವಚನನು ತಡೆದನು. ಆಗ ನಾನು 'ಹಾಗೇನಾದರೂ ಅನರ್ಥವು ಸಂಭವಿಸಿದರೆ ಆ ತಪ್ಪು ನನ್ನದು' ಎಂದು ಹೇಳಿ, ನನ್ನ ವಿನೋದಕ್ಕೆ ವಿಘ್ನ ವಾಗಬಾರದೆಂದು ಬಲಾತ್ಕಾರಮಾಡಿ ಅವನನ್ನು ಒಪ್ಪಿಸಿದೆ. ಆದ್ದರಿಂದ ಈ ಅನರ್ಥಕ್ಕೆ ನಾನೇ ಕಾರಣ. ಈ ಮಗುವಿನ ಮಸ್ತಕಕ್ಕೆ ಬದಲು ನನ್ನ ಮಸ್ತಕವನ್ನರಿದೊಪ್ಪಿಸುವುದೇ ನ್ಯಾಯ. ಇದಕ್ಕೆ ನನಗೇನೂ ಮರುಕವಿಲ್ಲ" ಎಂದು ವಿಜ್ಞಾಪಿಸಿಕೊಂಡನು.

ರಾಜಶೇಖರನ ಮಾತನ್ನು ಎಲ್ಲರೂ ಮೆಚ್ಚಿದರು. ಆತನ ಸತ್ಯಪ್ರಿಯತೆ ಯನ್ನೂ, ಮಿತ್ರಪ್ರೇಮವನ್ನೂ ಜನರು ಹೊಗಳಿದರು. ಆಗ ರಾಜನು, "ಈ ಶಿಶುವಧೆಗೆ ಇವನೇ ಕಾರಣನಾದುದರಿಂದ ಇವನ ತಲೆಯನ್ನೇ ಕಡಿದು ತಂದೊಪ್ಪಿಸುವುದು" ಎಂದು ಆಜ್ಞೆಮಾಡಿದನು.

ತನ್ನ ತಂದೆಯ ನ್ಯಾಯಕ್ಕೆ ರಾಜಶೇಖರನು ಸಂತೋಷಿಸಿದನು. ಆತನು ಕೋಪದಿಂದ ಘುಡಿಘುಡಿಸುತ್ತಿದ್ದ ತಂದೆಯ ಪಾದಗಳಿಗೆ ನಮಸ್ಕಾರ ಮಾಡಿ, "ದೇವ, ನಿಮ್ಮ ಮನಸ್ಸಿಗೆ ದುಃಖವನ್ನುಂಟುಮಾಡಿದೆ. ಶಿವಭಕ್ತೆಯ ಶಿಶುವಿನ ಹತ್ಯೆಮಾಡಿದೆ. ನನ್ನಂಥ ಕೃತಘ್ನರೂ, ಪಾಪಿಗಳೂ ಉಂಟೆ? ನನ್ನನ್ನು ಮರೆಯುವುದು. ಪಾಪಿಗಳನ್ನು ಮರೆಯುವುದು ಕಷ್ಟವೇನೂ ಅಲ್ಲ" ಎಂದು ಹೇಳಿ ಅರಮನೆಯಿಂದ ಹೊರಟನು.

ಪತಿಮೋಹಿಯು ತನ್ನ ಮನೆಗೆ ಹಿಂದಿರುಗಿ, ಶಿವನನ್ನು ಭಕ್ತಿಯಿಂದ ಅರ್ಚಿಸಿ, ಒಡೆಯನ ಮುದ್ದುಗುವರನನ್ನು ಕೊಂದು ಬದುಕುವುದಕ್ಕಿಂತ

ಸಾಯುವುದೇ ಲೇಸೆಂದು ಬಗೆದು ಕತ್ತಿಯಿಂದ ತಲೆಯನ್ನರಿದುಕೊಂಡು ಜೀವವನ್ನು ತೊರೆದನು. ಮಂತ್ರಿಯು ಮಡಿದ ಸುದ್ದಿಯನ್ನು ಕೇಳಿ ರಾಜನೂ ಪುರಜನರೂ ದುಃಖಿತರಾದರು.

ಇತ್ತ ರಾಜಶೇಖರನು ಶಿವನಿಲಯವನ್ನು ಹೊಕ್ಕು ಭಕ್ತಿಪರವಶನಾಗಿ ಉಡುರಾಜಶೇಖರನನ್ನು ಪೂಜಿಸಿ ಸ್ತುತಿಸಿದನು. ಅನಂತರ ತಾಯಿಯಿದ್ದ ಅಂತಃಪುರವನ್ನು ಸೇರಿ, ಆಕೆಯ ಪಾದಗಳಿಗೆ ನಮಸ್ಕಾರ ಮಾಡಿ, "ಅಮ್ಮಾ, ಕುದುರೆಯನ್ನೇರಿ ಉತ್ಸವದಲ್ಲಿ ಬರುತ್ತಿರುವಾಗ ಮಿತವಚನನ ಕುದುರೆಯು ಒಬ್ಬ ಶಿವಭಕ್ತೆಯ ಮಗುವಿನ ತಲೆಯನ್ನು ಮೆಟ್ಟಿ ಕೊಂದಿತು. ಆತನ ತಪ್ಪು ನನ್ನದೆಂದು ಭಾವಿಸುವುದಾಗಿ ಹೇಳಿ ನಾನು ಬಲಾತ್ಕಾರದಿಂದ ಆತನನ್ನು ಮೆರವಣಿಗೆಗೆ ಒಪ್ಪಿಸಿದ್ದೆನು. ಈಗ ಅಪರಾಧಿಯಾದ ಮಿತವಚನನ ತಲೆಗೆ ಬದಲಾಗಿ ನನ್ನ ತಲೆಯನ್ನು ಪಳಿಯಾಗಿ ಕೊಡಲು ಒಪ್ಪಿ, ತಂದೆಯ ಆಜ್ಞೆಯನ್ನು ಪಡೆದಿದ್ದೇನೆ. ಅಮ್ಮಾ, ನಿಮ್ಮ ಪಾದಕ್ಕೆರಗಿ ಹೋಗಲು ಬಂದಿದ್ದೇನೆ. ನನಗಾಗಿ ದುಃಖಿಸದೆ ಮಿತವಚನನನ್ನೇ ಮಗನಂತೆ ಭಾವಿಸುವುದು. ಮುನ್ನ ಸುತರಿಲ್ಲವೆಂದು ದುಃಖಿಸಿ, ಗುರುವಿನುಪದೇಶದಿಂದ ಶಿವಾನುಗ್ರಹ ಹೊಂದಿ ನನ್ನನ್ನು ಪಡೆದು, ನನ್ನ ಬಾಲಲೀಲೆಗಳನ್ನೂ, ಯೌವನ ವಿಲಾಸಗಳನ್ನೂ ನೋಡಿ ತಣಿದ ನೀನು ಇಂದು ನನ್ನ ಮರಣವನ್ನು ನೋಡುವಂತಾಯಿತೆಂದು ಉಮ್ಮಳಿಸಬೇಡ. ನಿಮಗೀದುಃಖವನ್ನು ತಂದ ಕೃತಘ್ನನು ನಾನು. ಇದೆಲ್ಲ ಆ ಪರಶಿವನ ಲೀಲಾವಿಲಾಸವೆಂದು ಭಾವಿಸಿ. ಇಷ್ಟನ್ನು ಬೇಡುತ್ತೇನೆ" ಎಂದು ಬಿನ್ನವಿಸಿ ಅಲ್ಲಿಂದ ಹೊರಡಲನು ವಾದನು.

ಆಗ ತಾಯಿಯು ಮಗನನ್ನು ತಡೆದು, "ಮಗನೆ, ನನ್ನೊಡೆಯನ ಸತ್ಯವು ಗೆಲ್ಲಲಿ! ನಿನ್ನ ಪ್ರಾಣವನ್ನು ಶಿವಭಕ್ತೆಯ ಶಿಶುವಿಗಾಗಿ ಚಿಂತಿಸದೆ ಕೊಡು. ಪಾರ್ವತೀಪತಿಯ ಪಾದಪದ್ಮಗಳಲ್ಲಿ ಭ್ರಮರವಾಗುವ ಯೋಗವನ್ನು ಪಡೆ!" ಎಂದು ಹರಸಿ ಕಳುಹಿಸಿಕೊಟ್ಟು, "ಈ ಸತ್ಯ, ಈ ವಿನಯ, ಈ ಸದ್ಗುಣ, ಈ ವಿವೇಕ, ಈ ಸರ್ವಜನಪ್ರಿಯತೆ, ಈ ಘನ ಧೈರ್ಯ— ಇವೆಲ್ಲ ನನ್ನ ಮಗನಿಗಲ್ಲದೆ ಜಗತ್ತಿನಲ್ಲಿ ಇತರರಿಗುಂಟೆ?" ಎಂದು ಹೆಮ್ಮೆಯಿಂದ ರಾಜಶೇಖರನನ್ನು ಹೊಗಳುತ್ತಿದ್ದಳು.

ನ್ಯಾಯಾವತಾರನಾದ ಸತ್ಯೇಂದ್ರನು 'ಸಂದಾಯಿ' ಎಂಬ ಸೇವಕನನ್ನು ಕರೆದು, "ಎಲವೋ, ನೀನು ಈ ಕುಮಾರನೊಡನೆ ಹೋಗಿ, ಇವನ ತಲೆಯನ್ನು ತೆಗೆದುಕೊಂಡು ಬಾ!" ಎಂದು ಅಪ್ಪಣೆ ಮಾಡಿದನು.

ರಾಜಾಜ್ಞೆಯಂತೆ ಆ ಸೇವಕನು ಖಡ್ಗಧಾರಿಯಾಗಿ ಮುಂದೆ ನಡೆದನು. ರಾಜಕುಮಾರನು ವಧೆಗೆ ಗುರಿಯಾಗಿ ಆ ಕಟುಕನ ಹಿಂದೆ ನಡೆದನು. ರಾಜಬೀದಿಯಲ್ಲಿ ಈ ರೀತಿ ಆತನನ್ನು ಕಂಡ ಪೌರರು ಯೌವನ ಸಾಮ್ರಾಜ್ಯಾದಿ ಸಕಲ ವೈಭವಗಳಿದ್ದರೂ ಸತ್ಯಕ್ಕಾಗಿ ತನ್ನ ತಲೆಯನ್ನೇ ಒಪ್ಪಿಸಲು ಹೋಗುತ್ತಿರುವುದನ್ನು ನೋಡಿ ಆತನನ್ನು ಹೊಗಳಿದರು.

ಕೆಲವರು "ಶಿವಾನುಗ್ರಹದಿಂದ ಹುಟ್ಟಿ ಈಗತಾನೆ ಮದುವೆಯಾದ, ಮನ್ಮಥನಂತೆ ನವತರುಣನಾಗಿರುವ ಮಗನನ್ನು ಮರಣಕ್ಕೆ ಗುರಿಮಾಡಿದ ಸತ್ಯೇಂದ್ರನು ಎಷ್ಟು ನಿರ್ದಯನು! ವೈಹಾಳಿಯ ಚಪಲತೆಯಿಂದಾಡಿದ ಒಂದು ಮಾತಿಗಾಗಿ ಮರಣದಂಡನೆಯೆ?" ಎಂದು ರಾಜನನ್ನು ಆಕ್ಷೇಪಿಸಿದರು. ಪುರಸ್ತ್ರೀಯರು "ಆ ಹಾಳು ಕುದುರೆಗಳೇಕೆ ಬಂದುವೋ! ಆ ಮಗು ಏಕೆ ಸಿಕ್ಕಿತೋ? ಈ ಅನ್ಯಾಯವನ್ನು ನೋಡಲಾಗದು!" ಎಂದು ಮರುಗಿದರು.

ಸ್ವಲ್ಪಹೊತ್ತಿನಲ್ಲಿ ರಾಜಶೇಖರನು ಉದ್ಯಾನವನ್ನು ಸೇರಿದನು. ಆತನು ಅಲ್ಲಿ ಪದ್ಮಾಸನದಲ್ಲಿ ಕುಳಿತು ಕಣ್ಣುಮುಚ್ಚಿ ಪರಮೇಶ್ವರನನ್ನು ಆನಂದದಿಂದ ಮನಸ್ಸಿನಲ್ಲಿಯೇ ಧ್ಯಾನಿಸಿದನು. ಅನಂತರ ಖಡ್ಗವನ್ನು ಕೈಗೆತ್ತಿಕೊಂಡು, ಇನ್ನೇನು ಕೊರಳಿಗೆ ಹಾಕಿಕೊಳ್ಳಬೇಕು– ಎನ್ನುವಷ್ಟರಲ್ಲಿ ಆ ಸೇವಕನು "ಜೀಯಾ, ಪಂಚಾಕ್ಷರಿಯನ್ನು ಮರೆತು ಈ ಕೆಲಸ ಮಾಡಬಹುದೆ?" ಎಂದನು.

ರಾಜಶೇಖರನು ಸೇವಕನ ಶಿವಭಕ್ತಿಯನ್ನು ಮೆಚ್ಚಿದನು. ಆತನು "ಸಂದಾಯಿ, ನೀನು ನನಗೆ ಪರಮಾಪ್ತನು. ಮರೆತಿದ ಮಹಾಮಂತ್ರವನ್ನು ಜ್ಞಾಪಿಸಿದೆ" ಎಂದು ಅವನನ್ನು ಪ್ರಶಂಸಿಸಿಬನು.

ಸಂದಾಯಿಯು, "ದೇವ, ಆ ಪಂಚಾಕ್ಷರಿಯ ಮಹಿಮೆಯನ್ನು ಈ ಸೇವಕನಿಗೆ ತಿಳಿಸು. ಪ್ರಾಣಹೋಗುತ್ತಿರುವ ಸಮಯದಲ್ಲಿ ಈ ಪಂಚಾಕ್ಷರಿಯ ಜಪವು ಪ್ರಶಸ್ತವಾದುದೆಂದು ಹಿರಿಯರು ಹೇಳುವುದನ್ನೇ ನಾನೂ

ನೆನೆಸಿಕೊಂಡೆ. ಅದೇನು ನಿಜವೋ, ಸುಳ್ಳೋ ನನಗೆ ತಿಳಿಯದು" ಎಂದನು.

ರಾಜಶೇಖರನು "ಸಂದಾಯಿ, ನಿನ್ನ ಸೇವಕವೃತ್ತಿಯೂ, ರಾಜನ ಆಜ್ಞೆಯೂ ಕೆಡುವುದೆಂದು ಭಾವಿಸಿ, ನಾನು ಆ ಮಹಾಮಂತ್ರವನ್ನು ಜಪಿಸಲಿಲ್ಲ" ಎಂದನು.

"ಪ್ರಭೂ, ನೀನು ಮಂತ್ರವನ್ನು ಜಪಿಸಿದರೆ ರಾಜಾಜ್ಞೆ ಏಕೆ ಕೆಡುತ್ತದೆ? ನನ್ನ ಸೇವಕವೃತ್ತಿಗೂ, ನಿನ್ನ ಮಂತ್ರಜಪಕ್ಕೂ ಏನು ಸಂಬಂಧ?" ಎಂದನು ಆ ಸಂದಾಯಿ.

ಆಗ ಕುಮಾರನು "ಸಂದಾಯಿ, ಈ ಮಂತ್ರಕ್ಕೆ ಪರಶಿವನನ್ನು ಕಾಣಿಸುವಂಥ ಪ್ರಭಾವವುಂಟು. ಈ ದಿವ್ಯಮಂತ್ರವನ್ನು ನಾನು ಉಚ್ಚರಿಸಿದರೆ ನನ್ನ ಕೊರಳಿಗೆ ಬೀಳುವ ಈ ಕತ್ತಿಯು ಹೂಮಾಲೆಯಾಗುವುದು; ಕತ್ತು ಕಡಿದುಬೀಳದು. ಆಗ ನಿನ್ನ ಸೇವಕವೃತ್ತಿಯೂ ಕೆಡುವುದು; ನನ್ನ ತಲೆಯನ್ನು ಪಡೆಯುವ ರಾಜಾಜ್ಞೆಯೂ ವ್ಯರ್ಥವಾಗುವುದು" ಎಂದು ವಿವರಿಸಿದನು.

ರಾಜಕುಮಾರನ ಮಾತನ್ನು ಕೇಳಿ ಆ ಸೇವಕನಿಗೆ ಆಶ್ಚರ್ಯವಾಯಿತು. ಅವನು ಕುತೂಹಲದಿಂದ "ನನ್ನೊಡೆಯಾ, ನನ್ನ ಸೇವಕತ್ವವು ಅಳಿದರೂ ಸರಿಯೆ; ನನ್ನೊಡೆಯನ ಆಜ್ಞೆ ಅಳಿದರೂ ಸರಿಯೆ. ಆ ಮಹಾಮಂತ್ರವನ್ನು ನೀನು ಜಪಿಸದೆ ಸತ್ತರೆ ನಿನಗೆ ಶಿವನಲ್ಲಿ ಐಕ್ಯ ಬಂದೀತೆ?" ಎಂದನು.

ಅವನ ಮಾತನ್ನು ಕೇಳಿ ರಾಜಶೇಖರನು ಸ್ವಲ್ಪಹೊತ್ತು ಆಲೋಚಿಸಿ, "ಸಂದಾಯಿ, ನೋಡುತ್ತಿರು. ನಿನಗೊಂದು ವಿಚಿತ್ರವನ್ನು ತೋರಿಸುತ್ತೇನೆ" ಎಂದು ಹೇಳಿ, ಝುಳಝುಳಿಸುತ್ತಿದ್ದ ತನ್ನ ಕತ್ತಿಯಿಂದ ತನ್ನ ತಲೆಯನ್ನು ಥಟ್ಟನೆ ಕತ್ತರಿಸಿಕೊಂಡನು.

ಆ ಸೇವಕನು "ಅಯ್ಯೋ! ಕುಮಾರನು ಕತ್ತನ್ನು ಕಡಿದುಕೊಂಡನು!" ಎಂದು ಭೀತಿಯಿಂದ ಕೂಗಿಕೊಂಡು, "ಚಂದ್ರಶೇಖರಾ, ಶಂಕರಾ, ಕಾಪಾಡು! ಈ ಕುಮಾರನಿಗೆ ಶಾಶ್ವತಸುಖವನ್ನು ಕೊಡು!" ಎಂದು ಶಿವನನ್ನು ಪ್ರಾರ್ಥಿಸಿದನು.

ಆ ಹೊತ್ತಿಗೆ ಈಶ್ವರನು ಗಗನದಲ್ಲಿ ನಿಂತು, "ದೇವಿ, ಮುಂದಿನ್ನೂ ವಿಶೇಷ ಕಾರ್ಯವುಂಟು. ಈ ಅದ್ಭುತ ಭಕ್ತರ ಭಕ್ತಿಯ ಪ್ರಭಾವವನ್ನು ನೋಡುತ್ತಿರು" ಎಂದು ಪಾರ್ವತಿಗೆ ಹೇಳಿದನು.

ಆ ಸೇವಕನು ನೋಡುತ್ತಿರುವಹಾಗೆಯೇ ರಾಜಶೇಖರನು ತನ್ನ ತಲೆಯನ್ನು ಕತ್ತಿಯಿಂದ ಕತ್ತರಿಸಿ, ಶಿವಪಂಚಾಕ್ಷರಿಯನ್ನು ಉಚ್ಚರಿಸುತ್ತಿರುವ ಆ ತಲೆಯನ್ನು ಕೈಯಲ್ಲಿ ಹಿಡಿದನು. ಒಂದು ದಿವ್ಯತೇಜಸ್ಸು ಆ ಸ್ಥಳದಲ್ಲಿ ಥಳಥಳಿಸುತ್ತಿರಲು, ಆ ಸೇವಕನು ಅದನ್ನು ನೋಡಲಾರದೆ ಆ ತಲೆಯನ್ನು ತನ್ನ ಕೈಗೆ ತೆಗೆದುಕೊಂಡನು. ಹೇಳಿದಂತೆ ವಿಚಿತ್ರವನ್ನು ತೋರಿಸುತ್ತಿದ್ದ ಆ ರಾಜಕುಮಾರನ ಮಾತು ಅವನಿಗೆ ಉಪದೇಶವಚನವಾಯಿತು. ಆ ಸೇವಕನಿಗೂ ಆ ಮಹಾತ್ಮನ ಸಂಗದ ಫಲವಾಗಿ ಪಂಚಾಕ್ಷರಿ ಮಂತ್ರದ ಸಿದ್ಧಿಯು ಲಭಿಸಿತು.

ಸಂದಾಯಿಯು ತೇಜಃಪುಂಜವಾಗಿ ಮೆರೆಯುತ್ತ ಶಿವಪಂಚಾಕ್ಷರಿಯನ್ನು ಪಠಿಸುತ್ತಿದ್ದ ಆ ಯುವರಾಜನ ತಲೆಯನ್ನು ಎತ್ತಿಕೊಂಡು ಬೀದಿಯಲ್ಲಿ ಬರುತ್ತಿರಲು ಪುರಜನರು ಅದನ್ನು ಕಂಡು ವಿಸ್ಮಯಗೊಂಡರು. ಅವನು ಆ ತಲೆಯನ್ನು ರಾಜನ ಕೈಯಲ್ಲಿಟ್ಟನು.

ತನ್ನ ಮಗನ ತಲೆಯು ಶಿವಪಂಚಾಕ್ಷರಿಯನ್ನು ಪಠಿಸುತ್ತಿರುವುದನ್ನು ನೋಡಿ ಸತ್ಯೇಂದ್ರಚೋಳನು ಆಶ್ಚರ್ಯಪಟ್ಟನು. ನಡೆದ ಸಂಗತಿಯನ್ನು ತಿಳಿಸುವಂತೆ ರಾಜನು ತಿಳಿಸಲು, ಆ ಸೇವಕನು ತನಗೂ ರಾಜಶೇಖರನಿಗೂ ನಡೆದ ಸಂವಾದವನ್ನೂ, ಕುಮಾರನ ವಿಚಿತ್ರ ಕಾರ್ಯವನ್ನೂ ವಿಸ್ತಾರವಾಗಿ ಬಿನ್ನಯಿಸಿದನು.

ಆ ಭೃತ್ಯನ ಕಾರ್ಯವನ್ನು ಜನರೆಲ್ಲ ಪ್ರಶಂಸಿಸಿದರು. "ಮೊದಲೇ ಸತ್ತ ಮಂತ್ರಿಗೆ ಈ ಮಂತ್ರೋಪದೇಶ ದೊರೆಯಿತೆ? ಸಾಮಾನ್ಯ ಸೇವಕನಾದರೂ ಕುಮಾರನಿಂದ ಇಂಥ ಸುಸಿದ್ಧಿಯನ್ನು ಕಂಡು ಪಡೆದ ಇವನೇ ಧನ್ಯನಲ್ಲವೆ!" ಎಂದು ಜನರು ಅವನನ್ನು ಹೊಗಳಿದರು.

ಅನಂತರ ರಾಜನು ತಿರುಕೊಳವಿನಾಚಿಯನ್ನು ಕರೆದು "ನಿನ್ನ ಮಗನ ತಲೆಯೊಂದಕ್ಕೆ ಬದಲಾಗಿ ಈಗ ಈ ಎರಡು ತಲೆಗಳಿವೆ ನೋಡು" ಎಂದು ಅವಳ ಮಗುವಿನ ತಲೆಯ ಎರಡು ಪಕ್ಕಗಳಲ್ಲಿಯೂ ಮಂತ್ರಿಯ, ರಾಜ

ಕುಮಾರನ ತಲೆಗಳನ್ನಿರಿಸಿದರು. ಕೂಡಲೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಯುವರಾಜನ ತಲೆಯು ಪಠಿಸುತ್ತಿದ್ದ ಮಹಾಮಂತ್ರವೇ ಸಂಜೀವಿನಿ ಮಂತ್ರ ವಾಯಿತೋ ಎಂಬಂತೆ ಶಂಕರನ ತಲೆಯೂ ಜೀವಗೊಂಡು ಪಂಚಾಕ್ಷರಿ ಯನ್ನು ಪಠಿಸಲಾರಂಭಿಸಿತು.

ಏನೂ ಅರಿಯದ ಆ ಶಿಶು ಸ್ಪಷ್ಟವಾಗಿ ಪಂಚಾಕ್ಷರಿಯನ್ನು ಉಚ್ಚರಿಸು ತ್ತಿರುವುದನ್ನು ನೋಡಿ ಅಲ್ಲಿದ್ದವರೆಲ್ಲರೂ ಆಶ್ಚರ್ಯಭರಿತರಾದರು. ಆಗ ತಿರುಕೊಳವಿನಾಚಿಯು ಸಂದಾಯಿಯ ನಡುವಿನಲ್ಲಿದ್ದ ಕತ್ತಿಯನ್ನೆಳೆದು ಕೊಂಡು, "ರಾಜ, ನನ್ನ ಮಗನ ತಲೆಗೆ ಪಳಿಯಾಗಿ ಲೋಕವನ್ನೇ ಮೆಚ್ಚಿಸುವ ಸಾಮರ್ಥ್ಯವುಳ್ಳ ನಿನ್ನ ಕುಮಾರನ ತಲೆಯನ್ನು ಕಡಿಸಿಕೊಟ್ಟೆ. ನಿನ್ನ ಮಂತ್ರಿಯ ತಲೆಗೆ ನನ್ನ ತಲೆಯೇ ಪಳಿಯಾಗಲಿ" ಎಂದು ಹೇಳುತ್ತ, ಆ ಕತ್ತಿಯಿಂದ ತನ್ನ ತಲೆಯನ್ನು ಕಡಿದುರುಳಿಸಿದಳು. ಆ ತಲೆಯೂ ಶಿವಪಂಚಾಕ್ಷರಿಯನ್ನು ಗಟ್ಟಿಯಾಗಿ ಹೇಳುತ್ತಿದ್ದಿತು.

ಇದನ್ನು ನೋಡಿ ರಾಜನಿಗೆ ಆಶ್ಚರ್ಯವಾಯಿತು. ಆತನು ತನ್ನ ನಡುವಿನಲ್ಲಿದ್ದ ಖಡ್ಗದಿಂದ ತನ್ನ ತಲೆಯನ್ನು ಕತ್ತರಿಸಿ ಕೆಳಗಿರಿಸಿದನು. ಅದೂ ಪಂಚಾಕ್ಷರಿ ಮಹಾಮಂತ್ರವನ್ನು ಪಠಿಸುತ್ತಿತ್ತು.

ಈ ವಿಚಿತ್ರ ವಾರ್ತೆಯನ್ನು ಕೇಳಿ ಮಿತವಚನನು ಆ ಸ್ಥಳಕ್ಕೆ ಓಡಿ ಬಂದನು. ರಾಜಕುಮಾರನೂ ರಾಜನೂ ಗತಿಸಿದುದನ್ನು ಕೇಳಿ ಆತನಿಗೆ ಸಹಿಸಲಾಗದಷ್ಟು ದುಃಖವಾಯಿತು. "ಶಂಕರನನ್ನು ತುಳಿದುದು ನನ್ನ ಕುದುರೆ. ನನ್ನ ಅಪರಾಧಕ್ಕೆ ಯುವರಾಜನು ಜೀವ ತೆತ್ತನು. ಆತನ ನಿಮಿತ್ತ ಎಲ್ಲರೂ ಅಳಿದರು. ನ್ಯಾಯವಾಗಿ ನಾನು ಮೊದಲು ಸಾಯ ಬೇಕಾಗಿತ್ತು. ಅಕಟಾ! ನನಗಿಂತಲೂ ಮೂರ್ಖನೂ, ಸ್ವಾರ್ಥಿಯೂ, ಸ್ವಾಮಿದ್ರೋಹಿಯೂ ಇನ್ನೊಬ್ಬನುಂಟೆ?" ಎಂದು ತನ್ನನ್ನು ತಾನೇ ನಿಂದಿಸಿಕೊಂಡು ಅಲ್ಲಿದ್ದ ಕತ್ತಿಯಿಂದ ತನ್ನ ತಲೆಯನ್ನೂ ಕತ್ತರಿಸಿಕೊಂಡು ಪ್ರಾಣಬಿಟ್ಟನು. ಆ ತಲೆಯೂ ಶಿವಪಂಚಾಕ್ಷರಿಯನ್ನು ಹೇಳಲಾ ರಂಭಿಸಿತು.

ರಾಜಾದಿಗಳು ಸತ್ತ ಸುದ್ದಿಯು ಮಹಾರಾಣಿಗೆ ತಲುಪಿತು. ಆಕೆಯು ಕಾತುರಳಾಗಿ ಕೂಡಲೆ ಶಿವಪೂಜೆಯನ್ನು ಮುಗಿಸಿಕೊಂಡು ರಾಜಶೇಖರನ

ಹೆಂಡತಿಯೊಡನೆ ಆ ಮೃತರ ತಲೆಗಳಿದ್ದ ಸ್ಥಳಕ್ಕೆ ಬಂದಳು. ಆ ಹೊತ್ತಿಗೆ ಮಂತ್ರಿ ಸತಿಯೂ, ಮಿತವಚನನ ಪತ್ನಿಯೂ ಬಂದರು. ಎಲ್ಲರೂ ಆ ತಲೆಗಳನ್ನು ನೋಡಿ ಆಶ್ಚರ್ಯಭರಿತರಾದರು. ಸ್ವಲ್ಪಹೊತ್ತಿನಲ್ಲಿ ಅವರಿಗೂ ವೀರಾವೇಶವುಂಟಾಯಿತು. ಅವರು ಒಂದೊಂದು ಖಡ್ಗವನ್ನು ಹಿಡಿದುಕೊಂಡು ತಮ್ಮ ತಲೆಗಳನ್ನೂ ಕತ್ತರಿಸಿಕೊಳ್ಳಲು ನಿಶ್ಚಯಿಸಿ ತಮ್ಮ ತಮ್ಮ ಪತಿಗಳ ತಲೆಗಳೆದುರಿಗೆ ನಿಂತರು. ಪತಿಶಿರಸ್ಸೆಂಬ ಲಿಂಗಕ್ಕೆ ತಮ್ಮ ಮುಖಾಂಬುಜದಿಂದ ಪೂಜೆ ಮಾಡುವರೋ ಎಂಬಂತೆ, ತಮ್ಮ ತಲೆಗಳನ್ನು ಅರ್ಪಿಸಲು ಅವರು ಸಿದ್ಧರಾದರು. ಇನ್ನೇನು ! ಅವರು ತಮ್ಮ ಕತ್ತಿಗಳನ್ನು ಕೊರಳುಗಳಿಗೆ ಹಾಕಿಕೊಳ್ಳಬೇಕು—ಎನ್ನುವಷ್ಟರಲ್ಲಿ ಉಮಾಸಮೇತನಾಗಿ ಪರಶಿವನು ಪ್ರತ್ಯಕ್ಷನಾದನು.

ದೇವದುಂದುಭಿಗಳು ಮೊಳಗಿದುವು. ದೇವತೆಗಳು ಮಹೇಶ್ವರನನ್ನು ಕಾಣಲೋ ಎಂಬಂತೆ ಭೂಮಿಗಿಳಿದು ಬಂದರು. ಅವರೆಲ್ಲರಮೇಲೂ ಅರಳ ಮಳೆ ಕರೆಯಿತು. ಗಿರಿಜೆ, ಗಣಪತಿ, ಷಣ್ಮುಖಾದಿ ಪ್ರಮಥಗಣ ಸಹಿತನಾಗಿ ಪರಮೇಶ್ವರನನ್ನು ಕಂಡು ಆ ಸತಿಯರು ತಮ್ಮ ಕೈಗಳಲ್ಲಿದ್ದ ಕತ್ತಿಗಳನ್ನು ಬಿಸುಟು ಶಿವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು.

ಆಗ ಈಶ್ವರನು ಪ್ರಸನ್ನನಾಗಿ, "ಮಹಾರಾಣಿ, ನಿನ್ನ ಅಭೀಷ್ಟವೇನು? ನೀನು ಬೇಡಿದುದನ್ನು ಕರುಣಿಸುವೆನು" ಎನ್ನಲು, ಆಕೆಯು "ಶಂಭೋ, ಮೊದಲು ಪ್ರಾಣವನ್ನು ಕಳೆದುಕೊಂಡ ಈ ಶಿಶು ಶಂಕರನಿಗೆ ಪ್ರಾಣವನ್ನು ಕರುಣಿಸು!" ಎಂದು ಬೇಡಿದಳು. ಗೌರೀಶನು ಆಕೆಯ ದೀನಪ್ರೇಮಕ್ಕೆ ಮೆಚ್ಚಿ ಮತ್ತೊಂದು ವರವನ್ನು ಬೇಡುವಂತೆ ಹೇಳಿದನು. ಆಕೆಯು, "ದೇವ, ಈ ಬಡವೆ ತಿರುಕೊಳವಿನಾಚಿಗೂ ಜೀವವನ್ನು ಅನುಗ್ರಹಿಸು!" ಎಂದು ಪ್ರಾರ್ಥಿಸಿದಳು. ಆಕೆಯ ಬೇಡಿಕೆಗೆ ಸಂತುಷ್ಟನಾದ ಈಶ್ವರನು ಆ ತಲೆಗಳನ್ನೆಲ್ಲ ಎಣಿಸುವಂತೆ ಹೇಳಲು, ರಾಣಿಯು ಒಂದೊಂದನ್ನಾಗಿ ಎಣಿಸುತ್ತ ಬಂದಳು. ಆಕೆಯು ಮುಟ್ಟಿದ ತಲೆಗಳೆಲ್ಲವೂ ತಮ್ಮ ತಮ್ಮ ದೇಹದೊಡನೆ ಅಂಟಿಕೊಂಡು ಅವರು ಮುನ್ನಿನಂತೆ ಜೀವಂತರಾಗಿ ನಿಲ್ಲುತ್ತ ಬಂದರು. ಸ್ವಲ್ಪಕಾಲದಲ್ಲಿಯೇ ಎಲ್ಲರೂ ಜೀವಂತರಾಗಿ ಪರಶಿವನಿಗೆ ನಮಸ್ಕರಿಸಿ ಜಯಕಾರದೊಡನೆ ಸ್ತುತಿಸಿದರು.

ದೇವದುಂದುಭಿಗಳು ಮೊಳಗಿದುವು. ಶಿವಶರಣರು 'ಉಘೇ' ಎಂದು ಹರ್ಷಧ್ವನಿ ಮಾಡಿದರು. ಶಂಖ ಭೇರೀನಿನಾದದಿಂದ ತುಂಬಿ ದಿಕ್ಕುಗಳು ಪ್ರತಿಧ್ವನಿ ಮಾಡಿದುವು. ಎಲ್ಲರೂ ಮಂಗಳಮೂರ್ತಿಯಾದ ಪರಮೇಶ್ವರನನ್ನು ಭಕ್ತಿಪರವಶರಾಗಿ ಹೊಗಳಿದರು. ರಾಜಶೇಖರನು ಗಿರಿಜಾರಮಣನ ಪಾದಪದ್ಮಗಳನ್ನು ಆನಂದಬಾಷ್ಪಗಳಿಂದ ತೊಳೆದು ಪೂಜಿಸಿದನು.

ಆಗ ಈಶ್ವರನು "ಕಂದಾ, ಬಾ" ಎಂದು ರಾಜಶೇಖರನನ್ನು ಸೆಳೆದಪ್ಪಿಕೊಂಡನು. "ನನ್ನ ಮಂತ್ರದ ಮಹಿಮೆಯನ್ನು ಇನ್ನಾರು ಈ ರೀತಿ ಭೂಮಿಯಲ್ಲಿ ಬೆಳಗಿರುವರು" ಎಂದು ನಂದಿಕೇಶ್ವರನನ್ನು ಕೇಳಲು, ಆತನು "ಮಹಾದೇವ! ಸ್ಕಂದ, ಉಪಮನ್ಯುಮುನಿ, ಸಾನಂದ, ಶತಾನಂದ, ಮುರುಘ ಮೊದಲಾದ ಮಹಾನುಭಾವರು ನಿನ್ನ ಮಂತ್ರದ ಮಹಿಮೆಯನ್ನು ಮೆರೆಸಿರುವರು; 'ಷಡಕ್ಷರಾತ್ಮಕರು' ಎನ್ನಿಸಿಕೊಂಡಿರುವರು. ಈಗ ರಾಜಶೇಖರನು ನಿನ್ನ ಮಂತ್ರದ ಮಹಿಮೆಯನ್ನು ಜಗತ್ತಿನಲ್ಲಿ ಪ್ರಕಾಶಗೊಳಿಸಿರುವನು" ಎಂದು ಹೇಳಿ, ರಾಜ, ಮಂತ್ರಿ, ಮಂತ್ರಿಸುತಾದಿ ಸರ್ವರ ಗುಣಗಳನ್ನೂ ಪ್ರಶಂಸಿಸಿದನು.

ಪಾರ್ವತಿಯು ತನ್ನ ಪಾದಕ್ಕೆರಗಿದ ಆ ರಾಣಿಯನ್ನು ಬಿಗಿದಪ್ಪಿ, ಮೈದಡವಿ, ಅಪೂರ್ವ ಶಿವಭಕ್ತರೆಂದು ಮೆಚ್ಚುಗೆಯನ್ನು ತೋರಿದಳು.

ಆ ಹೊತ್ತಿಗೆ ಗಿರೀಶನ ಆಜ್ಞೆಯಂತೆ ಬಾನಿನ ಕಡೆಯಿಂದ ಪುಷ್ಪಕಗಳು ಬಂದುವು. ಶಿವನು ಅವರನ್ನೆಲ್ಲ ಆ ವಿಮಾನಗಳಲ್ಲಿ ಕೂಡಿಸಿ ಕೈಲಾಸಾಭಿಮುಖವಾಗಿ ಕಳುಹಿಸಿ, ತಾನೂ ತೆರಳಿದನು. ಅನಂತರ ಕೈಲಾಸದಲ್ಲಿ ಪರಶಿವನ ದಿವ್ಯ ಸಭೆಯು ಸೇರಿತು. ಗಣೇಶ, ಷಣ್ಮುಖ, ವೀರಭದ್ರಾದಿಗಳಿಂದ ಶೋಭಾಯಮಾನವಾಗಿದ್ದ ಆ ಸಭೆಯಲ್ಲಿ ಶಿವಪಂಚಾಕ್ಷರಿಯ ಮಹಾಮಹಿಮೆಯನ್ನು ತಾನು ಅನುಭವಿಸಿ ಜಗತ್ತಿಗೆ ಸಾರಿದ ಮಹಾಮಹಿಮ ರಾಜಶೇಖರನೂ ಶಿವಭಕ್ತಿ ಪ್ರಕಾಶದಿಂದ ಮೆರೆಯುತ್ತಿದ್ದನು.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ಸೀಮಂತರತ್ನ—ಬೈತಲೆಯ ಮಣಿ. ಪಯೋದಾನ—ಹಾಲುಕೊಡು, ನೀರು ಕೊಡು. ಹಳಿ—ತಿರಸ್ಕರಿಸು. ಕೋಶ—ಭಂಡಾರ. ಕೃತಾರ್ಥ—ಧನ್ಯ. ಸಂತಾನ—ಮಕ್ಕಳು. ಇಂಗಿತ—ಮನಸ್ಸಿನಲ್ಲಿರುವ ವಿಷಯ, ಮನಸ್ಸು. ಮದ್ದಾನೆ—ಮದಿಸಿದ ಆನೆ. ಛೇದಿಸು—ಸೀಳು. ಕಿರಾತ—ಬೇಡ. ವಿಶಾರದ—ಪಂಡಿತ. ಕಪ್ಪ—ಕಾಣಿಕೆ, ತೆರಿಗೆ. ಸೊಡರು—ದೀಪ. ಸಹಣಿ—ಅಶ್ವಶಿಕ್ಷಕರು. ಸೈರಿಸು—ಸಹಿಸು. ಮಾತ್ಸರ್ಯರಾಹಿತ್ಯ — ಅಸೂಯೆ ಇಲ್ಲದಿರುವಿಕೆ. ಜಗಚ್ಚಕ್ಷು—ಲೋಕದ ಕಣ್ಣು, ಸೂರ್ಯ. ವೈಹಾಳಿ—ಮೆರವಣಿಗೆ, ಕ್ರೀಡೆ. ಅರ್ಚನೆ—ಪೂಜೆ. ವಿಸ್ಮಯ—ಆಶ್ಚರ್ಯ. ಮಡಿದ—ಸತ್ತ. ಕಳೇಬರ—ದೇಹ (ಹೆಣ). ಹುಲ್ಲೆ—ಜಿಂಕೆ. ಮೆಟ್ಟು—ಒದೆ. ಅಳಲು—ದುಃಖ. ವಣಿಜ—ವ್ಯಾಪಾರಿ. ದಿವಂಗತನಾಗು — ಸಾಯಿ. ರಮಣ — ಗಂಡ. ಶಿವಶರಣರು — ಶಿವಭಕ್ತರು. ಮಿಗಿಲು—ಹೆಚ್ಚು. ಜೀವಹತಿ—ಪ್ರಾಣಹಾನಿ. ಬಿನ್ನಪ—ವಿಜ್ಞಾಪನೆ. ಮಸ್ತಕ—ತಲೆ. ಎರಗು—ನಮಸ್ಕಾರ ಮಾಡು. ಭ್ರಮರ—ದುಂಬಿ. ಅಳಿ—ಹಾಳಾಗು, ನಾಶವಾಗು. ಪಳಿ—ಬದಲು, ಪ್ರತಿಯಾಗಿ.

**೨. ಈ ಮಾತುಗಳ ಅಭಿಪ್ರಾಯವನ್ನು ಸಂದರ್ಭದೊಡನೆ ವಿವರಿಸಿ:—**

೧. ಕಲ್ಪವೃಕ್ಷವಿದ್ದೂ ದಾರಿದ್ರ್ಯವೇಕೆ?

೨. ಬದುಕಿದೆಯಾ ಬಡಜೀವವೆ?

೩. ಶಾಂತಿಯಿಂದ ನಡೆಯುವವರಿಗೆ ಸಮರುಂಟೆ?

೪. ಜಗತ್ತಿನ ಜನರ ಕಣ್ಣುಗಳನ್ನು ಮುತ್ತುವ ಕಾಳ್ಕತ್ತಲೆಯು ಜಗಚ್ಚಕ್ಷುವಾದ ಸೂರ್ಯನನ್ನು ಮುತ್ತೀತೆ?

೫. ಮುಳ್ಳು ಚುಚ್ಚುವುದೆಂದು ಹೆದರಿ ಆನೆ ಕಾಡಿನಲ್ಲಿ ಸಂಚರಿಸದಿರುವುದೆ?

೬. ನಿನ್ನ ಅಪರಾಧವು ನನ್ನದು.

೭. ಸತ್ಪುರುಷರಿಗೆ ಅವರ ಆತ್ಮವೇ ಸಾಕ್ಷಿ.

೮. ಎಳೆಗಿಳಿಯ ಕೊರಳನ್ನು ಮುರಿದು ಸಂತೋಷಿಸಿದವರು ಯಾರು?

೯. ನೀನಿಲ್ಲದ ಮೇಲೆ ನನಗೇನುಳಿದಿದೆ?

೧೦. ಶಿವನ ಪೂಜೆಗಿಂತಲೂ ಶರಣರ ಪೂಜೆಯು ಮಿಗಿಲು.

**೩. ಈ ಪ್ರಶ್ನೆಗಳಿಗೆ ಸಮಂಜಸವಾದ ಉತ್ತರವನ್ನು ಬರೆಯಿರಿ:—**

೧. ರಾಜಶೇಖರನ ಜನ್ಮವೃತ್ತಾಂತವೇನು?

೨. ರಾಜಶೇಖರನಿಗೂ ಸಿಂಹಳನಿಗೂ ಆದ ಯುದ್ಧವನ್ನು ವಿವರಿಸಿ.

೩. ಸರ್ವಮಂಗಳೆ ಯಾರು? ಅವಳು ರಾಜಶೇಖರನನ್ನು ಮದುವೆಯಾದುದು ಹೇಗೆ?

೪. ರಾಜಶೇಖರನಿಗೆ ಸಿಂಧುರಾಜನು ಕೊಟ್ಟ ಕಾಣಿಕೆ ಏನು? ಅದರ ವೈಶಿಷ್ಟ್ಯವೇನು?

೫. ರಾಜಶೇಖರನಿಗೆ ಮಿತವಚನನು ಹೇಳಿದ ನೀತಿ ಏನು?

೬. ರಾಜಶೇಖರನು ಮೆರವಣಿಗೆಗೆ ಮಿತವಚನನನ್ನು ಒಪ್ಪಿಸಿದುದು ಹೇಗೆ?

೭. ರಾಜಶೇಖರನು ಮಿತವಚನನ ಮಾತನ್ನು ಮೀರಿದುದರಿಂದ ಆದ ಪರಿಣಾಮವೇನು?

೮. ಶಿವಪಂಚಾಕ್ಷರಿ ಮಂತ್ರದ ಮಹಿಮೆ ರಾಜಶೇಖರ ವಿಲಾಸದಲ್ಲಿ ಹೇಗೆ ವರ್ಣಿಸಲ್ಪಟ್ಟಿದೆ?

೯. ರಾಜಶೇಖರನು ತನ್ನ ತಪ್ಪಿಗೆ ಹೇಗೆ ಪ್ರಾಯಶ್ಚಿತ್ತ ಮಾಡಿಕೊಂಡನು?

೧೦. ಸತ್ಯೇಂದ್ರಚೋಳನ ನ್ಯಾಯಪರತೆಯನ್ನು ವಿವರಿಸಿ.

**೪. ವ್ಯಾಕರಣ:—**

೧. ವರ್ತಮಾನ, ಭೂತ, ಭವಿಷ್ಯತ್—ರೂಪಗಳ ಆಖ್ಯಾತ ಪ್ರತ್ಯಯಗಳು ಯಾವುವು?

೨. 'ಅವ್ಯಯ' ಎಂದರೇನು? ಅವು ಎಷ್ಟು ವಿಧ?

೩. ಕ್ರಿಯಾಪದದ ಅರ್ಥವನ್ನು ಕೊಡುವ ಈ ಅವ್ಯಯಗಳನ್ನು ಗಮನಿಸಿ:— ಉಂಟು, ಇಲ್ಲ, ಬೇಕು, ಬೇಡ, ಕೂಡದು.

# ೬. ಅನ್ನಾವತಾರ

ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರವರು ಪ್ರಸಿದ್ಧ ರಾಜಕಾರಣಿಗಳು; ಸಾಹಿತಿಗಳು. ಇವರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ದುಡಿದು, ಸೆರೆಮನೆಯ ವಾಸವನ್ನು ಅನೇಕ ಬಾರಿ ಅನುಭವಿಸಿದ ದೇಶಸೇವಕರು. ಗಾಂಧೀಜಿ, ನೆಹರೂ ಮುಂತಾದ ದೇಶಪ್ರೇಮಿಗಳ ಸಮೀಪವರ್ತಿಗಳಾಗಿದ್ದು ರಾಜ್ಯದ ಆಗುಹೋಗುಗಳ ವಿಷಯದಲ್ಲಿ ಸೂಕ್ಷ್ಮ ಜ್ಞಾನವುಳ್ಳವರು. ಹಾಗೆಯೇ, ಕನ್ನಡ ಸಾಹಿತ್ಯದಲ್ಲಿಯೂ ಇವರದು ಉತ್ತಮವಾದ ಕೈ. ಗಾಂಧೀ ಸಾಹಿತ್ಯದಲ್ಲಿ ಇವರು ವಿಶೇಷ ಪರಿಶ್ರಮ ವುಳ್ಳವರು; ಮೂಲಶಿಕ್ಷಣದ ವಿಷಯದಲ್ಲಿ ಅಧಿಕಾರವಾಣಿಯಿಂದ ಮಾತಾಡ ಬಲ್ಲವರು. ವೃತ್ತಪತ್ರಿಕಾ ಕಾರ್ಯದಲ್ಲಿಯೂ ಇವರದು ಮೇಲುಗೈ. ಇವರು 'ಪರ್ಣಕುಟಿ' 'ಸರದಾರ ಪಟೇಲ್' 'ಕುಲದೀಪಕರು' ಮುಂತಾದ ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಹಿಂದೀ ಮತ್ತು ಇಂಗ್ಲಿಷ್ ಭಾಷೆಯ ಕೆಲವು ಗ್ರಂಥ ಗಳನ್ನು ಕನ್ನಡದಲ್ಲಿ ಅನುವಾದ ಮಾಡಿದ್ದಾರೆ. ಅವುಗಳಲ್ಲಿ 'ನಮ್ಮ ಹಿಂದೂಸ್ಥಾನ' ವಿನೋಬಾರವರ 'ಗೀತಾ ಪ್ರವಚನ' ಇತ್ಯಾದಿ ಗ್ರಂಥಗಳು ಮುಖ್ಯವಾದುವು. ಕನ್ನಡ ಸಾಹಿತ್ಯಪರಿಷತ್ತಿನ ಕಾರ್ಯದರ್ಶಿಗಳಾಗಿದ್ದ ಇವರು ಈಗಲೂ ಪ್ರಕಾಶಕರ ಮತ್ತು ಲೇಖಕರ ಸಂಘದ ಅಧ್ಯಕ್ಷರಾಗಿದ್ದಾರೆ.

ಇವರು 'ಸರ್ವೋದಯ' ಪತ್ರಿಕೆಯನ್ನು ನಡೆಸುತ್ತ ಸರ್ವೋದಯ ಚಳುವಳಿಯ ಮುಖಂಡರಾಗಿದ್ದಾರೆ. ಇವರ 'ವಿನೋಬಾ' ಎಂಬ ಜೀವನಚರಿತ್ರೆ ಯಿಂದ ಈ ಭಾಗವನ್ನು ಆರಿಸಿಕೊಂಡಿದೆ. ಸಮತಾವಾದದ ತತ್ವವನ್ನು ನಮ್ಮ ದೇಶಕ್ಕೆ ಅನ್ವಯಿಸಿ ಬಡವ–ಬಲ್ಲಿದನೆಂಬ ಭೇದವನ್ನು ತೊಡೆದುಹಾಕಲು ಪ್ರಯತ್ನಿ ಸುತ್ತಿರುವ ಈ ಸಮಯದಲ್ಲಿ ಈ ಲೇಖನ 'ಸರ್ವೋದಯ'ದ ಪರಿಚಯ ಮಾಡಿಕೊಡುತ್ತದೆ.

ಉಳಿಕಿ ದೇವರು ಬಂದರು ॥ ಸಲಿಕೆ ಗುದ್ದಲಿ ತಂದರು ॥
ಎಲ್ಲ ದೇವರು ಬಂದರು ॥ ಅನ್ನ ದೇವರು ಬರಲಿಲ್ಲೋ–ಬರಲಿಲ್ಲ ॥

ಲೋಕದಲ್ಲಿ ಈಗ ಕಾಳ್ಗಿಚ್ಚಿನಂತೆ ಹರಡಿದ ಹಸಿವಿನ ಬಾಧೆಯನ್ನು ತನ್ನ ಸಾನುಭೂತಿಯ ಕಣ್ಣಿಂದ ಕಂಡಕವಿ ಹೀಗೆ ಹಾಡಿದ್ದಾನೆ. ಮೂವತ್ತು ಮೂರು ಕೋಟಿ ದೇವತೆಗಳೇ ಸಾಲಾಗಿ ಇದಿರಿಗೆ ಬಂದು ನಿಂತರೂ ಅನ್ನ ನೀಡದ ದೇವರುಗಳಿಂದೇನು ಫಲ? ಹಸಿದಿರುವ ಲೋಕಕ್ಕೆ ಮೊದಲು ಬೇಕಾದುದು ಅನ್ನ! ಆಮೇಲೆ ಅಂತಃಕರಣ. ಇದನ್ನು ಅರಿತು ಕವಿ 'ಅನ್ನಾವ ತಾರ' ಬರಲಿ ಎಂದು ಹಾರಯಿಸಿ ಹಾಡಿದ.

ಅನ್ನ, ಅನ್ನ, ಜಗತ್ತಿನಲ್ಲಿ ಎಲ್ಲಾ ಕಡೆಯಿಂದಲೂ ಅನ್ನದ ಕೂಗು, ಹಸಿವಿನ ಅಬ್ಬರ ಕೇಳಿಸುತ್ತಲಿದೆ. ಲೋಕದಲ್ಲಿ ಅನ್ನ-ಅನುಕೂಲ ಸಮೃದ್ಧಿಯಾಗಿದೆ. ಎಷ್ಟುಜನ ಈ ಲೋಕದಲ್ಲಿ ಹುಟ್ಟಿದ್ದಾರೋ ಅವರಿಗೆಲ್ಲಾ ಸಾಕಾಗುವಷ್ಟು ಗಾಳಿ ನೀರನ್ನು ದೇವರು ಕೊಟ್ಟಿಲ್ಲವೆ? ಹಾಗೆಯೇ ನೆಲವನ್ನೂ ಕೊಟ್ಟಿದ್ದಾನೆ. ಅನ್ನವನ್ನೂ ಕೊಟ್ಟಿದ್ದಾನೆ. ಆದರೂ ಏನೋ ಹೆಚ್ಚು ಕಡಿಮೆಯಾಗಿ ಜಗತ್ತಿನಲ್ಲಿ ಇದ್ದವರಿಗೆ ಉಂಟು, ಇಲ್ಲದವರಿಗೆ ಇಲ್ಲವೇ ಇಲ್ಲ ಎಂಬಂತೆ ಆಗಿದೆ. ದೇವರು ಕೊಟ್ಟ ಅನುಕೂಲಗಳನ್ನು ಕೆಲವರೇ ಹಂಚಿಕೊಂಡು ಅನೇಕಾನೇಕ ಜನಕ್ಕೆ ಏನೂ ಇಲ್ಲದಂತೆ ಮಾಡಿದ್ದಾರೆ. ಬಡವರ ಈ ಭೀಷಣ ದಾರಿದ್ರ್ಯ ಬರಬರುತ್ತಾ ತಡೆದುಕೊಳ್ಳಲಾರದಷ್ಟು ಕ್ರೂರ-ಕಠೋರ ಆಗಿದೆ. ಹಿಂದೆ ಎಂದೂ ಇಲ್ಲದ ಭೇದ, ಇದ್ದವರು ಇಲ್ಲದವರು ಎಂಬುದು, ಲೋಕದಲ್ಲಿ ಹುಟ್ಟಿದೆ. ಆ ಭೇದದ ಹಾಲಾಹಲ ದೇಶದೇಶಗಳಲ್ಲಿ ಕಲಹ, ಯುದ್ಧ, ಹಿಂಸೆಗಳನ್ನು ತಂದೊಡ್ಡಿದೆ. ಅಮಲಿನಲ್ಲಿ ಲೋಕ ರಕ್ತದ ಓಕುಳಿಯಾಡುತ್ತಿದೆ.

ಹಿಂದೂಸ್ತಾನದಲ್ಲಿ ದೇವರುಗಳಿಗೇನು ಕೊರತೆಯಿಲ್ಲ. ಧರ್ಮಗಳಿಗೆ ಕೊನೆಯಿಲ್ಲ. ಆದರೂ ಅನ್ನ ನೀಡುವ ದೇವರು, ಅಂತಃಕರಣ ಬೆಳಗಿಸುವ ಧರ್ಮ, ಈಗ ಕಾಣುತ್ತಿಲ್ಲ. ಭಾರತದ ರಾಷ್ಟ್ರಪಿತ ಮಹಾತ್ಮಗಾಂಧೀಗೆ ಇದು ಸ್ಪಷ್ಟವಾಗಿ ಕಾಣುತ್ತಿತ್ತು. 'ಸುತ್ತಲೂ ಜನರು ಹಸಿವಿನಿಂದ ಸಾಯುತ್ತಿದ್ದಾರೆ. ಅವರಿಗೆ ಅನ್ನ ನೀಡುವುದಕ್ಕಿಂತ ಬೇರೇನು ಉದ್ಯೋಗ ನನಗೆ? ಬೇರೆ ಮಾಡಬಹುದೇ! ಬಡತನದಲ್ಲಿ ಮುಳುಗಿ ನಿರುದ್ಯೋಗದಿಂದ ಸವೆದು ಹೋಗುತ್ತಿರುವ ಈ ಜನರಿಗೆ ದೇವರೇ ಪ್ರತ್ಯಕ್ಷವಾದರೂ ಅನ್ನಾವತಾರ ಮಾಡಿ ಬರಬೇಕು, ಅವರಿಗೆ ಹಿಟ್ಟುಕೊಡುವ ರೂಪದಲ್ಲಿ ಬರಬೇಕು. ನನಗೆ ಒಂದೇ ಉದ್ಯೋಗ—ಈಗ ಬಡವರಿಗೆ ಹಿಟ್ಟು ದೊರಕಿಸಿಕೊಡುವುದು. ಅದೇ ಈಗಿನ ಯುಗಧರ್ಮ' ಎಂದು ಬಹಳ ಮನನೊಂದು ಹೇಳಿದರು.

ಇನ್ನೊಂದು ಸಲ ಒರಿಸ್ಸಾಕ್ಕೆ ಹೋದಾಗ ಉತ್ಕಲದ ಈ ಜೀವಚ್ಛವಗಳನ್ನು ನೋಡಿ, 'ಎಂಥ ಭೀಷಣ ದಾರಿದ್ರ್ಯದಲ್ಲಿ ಮುಳುಗಿದ್ದಾರೆ! ಈ ಲಕ್ಷೋಪಲಕ್ಷ ಜನರಿಗೆ ಒಂದು ಹಿಡಿ ಅನ್ನ ದೊರಕುವ ದಾರಿ ಹುಡುಕುವುದಲ್ಲವೆ ನಮ್ಮ ಮೊದಲನೇ ಕೆಲಸ?' ಎಂದರು.

ಹಿಂದೂಸ್ತಾನದ ಈ ಕಡುಬಡತನ, ಅರೆಹೊಟ್ಟೆ ಅರೆಬಟ್ಟೆಯ ಸಂಕಟ ಪಟ್ಟಣಗಳಲ್ಲಿಲ್ಲ. ಹಳ್ಳಿಗಳಿಗೆ ಹೋಗಿ ನೋಡಬೇಕು ಆ ಕರುಣಾಜನಕ ಸ್ಥಿತಿಯನ್ನು. ಜನರು ಎಲುಬಿನ ಗೂಡು ಆಗಿದ್ದಾರೆ. ಅವರ ಕಣ್ಣು ಗುಳಿಬಿದ್ದು ನಿಸ್ತೇಜವಾಗಿದೆ. ಮೈ ಅರೆಬೆತ್ತಲೆ. ಅನೇಕರಿಗೆ ಮಾಡಲು ಕೆಲಸವಿಲ್ಲ. ಹೊಲವಿಲ್ಲ, ಕೈಗಾರಿಕೆಯಿಲ್ಲ. ಬರೀ ಕೂಲಿ. ವರಮಾನವೋ ಸೊನ್ನೆ. ಈ ಜನ ದಿನೇ ದಿನೇ ಪಾತಾಳಕ್ಕೆ ಇಳಿಯುತ್ತಿದ್ದಾರೆ. ಉತ್ಪಾದನೆಯ ಸಾಧನವಿಲ್ಲದ ನಿರ್ಗತಿಕರಾಗಿದ್ದಾರೆ. ಪರಾವಲಂಬಿಗಳಾಗಿ ಲೋಕಕ್ಕೆ ಭಾರವಾಗಿದ್ದಾರೆ, ಹಿಂದುಳಿದಿದ್ದಾರೆ, ಕೆಳಗಿಳಿದಿದ್ದಾರೆ, ದೀನ-ದಲಿತ-ಪತಿತರು ಆಗಿದ್ದಾರೆ.

ಬೀದಿಯಲ್ಲೋ ಬಯಲಿನಲ್ಲೋ, ಮರದ ಕೆಳಗೋ ಹುಟ್ಟಿ ಅಲ್ಲಿಯೇ ಸಾಯುವ ಈ ಸಂಖ್ಯೆ ಜನಸ್ತೋಮಕ್ಕೆ ನಿಲ್ಲಲು ನೆಲ ಬೇಕು. ತಮ್ಮ ಬಡತನವನ್ನು ಗೆಲ್ಲಲು ಬಲ ಬೇಕು. ಆಗಲೇ ದೇಶದಲ್ಲಿ ಆರ್ಥಿಕ ಪ್ರಗತಿ, ಸಮಾಜದಲ್ಲಿ ಸಮತೆ—ಸಂತೋಷ, ಹಳ್ಳಿಗಳಲ್ಲಿ ಗೆಲವು ಚೆಲುವು, ಜನಸಾಮಾನ್ಯರಲ್ಲಿ ಜ್ಞಾನ-ವಿಜ್ಞಾನ, ಲೋಕದಲ್ಲಿ ಶಾಂತಿ ಎಲ್ಲವೂ!

ಉತ್ಪತ್ತಿಯ ಸಾಧನ ಒಬ್ಬಿಬ್ಬರ ಸೊತ್ತಾದರೆ ಈ ದುರ್ಗತಿ ತಪ್ಪಿದುದಲ್ಲ. ಜಗತ್ತಿನಲ್ಲಿ ಹುಟ್ಟಿದ ಪ್ರತಿಯೊಬ್ಬ ಮನುಷ್ಯನ ಕೈಯಲ್ಲಿಯೂ ಈ ಸಾಧನವಿರಬೇಕು. ಯಾರೂ ಯಾರ ಮೇಲೂ ಸವಾರಿ ಮಾಡಬೇಕಾಗಿಲ್ಲ. ಯಾರೂ ಯಾರನ್ನೂ ಹೊತ್ತು ಕತ್ತೆಯಾಗಬೇಕಾಗಿಲ್ಲ.

ಹೀಗಿರಲು ಹಳ್ಳಿಗಳಲ್ಲಿ ಕೈಗಾರಿಕೆ ಹರಡಬೇಕು, ಗಿರಣಿಗಳು ಹೋಗಬೇಕು ಎಂದರು ಗಾಂಧೀಜಿ. ಗ್ರಾಮೋದ್ಯೋಗವೇ ಬಡವರ ಕಾಮಧೇನು ಎಂದರು.

ಕೈಗಾರಿಕೆ ಕಾಮಧೇನುವಾದರೆ ಭೂಮಿ ಕಲ್ಪವೃಕ್ಷ ಬಡವರಿಗೆ. ಇವೆರಡೂ ಇಲ್ಲ ಈಗ ಹಳ್ಳಿಗಳಲ್ಲಿ. ಕೈಗಾರಿಕೆಗಳನ್ನು ಗಿರಣಿಗಳು, ಬಂಡವಾಳಗಾರರು ಕಸಿದುಕೊಂಡರು. ಭೂಮಿಯನ್ನು ಜಮೀನುದಾರರು, ಸಾಹುಕಾರರು ಕಿತ್ತುಕೊಂಡರು. ಕಡೆಗೆ ಜನರಿಗೆ ಉಳಿದುದು ಬಡತನ, ನಿರುದ್ಯೋಗ, ಗುಲಾಮಗಿರಿ.

ಕೈಗಾರಿಕೆಯಂತೂ ಹಳ್ಳಿಗಳಲ್ಲಿ ನಿರ್ನಾಮವಾಗಿದೆ. ಇರುವುದು ಒಂದೇ ಉದ್ಯೋಗ—ಬೇಸಾಯ. ಅದನ್ನು ನಂಬಿದ ಜನರಲ್ಲಿ ಮುಕ್ಕಾಲು ಮೂರುವೀಸಪಾಲು ಹೊಲವಿಲ್ಲದವರು. ಅವರಿವರ ಹೊಲದಲ್ಲಿ ಕೂಲಿ, ಗೇಣಿಮಾಡಿ ಬದುಕುವವರು. ಕೂಲಿ ಸಿಗದಿದ್ದರೆ ಉಪವಾಸವೇ.

ಗಾಂಧೀಜಿ ಭಾರತದ ಜನಕೋಟಿಗಾಗಿ ದುಡಿದು ಸ್ವರಾಜ್ಯ ತಂದರು. ಸ್ವರಾಜ್ಯಕ್ಕಾಗಿ ದೇಶ ಅನೇಕ ತ್ಯಾಗಗಳನ್ನು ಮಾಡಿತು. ಸ್ವರಾಜ್ಯ ಬಂದರೂ ಬಡವರಿಗೆ ಅನ್ನ ಬರಲಿಲ್ಲ. ಅನ್ನಾವತಾರವಾಗಲಿಲ್ಲ.

ಹೈದರಾಬಾದಿನ ತೆಲಂಗಾಣದ ಹಳ್ಳಿಗಳಲ್ಲಿ ಮೊದಲಿನಿಂದಲೂ ಬಡತನ ಭೀಕರ ನೃತ್ಯವಾಡುತ್ತಿದೆ. ಅಲ್ಲಿನ ಜನಸಾಮಾನ್ಯರು ಬಡವರಲ್ಲ, 'ಭಗೇಲಾ'ಗಳು. ಎಂದರೆ ವಂಶಪರಂಪರೆಯಾಗಿ ಜಮೀನುದಾರರ ಗುಲಾಮರು, ಅವರ ದನ ಕುರಿ ಇದ್ದಂತೆ. ಸಾವಿರಾರು ವರ್ಷಗಳಿಂದ ತೆಲಂಗಾಣದ ನೆಲ ಈ ಬಡಕುರಿಗಳ ಜೆವರಿನಿಂದಲೇ ಅಲ್ಲ, ಬಿಸಿ ನೆತ್ತರಿನಿಂದ ತೊಯ್ದಿದೆ. ಭೂಮಿತಾಯಿಯನ್ನು ಇಷ್ಟುಕಾಲದಿಂದ ಅಖಂಡವಾಗಿ ಆರಾಧಿಸಿದರೂ ಅವರಿಗೆ ಆಕೆ ಪ್ರಸನ್ನಳಾಗಿಲ್ಲ.

ಪೀಳಿಗೆ ಪೀಳಿಗೆಗಳೇ ದುಡಿದುಡಿದು ಅಲ್ಲಿ ಮಡಿದಿವೆ. ಎಲ್ಲೆಲ್ಲೂ ಕ್ಲೇಶ, ದುಃಖ.

ಈ ನೆಲವೇ ಹಿಂದೆ ದಂಡಕಾರಣ್ಯವಾಗಿದ್ದುದು. ಸಾವಿರಾರು ವರ್ಷದ ಹಿಂದೆ ಈ ಭೂಮಿಯೇ ಶ್ರೀರಾಮಚಂದ್ರನ ಪವಿತ್ರ ಪಾದಸ್ಪರ್ಶವನ್ನು ಪಡೆದಿತ್ತು. ಗೊಂಡಾರಣ್ಯದಲ್ಲಿ ರಾಕ್ಷಸ ಬಾಧೆಯೆಲ್ಲ ಆ ಪತಿತಪಾವನನ ಪಾದಯಾತ್ರೆಯಿಂದ ತೊಲಗಿತು. ಇಡೀದೇಶ ಸುಖ-ಸಂತೋಷ-ಸ್ವಾತಂತ್ರ್ಯಗಳಿಂದ ಬೆಳಗಿತು. ಈ ನಾಡನ್ನು ಹಸಿರಿನಿಂದ ಹೊದಿಸುವ ಗೋದೆ–ಕೃಷ್ಣೆಯರ ದಡದಲ್ಲಿ ನಿರ್ಭಯವಾಗಿ ನಿಂತು ಅನೇಕ ಜನ ಸಾಧು-ಶರಣರು ಈ ನೆಲವನ್ನು ಪಾವನಗೊಳಿಸಿದ್ದರು. ಆ ಮಹಾ ತಪಸ್ವಿಗಳೆಲ್ಲರ ಪರಂಪರೆಯನ್ನು ತಲೆಯಮೇಲೆ ಹೊತ್ತು ಆ ಶ್ರೀರಾಮಚಂದ್ರನ ಅತ್ಯಂತ ಪ್ರಿಯ ಭಕ್ತ ರಾಷ್ಟ್ರಪಿತ ಗಾಂಧೀಜಿಯ ಪಟ್ಟಶಿಷ್ಯ, ಪೂಜ್ಯ ವಿನೋಬಾ ಈ ಭೂಮಿಯಲ್ಲಿ ಮತ್ತೆ ಕಾಲಿಟ್ಟರು. ಮತ್ತೆ ಅದೇ ಸಮಸ್ಯೆ! ಮನುಷ್ಯ ಮನುಷ್ಯನಿಗೆ ತೋರುವ ಕ್ರೌರ್ಯವನ್ನು, ಮಾಡುವ ಹಿಂಸೆಯನ್ನು, ಗೆಲ್ಲುವ

ಮೂಲೋತ್ಪಾಟನ ಮಾಡುವ ಪವಿತ್ರ ಕಾರ್ಯ. ಮತ್ತೆ ತಲೆಯೆತ್ತಿರುವ ರಾಕ್ಷಸಬಾಧೆಯನ್ನು ನೀಗಿಸಬೇಕು. ಶಾಂತಿ-ಸಂತೋಷಗಳನ್ನು ಹರಿಯಿಸಬೇಕು.

ಈಚೆಗೆ ತೆಲಂಗಾಣ ಕಮ್ಯೂನಿಸ್ಟರ ಪಾಳೆಯವಾಗಿತ್ತು. ತೆಲಂಗಾಣದ ಬಡಬಗ್ಗರಿಗೆ ಅನುಕೂಲಮಾಡುವ ನೆಪದಲ್ಲಿ ಈ ಕಮ್ಯೂನಿಸ್ಟರು ದೇಶದಲ್ಲಿ ರಾಕ್ಷಸತನವನ್ನು ಹರಡಿದ್ದರು. ಜಮೀನುದಾರರನ್ನು ಬೆದರಿಸುವುದು, ಅವರನ್ನು ಸುಲಿಯುವುದು, ಮಲೆತು ನಿಂತವರನ್ನು ಕಡಿದು ಹಾಕುವುದು; ಈ ಕೆಲಸಕ್ಕೆ ದೀನದರಿದ್ರರನ್ನು ಹುರಿದುಂಬಿಸಿ ಅವರದೊಂದು ದಂಡನ್ನೇ ಕಟ್ಟಿದರು. ಹಗಲೆಲ್ಲ ಗುಡ್ಡಗಳಲ್ಲಿ ತಲೆ ಮರೆಯಿಸಿಕೊಂಡಿದ್ದು ರಾತ್ರಿಯಾಗುತ್ತಲೇ ಹಳ್ಳಿಗಳಿಗೆ ನುಗ್ಗಿ ದರೋಡೆ-ಕಗ್ಗೊಲೆ ಮಾಡುವುದು. ಈ ಭೀಕರ ಕೃತ್ಯಕ್ಕೆ ಪರಿಹಾರವೆಂಬಂತೆ, ತಾವು ತಲೆಯೊಡೆದ ಜಮೀನುದಾರನ ಹೊಲವನ್ನು ನೀವು ಹಂಚಿಕೊಳ್ಳಿ—ಎಂದು ಜನರಿಗೆ ಹೇಳಿ ಹುರಿದುಂಬಿಸುವುದು. ಇದು ಇವರ ಕಾರ್ಯಕ್ರಮ. ತಮ್ಮ ಈ ಸುಲಿಗೆ ಕಗ್ಗೊಲೆಗಳ ಕಾರ್ಯದಲ್ಲಿ ನೆರವಾದರೆ ಸರಿ; ಸ್ವಲ್ಪ ಇದಿರಾದರೆ ಅವರು ಬಡವರಿರಲಿ ಭಾಗ್ಯವಂತರಿರಲಿ ಮರಣದಂಡನೆಯೇ. ಆ ಹಳ್ಳಿಗಳಲ್ಲಿ ಕಮ್ಯೂನಿಸ್ಟರಿಗೆ 'ರಾತ್ರಿಯ ರಾಜರು' ಎಂದು ಹೆಸರಾಗಿತ್ತು.

ತೆಲಂಗಾಣದ ನಲ್ಲಗೊಂಡ ಜಿಲ್ಲೆ ಗುಡ್ಡಗಾಡಿನ ಸೀಮೆ. ಹಿಂದೆ ಇದ್ದ ಗೊಂಡಾರಣ್ಯ ಈಗಿಲ್ಲ. ಜನರು ಕಾಡನ್ನೆಲ್ಲ ಕಡಿದು ಗುಡ್ಡಗಳ ಭಾರವಿಳಿಸಿ ಅದರ ಶಾಪವಿಮೋಚನೆ ಮಾಡಿದ್ದಾರೆ. ಇಲ್ಲದಿದ್ದರೆ ದಟ್ಟವಾದ ಗಿಡಗಳ ಗುಂಪಿನ ಮರೆಯಲ್ಲಿ ನಿಂತು ದಾರಿಯಲ್ಲಿ ಬರುವ ಪ್ರಯಾಣಿಕರ ಮೇಲೆ ಬಿದ್ದು ದರೋಡೆ ಮಾಡಲು ರಾತ್ರಿಯ ರಾಜರಿಗೆ ಸುಲಭ.

ನಲ್ಲಗೊಂಡ ಜಿಲ್ಲೆಯಲ್ಲಿ ಒಂದು ಹಳ್ಳಿ, ಪೋಚಂಪಲ್ಲಿ. ಏಳುನೂರು ಮನೆಯ ಹಳ್ಳಿ. ಮೂರು ಸಾವಿರ ಜನವಸತಿ. ಊರು ಚೊಕ್ಕಟ, ಸ್ವಚ್ಛ. ಒಂದೆಡೆ ಸಗಣಿ ನೀರು ಚಿಮುಕಿಸಿದ್ದಾರೆ; ಒಂದೆಡೆ ಮನೆಯ ಮುಂದೆ ಸಗಣಿಯಿಂದ ಸಾರಿಸಿದ್ದಾರೆ. ತೆಲಂಗಾಣದ ವೈಶಿಷ್ಟ್ಯ ಇದು. ಈ ಹಳ್ಳಿಗೆ ವಿನೋಬಾ ಬಂದರು.

ಈ ಹಳ್ಳಿಯಲ್ಲಿ ನಾಲ್ಕು ಕೊಲೆ. ಪಕ್ಕದ ಹಳ್ಳಿ ಏರೂರಿನಲ್ಲಿ ಮೂರು. ಈ ನೆರೆಹೊರೆಯವರಲ್ಲಿ ಆದುದೆಲ್ಲ ಸೇರಿಸಿದರೆ ಒಟ್ಟು ಆ ಎರಡು ವರ್ಷದಲ್ಲಿ ಇಪ್ಪತ್ತು ಕೊಲೆ. ಇದರ ಬಗ್ಗೆ ಎಳ್ಳಷ್ಟಾದರೂ ಸುದ್ದಿ ಸಂಗತಿ ಯಾರಿಗಾದರೂ—ಪೋಲೀಸರಿಗೆ—ಯಾವನಾದರೂ ತಿಳಿಸಿದನೋ ಅವನು ಗುಂಡಿನ ಬಾಯಿಗೆ ತುತ್ತೇ! ಈ ಹಳ್ಳಿ ಕಮ್ಯೂನಿಸ್ಟರ ಒಂದು ಕೇಂದ್ರ. ಕೇಂದ್ರದಲ್ಲಿ ಇರುವ ಕಮ್ಯೂನಿಸ್ಟರು ಒಟ್ಟು ೧೦–೧೨ ಜನ. ಅವರಿಂದ ಈ ನಾಡಿನ ಹತ್ತಾರು ಹಳ್ಳಿಯ, ಸಾವಿರಾರು ಜನ ತಲ್ಲಣಿಸಿ ಹೋಗಿದ್ದಾರೆ. ಅವರನ್ನು ಹುಡುಕಲು ಪೋಲೀಸರ ದಳ ಒಂದು ಅಲ್ಲಿ ಡೇರೆ ಹಾಕಿತ್ತು.

ಬೆಳಗ್ಗೆ ಒಂಬತ್ತೂಕಾಲು ಗಂಟೆಯಿರಬೇಕು. ವಿನೋಬಾ ಗ್ರಾಮ ಪ್ರದಕ್ಷಿಣೆಗಾಗಿ ಹೊರಟರು. ಯಾವ ಹಳ್ಳಿಗೆ ಬಂದರೂ ಇದು ಅವರ ಮೊದಲನೆಯ ಕಾರ್ಯಕ್ರಮ. ಮೊದಲು ಹರಿಜನವಸತಿಗೇ ಹೋದರು. ಆ ಹರಿಜನರೆಲ್ಲ ಬೇಸಾಯಗಾರರು. ಊರಿನ ರೈತರ ಬಳಿ ಕೂಲಿಯ ಬೇಸಾಯ ಮಾಡುತ್ತಾರೆ. ಇದು ಒಂದು ಬಗೆಯ ಗೇಣಿ. ಇಡೀ ವರ್ಷ ಹೊಲ ಮಾಡಿ ಕಾಳು ಬೆಳೆದು, ಬೆಳೆದುದರಲ್ಲಿ ಇಪ್ಪತ್ತರೊಳಗೆ ಒಂದು ಪಾಲು ಇವರಿಗೆ. ವರ್ಷಕ್ಕೆ ಒಂದು ಕಂಬಳಿ, ಒಂದು ಜೊತೆ ಮೆಟ್ಟು, ಇಷ್ಟೇ.

ಹಳ್ಳಿಯಲ್ಲಿ ಒಟ್ಟು ೨,೫೦೦ ಎಕರೆ ಹೊಲ ಇದೆ. ೩,೦೦೦ ಜನ. ತಲೆಗೆ ೩/೪ ಎಕರೆಗಿಂತ ಸ್ವಲ್ಪ ಹೆಚ್ಚು. ಮೂರು ಸಾವಿರದಲ್ಲಿ ಎರಡು ಸಾವಿರ ಜನಕ್ಕೆ ಒಂದು ಹೆಜ್ಜೆಯಷ್ಟಾದರೂ ಹೊಲವಿಲ್ಲ. ಊರಿನಲ್ಲಿ ಹರಿಜನರ ಸಂಖ್ಯೆ ೨೧೯.

ಹರಿಜನರು ತಮ್ಮ ಸುಖ ದುಃಖಗಳನ್ನು ಹೇಳಿಕೊಂಡರು. ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಬೇಕು. ತಮಗೆ ಮನೆ ಕಟ್ಟಿಕೊಳ್ಳಲು ಸ್ಥಳಬೇಕು. ಇವೆಲ್ಲವೂ ಚಿಲ್ಲರೆ. ಮುಖ್ಯವಾದುದು ಹೊಲದ ಮಾತು. 'ನಮಗೆ ಮಾಡಲು ಹೊಲ ಬೇಕು.' ಅವರಿವರಿಗಾಗಿ ದುಡಿದು ಅವರ ಪೀಳಿಗೆ ಪೀಳಿಗೆಗಳೇ ನಿರ್ನಾಮವಾಗಿವೆ. ತಮ್ಮದು ಎನ್ನುವ ಹೊಲ ಬೇಕು. ಇದೇ ಅವರ ಆವಶ್ಯಕತೆ.

ಸಹಜವಾಗಿಯೇ ವಿನೋಬಾ ಕೇಳಿದರು. 'ಎಷ್ಟು ಹೊಲ ಬೇಕು?' ಸ್ವಲ್ಪ ಹೊತ್ತು ಅವರವರೊಳಗೆ ವಿಚಾರ ವಿನಿಮಯವಾಯಿತು. ಕಡೆಗೆ

ಅವರ ಹಿರಿಯ ಎದ್ದು ನಿಂತು ಹೇಳಿದ: 'ಅಂ ಎಕರೆ ಸಾಕು. ೪೦ ಎಕರೆ ತರಿ, ೪೦ ಎಕರೆ ಖುಷ್ಕಿ.'

'ಇಷ್ಟು ಸಾಕೆ? ಇಷ್ಟರಿಂದ ನಿಮ್ಮ ನಿರ್ವಾಹವಾದೀತೇ?'

'ಇಲ್ಲ, ಸ್ವಾಮಿ. ಇದರ ಜೊತೆಗೆ ಇನ್ನೂ ಏನಾದರೂ ಕಸಬು, ಕೈಗಾರಿಕೆ ಮಾಡುತ್ತೇವೆ.'

'ಹಾಗಾದರೆ ಹಾಗೆ ಒಂದು ಬಿನ್ನಹ ಬರೆದುಕೊಡಿ. ಸರ್ಕಾರದಲ್ಲಿ ನಿಮಗಾಗಿ ನಾನು ಪ್ರಯತ್ನಿಸುತ್ತೇನೆ.'

ಹಳ್ಳಿಯವರೂ ಅಲ್ಲಿಯೇ ಕುಳಿತಿದ್ದರು. ಅವರನ್ನು ಒಂದು ಮಾತು ಕೇಳಿಬಿಡಬೇಕು ಎನ್ನಿಸಿತು ವಿನೋಬಾಗೆ. 'ಸರ್ಕಾರದಿಂದ ಇವರಿಗೆ ಹೊಲ ಸಿಗದಿದ್ದರೆ ಅಥವಾ ಸಿಗುವುದು ತಡವಾದರೆ, ಹಳ್ಳಿಯವರೇ ಏನಾದರೂ ಮಾಡಲು ಸಾಧ್ಯವೇ?' ಎಂದು ಕೇಳಿದರು.

ಹಳ್ಳಿಯವರಲ್ಲಿ ಒಬ್ಬ ತಮ್ಮ ಎದ್ದು ನಿಂತ. ರಾಮಚಂದ್ರರೆಡ್ಡಿ ನಮ್ರಭಾವದಿಂದ ಮಾತಾಡಿದ: 'ಸ್ವರ್ಗವಾಸಿಗಳಾದ ನಮ್ಮ ತಂದೆಯವರಿಗೆ ಈ ನಿರ್ಭಾಗ್ಯ ತಮ್ಮಂದಿರಿಗೆ ಏನಾದರೂ ಇಷ್ಟು ಹೊಲ ಕೊಡಬೇಕು ಎಂಬ ಬಯಕೆಯಿತ್ತು. ಆದುದರಿಂದ ನಾನು; ನನ್ನ ಪರ ನನ್ನ ಐವರು ತಮ್ಮಂದಿರ ಪರ, ಇವರಿಗೆ ನೂರು ಎಕರೆ ಹೊಲವನ್ನು ೫೦ ಎಕರೆ ತರಿ, ೫೦ ಎಕರೆ ಖುಷ್ಕಿ-ಕಾಣಿಕೆ ಸಲ್ಲಿಸುತ್ತೇನೆ.'

ಸಂಜೆಗೆ ವಿನೋಬಾಜೀ ಯಾವ ಊರಿನಲ್ಲಿಯೇ ಇರಲಿ, ಪ್ರಾರ್ಥನಾ ಸಭೆ ನಡೆಯುತ್ತದೆ. ಇದು ಗಾಂಧೀಜಿಯ ಪದ್ಧತಿ. ವಿನೋಬಾ ಅದನ್ನು ನಡೆಸಿಕೊಂಡು ಬರುತ್ತಿದ್ದಾರೆ. ಈ ಊರಿನಲ್ಲಿಯೂ ಸಂಜೆಗೆ ಪ್ರಾರ್ಥನಾ ಸಭೆ ಆಯಿತು. ಆ ಸಭೆಯಲ್ಲಿ ಬೆಳಗ್ಗೆ ನಡೆದ ಸಂಗತಿಯನ್ನು ಬಹಿರಂಗವಾಗಿ ಹೇಳಿ ವಿನೋಬಾ ರಾಮಚಂದ್ರ ರೆಡ್ಡಿಯನ್ನು ಕರೆದು ಸಭೆಯ ಮುಂದೆ ನಿಲ್ಲಿಸಿದರು. 'ಎಲ್ಲಾ ಹಳ್ಳಿಯಲ್ಲೂ ಇಂಥ ಸಜ್ಜನರು ದೊರೆತರೆ ಇಲ್ಲಿನ ರಾಕ್ಷಸೀ ಬಾಧೆ ಮಾಯವಾದೀತು' ಎಂದರು.

ತೆಲಂಗಾಣದ ಸಂಕಟಮಯ ಜೀವನದಲ್ಲಿಯೇ ಆ ನೋವಿಗೆ ಒಂದು ಮದ್ದು ದೊರೆಯಿತು.

ಸಮಾಜದ ಹಿತಕ್ಕಾಗಿಯೇ ಇದ್ದವರನ್ನು ಕೊಂದು ಪೀಡಿಸಿ, ಅವರ ಸೊತ್ತನ್ನು ಅಪಹರಿಸಿ ಇಲ್ಲದವರಿಗೆ ಕೊಡುತ್ತೇವೆ, ಇದು ಪರಾರ್ಥ, ಪರೋಪಕಾರ, ನೀತಿಯುಕ್ತ ಎಂದು ಹೇಳುತ್ತ, ಇದ್ದವರನ್ನೂ ಇಲ್ಲದವರನ್ನೂ ಹಿಂಸಿಸಿ ಅಂಜಿಸಿ ಆಸುರೀ ದರಬಾರು ಮಾಡುತ್ತಿದ್ದರು ತೆಲಂಗಾಣದ ಯುವಕರು ಕೆಲವರು. ಅವರಲ್ಲಿ ವಿದ್ಯಾವಂತರೂ ಬುದ್ಧಿವಂತರೂ ಇದ್ದರು. ಈ ಅಪಹರಣದ ಕೆಲಸವೇ ತಮ್ಮ ಧ್ಯೇಯವೆಂದು ನಂಬಿ ಕೆಲವರು ಮನೆ ಮಾರನ್ನೂ ಹೆಂಡಿರು ಮಕ್ಕಳನ್ನೂ ತ್ಯಜಿಸಿ ಬಹಳ ಶ್ರದ್ಧೆಯಿಂದ ಈ ಕೆಲಸವನ್ನು ಮಾಡುತ್ತಿದ್ದರು. ಹಿಂದೆ ಭರತಖಂಡದಲ್ಲಿ ವಾಮಾಚಾರಿಗಳು ಎಂಬ ಒಂದು ಗುಂಪು ಇತ್ತಂತೆ. ಅವರಿಗೆ ಚಂಡಿ, ಕಾಳಿ ದೇವತೆ. ಅವರ ದೇವತೆಗೆ ನರಬಲಿ ಪ್ರೀತಿ. ಅವಳ ಕತ್ತಿನಲ್ಲಿ ರುಂಡಗಳ ಮಾಲೆಯೇ ಆಭರಣ. ಈ ವಾಮಾಚಾರಿಗಳು ತಮ್ಮ ದೇವತೆಗೆ ನರಬಲಿ ಕೊಟ್ಟು ಆಕೆಯ ಅನುಗ್ರಹಕ್ಕೆ ಪಾತ್ರರಾಗಿ ಸ್ವರ್ಗಕ್ಕೆ ಹೋಗಬೇಕು. ಎಷ್ಟೆಷ್ಟು ಹೆಚ್ಚು ಜನರ ತಲೆ ಕಡಿದು ಆಕೆಗೆ ಒಪ್ಪಿಸಿದರೆ ಅಷ್ಟಷ್ಟು ಬೇಗ ಸ್ವರ್ಗ ಸಿದ್ಧಿ. ಇದಕ್ಕೆ ತಂತ್ರಶಾಸ್ತ್ರ ಎಂದು ಹೆಸರಿಟ್ಟರು. ಈ ನರಬಲಿ ತಮ್ಮ ಧರ್ಮ ಎಂದರು. ಈ ಕೆಲಸವನ್ನು ಸಾಧಿಸಲು ತಮ್ಮ ಮನಸ್ಸು ಕಲ್ಲಾಗಬೇಕಲ್ಲ. ಅದಕ್ಕಾಗಿ ಸಾಧನೆಮಾಡಿದರು, ತಪಸ್ಸುಮಾಡಿದರು. ಅದೆಲ್ಲವನ್ನೂ ಈ ಭಯಂಕರ ಕಾರ್ಯಕ್ಕೆ ಉಪಯೋಗಿಸಿದರು. ಆದಿಗುರು ಶಂಕರಾಚಾರ್ಯರು ಹುಟ್ಟಿ ಈ ತಂತ್ರವಾದಿಗಳನ್ನು ಸೋಲಿಸಿ ಅವರ ದಾರಿ ಅಧರ್ಮದ ದಾರಿ ಎಂದು ಲೋಕಕ್ಕೆಲ್ಲಾ ತಿಳಿಸಿದರು. ಲೋಕದಲ್ಲಿ ಅವರಿಗೆ ಸ್ಥಾನವಿಲ್ಲದಂತೆ ಮಾಡಿದರು. ಬಲಿಕೊಡುವುದಿದ್ದರೆ ಅವರಿವರ ತಲೆಯನ್ನಲ್ಲ, ನಿಮ್ಮ ತಲೆಯನ್ನೇ ಕೊಡಿ ಎಂದರು. ಆಗ ತಂತ್ರ ಮಾರ್ಗದ, ವಾಮಾಚಾರದ ಪ್ರಭಾವ ದೇಶದಲ್ಲಿ ಕಡಿಮೆಯಾಯಿತು.

ಈ ಕಾಲದಲ್ಲಿ ಈ ಅಪಹರಣವಾದದ ವಾಮಾಚಾರ ಹುಟ್ಟಿದೆ. ಧರ್ಮದ ಪೀಠದಿಂದ ಕೆಳಗಿಳಿದು ಆರ್ಥಿಕ ಸಿಂಹಾಸನವನ್ನೇರಿ ಈ ತಂತ್ರ ಮಾರ್ಗ ಮತ್ತೆ ನರಬಲಿ ಬೇಡುತ್ತಿದೆ. ಆಗ ಬರೀ ರುಂಡ. ಈಗ ನೆಲ, ಹೊಲ, ಹಣ, ಪ್ರಾಣ ಸಮಸ್ತವೂ ಆಹುತಿ! ಹೊರಗಿನ ದೇಶಗಳಲ್ಲಿ ಈ ತಂತ್ರ ಬಹಳ ಹರಡಿದೆ. ಕೆಲವು ಕಡೆ ರಾಜ್ಯಮಾಡುತ್ತಿದೆ. ನಮ್ಮ

ದೇಶದಲ್ಲಿ ತೆಲಂಗಾಣದಲ್ಲಿ ಈ ತಂತ್ರದ ಉಪಾಸಕರು ಹುಟ್ಟಿ ಆ ಸೀಮೆಯಲ್ಲಿ ತಮ್ಮ ಅಣ್ಣ ತಮ್ಮಂದಿರನ್ನು ತಮ್ಮ ಈ ಹುಚ್ಚಿಗೆ ಆಹುತಿ ಕೊಟ್ಟರು.

ಇತ್ತ ಇವರ ಪೀಡೆ, ಅತ್ತ ಸರಕಾರದ ಪರ ತಾವು ನಿಂತು ಜನರನ್ನು ಗೋಳಾಡಿಸುತ್ತಿದ್ದ ರಜಾಕಾರರ ಹಿಂಸೆ. ತೆಲಂಗಾಣದ ಜನ ಹೀಗೆ ಕತ್ತರಿಯ ಹಲ್ಲಿಗೆ ಸಿಕ್ಕಿ ಸಂಕಟದಲ್ಲಿ ತೊಳಲುತ್ತಿದ್ದರು.

ಅದರಲ್ಲಿಯೇ, ಆ ನೋವಿನಲ್ಲಿಯೇ, ಅದಕ್ಕೊಂದು ಪರಿಹಾರ ಹುಟ್ಟಿ ಬಂತು. ಈ ಅಪಹರಣದ ಕಾಡ್ಗಿಚ್ಚನ್ನು ನಂದಿಸಲು ಅಪರಿಗ್ರಹವೇ ಸರಿಯಾದ ಬ್ರಹ್ಮಾಸ್ತ್ರ ಎಂಬುದು ವಿನೋಬಾಜಿಗೆ ಆ ದಿನ ಹೊಳೆಯಿತು. ಕೊಲೆ–ಸುಲಿಗೆಗಳ ಅಶಾಂತಿ–ಅರಾಜಕತೆಗಳನ್ನು ಪ್ರೇಮ–ದಾನಗಳಿಂದ ಗೆಲ್ಲಬೇಕು ಎಂಬ ಸತ್ಯಪಥ ಅವರ ಕಣ್ಣಿಗೆ ಕಂಡಿತು. ಸುತ್ತಲೂ ಮುತ್ತಿದ್ದ ನಿರಾಶೆಯ ಕತ್ತಲೆಯಲ್ಲಿ ರಾಮಚಂದ್ರಾರೆಡ್ಡಿಯ ಪ್ರೇಮಪೂರ್ಣದಾನ ಕೋಲುಮಿಂಚಿನಂತೆ ಮೆರೆದು ವಿನೋಬಾಜಿಗೆ ದಾರಿ ತೆರೆದಂತಾಯಿತು.

ಚಿಕ್ಕ ಸಂಗತಿ. ಒಂದು ನೂರು ಎಕರೆಯ ದಾನ. ಆದರೆ ಆ ಚಿಕ್ಕ ಬೀಜವೇ ಮುಂದೆ ದೊಡ್ಡ ಆಲದ ಮರವಾಯಿತು. ಗೋಮುಖದಲ್ಲಿ ಗಂಗೆ ಅವತರಿಸುವಂತೆ, ತಲಕಾವೇರಿಯಲ್ಲಿ ಕಾವೇರಿ ಮೂಡುವಂತೆ, ಭೂದಾನ ಗಂಗೆ ಪೋಚಂಪಲ್ಲಿಯಲ್ಲಿ ಅವತರಿಸಿದಳು.

ಈ ಚಿಕ್ಕ ಸಂಗತಿಯೇ ಮುಂದೆ ಭಾರತದ ಮಹತ್ತರ ಅಹಿಂಸಾ ಕ್ರಾಂತಿಯ ಪೀಠಿಕೆಯಾದೀತೆಂದು ಯಾರು ತಿಳಿದಿದ್ದರು ಆ ದಿನ? ವಿನೋಬಾಗೂ ತಿಳಿಧಿರಲಿಲ್ಲ ಆಗ. 'ಎಲ್ಲಾ ಹಳ್ಳಿಯಲ್ಲೂ ಇಂಥ ಸಜ್ಜನರು ದೊರೆತರೆ ಇಲ್ಲಿ ರಾಕ್ಷಸೀ ಬಾಧೆ ಮಾಯವಾದೀತು' ಎಂದು ಅವರು ಆ ದಿನ ಆಡಿದ ಮಾತು ಭವಿಷ್ಯವಾಣಿಯಾಗಿ ಹೋಯಿತು.

ಆ ದಿನ ೧೮–೪–೧೯೫೧. ಭೂದಾನಯಜ್ಞದ ನಾಂದಿಯಾದ ದಿನ. ಭೂದಾನ ಗಂಗೆ ಹುಟ್ಟಿದ ದಿನ. ಕ್ರಾಂತಿ ಕ್ರಾಂತಿ ಎಂದು ಕಿರಿಚುತ್ತಿದ್ದ ಲೋಕ ಕ್ರಾಂತಿಯ ಮಾರ್ಗದಲ್ಲಿಯೇ ಕ್ರಾಂತಿಯನ್ನು ಕಂಡ ದಿನ ಅದು! ಅನ್ನಾವತಾರದ ಅಭಯವಾಣಿ ಕೇಳಿಸಿದ ದಿನ!

## ಭೂದಾನಯಜ್ಞ

ಮನೆಗೆ ಬರುವ ದೇವನು, ಹೊಲವನೀವ ದೇವನು
ನಮ್ಮ ಭಾಗ್ಯ ದೇವನು, ದೀನಬಂಧು ದೇವನು
ಬರುವ ನಮ್ಮ ದೇವನು, ಬರುವ ನಮ್ಮ ರಾಮನು
ಗಾಂಧಿ ಬಂಟನೀತನು, ಹರಿಯ ಶರಣನೀತನು

ಭೂದಾನದ ಮಾತು ನಾಲ್ಕು ದಿಕ್ಕಿಗೂ ಹಬ್ಬಿತು. ಹೆಂಗಸರು ಗಂಡಸರು ಮಕ್ಕಳು ಎಲ್ಲರಿಗೂ ವಿನೋಬಾಜಿಯನ್ನು ನೋಡುವ ಆಸೆ. ಹಳ್ಳಿಯಿಂದ ಹಳ್ಳಿಗೆ ವಿನೋಬಾ ತಮ್ಮ ಯಾತ್ರೆ ಮಾಡುತ್ತಿರುವಾಗ ದಾರಿಯುದ್ದಕ್ಕೂ ಜನರು ಅವರ ದರ್ಶನಾರ್ಥಿಗಳಾಗಿ ನಿಂತಿದ್ದರು. ದಾರಿಯಲ್ಲಿ ಬಂದ ಹಳ್ಳಿಗಳಲ್ಲಿ ಮಾತ್ರವಲ್ಲ. ಹೊಲಗಳಲ್ಲಿ, ಕಾಡಿನಲ್ಲಿ, ನಡುನಡುವೆ ದೊರೆತ ತಾಳೆಯ ವನಗಳಲ್ಲಿ, ಅಲ್ಲಲ್ಲಿ ಉದ್ದಕ್ಕೂ ಐವತ್ತು–ನೂರು–ಇನ್ನೂರು ಜನ ರೈತರು ಕಣ್ಣಿನಲ್ಲಿ ಪ್ರಾಣವಿಟ್ಟುಕೊಂಡು ಇದಿರು ನೋಡುತ್ತಿದ್ದರು. ಹೆಗಲ ಮೇಲೆ ಕಂಬಳಿ, ಮೊಳಕಾಲಿನವರೆಗೆ ಪಂಚೆ, ಕೈಯಲ್ಲಿ ಕೋಲು. ವಿನೋಬಾಜಿಯನ್ನು ಕಣ್ಣುತುಂಬಾ ನೋಡಬೇಕು. ಯಾರೋ ಗಾಂಧಿಯ ಬಂಟ, ಹರಿಯ ಶರಣ ಬರುತ್ತಿದ್ದಾನೆ. ದುಃಖಿಗಳ ದುಃಖ ಶಮನ ಮಾಡುವ ಶ್ರೀರಾಮ ಬರುತ್ತಿದ್ದಾನೆ. ಹೊಲವಿಲ್ಲದವರಿಗೆ ಹೊಲ ನೀಡುವ ಮಹಾನುಭಾವ ಬರುತ್ತಿದ್ದಾನೆ. ಧೈರ್ಯವಿಲ್ಲದವರಿಗೆ ಧೈರ್ಯ ಕೊಡುವ ನಿರ್ಭಯ ಪುರುಷ. ಈ ಕೊಡುಗೈಯ ಶರಣನ, ದಾನ ಕೊಡುವ ಬೈರಾಗಿಯ ದರ್ಶನ ಏಳೇಳು ಜನ್ಮದ ಪುಣ್ಯ. ಜನರ ಆನಂದಕ್ಕೆ ಮೇರೆಯಿಲ್ಲ. ಹಿಂದೆ ದಂಡಕಾರಣ್ಯದ ಋಷಿಗಳಿಗೆ ಅಭಯ ನೀಡಿ ರಾಕ್ಷಸ ಸಂಹಾರ ಮಾಡಿದಾಗ ಶ್ರೀರಾಮನನ್ನು ಕಂಡು ಆ ವನ, ಆ ಜನ ಹೇಗೆ ಆನಂದಿಸಿತೋ ಅದೇ ಆನಂದ! ಅದೇ ಭಕ್ತಿಭಾವ. ಎಲ್ಲರ ಬಾಯಲ್ಲೂ ಈ ಹಾಡೇ.

ವಿನೋಬಾ ಎಲ್ಲೆಲ್ಲಿ ದಾರಿ ನಡೆದರೋ ಅಲ್ಲಲ್ಲಿ ಬಡವರ ಬಂಧು ಯಾರೋ ಹೋಗುತ್ತಿದ್ದಾರೆ ಎಂದು ಒಂದೊಂದು ಅಂಗೈಯಗಲದ ನೆಲವೂ ಎದ್ದು ಅವರನ್ನು ಸ್ವಾಗತಿಸುವಂತಿತ್ತು. ಮನುಷ್ಯರು ಮಾತ್ರವಲ್ಲ, ಚರಾಚರಕ್ಕೂ ಯಾರೋ ಮಹಾತ್ಮರು ಬರುತ್ತಿದ್ದಾರೆ ಎಂದು ತಿಳಿದಂತಿತ್ತು.

ಜನರು ಹೀಗೆ ತಮ್ಮ ಪಾಲಿನ ಭಗವಂತನನ್ನು ಗುರುತಿಸಿದರೆ ವಿನೋಬಾ ಜನತೆಯಲ್ಲಿ ತಮ್ಮ ದೇವರನ್ನು ದರ್ಶನಮಾಡಿಕೊಳ್ಳುತ್ತಾರೆ. ಹಳ್ಳಿಗೆ ಬಂದೊಡನೆ ಮನೆಮನೆಗೂ ಹೋಗಿ ಬರುತ್ತಾರೆ. ಅಡಿಗೆಮನೆಯನ್ನು ನೋಡುತ್ತಾರೆ. ಮಕ್ಕಳು–ಮರಿ, ದನ–ಕರು, ಇಡೀ ಬದುಕನ್ನೇ ನೋಡುತ್ತಾರೆ. ಪ್ರಯೋಗಶಾಲೆಯಲ್ಲಿ ಯಾವುದೋ ಒಂದು ಪರಿಣಾಮವನ್ನು ಅರಸಿ, ವಿಜ್ಞಾನಿ ಪ್ರಯೋಗಮಗ್ನನಾಗಿರುವಂತೆ ವಿನೋಬಾ ಏಕಾಗ್ರತೆಯಿಂದ ಈ ಲೋಕಾಂತದಲ್ಲೂ ಏಕಾಂತವನ್ನು ಅನುಭವಿಸುತ್ತಾರೆ. ಅವರ ಪಾಲಿಗೆ ಜನರು ನಾರಾಯಣ ಸ್ವರೂಪ. ನರನರನಲ್ಲೂ ನಾರಾಯಣನೇ. ಈ ದೀನದಲಿತರ ಗುಂಪು ವಿರಾಟ್–ಮಾನವ. ಇದೇ ವಿಶ್ವಮಾನವರೂಪ ದರ್ಶನ!

ತೆಲಂಗಾಣದಲ್ಲಿ ಹುಟ್ಟಿದ ಈ ಚಳುವಳಿ ಇಡೀ ಭಾರತವನ್ನೇ ವ್ಯಾಪಿಸಿತು. ವಿನೋಬಾ ಹೋದಲ್ಲೆಲ್ಲ ಭೂಮಿ ಅವರ ಕಡೆಗೆ ಹರಿದು ಬರುತ್ತಿದೆ. ದೊಡ್ಡ ದೊಡ್ಡ ಜಮೀನುದಾರರು ಸಾವಿರ ಸಾವಿರ ಎಕರೆ ಹೊಲ ನೀಡಿದರು. ಚಿಕ್ಕ ರೈತರು ಗುಂಟೆ ಎರಡು ಗುಂಟೆಗಳನ್ನೂ ಕೊಟ್ಟರು. ಅವರ ತ್ಯಾಗಕ್ಕೆ ಔದಾರ್ಯಕ್ಕೆ ಮೇರೆಯೇ ಇಲ್ಲ. ಹಿಂದೆ ಶ್ರೀರಾಮನಿಗಾಗಿ ಕಾದಿದ್ದು ಶಬರಿ ತನ್ನಲ್ಲಿದ್ದ ಬೋರೆಯ ಹಣ್ಣನ್ನು ರಾಮನಿಗೆ ಅರ್ಪಿಸಿ ಪುನೀತಳಾದಳು. ಕೃಷ್ಣನ ಬಳಿಗೆ ಹಿಡಿ ಅವಲಕ್ಕಿಯನ್ನು ಒಯ್ದು ಕೊಟ್ಟು ಕುಚೇಲ ಧನ್ಯನಾಗಿ ಹೋದ. ಅಂಥವೇ ನಿಮಿರೆಬ್ಬಿಸುವ ಪ್ರಸಂಗ ಈಗಲೂ ನಡೆದವು.

'ಭೂದಾನದಲ್ಲಿ ಬರೀ ದಾನದ ಮಹತ್ವ ಮಾತ್ರವಲ್ಲ. ದಾನದ ಅರ್ಥವೇ ಸಮವಿಭಾಗ. ಶಂಕರಾಚಾರ್ಯರೇ ಹೀಗೆ ಅರ್ಥ ಹೇಳಿದ್ದಾರೆ. ನಮಗೆ ಭೂಮಿಯೇ ಆಧಾರ. ಪ್ರತಿಯೊಬ್ಬರಿಗೂ ಈ ಆಧಾರ ಸಿಗಬೇಕು. ಹೊಲದಿಂದ ಹಣವಂತರಾಗುವ ಬಯಕೆ ಇರಬಾರದು. ಗಾಳಿ, ಬೆಳಕು, ನೀರು ದೇವರು ಕೊಟ್ಟ ದಾನ. ಅದರಲ್ಲಿ ಭೇದಭಾವವಿಲ್ಲ. ಪ್ರತಿಯೊಬ್ಬರಿಗೂ ಗಾಳಿ ಬೆಳಕು ನೀರು ಬೇಕು. ಹಾಗೆಯೇ ಅನ್ನವೂ ಬೇಕು. ಗಾಳಿ ನೀರು ಇದ್ದ ಹಾಗೆಯೇ ನೆಲವೂ ದೇವರು ಕೊಟ್ಟ ದಾನ. ನಾನು ಸಾರಿ ಹೇಳುತ್ತೇನೆ. ದೇವರು ಕೊಟ್ಟ ನೆಲವನ್ನು ಮನುಷ್ಯ ತನ್ನದು ಎಂದುಕೊಂಡ.

ಕೆಲವರು ಮಾತ್ರ ಅದನ್ನು ಪಡೆದು ಅನೇಕರಿಗೆ ಹೊಲವಿಲ್ಲದಿದ್ದರೆ ಲೋಕದಲ್ಲಿ ಸುಖವಿರದು. ಆ ಏರ್ಪಾಡು ಲೋಕಕಂಟಕ. ಹೊಲ ಎಲ್ಲರಿಗೂ ಸೇರಬೇಕು.' ಹೀಗೆ ವಿನೋಬಾ ಅತ್ಯಂತ ಉತ್ಕಂಠತೆಯಿಂದ ತಿಳಿಸುತ್ತಾರೆ. ಅವರ ಪ್ರಸನ್ನವಾಣಿ ಗಾಳಿಯಲ್ಲಿ ದನಿದನಿಸುತ್ತ ಹರಡುತ್ತದೆ. ಜನರ ಮನಸ್ಸನ್ನು ಸಂಪಾದನೆಯಿಂದ ದಾನದ ಕಡೆ ತಿರುಗಿಸುತ್ತದೆ. ಆ ವಿಚಾರದ ಪ್ರಭಾವ ಅತಿಶಯ, ಅಪಾರ.

ಬಡವರಿಗೆ ದಾನಕೊಡಿ ಎಂದು ಅವರು ಭಿಕ್ಷೆ ಬೇಡರು. ಹೊಲದ ಹಕ್ಕು ಎಲ್ಲರಿಗೂ ಇದೆ. ದುಡಿಯಬಲ್ಲವರಿಗೆಲ್ಲಾ ಇದೆ. ಆ ಹಕ್ಕನ್ನು ಕಳೆದುಕೊಂಡಿರುವವರಿಗೆ ಅದನ್ನು ಕೊಡಿಸಲು ತಿರುಗುತ್ತಿದ್ದಾರೆ. 'ನಾನು ಭಿಕ್ಷೆ ಬೇಡಲು ಬಂದಿಲ್ಲ. ನಿಮಗೆ ಬಡವರ ಸೇವೆಯ ದೀಕ್ಷೆಕೊಡಲು ಬಂದಿದ್ದೇನೆ' ಎನ್ನುತ್ತಾರೆ. 'ಯಾವ ಮಠ ಗುಡಿಗೂ ಹೊಲ ಬೇಡುತ್ತಿಲ್ಲ. ದರಿದ್ರನಾರಾಯಣನಿಗಾಗಿ ಹೊಲ ಕೇಳುತ್ತಿದ್ದೇನೆ. ನಾನು ಒಂದು ವಿಚಾರ ಹರಡುತ್ತಿದ್ದೇನೆ. ಹೊಸ ಕ್ರಾಂತಿಗೆ ದಾರಿ ಮಾಡುತ್ತಿದ್ದೇನೆ. ಹೊಸದೊಂದು ಗಾಳಿಯನ್ನು ಹರಡಬೇಕು. ಜನರ ಸದ್‌ಭಾವನೆಯನ್ನು ಎಚ್ಚರಗೊಳಿಸಬೇಕು. ಒಳಗಿನ ಪ್ರೇಮಭಾವ–ಭಗವಂತ ಎಚ್ಚರವಾಗಲಿ. ಪರಸ್ಪರ ಚಿಂತೆಯೇ ಆ ಪ್ರೇಮಭಾವ, ಅದೇ ಭಗವಂತನ ಗುರುತು.'

'ದಾನಿಯೇ ದೇವತೆ, ಲೋಭಿಯೇ ರಾಕ್ಷಸ' ಎನ್ನುತ್ತಿದ್ದರು ನಮ್ಮ ತಾಯಿ. ಇದನ್ನೇ ಎಲ್ಲಾ ಶರಣರೂ ಹೇಳಿದ್ದಾರೆ. ಮೋಡ ಮಳೆ ಗರೆಯುತ್ತದೆ. ಮೋಡ ಸಮುದ್ರಕ್ಕೆ ನೀರು ಕೊಡುತ್ತದೆ. ಸಮುದ್ರ ಮೋಡಕ್ಕೆ ನೀರು ಕೊಡುತ್ತದೆ. ಹೀಗೆ ಒಂದಕ್ಕೊಂದು ಕೊಡುತ್ತಿದ್ದರೆ ಸೃಷ್ಟಿ ಚೆನ್ನಾಗಿ ನಡೆಯುತ್ತದೆ. ಒಬ್ಬನಿಗೆ ಸಾವಿರ ಎಕರೆ ಹೊಲವಿದೆ. ಇಷ್ಟು ಹೊಲವನ್ನು ಅವನು ಏನು ಮಾಡಬಲ್ಲ? ಎಷ್ಟೇ ದೊಡ್ಡ ಹೊಟ್ಟೆಯಾದರೂ ೨ ಸಾವಿರ ಎಕರೆ ಹೊಲದ ಬೆಳೆ ಹಿಡಿಸೀತೆ? ಅರಗೀತೆ? ತಿನ್ನಬಲ್ಲಷ್ಟು ತಿನ್ನಿ. ತೆಗೆದಿಡುವ ಬಯಕೆ ಬೇಡ. ನೀವು ತೆಗೆದಿಟ್ಟದ್ದು ನನ್ನದು. ಅದರ ಮೇಲೆ ನನ್ನ ಹಕ್ಕು. ಅಲ್ಲ ಎಂದರೆ, ಕಮ್ಯೂನಿಸ್ಟರದು, ಕಳ್ಳಕಾಕರದು. ಹಣಕ್ಕೆ ಮೂರೇ ಗತಿ. 'ದಾನಂ ಭೋಗೋ ನಾಶಃ' ನೆನಪಿರಲಿ. ನಾಲ್ಕನೆಯ ದಾರಿಯೇ ಇಲ್ಲ.' ಹೀಗೆ ಸ್ಫೂರ್ತಿ ಕೊಟ್ಟರು.

'ಇದು ಸಾಮಾನ್ಯ ದಾನವಲ್ಲ, ಒಪ್ಪೊತ್ತು ಊಟ ನೀಡಿದರೇನೆ ಎಷ್ಟೋ ಪುಣ್ಯ. ಅಂಥದರಲ್ಲಿ ಬದುಕಿರುವಷ್ಟು ದಿನವೂ ಒಬ್ಬನ ಜೀವನ ನಡೆಯುವ ಒಂದು ಎಕರೆ ಹೊಲ ಕೊಟ್ಟರೆ ಎಷ್ಟು ಹೆಚ್ಚು ಪುಣ್ಯವೋ! ಇದರ ಹೆಸರೇ ಯಜ್ಞ. ಏನಾದರೂ ಕೊಡಿ ಎಂದು ಎಲ್ಲರನ್ನೂ ಕೇಳುತ್ತೇನೆ. ಇದರಿಂದ ಶೋಷಣರಹಿತ ಸಮಾಜ, ಸರ್ವೋದಯ ಸಮಾಜ ಬರುತ್ತದೆ.'

'ದೇವರ ಏರ್ಪಾಟು ನೋಡಿ. ನಮಗೆ ಜನ್ಮ ಕೊಟ್ಟ. ಸ್ವೇಚ್ಛೆಯಾಗಿ ಉಸಿರಾಡಲು ಮೂಗು ಕೊಟ್ಟ. ಮಗುವಿಗೆ ಹಾಲು ಬೇಕು ಎಂದು ಅದಕ್ಕೆ ಏರ್ಪಾಟು ಮಾಡಿದ. ಇಂಥವನು ಹೊಲವನ್ನು ಮಾತ್ರ ಹತ್ತೇ ಜನರ ಕೈಯಲ್ಲಿಟ್ಟಾನೆಯೇ?'

ಉತ್ತರ ಭಾರತದಲ್ಲಿ ಜೌನಪುರ ಜಿಲ್ಲೆಯಲ್ಲಿ ಟಿಕಾರಡೀ ಎಂಬ ಹಳ್ಳಿ. ಅಲ್ಲಿಗೆ ವಿನೋಬಾ ಹೋಗಿರಲಿಲ್ಲ. ಅವರ ಸಂದೇಶ ಮುಟ್ಟಿತ್ತು. ಆ ಹಳ್ಳಿಯಲ್ಲಿ ಮೂವತ್ತೆರಡೇ ಮನೆ. ೨೦ ಜನ ಹೊಲವಿದ್ದವರು, ೧೨ ಜನ ಹೊಲವಿಲ್ಲದವರು. ಹೊಲವಿಲ್ಲದ ತಮ್ಮಂದಿರಿಗೆ ಹೊಲ ಕೊಡುವ ಮಾತನ್ನು ಕೇಳಿ ಹೊಲವಿದ್ದವರೆಲ್ಲ ಸೇರಿ ೩೭ ಎಕರೆ ಕೂಡಿಹಾಕಿದರು. ಈಗ ಆ ಹಳ್ಳಿಯಲ್ಲಿ ಯಾರೂ ಹೊಲವಿಲ್ಲದವರಿಲ್ಲ.

ಇನ್ನೊಂದು ಕಡೆ ರಾತ್ರಿ ಮಲಗುವ ಹೊತ್ತು ಆಗಿತ್ತು. ಅಷ್ಟರಲ್ಲಿ ಒಬ್ಬ ರೈತ ತೇಗುತ್ತ ವಿನೋಬಾ ಬಳಿಗೆ ಬಂದು ನಮಸ್ಕಾರ ಮಾಡಿದ. ಕೈ ಜೋಡಿಸಿ, 'ನನಗೆ ಸಭೆಗೆ ಬರಲು ಆಗಲಿಲ್ಲ' ಎಂದ. ಮುಂದೆ ಏನು ಹೇಳಲೂ ಸಂಕೋಚ. 'ಬಡವರಿಗಾಗಿ ಏನಾದರೂ ತಂದಿದ್ದೀಯಾ?' ಎಂದು ಕೇಳಿದರು ವಿನೋಬಾ. 'ಹೌದು, ದೇವರೆ. ನನಗೆ ಏಳು ಬಿಘ ಹೊಲ ಇದೆ. ಎರಡನ್ನು ಕೊಡೋಣ ಎಂದು ಬಂದೆ' ಎಂದ.

ನೈನಿತಾಲ್ ಜಿಲ್ಲೆಯಲ್ಲಿ ಒಂದು ದಿನ ವಿನೋಬಾ ತಂಗಿದ್ದರು. ಬಡವರಿಗಾಗಿ ಹೊಲ ಬೇಡುತ್ತಾರೆ ಮಹಾತ್ಮರು ಎಂಬುದನ್ನು ಒಬ್ಬ ಮುದುಕಿ ಕೇಳಿದಳು. ಅವಳಿಗೆ ಸ್ವಲ್ಪ ಹೊಲವಿತ್ತು. ವಿನೋಬಾಜಿಯ ಬಳಿಗೆ ಬಂದಳು. ಬರುವಾಗ್ಗೆ ರಾತ್ರಿ ೧೧ ಗಂಟೆಯಾಗಿತ್ತು. ಎಲ್ಲರೂ ಮಲಗಿದ್ದುದನ್ನು ನೋಡಿ ಬಾಗಿಲಲ್ಲಿಯೇ ಕಾದು ಕುಳಿತಳು. ಒಳ್ಳೇ ಚಳಿಗಾಲ. ರಾತ್ರಿಯೆಲ್ಲ ಹಾಗೆಯೇ ಕುಳಿತಿದ್ದಳು. ಬೆಳಗ್ಗೆ ಬಾಗಿಲು ತೆಗೆದಾಗ

ವಿಷಯ ತಿಳಿಯಿತು. ಈ ಯಜ್ಞದಲ್ಲಿ ಸ್ವಲ್ಪ ಹೊಲ, ಒಂದು ಮನೆ ಅರ್ಪಿಸಲು ಬಂದಿದ್ದಳು ಆಕೆ.

ಇನ್ನೊಂದು ಹಳ್ಳಿಯಲ್ಲಿ ಒಬ್ಬ ಮುದುಕಿ. 'ನಮಗೆ ೧೨ ಎಕರೆ ಹೊಲ ಇದೆ. ಮನೆಯಲ್ಲಿ ೫ ಜನ ಇದ್ದಾರೆ. ನೀವು ಆರನೆಯವರು. ನಿಮ್ಮ ಪಾಲಿನ ೨ ಎಕರೆ ತೆಗೆದುಕೊಳ್ಳಿ' ಎಂದಳು.

'ನಿಮ್ಮ ಮನೆಯಲ್ಲಿ ನೀವು ಐದು ಜನ ಎನಿ. ಅದು ಹಿಂದೂಸ್ಥಾನದ ಸರಾಸರಿ. ದರಿದ್ರನಾರಾಯಣ ನಿಮ್ಮ ಮನೆಯ ಆರನೆಯ ಮನುಷ್ಯ. ಅವನಿಗೆ ಅವನ ಪಾಲನ್ನು ಕೊಡಿ' ಎನ್ನುತ್ತಿದ್ದಾರೆ ವಿನೋಬಾ. ಹಿಂದೂಸ್ಥಾನದಲ್ಲಿ ಒಟ್ಟು ೩೦ ಕೋಟಿ ಎಕರೆ ಹೊಲವಿದೆ. ಅದರಲ್ಲಿ ಆರನೆಯ ಪಾಲು, ಐದು ಕೋಟಿ ಎಕರೆ, ತಮಗೆ ದಾನವಾಗಿ ಬರಬೇಕು ಎನ್ನುತ್ತಿದ್ದಾರೆ. ೧೯೫೭ಕ್ಕೆ ಭಾರತದ ಸ್ವಾತಂತ್ರ್ಯ ಸಮರ ಮೊದಲಾಗಿ ಒಂದು ನೂರು ವರ್ಷವಾಗುತ್ತದೆ. ೧೮೫೭ರಲ್ಲಿ ಸಿಪಾಯಿದಂಗೆ ಎನ್ನಿಸಿಕೊಂಡು ಸ್ವರಾಜ್ಯ ಸಮರ ಮೊದಲಾಯಿತು. ಅದರ ನೂರು ವರ್ಷದ ಹಬ್ಬಕ್ಕೆ ಈ ಐದು ಕೋಟಿ ಎಕರೆ ಸಿಗಬೇಕು, ಈ ದೇಶದಲ್ಲಿ ಭೂಮಿಯ ಸಮಸ್ಯೆ ಬಗೆಹರಿಯಬೇಕು ಎಂದು ಶಪಥ ಮಾಡಿದ್ದಾರೆ ವಿನೋಬಾ. ಅಲ್ಲಿಯವರೆಗೆ ನಾನು ಆಶ್ರಮಕ್ಕೆ ಹೋಗುವುದಿಲ್ಲ ಎಂದು ಸಂಕಲ್ಪ ಮಾಡಿದ್ದಾರೆ. ಅಲ್ಲಿಯವರೆಗೆ ಹಳ್ಳಿಹಳ್ಳಿ ತಿರುಗಿ ಭೂದಾನ ಯಜ್ಞವನ್ನು ನಡೆಸುವ ನಿರ್ಧಾರ ಮಾಡಿದ್ದಾರೆ.

## ಅಭ್ಯಾಸ

**೧. ಕಠಿನ ಪದಗಳ ಅರ್ಥ:—**

ಅಂತಃಕರಣ—ಹೃದಯ, ಮನಸ್ಸು. ಅಮಲು—ಆವೇಶ. ಓಕುಳಿ—ಕೆಂಪುನೀರಿನ ಸ್ನಾನ (ವಸಂತ). ನಿರುದ್ಯೋಗ—ಕೆಲಸವಿಲ್ಲದಿರುವಿಕೆ. ಜೀವಚ್ಛವ—ಬದುಕಿದ ಹೆಣ. ಭೀಷಣ—ಭಯಂಕರ. ಪರಾವಲಂಬಿ—ಇನ್ನೊಬ್ಬರನ್ನು ಆಶ್ರಯಿಸಿರುವವರು. ಗಿರಣಿ—ಬಟ್ಟೆಯಂತ್ರ. ಗೇಣಿ—ವಾರ, ಗುತ್ತಿಗೆ. ವಿನಿಮಯ—ಬದಲಾವಣೆ. ನಿರ್ವಾಹ—ಜೀವನ ನಡೆಸುವಿಕೆ. ವಾಮಾಚಾರಿಗಳು—ಮಾಟ, ಶೂನ್ಯ ಮೊದಲಾದ ಮಾಂತ್ರಿಕ ಕಾರ್ಯ ಮಾಡುವ ನೀಚರು. ಉಪಾಸಕರು—ಪೂಜೆ ಮಾಡುವವರು. ಅಪರಿಗ್ರಹ—ಇನ್ನೊಬ್ಬರ ಸ್ವತ್ತನ್ನು

ತೆಗೆದುಕೊಳ್ಳದಿರುವುದು. ಕ್ರಾಂತಿ—ದೇಶದ ಸ್ಥಿತಿಯನ್ನು ಬದಲಾಯಿಸುವ ಒಂದು ಪ್ರಚಾರ. ಅರಸಿ—ಹುಡುಕಿ. ಲೋಕಕಂಟಕ—ಲೋಕಪೀಡೆ ಮಾಡುವವನು. ಉತ್ಕಟತೆ—ಕುತೂಹಲ, ಪೂರ್ಣಹೃದಯ. ಬಿಘ—ಎಕರೆ.

೨. **ಟಿಪ್ಪಣಿಗಳು:—**

**ರಜಾಕಾರರು**—ಹೈದರಾಬಾದಿನಲ್ಲಿ ರಜಾಕಾರರು ಎಂಬ ಮುಸ್ಲಿಂ ದರೋಡೆಕಾರರು ಹಿಂದುಗಳನ್ನು ಜಾತಿಕೆಡಿಸುವುದು, ಅವರ ಆಸ್ತಿಗಳನ್ನು ಲೂಟಿ ಮಾಡುವುದು, ಅವರನ್ನು ಬೀದಿಬೀದಿಗಳಲ್ಲಿ ಕೊಲ್ಲುವುದು ಈ ರೀತಿ ಅನ್ಯಾಯ ಮಾಡುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ (1946) ಭಾರತ ಸರ್ಕಾರ ತನ್ನ ಸೈನ್ಯವನ್ನು ಮತ್ತೆ ಸಿಕಂದರಾಬಾದಿನಲ್ಲಿ ನಿಲ್ಲಿಸಲು ಹೊರಟು ಈ ರಜಾಕಾರರನ್ನು ನಿರ್ಮೂಲ ಮಾಡಿತು. ಅವರ ನಾಯಕ ಖಾಸೀಂ ರಜ್ವಿಗೆ ಶಿಕ್ಷೆಯಾಯಿತು.

**ಶಬರಿ**—ಶ್ರೀರಾಮನು ದಂಡಕಾರಣ್ಯಕ್ಕೆ ಬಂದಾಗ 'ಶಬರಿ' ಎಂಬ ಬೇಡರ ಮುದುಕಿ ಸಿಹಿಯಾದ ಹಣ್ಣುಗಳನ್ನು ರಾಮನಿಗೆ ಕೊಡುತ್ತಿದ್ದಳು.

**ಕುಚೇಲ**—ಶ್ರೀಕೃಷ್ಣನ ಬಾಲ್ಯ ಸ್ನೇಹಿತ, ಸಹಪಾಠಿ. ತುಂಬಾ ಬಡತನದಲ್ಲಿದ್ದ ಇವನು ಶ್ರೀಕೃಷ್ಣನನ್ನು ನೋಡಲು ಹೋಗಿ ಮೂರು ಹಿಡಿ ಅವಲಕ್ಕಿಯನ್ನು ಪ್ರೀತಿಯಿಂದ ಕೊಟ್ಟನು. ಅದನ್ನು ತಿಂದ ಕೃಷ್ಣನು ಕುಚೇಲನು ತುಂಬ ಐಶ್ವರ್ಯವಂತನಾಗುವಂತೆ ಮಾಡಿದನು.

**ಶಂಕರಾಚಾರ್ಯ**—ಕ್ರಿ. ಶ. ೮ನೆಯ ಶತಮಾನದಲ್ಲಿ ಮಲೆಯಾಳದ 'ಕಾಲಡಿ' ಎಂಬ ಹಳ್ಳಿಯಲ್ಲಿ ಹುಟ್ಟಿದ ಈತನು ಬೌದ್ಧರನ್ನೂ, ಜೈನರನ್ನೂ ವಾದದಲ್ಲಿ ಸೋಲಿಸಿ ವೇದ ಧರ್ಮವನ್ನು ಸ್ಥಾಪಿಸಿದ ಮಹಾಪುರುಷ. ಶೂನ್ಯಾದಿಗಳನ್ನು ಮಾಡುತ್ತಿದ್ದ ವಾಮಾಚಾರಿಗಳನ್ನೂ ಸೋಲಿಸಿ ಅವರ ಪೀಡೆಯನ್ನು ಜಗತ್ತಿಗೆ ಕಡಿಮೆಮಾಡಿದನು. ಹಿಂದೂ ಧರ್ಮವನ್ನು ಭಾರತದಲ್ಲೆಲ್ಲ ಸ್ಥಾಪಿಸಿ, ಭಾರತ ದೇಶವನ್ನೆಲ್ಲ ಸಂಸ್ಕೃತಿಯ ಬೀಡಾಗಿ ಮಾಡಿ ಏಕತೆಯನ್ನು ಸಾಧಿಸಿದನು. ನಾಲ್ಕು ದಿಕ್ಕುಗಳಲ್ಲಿಯೂ ನಾಲ್ಕು ಮಠಗಳನ್ನು ಸ್ಥಾಪಿಸಿ ತನ್ನ ಶಿಷ್ಯರನ್ನು ಅಲ್ಲಿ ಕೂಡಿಸಿ ವೇದಧರ್ಮವನ್ನು ಇತರ ಧರ್ಮಗಳಿಂದ ರಕ್ಷಿಸಿದ ಆಚಾರ್ಯಪುರುಷ ಈತ. ಈತನು ಪ್ರಚಾರ ಮಾಡಿದ ಮತ ಅದ್ವೈತ ಮತ. ಶೃಂಗೇರಿ ಇವರ ಮುಖ್ಯ ಪೀಠವಾಗಿತ್ತು. ಈಗಲೂ ಇವರ ಶಿಷ್ಯ ಪರಂಪರೆ ನಡೆದುಬರುತ್ತಿದೆ.

**೩. ಈ ವಾಕ್ಯಗಳ ಸಂದರ್ಭವನ್ನೂ, ತಾತ್ಪರ್ಯವನ್ನೂ ವಿವರಿಸಿ:—**

೧. ಕೈಗಾರಿಕೆ ಕಾಮಧೇನುವಾದರೆ ಭೂಮಿ ಕಲ್ಪವೃಕ್ಷ ಬಡವರಿಗೆ.

೨. ದಾನದ ಅರ್ಥವೇ ಸಮವಿಭಾಗ.

೩. ದಾನಿಯೇ ದೇವತೆ, ಲೋಭಿಯೇ ರಾಕ್ಷಸ.

**೪. ಈ ಪ್ರಶ್ನೆಗಳಿಗೆ ಉತ್ತರವನ್ನು ಬರೆಯಿರಿ:—**

೧. ತೆಲಂಗಾಣದ ಜನರು ಎಂಥ ಭೀಕರ ಸ್ಥಿತಿಯಲ್ಲಿದ್ದರು?

೨. ಭಾರತ ದೇಶದಲ್ಲಿ ವಿನೋಬಾರವರು ಕಂಡ ಜನರ ದುಃಸ್ಥಿತಿ ಏನು?

೩. ವಿನೋಬಾರವರಿಗೆ ಜನರ ದುಃಖವನ್ನು ಪರಿಹರಿಸುವ ಹೊಸ ಉಪಾಯ ಎಲ್ಲಿ ಕಂಡಿತು? ಹೇಗೆ?

೪. 'ಭೂದಾನಯಜ್ಞ' ಎಂದರೇನು? ಇದರ ಉದ್ದೇಶವೇನು?

೫. 'ಸರ್ವೋದಯ' ಎಂದರೇನು? ಇದರಿಂದ ಆಗುವ ಉಪಯೋಗವೇನು?

೬. ವಿನೋಬಾರವರು 'ಹೊಸ ಕ್ರಾಂತಿಪುರುಷರು' ಎಂಬುದನ್ನು ಸಾಧಿಸಿ.

**೫. ವ್ಯಾಕರಣ:—**

೧. ಈ ಪದಗಳಲ್ಲಿ ಕಾಣುವ ಸಂಧಿ ಕಾರ್ಯಗಳನ್ನು ತಿಳಿಸಿ:—
ಗ್ರಾಮೋದ್ಯೋಗ, ಪರಾವಲಂಬಿ, ಹರಿಯಿಸು, ಸಜ್ಜನ.

೨. ಈ ಪದಗಳ ವಿಗ್ರಹವಾಕ್ಯ, ಸಮಾಸಗಳನ್ನು ಬರೆಯಿರಿ:—
ವಿದ್ಯಾಭ್ಯಾಸ, ದಾಮಾಚಾರ, ಅನ್ನಾವತಾರ, ಭೂದಾನಯಜ್ಞ, ಕೋಲುಮಿಂಚು.

೩. ಈ ಪದಗಳನ್ನು ಒಡೆದು, ಪ್ರತ್ಯಯಗಳನ್ನೂ ಅವು ಯಾವ ಅರ್ಥದಲ್ಲಿ ಬಂದಿವೆಯೆಂಬುದನ್ನೂ ತಿಳಿಯಿರಿ:—
ಔದಾರ್ಯ, ವಿದ್ಯಾವಂತ, ಬುದ್ಧಿವಂತ, ಮಹತ್ತ್ವ, ಧೈರ್ಯ, ವಿಜ್ಞಾನಿ, ಉತ್ಕಟತೆ, ವೈಶಿಷ್ಟ್ಯ.

389—59. ಬೆಂಗಳೂರು ಸಿಟಿ ಬೆಂಗಳೂರು ಪ್ರೆಸ್ಸಿನಲ್ಲಿ ಸೂಪರಿಂಟೆಂಡೆಂಟರವರಾದ
ಸಿ. ವಾಸುದೇವರಾಯರವರು ಮುದ್ರಿಸಿರುವರು.

Anand.